ಬುಧವಾರ, ಮಾರ್ಚ್ 30, 2022 | ₹ 6.00

ಪ್ರಜಾವಾ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಂಗಳೂರು ನಗರ ಜಿಲ್ಲೆಯಲ್ಲಿ 1,208 ಎಕರೆ ಸರ್ಕಾರಿ ಭೂಮಿ ಗುತ್ತಿಗೆ

12 ಸಂಸ್ಥೆಗಳಿಂದ ಷರತ್ತು ಉಲ್ಲಂಘನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆಯಲ್ಲಿ 139 ಸಂಘ ಸಂಸ್ಥೆಗಳಿಗೆ ಕಂದಾಯ ಇಲಾಖೆಯು 1,208 ಎಕರೆ ಜಾಗವನ್ನು ಗುತ್ತಿಗೆಗೆ ನೀಡಿದ್ದು, ಈ ಪೈಕಿ 12 ಸಂಘ ಸಂಸ್ಥೆಗಳು (149 ಎಕರೆ ಜಾಗ) ಗುತ್ತಿಗೆ ಷರತ್ತನ್ನು ಉಲ್ಲಂಘಿಸಿವೆ. ಈ ಜಮೀನುಗಳ ಒಟ್ಟು ಮೌಲ್ಯ ₹1,500 ಕೋಟಿ ಎಂದು ಅಂದಾಜಿಸಲಾಗಿದೆ.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಜೆಡಿಎಸ್‌ನ ಸಿ.ಎನ್. ಬಾಲಕೃಷ್ಣ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಕಂದಾಯ ಸಚಿವ ಆರ್. ಅಶೋಕ, 'ಅಕ್ರಮ ಸಕ್ರಮದಡಿ 94 ಸಿ ಹಾಗೂ 94 ಸಿಸಿ ಅಡಿ ಸರ್ಕಾರಿ ಶಾಲೆ, ಸ್ಮಶಾನ, ಅಂಗನವಾಡಿ, ದೇವಸ್ಥಾನ, ಮಾಜಿ ಸೈನಿಕರಿಗೆ ಸಮುದಾಯ ಭವನ, ಕಸ ಸಂಸ್ಕರಣಾ ಘಟಕ ನಿರ್ಮಾಣ ಹಾಗೂ ಆಶ್ರಯ ಯೋಜನೆಯಡಿ ಸಾರ್ವಜನಿಕ ಉದ್ದೇಶಕ್ಕೆ ಮತ್ತು ಸಂಘ ಸಂಸ್ಥೆಗಳಿಗೆ ಜಾಗ ಮಂಜೂರು ಮಾಡಲಾಗಿದೆ. ಗುತ್ತಿಗೆ ಷರತ್ತು ಉಲ್ಲಂಘಿಸಿರುವ ಸಂಸ್ಥೆಗಳಿಗೆ ನೋಟಿಸ್ ನೀಡಿ ಮಂಜೂರಾತಿ ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ' ಎಂದೂ ಉತ್ತರಿಸಿದ್ದಾರೆ.

ಕೆಲವು ಸಂಘ ಸಂಸ್ಥೆಗಳ ವಿರುದ್ಧ ವರದಿ ಸಲ್ಲಿಕೆಯಾಗಿ ಒಂದೂವರೆ ವರ್ಷ ಕಳೆದ ಬಳಿಕವೂ ಕಂದಾಯ ಇಲಾಖೆ ಯಾವುದೇ ಕ್ರಮ ಕೈಗೊಂಡಿಲ್ಲ.

ಸಂಸ್ಕೃತ ವಿವಿಗೆ 100 ಎಕರೆ ಜಾಗ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪಿಸಲು ಮಾಗಡಿಯ ತಿಪ್ಪಸಂದ್ರದಲ್ಲಿ 100 ಎಕರೆ ಜಾಗ ಮಂಜೂರು ಮಾಡಲಾಗಿದೆ. ಆದರೆ, ಈ ಜಾಗವನ್ನು ಮಂಜೂರಾತಿ ಉದ್ದೇಶಕ್ಕೆ ಬಳಸಿಕೊಂಡಿಲ್ಲ ಎಂದು ಅಶೋಕ ಉತ್ತರಿಸಿದ್ದಾರೆ.

ಗುತ್ತಿಗೆ ಷರತ್ತು ಉಲ್ಲಂಘಿಸಿರುವ ಸಂಘ ಸಂಸ್ಥೆಗಳು

ಸಂಸ್ಥೆ	ಗ್ರಾಮ	ವಿಸ್ತೀರ್ಣ (ಎಕರೆಗಳಲ್ಲಿ)	ಸರ್ಕಾರದಿಂದ ಯಾವ ಕ್ರಮ
ಪ್ರಮೋದ್ ಎಜುಕೇಷನ್ ಟ್ರಸ್ಟ್	ಚೂಡೇನಪುರ	4	ನಿಗದಿತ ಉದ್ದೇಶಕ್ಕೆ ಬಳಸಿಲ್ಲ. 2020ರ ಅಕ್ಟೋಬರ್ 19ರಂದು ಸಂಸ್ಥೆಗೆ ನೋಟಿಸ್
ದಿ ಪಾಲ್ ಸರ್ವಿಸ್ ಸೊಸೈಟಿ	ಭೀಮನಕುಪ್ಪೆ	1	ಗುತ್ತಿಗೆ ಹಣ ಪಾವತಿಸಿಲ್ಲ. ಗುತ್ತಿಗೆ ರದ್ದುಪಡಿಸಲು 2020ರ ಜೂನ್ 23ರಂದು ವರದಿ
ರಾಷ್ಟ್ರೀಯ ರುಡ್‌ಸೆಟ್ ಅಕಾಡೆಮಿ	ಕುಂಬಳಗೋಡು	3.20	ಗುತ್ತಿಗೆ ಉದ್ದೇಶ ಉಲ್ಲಂಘನೆ. ಮಂಜೂರು ರದ್ದುಪಡಿಸಲು 2020ರ ಜುಲೈ 20ರಂದು ವರದಿ
ನ್ಯೂ ಕೇಂಬ್ರಿಡ್ಜ್ ಎಜುಕೇಷನ್ ಟ್ರಸ್ಟ್	ಕೆಂಗೇರಿ	5	ಜಮೀನು ಬಳಸಿಕೊಂಡಿಲ್ಲ. 2021ರ ನವೆಂಬರ್ 11ರಂದು ಗುತ್ತಿಗೆ ರದ್ದು
ಭೀಮಚಂದ್ರ ಎಜುಕೇಷನ್ ಟ್ರಸ್ಟ್	ಪಿಲ್ಲಗಾನಹಳ್ಳಿ	5	ನಿಗದಿತ ಉದ್ದೇಶಕ್ಕೆ ಬಳಸಿಕೊಂಡಿಲ್ಲ. 2021ರ ಏಪ್ರಿಲ್‌ನಲ್ಲಿ ಗುತ್ತಿಗೆ ರದ್ದುಪಡಿಸಿ, ಜಲಮಂಡಳಿಗೆ ಜಾಗ ಮಂಜೂರಿಗೆ ಆದೇಶ
ಲಯನ್ಸ್ ಸರ್ವಿಸ್ ಫೌಂಡೇಷನ್ ಸಂಸ್ಥೆ	ಕೆಂಗೇರಿ	3	ಜಮೀನು ಬಳಸಿಕೊಂಡಿಲ್ಲ
ಇನ್‌ಸ್ಟಿಟ್ಯೂಟ್ ಫಾರ್ ಹೈಯರ್ ಎಜುಕೇಷನ್ ಆ್ಯಂಡ್ ರೀಸರ್ಚ್ ಟ್ರಸ್ಟ್	ಕುಂಬಳಗೋಡು	4	ನಿಗದಿತ ಉದ್ದೇಶಕ್ಕೆ ಬಳಸಿಲ್ಲ. ಮಂಜೂರು ರದ್ದುಪಡಿಸಲು 2020ರ ಜುಲೈ 10ರಂದು ವರದಿ
ರಾಜರಾಜೇಶ್ವರಿ ಎಜುಕೇಷನ್ ಟ್ರಸ್ಟ್	ಚನ್ನಸಂದ್ರ	5	ಜಮೀನು ಅಭಿವೃದ್ಧಿ ಮಾಡಿಲ್ಲ. ಈ ಬಗ್ಗೆ ಟ್ರಸ್ಟ್‌ಗೆ ನೋಟಿಸ್. ಜಮೀನಿನಲ್ಲಿ ಅಭಿವೃದ್ಧಿ ಕಾರ್ಯ ಕೈಗೊಂಡಿದ್ದು, ಕಾಯಂ ಮಂಜೂರಾತಿ ನೀಡುವಂತೆ ಟ್ರಸ್ಟ್ ಕೋರಿಕೆ
ಕಂಠೀರವ ಪ್ರಗತಿ ವಿದ್ಯಾಸಂಸ್ಥೆ	ಅಮೃತಹಳ್ಳಿ	1.07	ನಿಗದಿತ ಉದ್ದೇಶಕ್ಕೆ ಬಳಸಿಲ್ಲ. ಹೈಕೋರ್ಟ್‌ನಲ್ಲಿ ವ್ಯಾಜ್ಯ ಇದ್ದು, ಇಲಾಖೆಗೆ 2020ರ ಜುಲೈ 28ರಂದು ವರದಿ
ಬಿಬಿಎಂಪಿ	ಮಾವಳ್ಳಿಪುರ	100	ಕಸ ಸಂಗ್ರಹಣೆ ಉದ್ದೇಶಕ್ಕೆ ಬಳಸಿಲ್ಲ. ಮಂಜೂರಿ ರದ್ದುಪಡಿಸಲು 2020ರ ಜುಲೈ 27ರಂದು ವರದಿ
ಮೂಡುಗೆರೆ ಎಜುಕೇಷನ್ ಟ್ರಸ್ಟ್	ಗೌಡಹಳ್ಳಿ	12	ನಿಗದಿತ ಉದ್ದೇಶಕ್ಕೆ ಜಮೀನು ಬಳಸಿಲ್ಲ. ಕಾಯಂ ಮಂಜೂರಾತಿ ಮಾಡಿಕೊಳ್ಳಲು ಸಂಸ್ಥೆ ಒಪ್ಪಿದ್ದು, 2020ರ ಸೆಪ್ಟೆಂಬರ್‌ನಲ್ಲಿ ಪ್ರಸ್ತಾವನೆ
ಗೌತಮ್ ವೈದ್ಯಕೀಯ ವಿಜ್ಞಾನ ಸಂಸ್ಥೆ	ದಾಸನಪುರ	6	ಗುತ್ತಿಗೆ ರದ್ದುಪಡಿಸಲು 2020ರ ಜನವರಿಯಲ್ಲಿ ವರದಿ. 2022ರ ಜನವರಿಯಲ್ಲಿ ಸಂಸ್ಥೆಗೆ ನೋಟಿಸ್

ಎಂಜಿನಿಯರ್ ಬಡ್ತಿಗೆ ₹4.5 ಕೋಟಿ ಲಂಚ: ಸಿ.ಎಂಗೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಂಜಿನಿಯರ್‌ಗಳ ಬಡ್ತಿಗೆ ಮುಖ್ಯಮಂತ್ರಿ ಹೆಸರಿನಲ್ಲೇ ₹4.50 ಕೋಟಿ ಲಂಚ ಪಡೆಯಲಾಗಿದೆ' ಎಂದು ಆರೋಪಿಸಿ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮಂಗಳವಾರ ದೂರು ನೀಡಿದೆ.

ಬಿಬಿಎಂಪಿಯ 65 ಎಂಜಿನಿಯರ್‌ಗಳ ಬಡ್ತಿಗೆ ಸಂಬಂಧಿಸಿದ ಕಡತ ನಗರಾಭಿವೃದ್ಧಿ ಇಲಾಖೆಯಲ್ಲಿ ಬಾಕಿ ಇದೆ. ಸಹಾಯಕ ಎಂಜಿನಿಯರ್ (ಎ.ಇ) ಹುದ್ದೆಯಿಂದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಎಇಇ) 40 ಹುದ್ದೆಗೆ, ಎಇಇ ಹುದ್ದೆಯಿಂದ ಕಾರ್ಯಪಾಲಕ ಎಂಜಿನಿಯರ್ (ಇ.ಇ) 7 ಹುದ್ದೆಗೆ, ಇ.ಇ ಹುದ್ದೆಯಿಂದ ಸೂಪರಿಂಟೆಂಡೆಂಟ್ ಎಂಜಿನಿಯರ್ (ಎಸ್.ಇ) 5 ಹುದ್ದೆಗೆ ಬಡ್ತಿ ನೀಡಬೇಕಿದೆ.

> **ಪದೇ ಪದೇ ಮುಖ್ಯಮಂತ್ರಿ ಮತ್ತು ಅವರ ಸಚಿವಾಲಯದ ಹೆಸರಿನಲ್ಲಿ ಹಣ ವಸೂಲಿ ನಡೆಯುತ್ತಲೇ ಇದೆ. ಆದರೂ, ಕ್ರಮ ಕೈಗೊಳ್ಳದಿರುವುದು ಅನುಮಾನ ಮೂಡಿಸಿದೆ**
>
> **ದೀಪಕ್ ಸಿ.ಎನ್.,** ಕೆಆರ್‌ಎಸ್ ಪ್ರಧಾನ ಕಾರ್ಯದರ್ಶಿ

'ಈ ಕಡತ ಅನುಮೋದಿಸಲು ಲಂಚ ಪಡೆಯಲಾಗುತ್ತಿದೆ. ಸಿಎಂ ಹೆಸರು ಹೇಳಿ ₹4.50 ಕೋಟಿ ಬೇಡಿಕೆ ಇಟ್ಟು ಹಣ ಪಡೆಯಲಾಗಿದೆ. ಎ.ಇ ಹುದ್ದೆಯಿಂದ ಎಇಇ ಹುದ್ದೆಗೆ ಬಡ್ತಿ ಪಡೆಯಲು ₹2 ಕೋಟಿ, ಎಇಇ ಹುದ್ದೆಯಿಂದ ಇ.ಇ ಹುದ್ದೆಗೆ ₹1 ಕೋಟಿ ಮತ್ತು ಇ.ಇ ಹುದ್ದೆಯಿಂದ ಎಸ್.ಇ ಹುದ್ದೆಗೆ ₹1.50 ಕೋಟಿ ಲಂಚದ ವ್ಯವಹಾರ ನಡೆದಿದೆ. ಉಪ ಕಾರ್ಯದರ್ಶಿ ಮಟ್ಟದ ಅಧಿಕಾರಿಯೊಬ್ಬರು ಇದರಲ್ಲಿ ಭಾಗಿಯಾಗಿದ್ದಾರೆ. ಈ ರೀತಿ ಅಪಾರ ಪ್ರಮಾಣದ ಲಂಚ ಪಾವತಿಸಲು ಬಿಬಿಎಂಪಿ ಎಂಜಿನಿಯರ್‌ಗಳು ಗುತ್ತಿಗೆದಾರರಿಂದ ಹಣ ವಸೂಲಿ ಮಾಡಿದ್ದಾರೆ. ಸ್ವಲ್ಪ ಪ್ರಾಮಾಣಿಕತೆ ಉಳಿಸಿಕೊಂಡವರೂ ವಿಧಿಯಿಲ್ಲದೆ ಸಾಲ ಮಾಡಿ ಲಂಚ ನೀಡಿದ್ದಾರೆ' ಎಂದು ಕೆಆರ್‌ಎಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ದೀಪಕ್ ಸಿ.ಎನ್. ದೂರಿನಲ್ಲಿ ವಿವರಿಸಿದ್ದಾರೆ.

ಗೋವಿಂದ ಕಾರಜೋಳ– ಸಿದ್ದರಾಮಯ್ಯ ಭಿನ್ನ ಅಭಿಪ್ರಾಯ

ತುಳಿತಕ್ಕೊಳಗಾದವರ ಮೇಲೆತ್ತಲು ಬ್ರಾಹ್ಮಣರು ಶ್ರಮಿಸಿದರೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜದಲ್ಲಿ ದಲಿತರು, ಶೋಷಿತರು ಮತ್ತು ತುಳಿತಕ್ಕೆ ಒಳಗಾದ-ವರನ್ನು ಸಾಮಾಜಿಕವಾಗಿ ಮೇಲಕ್ಕೆತ್ತಲು ಬಸವಣ್ಣ ಅವರು ಸೇರಿದಂತೆ ಹಲವು ಬ್ರಾಹ್ಮಣರು ಶ್ರಮಿಸಿದ್ದಾರೆ ಮತ್ತು ಸುಧಾ-ರಣೆಗಳನ್ನು ತಂದಿದ್ದಾರೆ ಎನ್ನುವುದನ್ನು ಒಪ್ಪಲೇಬೇಕು ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಅವರು ಹೇಳಿದರು.

ವಿಧಾನಸಭೆಯಲ್ಲಿ ಮಂಗಳವಾರ ಕೃಷಿಸಚಿವಬಿ.ಸಿ.ಪಾಟೀಲಅವರುಉತ್ತರ ನೀಡುವ ಸಂದರ್ಭದಲ್ಲಿ ಜಾತಿ ವಿಚಾರ ಪ್ರಸ್ತಾಪ ಆದಾಗ ಕಾರಜೋಳ ಹೀಗಂದರು.ಇದಕ್ಕೆಆಕ್ಷೇಪವ್ಯಕ್ತಪಡಿಸಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ಯಾರು ಮಾಡಿದ್ದಾರೆ ಹೇಳ್ರಿ, ಸುಮ್ಮನೇ ಏನೇನೊ ಹೇಳಬೇಡಿ' ಎಂದರು. 'ನೀವು ಒಪ್ಪದೇ ಇರಬಹುದು. ಆದರೆ, ಸಾಕಷ್ಟು ಜನ ಬ್ರಾಹ್ಮಣರ ಕೊಡುಗೆ ಇದೆ. ಅನುಭವ ಮಂಟಪದ ಸಿಂಹಾಸನದಲ್ಲಿ ಹಿಂದುಳಿದವರನ್ನು ಕೂರಿಸಿದರು' ಎಂದರು ಕಾರಜೋಳ.

'ಬಸವಣ್ಣ ಅವರು ಹಿಂದುಳಿದವರಿಗೆ ಸ್ಥಾನಮಾನ ನೀಡಲು ಶ್ರಮಿಸಿದ್ದ-ರಿಂದ ಅವರನ್ನು ಓಡಿಸುವ ಪ್ರಯತ್ನ ಮಾಡಿದರು. ಸಮ ಸಮಾಜ ನಿರ್ಮಾಣ-ವಾಗಿದ್ದರೆ ಅಂಬೇಡ್ಕರ್ ಬೌದ್ಧ ಧರ್ಮಕ್ಕೆ ಏಕೆ ಮತಾಂತರ ಆಗುತ್ತಿದ್ದರು' ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

'ಜಾತಿ ವಿಚಾರವಾಗಿ ಬಹುತೇಕರಲ್ಲಿ ಹಲವು ತಪ್ಪು ಕಲ್ಪನೆಗಳು, ಪೂರ್ವಗ್ರ-ಹಗಳೂ ಇವೆ. ಈ ಬಗ್ಗೆ ಪ್ರತ್ಯೇಕ ಚರ್ಚೆ ನಡೆಸುವುದು ಸೂಕ್ತ. ಚರ್ಚೆಯಿಂದ ತಪ್ಪು ಕಲ್ಪನೆಗಳನ್ನು ನಿವಾರಿಸಲು ಸಾಧ್ಯ-ವಾಗಬಹುದು. ಪ್ರತಿಯೊಬ್ಬ ಸದಸ್ಯರು ಅವರವರ ಅಭಿಪ್ರಾಯ ವ್ಯಕ್ತಪಡಿಸಬ-ಹುದು' ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಚರ್ಚೆಗೆ ತೆರೆ ಎಳೆದರು.

'ನಾಡಗೌಡ' ಈಗ ಬರಿ ಹೆಸರು ಮಾತ್ರ!

'ಕೃಷಿ ಇಲಾಖೆ ರೈತರಿಗೆ ನೀಡುವ ಯೋಜನೆಗಳು ದುರುಪಯೋಗ ಆಗುತ್ತದೆ ಎಂದು ನಾಡಗೌಡರು ಹೇಳಿದ್ದಾರೆ. ಇವರೆಲ್ಲ ದೊಡ್ಡ ಹಿಡುವಳಿದಾರರು ಈ ರೀತಿ ಅಸಮಾಧಾನ ವ್ಯಕ್ತಪಡಿಸುವುದು ಸರಿಯಲ್ಲ' ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ಹೇಳಿದರು.

ಆಗ ಕ್ರಿಯಾಲೋಪವೆತ್ತಿದ ಕಾಂಗ್ರೆಸ್‌ನ ಕೆ.ಆರ್. ರಮೇಶ್‌ಕುಮಾರ್, 'ರಾಜ್ಯದಲ್ಲಿ ಭೂಸುಧಾರಣೆ ಕಾಯ್ದೆ ಜಾರಿ ಬಂದಾಗಿನಿಂದ ಯಾರೂ ಹೆಚ್ಚು ಜಮೀನು ಇಟ್ಟು-ಕೊಳ್ಳುವಂತಿಲ್ಲ. ಆ ರೀತಿ ಇಟ್ಟುಕೊಂಡರೆ ಅದು ಅಪರಾಧ ಆಗುತ್ತದೆ. ನೀವು ಸಚಿವ ಸ್ಥಾನದಲ್ಲಿ ನಿಂತು ಹೇಳಿದ್ದಿರಿ. ಅದಕ್ಕೆ ಬದ್ಧರಾಗಬೇಕಾಗುತ್ತದೆ' ಎಂದು ಕಾಲೆಳೆದರು.

ಮುಖ್ಯಮಂತ್ರಿ ಬೊಮ್ಮಾಯಿ ಆಗ ಪಾಟೀಲರ ನೆರವಿಗೆ ಬಂದು, 'ನಾಡಗೌಡರ ಕೂಡು ಕುಟುಂಬಗಳು ಕಾಯ್ದೆಗಳು ಬಂದ ಮೇಲೆ ಒಡೆದು ಹೋಗಿವೆ, ಭೂಮಿಯೂ ಹರಿದು ಹಂಚಿ ಹೋಗಿದೆ' ಎಂದು ಮಾರ್ಮಿಕವಾಗಿ ನುಡಿದರು.

'ಈಗ ನಾಡಗೌಡ ಎಂಬುದು ಹೆಸರು ಮಾತ್ರ. ನಮ್ಮ ಕಡೆ ಸಂಪತ್‌ಅಯ್ಯಂಗಾರ್ ಎಂಬ ವಕೀಲರು ಇರುತ್ತಿದ್ದರು. ಆದರೆ, ಅವರ ಬಳಿ ಸಂಪತ್ತು ಇರುತ್ತಿರಲಿಲ್ಲ. ಸಂಡೆ –ಮಂಡೆ ಲಾಯರ್‌ಗಳು ಅಷ್ಟೇ' ಎಂದು ಸಿದ್ದರಾಮಯ್ಯ ಚಟಾಕಿ ಹಾರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಬೊಮ್ಮಾಯಿ, 'ಸಿದ್ರಾಮಣ್ಣ ಅವರಂತ ಬುದ್ಧಿವಂತ ವಕೀಲರು ಹಗಲು ರಾತ್ರಿ ಕೂತು ಅವಿಭಕ್ತ ಕುಟುಂಬಗಳನ್ನು ಹೇಗೆ ವಿಭಕ್ತ ಮಾಡಿ ಭೂಮಿ ಹಂಚಿಕೊಳ್ಳಬೇಕು ಎಂದು ಸಲಹೆ ಕೊಟ್ಟಿರುತ್ತಾರೆ' ಎಂದು ಛೇಡಿಸಿದರು. 'ನಾನು ವಕೀಲನಾಗಿದ್ದಾಗ ಅಂತಹ ಕೆಲಸ ಮಾಡಿಲ್ಲ, ನನ್ನ ತರಹದವರು ಯಾರೂ ಮಾಡಲ್ಲ' ಎಂದು ಸಿದ್ದರಾಮಯ್ಯ ತಿರುಗೇಟು ನೀಡಿದರು.

'ಕುಲ ಕಸುಬು ಮಾಡಿಕೊಂಡು ಬಂದವರು ನಾಡಗೌಡ್ರು, ದೇಶಪಾಂಡೆ, ದೇಶಮುಖ, ಸರ್‌ದೇಸಾಯಿಗಳಿಗೆ ಇನ್ನೂ 50 ವರ್ಷ ನಿಷ್ಠರಾಗಿಯೇ ಇರುತ್ತಾರೆ. ಆ ವಾತಾವರಣ ಬದಲಿಸಲು ಆಗಲ್ಲ' ಎಂದು ಕಾರಜೋಳ ಹೇಳಿದರು.

'ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿ ಆಗಿದ್ದಾಗ, ಅಂದಿನ ಸಚಿವ ಬಿ.ರಾಚಯ್ಯ ಅವರ ಜತೆ ಚರ್ಚೆ ನಡೆಸುತ್ತಿದ್ದರು. ಆಗ ಜೆ.ಎಚ್.ಪಟೇಲರು ಬ್ರಾಹ್ಮಣರಿಗೆ 5 ಸಾವಿರ ವರ್ಷಗಳ ಇತಿಹಾಸ, ಲಿಂಗಾಯತರಿಗೆ 800 ವರ್ಷಗಳ ಇತಿಹಾಸ, ದಲಿತರಿಗೆ 50 ವರ್ಷಗಳ ಅಂದರೆ ಸಂವಿಧಾನ ರಚನೆ ಆದ ಮೇಲಿನ ಇತಿಹಾಸ ಇದೆ ಎಂದರು. ಬ್ರಾಹ್ಮಣರನ್ನು ಬಿಟ್ಟರೆ, ಲಿಂಗಾಯಿತರೇ ಮೇಧಾವಿಗಳು. ಹೀಗಾಗಿ ಮುಖ್ಯಮಂತ್ರಿಯವರು ಸತ್ಯಕ್ಕೆ ಅಪಚಾರ ಆಗುವಂತೆ ಸತ್ಯ ಹೇಳಿದ್ದಾರೆ ಎಂದು ರಮೇಶ್‌ಕುಮಾರ್ ಕಾಲೆಳೆದರು.

ಬನ್ನಿರಾಯಸ್ವಾಮಿ ದೇಗುಲಕ್ಕೆ ಬಿಎಸ್‌ವೈ ₹25 ಲಕ್ಷ ನೆರವು

ಪ್ರಜಾವಾಣಿ ವಾರ್ತೆ



ತುಮಕೂರಿನಲ್ಲಿ ಸೋಮವಾರ ತಿಗಳ ಸಮುದಾಯದ ಮೂಲಪುರುಷ ಅಗ್ನಿ ಬನ್ನಿರಾಯಸ್ವಾಮಿ ಜಯಂತಿಯನ್ನು ಶಾಸಕ ಬಿ.ಎಸ್‌ಯಡಿಯೂರಪ್ಪ ಉದ್ಘಾಟಿಸಿದರು. ಸಂಸದ ಜಿ.ಎಸ್‌ಬಸವರಾಜು, ಸೋಮಶೇಖರ ಸ್ವಾಮೀಜಿ, ಮುಖಂಡ ಎನ್‌ ಗೋವಿಂದರಾಜು, ಬಿ.ಸುರೇಶ್‌ಗೌಡ, ಶಾಸಕ ಜ್ಯೋತಿಗಣೇಶ್‌ ಸುಬ್ಬಣ್ಣ, ಆಂಜನೇಯ ಇದ್ದರು

ತುಮಕೂರು: ತಿಗಳ ಸಮುದಾಯದ ಆರಾಧ್ಯ ದೈವ ಅಗ್ನಿ ಬನ್ನಿರಾಯಸ್ವಾ-ಮಿ ದೇವಾಲಯ, ದಾಸೋಹ ಭವನ ನಿರ್ಮಾಣಕ್ಕೆ ವೈಯಕ್ತಿಕವಾಗಿ ₹25 ಲಕ್ಷ ನೀಡುವುದಾಗಿ ಶಾಸಕ ಬಿ.ಎಸ್. ಯಡಿಯೂರಪ್ಪ ಸೋಮವಾರ ಪ್ರಕಟಿಸಿದರು.

ಕರ್ನಾಟಕ ಅಗ್ನಿ ಬನ್ನಿರಾಯ ತಿಗಳ ಮಹಾಸಭಾ ಸೋಮವಾರ ಹಮ್ಮಿಕೊಂಡಿದ್ದ ತಿಗಳ ಸಮುದಾಯದ ಮೂಲಪುರುಷ ಅಗ್ನಿ ಬನ್ನಿರಾಯಸ್ವಾ-ಮಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

'ಅಗ್ನಿ ಬನ್ನಿರಾಯಸ್ವಾಮಿ ದೇವಾಲಯ ಹಾಗೂ ಸಮುದಾಯ ಭವನ ನಿರ್ಮಾಣಕ್ಕೆ ತಾಲ್ಲೂಕಿನ ಕುಂದೂರು ಬಳಿ 1 ಎಕರೆ 9 ಗುಂಟೆ ಸರ್ಕಾರಿ ಜಾಗ ಮಂಜೂರು ಮಾಡಿಕೊಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜತೆ ಚರ್ಚಿ-ಸಲಾಗುವುದು. ಜಮೀನು ಮಂಜೂರು ಮಾಡಿಸಿಕೊಡಲು ಪೂರ್ಣ ಪ್ರಮಾಣದಲ್ಲಿ ಸಹಕಾರ ಕೊಡುತ್ತೇನೆ. ಮುಖ್ಯಮಂತ್ರಿಯನ್ನು ಒಪ್ಪಿಸಿ ಜಾಗ ಮಂಜೂರು ಮಾಡಿಸಿಕೊಡುತ್ತೇನೆ' ಎಂದು ಭರವಸೆ ನೀಡಿದರು.

ತಿಗಳರ ಅಭಿವೃದ್ಧಿ ನಿಗಮ ಸ್ಥಾಪಿಸಿ, ₹100 ಕೋಟಿ ಅನುದಾನ ಕೊಡಿಸಬೇಕು, ಅಗ್ನಿ ಬನ್ನಿರಾಯ-ಸ್ವಾಮಿ ಜಯಂತಿಯನ್ನು ಸರ್ಕಾರದ ವತಿಯಿಂದ ಆಚರಣೆ ಮಾಡಬೇಕು ಎಂಬ ಬೇಡಿಕೆಗೆ ಸ್ಪಂದಿಸಿದ ಅವರು, ಇಂದೇ ಮುಖ್ಯಮಂತ್ರಿ ಜತೆಗೆ ಮಾತನಾಡಿ, ನಿಗಮ ಸ್ಥಾಪಿಸುವಂತೆ ಒತ್ತಾಯಿಸಲಾಗುವುದು. ಜಯಂತಿ ಆಚರಣೆಗೂ ಕ್ರಮ ವಹಿಸುವಂತೆ ಕೋರಲಾಗುವುದು ಎಂದು ಹೇಳಿದರು.

ಸಂಸತ್ ಸದಸ್ಯ ಜಿ.ಎಸ್. ಬಸವರಾಜು, ಬಿಜೆಪಿ ಮುಖಂಡ ಬಿ.ಸುರೇಶ್‌ಗೌಡ, ಶಾಸಕ ಜ್ಯೋತಿಗಣೇಶ್, ರಾಜ್ಯ ತಿಗಳ ಮಹಾಸಭಾ ಅಧ್ಯಕ್ಷ ಸುಬ್ಬಣ್ಣ ವೇದಿಕೆ-ಯಲ್ಲಿದ್ದರು.

ಪ್ರವರ್ಗ–1ಕ್ಕೆ ಸೇರ್ಪಡೆ:ಭರವಸೆ

ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿರುವ ತಿಗಳ ಸಮುದಾಯವನ್ನು ಪ್ರವರ್ಗ-1ಕ್ಕೆ ಸೇರಿಸಬೇಕೆಂಬ ಬೇಡಿಕೆಯನ್ನು ಮುಖ್ಯಮಂತ್ರಿ ಹಾಗೂ ಹಿಂದುಳಿದ ವರ್ಗಗಳ ಆಯೋಗದ ಗಮನಕ್ಕೆ ತಂದು, ಸೂಕ್ತ ನ್ಯಾಯ ಕೊಡಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಭರವಸೆ ನೀಡಿದರು.

'ಅಗ್ನಿ ಬನ್ನಿರಾಯರ ಜಯಂತಿಯನ್ನು ಸರ್ಕಾರದ ವತಿಯಿಂದಲೇ ಆಚರಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದರು. ಸಮುದಾಯದ ಬಗ್ಗೆ ಹಾಡುವ ಸಿ.ಡಿ ಬಿಡುಗಡೆ ಮಾಡಿ, ಅಗ್ನಿ ಬನ್ನಿರಾಯಸ್ವಾಮಿ ಭಾವಚಿತ್ರ ಅನಾವರಣಗೊಳಿಸಿದರು.

ಮೆರವಣಿಗೆ

ಜಯಂತ್ಯುತ್ಸವದ ಪ್ರಯುಕ್ತ ಅಗ್ನಿ ಬನ್ನಿರಾಯಸ್ವಾಮಿ ಮೆರವಣಿಗೆಗೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್. ಡಿ.ಕುಮಾಸ್ವಾಮಿ ಚಾಲನೆ ನೀಡಿದರು. ಶಾಸಕ ಡಿ.ಸಿ.ಗೌರಿಶಂಕರ್ ಇತರರು ಇದ್ದರು. ಇಡೀ ತಿಗಳ ಸಮುದಾಯದ ಸಾವಿರಾರು ಜನರು ಭಾಗವಹಿಸಿದ್ದರು. ಹಬ್ಬದ ವಾತಾವರಣ ನಿರ್ಮಾಣವಾಗಿತ್ತು.


ಹೂವು ಫೌಂಡೇಷನ್ ಫಾರ್ ಆರ್ಟ್ಸ್ ಸಂಸ್ಥೆ ಆಯೋಜನೆ

ವಿದ್ಯಾಭೂಷಣ ಅವರಿಗೆ ಕಲಾವಿದರಾದ ಪ್ರದೇಶ್ ಆಚಾರ್ (ಪಿಟೀಲು), ಜಿ.ಎಸ್. ನಾಗರಾಜ್ (ಮೃದಂಗ), ಪಂ. ರಾಜೇಂದ್ರ ನಾಕೋಡ್ (ತಬಲಾ) ಹಾಗೂ ವಿಜಯ್ (ಪಕ್ವಾಜ್) ಅವರು ಸಾಥ್ ನೀಡಲಿದ್ದಾರೆ.

ಯುಗಾದಿ ಸಂಭ್ರಮಕ್ಕೆ 'ದಾಸವಾಣಿ'

ಬೆಂಗಳೂರು: ಹೂವು ಫೌಂಡೇಷನ್ ಫಾರ್ ಆರ್ಟ್ಸ್ ಸಂಸ್ಥೆಯು ಯುಗಾದಿ ಹಬ್ಬದ ಪ್ರಯುಕ್ತ ಇದೇ ಶುಕ್ರವಾರ (ಏ.1) ಸಂಜೆ 6.30ಕ್ಕೆ 'ಶಕುಂತಲಾ ನಮನ' ಶೀರ್ಷಿಕೆಯಡಿ ಗಾಯಕ ವಿದ್ಯಾಭೂಷಣ ಅವರಿಂದ 'ದಾಸವಾಣಿ' ಕಾರ್ಯಕ್ರಮ ಹಮ್ಮಿಕೊಂಡಿದೆ.

ಎಸ್‌ಎಂವಿ ಬಡಾವಣೆಯ ನಾಲ್ಕನೇ ಬ್ಲಾಕ್‌ನಲ್ಲಿರುವ (ನಂದಿ,1793/4) ಸಂಸ್ಥೆಯಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಸಂಸ್ಥೆಯ ಸಂಸ್ಥಾಪಕಿ ಹಾಗೂ ನಟಿ ಭಾವನಾ ರಾಮಣ್ಣ, ತಮ್ಮ ತಾಯಿ ಶಕುಂತಲಾ ಅವರ ಸ್ಮರಣಾರ್ಥ ಆರು ವರ್ಷಗಳಿಂದ ನಿಯಮಿತವಾಗಿ ಕಾರ್ಯಕ್ರಮ ಹಮ್ಮಿಕೊಳ್ಳು-ತ್ತಿದ್ದಾರೆ.



ವಿದ್ಯಾಭೂಷಣ

'ಈ ಸಂಸ್ಥೆಯ ಅಡಿಯಲ್ಲಿ ನಾವು ಈಗಾಗಲೇ ಹಲವಾರು ಕಾರ್ಯಕ್ರಮಗಳನ್ನು ನಡೆಸಿದ್ದೇವೆ. ನಮ್ಮ ನೆಲದ ಕಲೆಯ ಪ್ರಕಾರಗಳನ್ನು ಪಸರಿಸುವುದು ಹಾಗೂ ಕಲೆಯ ಅಭಿರುಚಿಯನ್ನು ಜನರಲ್ಲಿ ಮೂಡಿಸುವುದು ಸಂಸ್ಥೆಯ ಮುಖ್ಯ ಉದ್ದೇಶ. ಪ್ರತಿ ವರ್ಷ ಯುಗಾದಿ ವೇಳೆ ಈ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ನಾಡಿನ ಹೆಸರಾಂತ ಕಲಾವಿದರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಸಾರ್ವ-ಜನಿಕರಿಗೆ ಪ್ರವೇಶ ಉಚಿತ ಇರಲಿದೆ' ಎಂದು ಭಾವನಾ ರಾಮಣ್ಣ ತಿಳಿಸಿದರು.

'ಕುರುಬರ ಸಂಘ: ಅವ್ಯವಹಾರ ಆರೋಪದಲ್ಲಿ ಸತ್ಯಾಂಶ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪ್ರದೇಶ ಕುರುಬರ ಸಂಘದಲ್ಲಿ ಅವ್ಯವಹಾರ ನಡೆದಿದೆ ಎಂದು ಸಂಘದ ನಿರ್ದೇಶಕ ಟಿ.ಬಿ. ಬಳಗಾವಿ ಅವರು ಮಾಡಿರುವ ಆರೋಪ ಸತ್ಯಕ್ಕೆ ದೂರವಾದುದು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಡಿ.ವೆಂಕಟೇಶಮೂರ್ತಿ ಸ್ಪಷ್ಟಪಡಿಸಿದರು.

'ಸಂಘದಲ್ಲಿ 123 ನಿರ್ದೇಶಕ-ರಿದ್ದು, ಅದರಲ್ಲಿ ಬಳಗಾವಿ ಮತ್ತು 7 ಮಂದಿ ನಿರ್ದೇಶಕರ ತಂಡ ಮಾಡಿರುವ ಆರೋಪದಲ್ಲಿ ಹುರುಳಿಲ್ಲ. ಪದಾಧಿಕಾರಿಗಳ ಚುನಾವಣೆಗೆ ಸ್ಪರ್ಧಿಸಿ ಪರಾಭವಗೊಂಡಿರುವ ನಿರ್ದೇಶಕರು ಅಭಿವೃದ್ಧಿ ಕಾರ್ಯಗಳಿಗೆ ಸಹಕಾರ ನೀಡದೆ ಪದೇ ಪದೇ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಸಂಘಕ್ಕೆ 2008ರಿಂದ 2013ರ ವರೆಗೆ ಹೊಸ ಸದಸ್ಯರನ್ನು ನೋಂದಣಿ ಮಾಡಿಲ್ಲ ಎಂಬುದು ಸುಳ್ಳು. ಆ ಅವಧಿಯಲ್ಲಿ 20,440 ಆಜೀವ ಸದಸ್ಯತ್ವ ನೀಡಲಾಗಿದೆ. ನಾನು 13 ವರ್ಷಗಳ ಕಾಲ ಸಂಘದಲ್ಲಿ ಪದಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದಾನೆ ಎಂಬುದು ಕೂಡ ಸುಳ್ಳು. ಅಲ್ಲದೇ ಪ್ರಕರಣ ಸಿವಿಲ್ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ. ನ್ಯಾಯಾಲಯ ನೀಡುವ ಆದೇಶಕ್ಕೆ ಬದ್ಧನಾಗಿರುತ್ತೇನೆ' ಎಂದರು.

'ಗಾಂಧಿನಗರ ಕಟ್ಟಡ ಮತ್ತು ಶ್ರೀ-ನಿವಾಸನಗರ ಆಸ್ತಿಗೆ ಸಂಬಂಧಿಸಿದಂತೆ 2008ರಿಂದ ₹2.50 ಕೋಟಿ ಕಂದಾಯ ಪಾವತಿಸದೆ ಬಾಕಿ ಉಳಿಸಲಾಗಿದೆ ಎಂದು ಆರೋಪಿಸಲಾಗಿದೆ. ಗಾಂಧಿನಗರದ ಕಟ್ಟಡದಲ್ಲಿ ವಿದ್ಯಾರ್ಥಿ ನಿಲಯ ನಡೆಯುತ್ತಿದ್ದು, ಕಟ್ಟಡ ಅಳತೆ ಮಾಡದೆ ವಾಣಿಜ್ಯ ದರದಲ್ಲಿ ಬಿಬಿಎಂಪಿ ತೆರಿಗೆ ವಿಧಿಸಿದೆ. ಶ್ರೀನಿವಾಸನಗರದ ಕಟ್ಟಡವನ್ನೂ ಅಳತೆ ಮಾಡದೆ ಅವೈ-ಜ್ಞಾನಿಕವಾಗಿ ತೆರಿಗೆ ನಿಗದಿ ಮಾಡಿದೆ. ವಿದ್ಯಾರ್ಥಿ ನಿಲಯದ ಕಟ್ಟಡ ಅಳತೆ ಮಾಡಿ ತೆರಿಗೆ ಮನ್ನಾ ಮಾಡಬೇಕೆಂದು ಹಾಗೂ ವಾಣಿಜ್ಯ ಕಟ್ಟಡಗಳಿಗೆ ಬೇರೆ ತೆರಿಗೆ ವಿಧಿಸಬೇಕೆಂದು ಮನವಿ ಸಲ್ಲಿಸಿದ್ದೇವೆ' ಎಂದು ವಿವರಿಸಿದರು.

ಸಂಘದ ಪ್ರಭಾರ ಅಧ್ಯಕ್ಷ ಬಿ. ಸುಬ್ರಹ್ಮಣ್ಯ ಮಾತನಾಡಿ, 'ಕೆ.ಎಸ್. ಈಶ್ವರಪ್ಪ ಅವರಿಗೆ ಕೇವಲ ಸಚಿವ ಸ್ಥಾನ ನೀಡಲಾಗಿದೆ. ಸಿದ್ದರಾಮಯ್ಯ ಅವರ ವಿರುದ್ಧ ಹಿಜಾಬ್ ಗೊಂದಲ ಸೃಷ್ಟಿಸಲಾಗಿದೆ. ಇಂತಹ ಸಂದರ್ಭದಲ್ಲಿ ಸಮಾಜ ಎಚ್ಚರಿಕೆಯಿಂದ ಇರಬೇಕಾಗಿದೆ' ಎಂದರು.

ಸೆಲ್ಕೋ ಸಂಸ್ಥೆಯಿಂದ ಐವರಿಗೆ ಸನ್ಮಾನ

ಬೆಂಗಳೂರು: ಸೆಲ್ಕೋ ಸೋಲಾರ್ ಲೈಟ್ ಪ್ರೈವೇಟ್‌ಲಿಮಿಟೆಡ್‌ಸಂಸ್ಥೆಯುಸಂಸ್ಥಾಪಕರ ದಿನಾಚರಣೆ ಪ್ರಯುಕ್ತ ಮೂವರು ಮಹಿಳೆಯರು ಸೇರಿ ಒಟ್ಟು ಐದು ಮಂದಿ ಸಾಧಕರನ್ನು ಗೌರವಿಸಲು ನಿರ್ಧರಿಸಿದೆ.

'ಸಂಸ್ಥೆಯ ಜೊತೆ ಗುರುತಿಸಿಕೊಂಡಿರುವ ಕೊಪ್ಪಳದ ಗಿರಿಜಾ ಕೇರಿ, ವಿಜಯಪುರದ ಆಸ್ಮಾ, ಕುಂದಾಪುರದ ಆಶಾಲತಾ, ಧರ್ಮಸ್ಥಳದ ವಸಂತ್ ಹಾಗೂ ಧಾರವಾಡದ ಶಂಕರ್ ತೊರಗಲ್ ಮಠ ಅವರನ್ನು ಇದೇ 30ರಂದು ನಡೆಯುವ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಗುತ್ತದೆ' ಎಂದು ಪ್ರಕಟಣೆ ತಿಳಿಸಿದೆ. ಜೆ.ಪಿ.ನಗರ ಒಂದನೇ ಹಂತದಲ್ಲಿರುವ ಸಂಸ್ಥೆಯ ಮುಖ್ಯ ಕಚೇರಿಯಲ್ಲಿ ಕಾರ್ಯಕ್ರಮ ನಿಗದಿಯಾಗಿದೆ. ಹರೀಶ್ ಹಂದೆ ಭಾಗವಹಿಸಲಿದ್ದಾರೆ.

'ಹಲಾಲ್ ಆರ್ಥಿಕ ಜಿಹಾದ್'

ಬೆಂಗಳೂರು: ಹಲಾಲ್ ಎಂಬುದು 'ಆರ್ಥಿಕ ಜಿಹಾದ್'. ಇಡೀ ಮಾರುಕಟ್ಟೆ ವ್ಯವಸ್ಥೆಯನ್ನು ಮುಸ್ಲಿಮರು ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ಮಾಡಿರುವ ಹುನ್ನಾರ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ.

ಹಲಾಲ್ ಮಾಂಸ ಬಹಿಷ್ಕರಿಸ-ಬೇಕು ಎಂದು ಕೆಲವು ಸಂಘಟನೆಗಳು ನೀಡಿರುವ ಕರೆಗೆ ವಿಧಾನಸೌಧದಲ್ಲಿ ಮಂಗಳವಾರ ಸುದ್ದಿಗಾರರಿಗೆ ಪ್ರತಿಕ್ರಿ-ಯಿಸಿದ ಅವರು, 'ಹಲಾಲ್ ಇಸ್ಲಾಂನ ಧಾರ್ಮಿಕ ಕ್ರಿಯೆ. ಅದನ್ನು ಅವರ ದೇವರಿಗೆ ಅರ್ಪಿಸುತ್ತಾರೆ. ಆದ್ದರಿಂದ ಅವರಿಗೆ ಪ್ರಿಯವಾದುದು. ಆದರೆ ಅದು ನಮ್ಮ ದೇವರಿಗೆ ಎಂಜಲು' ಎಂದು ಹೇಳಿದರು.

'ಹಲಾಲ್ ಮಾಂಸವನ್ನೇ ಉಪಯೋಗಿಸಿ ಎಂದು ಹೇಳಲು ಹಕ್ಕು ಇದೆಯೋ, ಅದೇ ರೀತಿ ಬಹಿಷ್ಕರಿಸಿ ಎಂದು ಹೇಳುವ ಹಕ್ಕೂ ಇದೆ. ಹಲಾಲ್ ಅನ್ನು ಎಲ್ಲರೂ ಒಪ್ಪಿಕೊಳ್ಳಬೇಕು ಅಂತ ಏನಾದರೂ ಇದೆಯೇ? ಸಾಮರಸ್ಯವ-ನ್ನು ಹೇರಲು ಬರುವುದಿಲ್ಲ. ಸಾಮರಸ್ಯ ಏಕಮುಖ ಆಗಿರಬಾರದು, ದ್ವಿಮುಖ-ವಾಗಿರಬೇಕು' ಎಂದು ಹೇಳಿದರು.

'ಹಿಂದೂಗಳು ನಡೆಸುವ ಮಾಂಸದ ಅಂಗಡಿಗಳಲ್ಲಿ ಅವರು ಮಾಂಸ ಖರೀದಿಸುತ್ತಾರಾ? ಹಾಗಿದ್ದ ಮೇಲೆ ಮುಸ್ಲಿಮರು ನಡೆಸುವ ಅಂಗಡಿಗಳಲ್ಲಿ ತೆಗೆದುಕೊಳ್ಳಬೇಕು ಎಂದು ಏಕೆ ಹೇಳುತ್ತೀರಾ? ಅವರು ಹಲಾಲ್ ಅಲ್ಲದ ಮಾಂಸ ತಿನ್ನಲು ಸಿದ್ಧರಾದರೆ, ಇವರು ಹಲಾಲ್ ಆಗಿರುವ ಮಾಂಸ ತಿನ್ನುತ್ತಾರೆ. ಯಾವುದೋ ಕಾಲದ ನಿಯಮಗಳನ್ನು ಈಗಲೂ ಒಪ್ಪಿಕೊಳ್ಳಲು ಆಗುತ್ತದೆಯೇ' ಎಂದು ಪ್ರಶ್ನಿಸಿದರು.

ಕೊಂಕಣ ರೈಲ್ವೆ: ವಿದ್ಯುದೀಕರಣ ಪೂರ್ಣ

ಮುಂಬೈ (ಪಿಟಿಐ): ಮಹಾರಾಷ್ಟ್ರದ ರೋಹಾ ಮತ್ತು ಮಂಗಳೂರು ಸಮೀಪದ ತೋಕೂರು ನಡುವಿನ ಸಂಪೂರ್ಣ 741 ಕಿ.ಮೀ ಮಾರ್ಗದ ವಿದ್ಯುದ್ದೀಕರಣ ಕಾರ್ಯ ಪೂರ್ಣಗೊಂಡಿದೆ ಎಂದು ಕೊಂಕಣ ರೈಲ್ವೆ ನಿಗಮ ಮಂಗಳವಾರ ತಿಳಿಸಿದೆ.

ವಿದ್ಯುದೀಕರಣ ಕಾಮಗಾರಿ ಪೂರ್ಣಗೊಂಡಿರುವುದರಿಂದ ಡೀಸೆಲ್ ಮೇಲಿನ ಅವಲಂಬನೆ ಕಡಿ-ಮೆಯಾಗುತ್ತದೆ. ಇದರಿಂದ ಸುಮಾರು ₹ 150 ಕೋಟಿ ಉಳಿತಾಯ ಸಾಧ್ಯ-ವಾಗುತ್ತದೆ. ಜತೆಗೆ ಈ ಮಾರ್ಗದಲ್ಲಿ ತಡೆರಹಿತ ಮತ್ತು ಮಾಲಿನ್ಯ ರಹಿತ ಕಾರ್ಯಾಚರಣೆ ಸಾಧ್ಯವಾಗುತ್ತದೆ ಎಂದು ನಿಗಮದ ಪ್ರಕಟಣೆ ಹೇಳಿದೆ.

ಬುಧವಾರ, ಮಾರ್ಚ್ 30, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 89 | ಪುಟ 20

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಕ್ಯಾನ್ಸರನ್ನು ಪತ್ತೆ ಹಚ್ಚುವ ಬಯಾಪ್ಸಿಯ ಫಲಿತಾಂಶಕ್ಕೆ ದಿನಗಟ್ಟಲೇ ಕಾಯಬೇಕಾಗುತ್ತಿದೆ. ಈಗ ಕೆಲವೇ ಗಂಟೆಗಳಲ್ಲಿ ಫಲಿತಾಂಶ ನೀಡಬಲ್ಲ ಸಂಶೋಧನೆ ಯಶಸ್ವಿಯಾಗಿದೆ...



ಆಳ-ಅಗಲ
34,884 ಸುದ್ದಿ ರೂಪದ ಜಾಹೀರಾತುಗಳು

137 ದಿನಗಳ ಇಂಧನ ಬೆಲೆ ಸ್ಥಿರತೆಗೆ ನಿರ್ಮಲಾ ಸಮರ್ಥನೆ 13

ಶೇ 40 ಕಮಿಷನ್: ಕಾಂಗ್ರೆಸ್- ಬಿಜೆಪಿ ವಾಗ್ವಾದ 10

ಸೆನ್ಸೆಕ್ಸ್	ನಿಫ್ಟಿ	₹/$
57,943 ▲	17,325 ▲	75.73 ▲

ರಸ್ತೆ ಬದಿ ಮಲಗಿದ್ದ ಹಕ್ಕಿಪಿಕ್ಕಿ ಬಾಲಕಿ ವಾಹನ ಹರಿದು ಸಾವು

ಬೆಂಗಳೂರು: ನಗರದ ಕೆ.ಆರ್. ಮಾರುಕಟ್ಟೆ ಪ್ರದೇಶದಲ್ಲಿ ಮಂಗಳವಾರ ನಸುಕಿನಲ್ಲಿ ಅಪಘಾತ ಸಂಭವಿಸಿದ್ದು, ಬೊಲೆರೊ ವಾಹನ ಮೈಮೇಲೆ ಹರಿದು ಏಳು ವರ್ಷದ ಬಾಲಕಿ ಶಿವನ್ಯಾ ಮೃತಪಟ್ಟಿದ್ದಾಳೆ. ಮೃತ ಶಿವನ್ಯಾ, ತಮಿಳುನಾಡು ವೆಲ್ಲೂರಿನ ಹಕ್ಕಿಪಿಕ್ಕಿ ಜನಾಂಗದವಳು. 8

ಚುನಾವಣಾ ವ್ಯವಸ್ಥೆ ಸುಧಾರಣೆ–ವಿಧಾನಸಭೆಯಲ್ಲಿ ಗಂಭೀರ ಚರ್ಚೆ

19 ಲಕ್ಷ ಇವಿಎಂ ನಾಪತ್ತೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಕಾರ್ಯಕರ್ತರು ಮಾಹಿತಿ ಹಕ್ಕಿನಡಿ ಪಡೆದ ಅಂಕಿ ಅಂಶಗಳ ಪ್ರಕಾರ ದೇಶದಲ್ಲಿ 19 ಲಕ್ಷ ವಿದ್ಯುನ್ಮಾನ ಮತಯಂತ್ರಗಳು (ಇವಿಎಂ) ನಾಪತ್ತೆಯಾಗಿವೆ. ಈ ಮತಯಂತ್ರಗಳು ಎಲ್ಲಿಗೆ ಹೋದವು...?



ಎಚ್.ಕೆ. ಪಾಟೀಲ

'ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆಗಳ ಅಗತ್ಯ' ಕುರಿತು ವಿಧಾನಸಭೆಯಲ್ಲಿ ಮಂಗಳವಾರ ನಡೆದ ವಿಶೇಷ ಚರ್ಚೆ ಇವಿಎಂಗಳ ನಾಪತ್ತೆ ಹಾಗೂ ದುರ್ಬಳಕೆ ಕುರಿತ ಗಂಭೀರ ಜಿಜ್ಞಾಸೆಗೆ ಅವಕಾಶ ಒದಗಿಸಿತು.

ಇವಿಎಂಗಳು ದುರ್ಬಳಕೆಯಾಗಿರುವ ಕುರಿತು ಪ್ರಸ್ತಾಪಿಸಿದ ಕಾಂಗ್ರೆಸ್‌ನ ಎಚ್.ಕೆ.ಪಾಟೀಲ, 'ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಸಂಸ್ಥೆಯಿಂದ 9,64,270 ಹಾಗೂ ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (ಇಸಿಐಎಲ್) ಸಂಸ್ಥೆಯಿಂದ 9,29,992 ಇವಿಎಂಗಳು ನಾಪತ್ತೆಯಾಗಿವೆ ಎಂದು ಮಾಹಿತಿ ಹಕ್ಕಿನಡಿ ಪಡೆಯಲಾದ ದಾಖಲೆಗಳು ಹೇಳುತ್ತಿವೆ. 2014–15ರಲ್ಲಿ ಭಾರತೀಯ ಚುನಾವಣಾ ಆಯೋಗಕ್ಕೆ 62,183 ಇವಿಎಂಗಳನ್ನು ಪೂರೈಸಿರುವುದಾಗಿ ಬಿಇಎಲ್ ಹೇಳುತ್ತಿದೆ. ಆದರೆ, ಅವುಗಳು ತಲುಪಿಯೇ ಇಲ್ಲ ಎಂದು ಚುನಾವಣಾ ಆಯೋಗ ಹೇಳುತ್ತಿದೆ. ಹಾಗಾದರೆ ಈ ಇವಿಎಂಗಳು ಏನಾದವು' ಎಂದು ಪ್ರಶ್ನಿಸಿದರು.

'ಈ ಬಗ್ಗೆ ಚುನಾವಣಾ ಆಯೋಗವೇ ಪ್ರತಿಕ್ರಿಯೆ ನೀಡಬೇಕು. ಯಾವುದೇ ಇವಿಎಂ ದುರ್ಬಳಕೆ ಆಗುತ್ತಿಲ್ಲ ಎಂಬುದನ್ನು ಆಯೋಗ ಸಾಬೀತುಪಡಿಸದೇ ಹೋದರೆ, ಈ ಕುರಿತ ಶಂಕೆಗಳು ಇನ್ನಷ್ಟು ಗಟ್ಟಿಗೊಳ್ಳುತ್ತವೆ. ಚುನಾವಣಾ ಪ್ರಕ್ರಿಯೆ ಕುರಿತು ಜನರ ಸಂದೇಹಗಳನ್ನು ನಿವಾರಿಸುವ ಜವಾಬ್ದಾರಿ ಆಯೋಗದ ಮೇಲಿದೆ. ನಾನು ನೀಡಿರುವ ಮಾಹಿತಿ ತಪ್ಪಾಗಿದ್ದರೆ ಯಾವುದೇ ಶಿಕ್ಷೆಗೆ ಬೇಕಿದ್ದರೂ ಗುರಿಪಡಿಸಬಹುದು' ಎಂದು ಎಚ್.ಕೆ.ಪಾಟೀಲ ಸವಾಲು ಹಾಕಿದರು.

'ಈ ಹಿಂದೆ ಚುನಾವಣಾ ಆಯೋಗವೂ ಇವಿಎಂಗಳ ಅಸುರಕ್ಷಿತ ಎಂದು ಸಾಬೀತುಪಡಿಸಲು ಸಾರ್ವಜನಿಕರಿಗೆ ಮುಕ್ತ ಆಹ್ವಾನ ನೀಡಿತ್ತು. ಆಗ ಯಾರೂ ಮುಂದೆ ಬಂದಿರಲಿಲ್ಲ' ಎಂದು ಬಿಜೆಪಿಯ ಅರವಿಂದ ಬೆಲ್ಲದ ಹೇಳಿದರು.

10ನೇ ಪುಟ ನೋಡಿ

'ಚುನಾವಣಾ ಆಯೋಗಕ್ಕೆ ಸಮನ್ಸ್ ನೀಡಿ'

'ಚುನಾವಣಾ ಆಯೋಗಕ್ಕೆ ಸಮನ್ಸ್ ಮಾಡುವ ಅಧಿಕಾರ ಸಭಾಧ್ಯಕ್ಷರಿಗೆ ಇದೆ. ಚುನಾವಣಾ ಆಯೋಗದವರನ್ನು ಈ ಸದನಕ್ಕೆ ಕರೆಸಿ ಇವಿಎಂ ದುರ್ಬಳಕೆ ವಿಚಾರದಲ್ಲಿ ದೇಶದ ಸಂದೇಹ ನಿವಾರಿಸಿ ಸತ್ಯಸ್ಥಾಪನೆ ಮಾಡುವ ನಿರ್ಣಯವನ್ನು ಸಭಾಧ್ಯಕ್ಷರು ಕೈಗೊಳ್ಳಬೇಕು' ಎಂದು ಕಾಂಗ್ರೆಸ್‌ನ ಕೆ.ಆರ್.ರಮೇಶ್ ಕುಮಾರ್ ಒತ್ತಾಯಿಸಿದರು.

'ನಮ್ಮ ದೇಶದಲ್ಲಿ ಚುನಾವಣಾ ಆಯೋಗವನ್ನು ಬಿಟ್ಟು ಬೇರೆ ಯಾರಿಗೂ ಇವಿಎಂಗಳನ್ನು ಪೂರೈಸಲು ಬಿಇಎಲ್‌ನಂತಹ ಸಂಸ್ಥೆಗಳಿಗೆ ಅವಕಾಶವಿಲ್ಲ. ರಾಷ್ಟ್ರಪತಿಯವರಿಂದಲೇ ಪ್ರಮಾಣವಚನ ಸ್ವೀಕರಿಸುವ ಮುಖ್ಯ ಚುನಾವಣಾ ಆಯುಕ್ತರು ನಿಷ್ಪಕ್ಷಪಾತವಾಗಿ ನಡೆದುಕೊಳ್ಳಬೇಕಿದೆ. ಈ ಬಗ್ಗೆ ಸಭಾಧ್ಯಕ್ಷರು ಆಯೋಗಕ್ಕೆ ನೋಟಿಸ್ ನೀಡಿದರೆ ಇಡೀ ಸದನ ಅವರ ಪರ ನಿಲ್ಲಬೇಕು' ಎಂದರು.

> **ಇವಿಎಂ ನಾಪತ್ತೆ ಕುರಿತ ವಿವರಗಳನ್ನು ನನಗೆ ಕಳುಹಿಸಿ ಕೊಡಿ. ಈ ಕುರಿತು ಎದುರಾದ ಸಂಶಯಗಳಿಗೆ ಉತ್ತರ ಕೊಡಿಸಲು ನನ್ನ ಅಧಿಕಾರ ಸ್ಥಾನದಿಂದ ಪ್ರಯತ್ನ ಮಾಡುತ್ತೇನೆ**
> **ವಿಶ್ವೇಶ್ವರ ಹೆಗಡೆ ಕಾಗೇರಿ,** ಸಭಾಧ್ಯಕ್ಷ



ಪ್ರತಿಭಟನೆ ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳನ್ನು ಖಂಡಿಸಿ ಕಾರ್ಮಿಕ ಸಂಘಟನೆಗಳು ಕರೆ ನೀಡಿದ್ದ ದೇಶವ್ಯಾಪಿ ಮುಷ್ಕರದ ಅಂಗವಾಗಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ವಿವಿಧ ಕಾರ್ಮಿಕ ಸಂಘಟನೆಗಳ ಮುಖಂಡರಾದ ವಿಜಯಭಾಸ್ಕರ್ ಡಿ., ಕೆ.ವಿ.ಭಟ್, ಎಂ.ಝುಡ್. ಅಲಿ, ಶ್ಯಾಮಣ್ಣರೆಡ್ಡಿ, ಜಿ. ಆರ್. ಶಿವಶಂಕರ್, ಅಪ್ಪಣ್ಣ, ವರಲಕ್ಷ್ಮಿ, ಮೀನಾಕ್ಷಿ ಸುಂದರಂ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಶ್ರೀಲಂಕಾದಲ್ಲಿ ಎಂಆರ್‌ಸಿಸಿ ಸ್ಥಾಪಿಸಲಿರುವ ಬಿಇಎಲ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕೊಲಂಬೊದಲ್ಲಿ ಸಾಗರಯಾನ ರಕ್ಷಣಾ ಸಮನ್ವಯ ಕೇಂದ್ರವನ್ನು (ಎಂಆರ್‌ಸಿಸಿ) ಸ್ಥಾಪಿಸಲು ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಶ್ರೀಲಂಕಾದೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಹಿಂದೂ ಮಹಾಸಾಗರದ ಮಾಲ್ಡೀವ್ಸ್‌ನಲ್ಲಿ ರೇಡಾರ್ ವ್ಯವಸ್ಥೆಯನ್ನು ಅಳವಡಿಸಿದ ಬೆನ್ನಲ್ಲೇ, ಶ್ರೀಲಂಕಾದಲ್ಲಿ ಎಂಆರ್‌ಸಿಸಿ ಆರಂಭಿಸುವ ಮೂಲಕ ಭಾರತವು ಈ ಪ್ರದೇಶದಲ್ಲಿ ತನ್ನ ಪ್ರಾಬಲ್ಯವನ್ನು ಮರುಸ್ಥಾಪಿಸುವತ್ತ ಮಹತ್ವದ ಹೆಜ್ಜೆ ಇಟ್ಟಿದೆ.

ವಿದೇಶಾಂಗ ಸಚಿವ ಎಸ್.ಜೈಶಂಕರ್ ಮತ್ತು ಶ್ರೀಲಂಕಾ ವಿದೇಶಾಂಗ ಸಚಿವ ಜಿ.ಎಲ್.ಪೈರಿಸ್ ನಡುವೆ ನಡೆದ ಸಭೆಯಲ್ಲಿ ಈ ಒಪ್ಪಂದಕ್ಕೆ ಸಹಿ ಮಾಡಲಾಗಿದೆ.

ಹಿಂದೂ ಮಹಾಸಾಗರದ ದ್ವೀಪ ರಾಷ್ಟ್ರಗಳಲ್ಲಿ ಚೀನಾವು ಭಾರಿ ಪ್ರಮಾಣದಲ್ಲಿ ಬಂಡವಾಳ ಹೂಡುವ ಮೂಲಕ, ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡಿತ್ತು. ಶ್ರೀಲಂಕಾದ ಹಂಬನ್‌ತೋಟಾದಲ್ಲಿ ಬಂದರು ಅಭಿವೃದ್ಧಿಪಡಿಸಿ, ಅದನ್ನು ಗುತ್ತಿಗೆ ಪಡೆದುಕೊಳ್ಳುವಲ್ಲಿ ಚೀನಾ ಯಶಸ್ವಿಯಾಗಿತ್ತು. ಇದು ಹಿಂದೂ ಮಹಾಸಾಗರ ಪ್ರದೇಶದಲ್ಲಿ ಭಾರತದ ಪ್ರಾಬಲ್ಯಕ್ಕೆ ಕೊಟ್ಟ ಹೊಡೆತ ಎಂದೇ ಪರಿಗಣಿಸಲಾಗಿತ್ತು. ಈಗ ಭಾರತವು ಸಮುದ್ರಯಾನಕ್ಕೆ ಅತ್ಯಗತ್ಯವಾದ ವ್ಯವಸ್ಥೆಗಳನ್ನು ಮಾಲ್ಡೀವ್ಸ್ ಮತ್ತು ಶ್ರೀಲಂಕಾದಲ್ಲಿ ಸ್ಥಾಪನೆಗೆ ಮುಂದಾಗುವ ಮೂಲಕ ಪ್ರಾಬಲ್ಯವನ್ನು ಮರುಸ್ಥಾಪಿಸಿದೆ. ಆ ಮೂಲಕ ಚೀನಾಕ್ಕೆ ಸೆಡ್ಡು ಹೊಡೆದಿದೆ ಎಂದು ವಿಶ್ಲೇಷಿಸಲಾಗಿದೆ.

ಶ್ರೀಲಂಕಾದ ನೌಕಾಪಡೆಯ ಕೇಂದ್ರಕಚೇರಿ ಇರುವ ಕೊಲಂಬೊದಲ್ಲಿ ಭಾರತದ ಬಿಇಎಲ್, ಎಂಆರ್‌ಸಿಸಿಯನ್ನು ಸ್ಥಾಪಿಸಲಿದೆ. ಹಂಬನ್‌ತೋಟಾ ಬಂದರು ಪ್ರದೇಶದಲ್ಲಿ ಎಂಆರ್‌ಸಿಸಿ ಉಪಕೇಂದ್ರವನ್ನು ಸ್ಥಾಪಿಸಲಿದೆ.

ಸಹಕಾರ ವೃದ್ಧಿ

- ಶ್ರೀಲಂಕಾದಲ್ಲಿ ಆಧಾರ್ ಸ್ವರೂಪದ 'ವಿಶಿಷ್ಟ ಡಿಜಿಟಲ್ ಗುರುತು ಕಾರ್ಯಕ್ರಮ' ಆರಂಭಿಸಲು ಭಾರತ ನೆರವು ನೀಡಲು ಒಪ್ಪಂದ
- ಶ್ರೀಲಂಕಾ ನೌಕಾಪಡೆಗೆ ಭಾರತವು, ಕರಾವಳಿ ಕಣ್ಗಾವಲು ಉದ್ದೇಶದ ಮೂರು ಡಾರ್ನಿಯರ್ ವಿಮಾನಗಳನ್ನು ನೀಡಲಿದೆ
- ಶ್ರೀಲಂಕಾದ ಟ್ರಿಂಕಾಮಲೈ ಬಂದರಿಗಾಗಿ ಗೋವಾ ಶಿಪ್‌ಯಾರ್ಡ್ ಲಿಮಿಟೆಡ್ ತೇಲುವ ಡಾಕ್ ಅನ್ನು ನಿರ್ಮಿಸಿಕೊಡಲಿದೆ. ಚೀನಾದ ಭೋಗ್ಯದಲ್ಲಿ ಇರುವ ಹಂಬನ್‌ತೋಟಾ ಬಂದರು ಹೊರತುಪಡಿಸಿ, ಬೇರೆ ಬಂದರುಗಳಿಗೆ ಈ ಡಾಕ್ ಅನ್ನು ತುರ್ತು ಸಂದರ್ಭದಲ್ಲಿ ಸಾಗಿಸಬಹುದು

ಚಿನಕುರಳಿ
ಪ್ರಕಾಶ್ ಶೆಟ್ಟಿ



ಕಾರವಾರ ವಾಣಿಜ್ಯ ಬಂದರಿನ 2ನೇ ಹಂತದ ವಿಸ್ತರಣೆ

ನಿರ್ಮಾಣ ಚಟುವಟಿಕೆ: 'ಸುಪ್ರೀಂ' ಮೌಖಿಕ ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾರವಾರದ ವಾಣಿಜ್ಯ ಬಂದರಿನ 2ನೇ ಹಂತದ ವಿಸ್ತರಣಾ ಯೋಜನೆಗೆ ಸಂಬಂಧಿಸಿ ನಿರ್ಮಾಣ ಚಟುವಟಿಕೆ ಕೈಗೊಳ್ಳದಂತೆ ಸುಪ್ರೀಂ ಕೋರ್ಟ್ ಮಂಗಳವಾರ ಮೌಖಿಕವಾಗಿ ನಿರ್ದೇಶನ ನೀಡಿದೆ.

ಬಂದರಿನ ವಿಸ್ತರಣಾ ಕಾಮಗಾರಿ ವಿರೋಧಿಸಿ ಬೈತಖೋಲ್ ಬಂದರು ನಿರಾಶ್ರಿತರ ಯಾಂತ್ರೀಕೃತ ದೋಣಿ ಮೀನುಗಾರರ ಸಹಕಾರ ಸಂಘ ಮೇಲ್ಮನವಿ ಸಲ್ಲಿಸಿತ್ತು. ಮಂಗಳವಾರ ಈ ಅರ್ಜಿ ಕುರಿತು ಮೌಖಿಕ ಅವಲೋಕನ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಪೀಠ, ಈ ಸಂಬಂಧ ಪ್ರತಿಕ್ರಿಯೆ ನೀಡುವಂತೆ ಕರ್ನಾಟಕ ಸರ್ಕಾರ ಮತ್ತಿತರರಿಗೆ ನೋಟಿಸ್ ಜಾರಿ ಮಾಡಿದೆ.

₹ 2,000 ಕೋಟಿ ವೆಚ್ಚದ ಈ ವಿಸ್ತರಣಾ ಕಾಮಗಾರಿಯ ವಿಳಂಬದಿಂದ ಯೋಜನೆಯ ವೆಚ್ಚ ಹೆಚ್ಚಲಿದೆ ಎಂದು ಡಿವಿಪಿ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಪರ ವಕೀಲ ಮಣಿಂದರ್ ಸಿಂಗ್ ಅವರ ವಾದವನ್ನು ತಳ್ಳಿ ಹಾಕಿದ ಪೀಠ, ಕಡಲ ತೀರದ ಪರಿಸರವನ್ನು ನಾಶಮಾಡಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿದೆ.

ಯೋಜನೆಗೆ ಕೇಂದ್ರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ತಜ್ಞರ ಸಲಹಾ ಸಮಿತಿಯ (ಇಎಸಿ)ಯ ಶಿಫಾರಸಿನ ಮೇರೆಗೆ ಪೂರ್ವಭಾವಿ ಪರಿಸರ ಅನುಮತಿ ಪಡೆದು ಅವಕಾಶ ನೀಡಬೇಕಿದೆ. ಹಾಗಾಗಿ, ಯೋಜನೆಯನ್ನು ಸ್ಥಗಿತಗೊಳಿಸಿ ಯಥಾಸ್ಥಿತಿಗೆ ಆದೇಶಿಸಬೇಕು ಎಂಬ ಅರ್ಜಿದಾರರ ಮನವಿಗೆ ಸಮ್ಮತಿ ನೀಡಿರುವ ಪೀಠ, ಈ ಕುರಿತ ಪರಿಶೀಲನೆಗೆ ಒಪ್ಪಿಗೆ ಸೂಚಿಸಿದೆ.

ಕಾನೂನುಬಾಹಿರ ಅನುಮತಿ: ಯೋಜನೆಯನ್ನು ವಿರೋಧಿಸಿ ಸಲ್ಲಿಸಲಾದ ಮೇಲ್ಮನವಿಯನ್ನು ತಿರಸ್ಕರಿಸಿ, 2021ರ ಜುಲೈ 29ರಂದು ರಾಜ್ಯ ಹೈಕೋರ್ಟ್ ನೀಡಿರುವ ತೀರ್ಪಿನ ಸಿಂಧುತ್ವವನ್ನು ಅರ್ಜಿದಾರರ ಪರ ವಕೀಲರಾದ ದೇವದತ್ತ ಕಾಮತ್ ಹಾಗೂ ಅಮಿತ್ ಪೈ ಅವರು ಮೇಲ್ಮನವಿಯಲ್ಲಿ ಪ್ರಶ್ನಿಸಿದ್ದಾರೆ.

2019ರ ಜನವರಿ 23ರಂದು ರಾಜ್ಯ ಮಟ್ಟದ ಅಧಿಕಾರಿಗಳಿಂದ ಪಡೆಯಲಾದ ಪರಿಸರ ಅನುಮತಿ ಸಹಾಯದೊಂದಿಗೆ ನಿರ್ಮಾಣ ಚಟುವಟಿಕೆ ಆರಂಭಿಸಲಾಗಿದೆ. ಇದು 2006ರ ಸೆಪ್ಟೆಂಬರ್ 14ರಂದು ಹೊರಡಿಸಲಾದ ಪರಿಸರದ ಮೇಲಾಗುವ ಪರಿಣಾಮಗಳ ಮೌಲ್ಯಮಾಪನ ಕುರಿತ ಅಧಿಸೂಚನೆಯನ್ನು ಉಲ್ಲಂಘಿಸಿದೆ ಎಂದೂ ಅರ್ಜಿಯಲ್ಲಿ ದೂರಲಾಗಿದೆ.

9ನೇ ಪುಟ ನೋಡಿ

ಗೋಮಾಳ ಒತ್ತುವರಿ: ಕಂದಾಯ ಸಚಿವ ಆರ್.ಅಶೋಕ ಹೇಳಿಕೆ

ಮರಳು ದಂಧೆ: ಎಸ್‌ಐಟಿ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭೂ ಕಬಳಿಕೆ ಪ್ರಕರಣಗಳ ವಿಚಾರಣೆಗೆ ವಿಶೇಷ ತನಿಖಾ ದಳ (ಎಸ್‌ಐಟಿ) ರಚಿಸಲು ಈಗಾಗಲೇ ಸರ್ಕಾರ ನಿರ್ಧರಿಸಿದ್ದು, ಅದೇ ದಳದಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕು ಕುಂದಾಣ ಹೋಬಳಿಯ ಸರ್ಕಾರಿ ಗೋಮಾಳ ಒತ್ತುವರಿ ಹಾಗೂ ಫಿಲ್ಟರ್ ಮರಳು ದಂಧೆಯ ತನಿಖೆ ನಡೆಸಲಾಗುವುದು' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಜೆಡಿಎಸ್‌ನ ಎಚ್.ಎಂ. ರಮೇಶಗೌಡ, ಬಿಜೆಪಿಯ ಎನ್. ರವಿಕುಮಾರ್, ಕಾಂಗ್ರೆಸ್ಸಿನ ಪಿ.ಆರ್. ರಮೇಶ್ ಪ್ರಸ್ತಾಪಿಸಿದ ವಿಷಯದ ಮೇಲೆ ನಡೆದ ಚರ್ಚೆಗೆ ಉತ್ತರಿಸಿದ ಸಚಿವರು, 'ತೇಲ್ಗೆರೆ ಗ್ರಾಮದಲ್ಲಿ 211 ಎಕರೆ ಸರ್ಕಾರಿ ಗೋಮಾಳವಿದೆ. ಅದರಲ್ಲಿ 15 ಜನರಿಗೆ 16 ಎಕರೆಯಂತೆ ಮಂಜೂರು ಮಾಡಿರುವುದು ಕೂಡ ಅನುಮಾನಾಸ್ಪದವಾಗಿದೆ. ಕಳೆದ ವರ್ಷ ಈ ಪ್ರಕರಣ ಗಮನಕ್ಕೆ ಬಂದ ಬಳಿಕ ಜಿಲ್ಲಾಧಿಕಾರಿಯನ್ನು ಸ್ಥಳಕ್ಕೆ ಕಳುಹಿಸಿ ತನಿಖೆ ಮಾಡಿಸಲಾಗಿದೆ' ಎಂದರು.

'ಸರ್ಕಾರದಿಂದ ಫಿಲ್ಟರ್ ಮರಳು ದಂಧೆಗೆ ಕಡಿವಾಣ ಹಾಕಲಾಗಿದೆ. ಈ ಜಾಗದಲ್ಲಿ ಅನೇಕ ವರ್ಷಗಳಿಂದ ಫಿಲ್ಟರ್ ಮರಳು ದಂಧೆ ನಡೆಯುತ್ತಿತ್ತು. ನಮ್ಮ ಸರ್ಕಾರ ಆರೋಪಿಗಳಿಗೆ ₹ 2.18 ಕೋಟಿ ದಂಡ ಹಾಕಿದೆ. ಶಿವಕುಮಾರ್ ಬಿನ್ ಸೊಣ್ಣಪ್ಪ ಎಂಬುವವರು ಮರಳು ದಂಧೆ ನಡೆಸಿ ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟು ಮಾಡುತ್ತಿರುವ ಆರೋಪವಿದೆ. ಫಿಲ್ಟರ್ ಮರಳಿಗೆ ಕಡಿವಾಣ ಹಾಕುವುದು ಅನಿವಾರ್ಯವಾಗಿದೆ. ಕಳಪೆ ಮರಳಿನಿಂದ ಮನೆ ಕಟ್ಟದ ಪರಿಣಾಮ ಬೆಂಗಳೂರಿನ ಹಲವು ಕಟ್ಟಡಗಳು ಕುಸಿದುಬಿದ್ದಿವೆ' ಎಂದರು.

ರಮೇಶ್ ಗೌಡ, 'ಗೋಮಾಳದ ಸ್ವತ್ತಿಗೆ ಖಾಸಗಿ ವ್ಯಕ್ತಿಗಳು ಸುಳ್ಳು ದಾಖಲೆ ಸೃಷ್ಟಿಸಿ ಅಕ್ರಮ ಖಾತೆ ಮೂಲಕ ಭೂ ಕಬಳಿಕೆ ಮಾಡಿದ್ದಾರೆ. ಒತ್ತುವರಿಯಾದ ಜಾಗದಲ್ಲಿ ಅಕ್ರಮವಾಗಿ ಫಿಲ್ಟರ್ ಮರಳು ದಂಧೆ ನಡೆಸಲಾಗುತ್ತಿದೆ. ಇದರ ಮೇಲೆ ಈ ಹಿಂದೆ ಲೋಕಾಯುಕ್ತ ದಾಳಿ ನಡೆದಾಗ ಅಕ್ರಮ ಮಾಡುವವರಿಗೆ ಸ್ಥಳೀಯ ಪೊಲೀಸರು ಮಾಹಿತಿ ನೀಡಿ ತಪ್ಪಿಸಿಕೊಳ್ಳಲು ನೆರವು ನೀಡಿದ್ದರು' ಎಂದು ಆರೋಪಿಸಿದರು.

ಎನ್. ರವಿಕುಮಾರ್, 'ಒತ್ತುವರಿ ಜಮೀನಿನಲ್ಲಿ ಅಕ್ರಮ ಮರಳು ಗಣಿಗಾರಿಕೆ ನಡೆಯುತ್ತಿದೆ. ಈ ಪ್ರಕರಣದ ತನಿಖೆಗೆ ಎಸ್‌ಐಟಿ ರಚಿಸಬೇಕು' ಎಂದು ಆಗ್ರಹಿಸಿದರು.

ಪಿ.ಆರ್. ರಮೇಶ್, 'ಈ ಜಾಗದಲ್ಲಿ ಖಾಸಗಿ ವ್ಯಕ್ತಿಗಳು 12 ಎಕರೆ ಜಾಗದಲ್ಲಿ 20 ಅಡಿ ಆಳದವರೆಗೆ ಕೊರೆದು ಅಕ್ರಮವಾಗಿ ಫಿಲ್ಟರ್ ಮರಳು ಗಣಿಗಾರಿಕೆ ನಡೆಸಿದ್ದಾರೆ. ದೊಡ್ಡ ಮಟ್ಟದಲ್ಲಿ ಅಕ್ರಮ ನಡೆಯುತ್ತಿದ್ದರೂ ಸರ್ಕಾರ ಯಾಕೆ ಮೌನವಾಗಿದೆ' ಎಂದು ಪ್ರಶ್ನಿಸಿದರು. ಜೆಡಿಎಸ್ಸಿನ ಮರಿತಿಬ್ಬೇಗೌಡ ಕೂಡ ಪ್ರಕರಣದ ತನಿಖೆಗೆ ಒತ್ತಾಯಿಸಿದರು.

2 ವರ್ಷಗಳಲ್ಲಿ 45 ಸಾವಿರ ಉದ್ಯೋಗ ನಷ್ಟ: ಸಚಿವ ಎಂ.ಟಿ.ಬಿ. ನಾಗರಾಜ್

ಬೆಂಗಳೂರು: 'ಕಳೆದ ಎರಡು ವರ್ಷಗಳಲ್ಲಿ ಸಣ್ಣ ಕೈಗಾರಿಕಾ ವಲಯದಲ್ಲಿ ರಾಜ್ಯದ 45 ಸಾವಿರ ಮಂದಿ ಉದ್ಯೋಗ ಕಳೆದುಕೊಂಡಿದ್ದಾರೆ' ಎಂದು ಸಣ್ಣ ಕೈಗಾರಿಕಾ ಸಚಿವ ಎಂ.ಟಿ.ಬಿ. ನಾಗರಾಜ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಯು.ಬಿ. ವೆಂಕಟೇಶ್ ಅವರ ಪ್ರಶ್ನೆಗೆ ಸಚಿವರು ಉತ್ತರಿಸಿದರು.

'2020ರಲ್ಲಿ 562, 2021ರಲ್ಲಿ 192 ಸೇರಿ ಒಟ್ಟು 754 ನೋಂದಾಯಿತ ಕಾರ್ಖಾನೆಗಳು ಮುಚ್ಚಿವೆ. ಆದರೆ, ಇದೇ ಅವಧಿಯಲ್ಲಿ 92 ಸಾವಿರಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯಾಗಿದೆ' ಎಂದು ಮಾಹಿತಿ ನೀಡಿದರು.

'ಕಚ್ಚಾ ಮಾಲಿನ ಕೊರತೆ, ಕಾರ್ಮಿಕರ ಕೊರತೆ, ದುಡಿಯುವ ಬಂಡವಾಳ ಸಮಸ್ಯೆ ಸೇರಿ ಅನೇಕ ಕಾರಣಗಳಿಗೆ ಸಣ್ಣ ಕೈಗಾರಿಕೆಗಳು ತೊಂದರೆಗೆ ಒಳಗಾಗಿವೆ. ಕೋವಿಡ್ ಸಂದರ್ಭದಲ್ಲೂ ಸಣ್ಣ ಕೈಗಾರಿಕೆಗಳು ಮುಚ್ಚಿವೆ' ಎಂದರು.

'ಸಣ್ಣ ಕೈಗಾರಿಕೆಗಳಷ್ಟೆ ಅಲ್ಲ, ಬೃಹತ್ ಉದ್ಯಮಗಳೂ ನಷ್ಟ ಅನುಭವಿಸಿವೆ. ಬಹುರಾಷ್ಟ್ರೀಯ ಕಂಪನಿಗಳ ಪೈಪೋಟಿ, ತಂತ್ರಜ್ಞಾನ ಬದಲಾವಣೆಯಿಂದ ದೊಡ್ಡ ಕೈಗಾರಿಕೆಗಳು ಮುಚ್ಚಿವೆ. ಕೈಗಾರಿಕೆಗಳ ಪುನಶ್ಚೇತನಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಾಕಷ್ಟು ನೆರವು ನೀಡುತ್ತಿವೆ' ಎಂದರು.

'ಕಾರ್ಮಿಕರ ಬಲವರ್ಧನೆಗೆ ಉದ್ಯೋಗ ಕಳೆದುಕೊಂಡವರ ನೆರವಿಗೆ ಕಾರ್ಮಿಕ ಇಲಾಖೆಯಲ್ಲಿ ಯಾವುದೇ ಯೋಜನೆಗಳಿಲ್ಲ. ಆದರೆ, ಕಾರ್ಮಿಕರು ತಮ್ಮ ಉಳಿತಾಯದ ಸೌಲಭ್ಯಗಳನ್ನು ಪಡೆದುಕೊಳ್ಳಲು ಅರ್ಹರಿರುತ್ತಾರೆ' ಎಂದು ಸಚಿವರು ವಿವರಿಸಿದರು.

ಯುಗಾದಿ ಪ್ರಯುಕ್ತ ತೈಲಾಭ್ಯಂಜನ

ಬೆಂಗಳೂರು: ರಾಜಾಜಿನಗರದ ಕ್ಷೇಮ ಆರೋಗ್ಯ ಧಾಮವು ಯುಗಾದಿ ಪ್ರಯುಕ್ತ ವಿಶೇಷ ತೈಲಾಭ್ಯಂಜನವನ್ನು (ಎಣ್ಣೆ ಸ್ನಾನ) ಏ.1 ಮತ್ತು 2ರಂದು ಆಯೋಜಿಸಿದೆ.

ಆರೋಗ್ಯಧಾಮದಲ್ಲೇ ಸ್ನಾನದ ವ್ಯವಸ್ಥೆ ಇರುತ್ತದೆ. ಆಸಕ್ತರು ಇದರ ಸದುಪಯೋಗ ಪಡಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಕ್ಷೇಮ ಆರೋಗ್ಯ ಧಾಮ, ವಿದ್ಯಾವರ್ಧಕ ಕಾಲೇಜು ಹತ್ತಿರ, ರಾಜಾಜಿನಗರ

ಸಂಪರ್ಕ:9845572955

ಕೇಳಿಸಿಕೊಳ್ಳುವ ಕಲೆ: ಏ.9ಕ್ಕೆ ಕಾರ್ಯಾಗಾರ

ಬೆಂಗಳೂರು: ದಿ ಇಂಡಿಯನ್ [illegible] ಸಂಸ್ಥೆಯು 'ಆರ್ಟ್ ಆಫ್ ಲಿಸನಿಂಗ್' (ಕೇಳಿಸಿಕೊಳ್ಳುವ ಕಲೆ) ಕಾರ್ಯಾಗಾರವನ್ನು ಏಪ್ರಿಲ್ 9ರಂದು ಬೆಳಿಗ್ಗೆ 11 ಗಂಟೆಯಿಂದ ದೊಮ್ಮಲೂರಿನ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಹಮ್ಮಿಕೊಂಡಿದೆ.

ಕಾರ್ಯಾಗಾರದಲ್ಲಿ ಭಾಗವಹಿಸುವವರು ತಮ್ಮ ಸುತ್ತಮುತ್ತಲಿನ ಧ್ವನಿ ಪರಿಸರದ ಬಗ್ಗೆ ಅರಿವನ್ನು ಹೆಚ್ಚಿಸಿಕೊಳ್ಳಲಿದ್ದಾರೆ. ಅಲ್ಲದೆ ಆಲಿಸುವಿಕೆ ತಂತ್ರಗಳನ್ನು ಅನ್ವೇಷಿಸಲಿದ್ದಾರೆ. ಮೈಕ್ರೋಫೋನ್, ಸೌಂಡ್ ರೆಕಾರ್ಡ್ ಸಾಧನಗಳನ್ನು ಬಳಸುವ ಮೂಲಕ ಧ್ವನಿಗೆ ಸಂಬಂಧಿಸಿದ ಪ್ರಾಯೋಗಿಕ ತಂತ್ರಗಳನ್ನೂ ಕಲಿಯಬಹುದು.

12 ವರ್ಷ ಮೇಲ್ಪಟ್ಟವರು ಕಾರ್ಯಾಗಾರದಲ್ಲಿ ಭಾಗವಹಿಸಬಹುದು. ಪ್ರವೇಶ ಉಚಿತ.

ಕಾರ್ಯಾಗಾರದಲ್ಲಿ ಭಾಗವಹಿಸಲು ಇಚ್ಛಿಸುವವರು https://bangaloreinternationalcentre.org/event/the-art-of-listening/ಯಲ್ಲಿ ನೋಂದಣಿ ಮಾಡಿಕೊಳ್ಳಬಹುದು. ವಿವರಗಳಿಗೆ bic@bangaloreinternationalcentre.org ಅನ್ನು ಸಂಪರ್ಕಿಸಬಹುದು.

ಸುದ್ದಿ 2 ನಿಮಿಷ

'ಈಜಿಪುರ–ಕೋರಮಂಗಲ ಮೇಲ್ಸೇತುವೆ ಕಾಮಗಾರಿ ಶೀಘ್ರ ಪೂರ್ಣಗೊಳಿಸಿ'

ಬೆಂಗಳೂರು: 'ಈಜಿಪುರ–ಕೋರಮಂಗಲ ನಡುವಿನ ಚತುಷ್ಪಥ ಮೇಲ್ಸೇತುವೆ ನಿರ್ಮಾಣ ಕಾಮಗಾರಿಯನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸುವ ಕುರಿತು ಭರವಸೆ ನೀಡುವ ಪ್ರಮಾಣಪತ್ರ ಸಲ್ಲಿಸಿ' ಎಂದು ಯೋಜನೆಯ ಗುತ್ತಿಗೆ ಪಡೆದಿರುವ ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್‌ಗೆ ಹೈಕೋರ್ಟ್ ನಿರ್ದೇಶಿಸಿದೆ.

ಮೇಲ್ಸೇತುವೆ ಕಾಮಗಾರಿ ವಿಳಂಬ ಪ್ರಶ್ನಿಸಿ ಕೋರಮಂಗಲದ ಆದಿನಾರಾಯಣ ಶೆಟ್ಟಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಹಾಗೂ ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಮುಖ್ಯ ನ್ಯಾಯಮೂರ್ತಿಗಳು, 'ಮೇಲ್ಸೇತುವೆ ನಿರ್ಮಾಣ ಕಾರ್ಯ ಶೀಘ್ರವೇ ಪೂರ್ಣಗೊಂಡು, ಸಂಚಾರ ದಟ್ಟಣೆ ಸಮಸ್ಯೆ ಬಗೆಹರಿಯಬೇಕೆನ್ನುವುದು ನಮ್ಮ ಉದ್ದೇಶ. ಹಾಗಾಗಿ, 2022ರ ಡಿಸೆಂಬರ್ 31ರೊಳಗೆ ಯೋಜನೆ ಪೂರ್ಣಗೊಳಿಸಬೇಕು' ಎಂದು ತಾಕೀತು ಮಾಡಿದರು.

'ಕಾಮಗಾರಿಯನ್ನು ವಿಳಂಬಗೊಳಿಸಿರುವುದಕ್ಕೆ ಹಾಗೂ ಸಾರ್ವಜನಿಕ ಹಣ ದುರುಪಯೋಗ ಪಡಿಸಿಕೊಳ್ಳಲಾಗಿದೆ' ಎಂಬ ಆರೋಪದಲ್ಲಿ ಯೋಜನೆಯ ಗುತ್ತಿಗೆ ಪಡೆದಿದ್ದ ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಕಂಪನಿ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಬಿಬಿಎಂಪಿಗೆ ಹೈಕೋರ್ಟ್ ಈ ಮೊದಲು ನಿರ್ದೇಶಿಸಿತ್ತು.

ಈ ಕುರಿತಂತೆ ಕಂಪನಿ ಪರ ವಕೀಲರ ಮನವಿಗೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಕಾಮಗಾರಿಯನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸುವ ಕುರಿತು ಮುಚ್ಚಳಿಕೆ ನೀಡಿದರೆ, ನಿಮ್ಮ ಮನವಿಯನ್ನು ನಾವು ಪರಿಗಣಿಸಬಹುದು. ನಂತರ ಎಫ್‌ಐಆರ್ ರದ್ದುಪಡಿಸುವ ಹಾಗೂ ಕಾಮಗಾರಿ ಗುತ್ತಿಗೆ ಮುಂದುವರಿಸುವ ಕುರಿತು ತೀರ್ಮಾನ ಕೈಗೊಳ್ಳಲಾಗುವುದು' ಎಂದು ಹೇಳಿತು. ಈ ಬಗ್ಗೆ ಪ್ರಮಾಣಪತ್ರ ಸಲ್ಲಿಸುವುದಾಗಿ ಕಂಪನಿ ಪರ ವಕೀಲರು ತಿಳಿಸಿದ ಹಿನ್ನೆಲೆಯಲ್ಲಿ ಕಾಲಾವಕಾಶ ನೀಡಿದ ನ್ಯಾಯಪೀಠ, ವಿಚಾರಣೆಯನ್ನು ಮುಂದೂಡಿತು.



ಬಿಬಿಎಂಪಿ ಬಜೆಟ್ ಮುಂದೂಡಿಕೆ?

ಬೆಂಗಳೂರು: ಬಿಬಿಎಂಪಿಯು 2022– 23ನೇ ಸಾಲಿನ ಬಜೆಟ್ ಅನ್ನು ಬುಧವಾರ (ಇದೇ 30ರಂದು) ಮಂಡಿಸಲು ಸಿದ್ಧತೆ ಮಾಡಿಕೊಂಡಿತ್ತು. ಆದರೆ, ವಿವಿಧ ಕಾರ್ಯಕ್ರಮಗಳಿಗೆ ಹಾಗೂ ವಾರ್ಡ್‌ಗಳ ಅಭಿವೃದ್ಧಿಗೆ ಅನುದಾನ ಹಂಚಿಕೆ ಬಗ್ಗೆ ಸಚಿವರು ಹಾಗೂ ಶಾಸಕರಿಂದ ಭಿನ್ನಾಭಿಪ್ರಾಯ ವ್ಯಕ್ತವಾಗಿದ್ದರಿಂದ ಬುಧವಾರ ಬಜೆಟ್ ಮಂಡಿಸದಿರಲು ಬಿಬಿಎಂಪಿ ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

'ಬುಧವಾರ ಮಧ್ಯಾಹ್ನ 3 ಗಂಟೆಗೆ ಬಜೆಟ್ ಮಂಡಿಸಲು ಸಿದ್ಧತೆ ನಡೆದಿತ್ತು. ನಗರದ ವಿಧಾನ ಸಭಾ ಕ್ಷೇತ್ರಗಳನ್ನು ಪ್ರತಿನಿಧಿಸುವ ಕೆಲವು ಸಚಿವರು ಹಾಗೂ ಶಾಸಕರು ಅನುದಾನ ಹಂಚಿಕೆ ಬಗ್ಗೆ ತಕರಾರು ತೆಗೆದಿದ್ದರು. ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಬಳಿಯೂ ಅಸಮಾಧಾನ ವ್ಯಕ್ತಪಡಿಸಿದ್ದರು. ಬಜೆಟ್ ಬಗ್ಗೆ ಒಮ್ಮತಕ್ಕೆ ಬರಲು ಸಾಧ್ಯವಾಗಿಲ್ಲ. ಹಾಗಾಗಿ ಬಜೆಟ್ ಮಂಡನೆಯ ದಿನಾಂಕವನ್ನು ಮುಂದೂಡಲಾಗಿದೆ' ಎಂದು ಬಿಬಿಎಂಪಿ ಮೂಲಗಳು ತಿಳಿಸಿವೆ.

ಐಎಎಸ್–ಐಪಿಎಸ್ ಕನಿಷ್ಠ ವರ್ಗ ನೀತಿ: ನೋಟಿಸ್

ಬೆಂಗಳೂರು: ಐಎಎಸ್ ಮತ್ತು ಐಪಿಎಸ್ ಸೇರಿದಂತೆ ನಾಗರಿಕ ಸೇವೆಯಲ್ಲಿರುವ ಅಧಿಕಾರಿಗಳ ವರ್ಗಾವಣೆಗೆ ಕನಿಷ್ಠ ಅವಧಿ ನಿಗದಿಪಡಿಸಲು ನೀತಿ ರೂಪಿಸದ ಹಾಗೂ ಕೇಂದ್ರ ನಾಗರಿಕ ಸೇವಾ ಮಂಡಳಿ (ಸಿಎಸ್‌ಬಿ) ರಚಿಸದ ವಿಚಾರಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತು ವಕೀಲೆ ಸುಧಾ ಕಾಟ್ವಾ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ, ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.



ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸಮ್ಮುಖದಲ್ಲಿ ವಿವಿಧ ಪಕ್ಷಗಳ ನಾಯಕರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು. ಕೆಪಿಸಿಸಿ ಎಸ್ಸಿ ಘಟಕದ ನಲ್ಲೂರಹಳ್ಳಿ ನಾಗೇಶ್, ಪಾಲಿಕೆ ಮಾಜಿ ಸದಸ್ಯ ಉದಯಕುಮಾರ್, ಮುಖಂಡರಾದ ರಾಮಕೃಷ್ಣಪ್ಪ, ದೇವರಾಜ್, ಕೆಂಪರಾಜ್ ಇದ್ದರು.

ಮಹದೇವಪುರದಲ್ಲಿ ಒಂದು ಲಕ್ಷ ಕಾಂಗ್ರೆಸ್ ಸದಸ್ಯತ್ವ ಗುರಿ: ಡಿ.ಕೆ.ಶಿವಕುಮಾರ್

ಕೆ.ಆರ್.ಪುರ: ರಾಜ್ಯದಲ್ಲಿ ಉತ್ತಮ ಆಡಳಿತ ನೀಡುವಲ್ಲಿ ವಿಫಲವಾಗಿರುವ ಬಿಜೆಪಿ ಸರ್ಕಾರವನ್ನು ಶಾಶ್ವತವಾಗಿ ಮನೆಗೆ ಕಳಿಸಲು ಜನರು ಸಂಕಲ್ಪ ತೊಟ್ಟಿದ್ದಾರೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿಳಿಸಿದರು.

ಕೆ.ಆರ್.ಪುರ ಸಮೀಪದ ಕಾಟಂನಲ್ಲೂರಿನಲ್ಲಿ ಮಹದೇವಪುರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಸದಸ್ಯತ್ವ ಅಭಿಯಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ನಿರಂತರವಾಗಿ ಪೆಟ್ರೋಲ್, ಡೀಸೆಲ್ ದರ ಏರಿಕೆ, ನಿರುದ್ಯೋಗ, ಸಂಚಾರದಟ್ಟಣೆ ಬಿಜೆಪಿ ಸರ್ಕಾರ ಆಡಳಿತ ವೈಫಲ್ಯದಿಂದ ಜನರು ರೋಸಿಹೋಗಿದ್ದು ಮುಂದಿನ ಚುನಾವಣೆ ತಕ್ಕ ಪಾಠ ಕಲಿಸಲು ರಾಜ್ಯದ ಜನತೆ ಕಾಯುತ್ತಿದ್ದಾರೆ ಎಂದು ಹೇಳಿದರು.

'ರಾಜ್ಯದಲ್ಲಿ ಪಕ್ಷವನ್ನು ಬಲಿಷ್ಠಗೊಳಿಸಲು ಹೆಚ್ಚಿನ ಸದಸ್ಯತ್ವ ಮಾಡಬೇಕು. ಪ್ರತಿ ಬೂತ್ ಮಟ್ಟದಲ್ಲಿ ಕನಿಷ್ಠ ಇನ್ನೂರರಷ್ಟು ಸದಸ್ಯತ್ವ ನೋಂದಣಿ ಮಾಡಿಸಬೇಕು, ಮನೆ ಮನೆಗೆ ತೆರಳಿ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯತ್ವ ಕಾರ್ಯ ಮಾಡಲು ಸಕ್ರಿಯವಾಗಿ ದುಡಿಯಬೇಕು' ಎಂದರು.

ಮಹದೇವಪುರ ಕ್ಷೇತ್ರದಲ್ಲಿ ಒಂದು ಲಕ್ಷ ಕಾಂಗ್ರೆಸ್ ಸದಸ್ಯತ್ವ ಗುರಿ ತಲುಪುವವರೆಗೆ ಸದಸ್ಯತ್ವ ನೋಂದಣಿ ಕಾರ್ಯದಲ್ಲಿ ತೊಡಗಿಕೊಳ್ಳಬೇಕು. ಪಕ್ಷದ ಸಂಘಟನೆಯಲ್ಲಿ ಚೆನ್ನಾಗಿ ಕೆಲಸ ಮಾಡುವವರಿಗೆ ಹೆಚ್ಚಿನ ಅವಕಾಶವಿದೆ. ಕಳೆದ ಎರಡು ಚುನಾವಣೆಗಳಲ್ಲಿ ಎ.ಸಿ. ಶ್ರೀನಿವಾಸ್ ಸ್ಪರ್ಧಿಸಿದ್ದರು. ಈಗ ಈ ಕ್ಷೇತ್ರದಲ್ಲಿ ಮತ್ತೆ ನಿಲ್ಲುವುದಿಲ್ಲ ಎಂದಿದ್ದಾರೆ. ಹೊಸ ಅಭ್ಯರ್ಥಿ ಕಣಕ್ಕಿಳಿಸಲು ಅನುಕೂಲವಾಗಿದೆ. ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ಸ್ಥಳೀಯ ನಾಯಕರೊಂದಿಗೆ ಚರ್ಚಿಸಿದ ನಂತರ ಮುಂದಿನ ತಿರ್ಮಾನ ಮಾಡಲಾಗುವುದು ಎಂದರು.

ನಗರದಲ್ಲಿ ಇಂದು

ದಳವಾಯಿ ಮೇಷ್ಟ್ರು–60: ಬೆಳಿಗ್ಗೆ 9.30ರಿಂದ 'ಜಾತಿ ಮಾಡ ಬ್ಯಾಡಿರಿ' ಬೀದಿ ನಾಟಕ, ಸಾಕ್ಷ್ಯಚಿತ್ರ ಪ್ರದರ್ಶನ, ಪುಸ್ತಕ ಬಿಡುಗಡೆ, ಸಂವಾದ, ಅತಿಥಿಗಳು–ಬರಗೂರು ರಾಮಚಂದ್ರಪ್ಪ, ಎಚ್.ಎನ್.ನಾಗಮೋಹನ್ ದಾಸ್, ಬಿ.ವಿ.ರಾಜಾರಾಂ, ಎಚ್.ಎಲ್. ಪುಷ್ಪ, ಸಂಜೆ 6.30ಕ್ಕೆ ಸಮಾರೋಪ, ಅತಿಥಿಗಳು–ಎಸ್.ಜಿ.ಸಿದ್ದರಾಮಯ್ಯ, ಅಗ್ರಹಾರ ಕೃಷ್ಣಮೂರ್ತಿ, ವೆಂಕಟಸ್ವಾಮಿ, ಕೆ.ಷರೀಫಾ, ಆಯೋಜನೆ–ದಳವಾಯಿ ಮೇಷ್ಟ್ರ ಅಭಿಮಾನಿ ಬಳಗ, ಸ್ಥಳ–ರವೀಂದ್ರ ಕಲಾಕ್ಷೇತ್ರ

'ಉಪ್ಪಿಟ್ಟು' ಹಾಸ್ಯ ನಾಟಕ ಪ್ರದರ್ಶನ: ನಿರ್ದೇಶನ–ರಾಜೇಶ್ ಕಶ್ಯಪ್, ಅಧ್ಯಕ್ಷತೆ–ಡಬ್ಲ್ಯು.ಎಚ್.ಶಾಂತಕುಮಾರ್, ರಂಗಗೌರವ–ಮಂಜುನಾಥ್, ವಾಸುದೇವಮೂರ್ತಿ, ಆಯೋಜನೆ–ಯುವಕಲಾ ರಂಗ, ಸ್ಥಳ–ಲಾಸ್ಯ ರಂಜನಿ ಕಲಾಕೇಂದ್ರ, ಕಮ್ಮನಹಳ್ಳಿ, ಸಂಜೆ 4

ಹಂಸನಾದ ಸಂಗೀತೋತ್ಸವ: ಉದ್ಘಾಟನೆ–ಆನೂರು ಅನಂತಕೃಷ್ಣ ಶರ್ಮ, ಅಧ್ಯಕ್ಷತೆ–ಟಿ.ಗೋವಿಂದಪ್ಪ, ಅತಿಥಿಗಳು–ಶಂಕರ್ ಶಾನ್‌ಭೋಗ್, ವಿ.ಮನೋಹರ್, ಕಾ.ರಾಮೇಶ್ವರಪ್ಪ, ಪಿನಾಕಪಾಣಿ, ಡಿ.ಆರ್.ವಾಸುದೇವ ಮೂರ್ತಿ, ಎಸ್. ಧರ್ಮೇಂದ್ರ, ಬಾಲಾಜಿ, ಆಯೋಜನೆ–ಕಲಾ ಸಂಗಮ ಕಲೆ ಮತ್ತು ಸಂಸ್ಕೃತಿ ಪರಿಷತ್ತು, ಸ್ಥಳ–ಬ್ರಾಹ್ಮಣ ಸೇವಾಶ್ರಮ ಸಂಘ, ಭವಾನಿ ಶಂಕರ ಧಾರ್ಮಿಕ ಭವನ, ಮಾದಾವರ ನ್ಯೂಟೌನ್, ಸಂಜೆ 4

ನಟ ಪುನೀತ್ ರಾಜ್‌ಕುಮಾರ್ ಅವರ ಕುರಿತಾದ 'ರಾಜರತ್ನ' ಕವನ ಸಂಕಲನ ಮತ್ತು ಧ್ವನಿಸಾಂದ್ರಿಕೆ ಬಿಡುಗಡೆ: ನಟಿ ಜಯಮಾಲಾ, ಅಧ್ಯಕ್ಷತೆ–ಮನು ಬಳಿಗಾರ್, ಅತಿಥಿಗಳು–ವೂಡೇ ಪಿ.ಕೃಷ್ಣ, ಜೆ.ಡಿ. ಧನ್ನೂರ, ಎಸ್. ರಾಮಲಿಂಗೇಶ್ವರ, ಆಯೋಜನೆ–ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಸಾನಿಯಾ ಪ್ರಕಾಶನ, ಸ್ಥಳ–ಸಮ್ಮೇಳನ ಸಭಾಂಗಣ, ಶೇಷಾದ್ರಿಪುರ ಶಿಕ್ಷಣ ಸಂಸ್ಥೆ, ಶೇಷಾದ್ರಿಪುರ, ಸಂಜೆ 4.45



ಜಯಮಾಲಾ

ನಾಟಕೋತ್ಸವ: ಉದ್ಘಾಟನೆ–ಎಸ್. ಆರ್.ಜಯಶ್ರೀ, ಅಧ್ಯಕ್ಷತೆ–ಚಂದ್ರಹಾಸ್ ರೈ, ಅತಿಥಿ–ಜಯದೇವ ಶ್ರೀನಿವಾಸ್, ರಂಗಗೌರವ–ಜಯಶ್ರೀ ರಾಮಮೂರ್ತಿ, ಜಲಗಾರ ನಾಟಕ ಪ್ರದರ್ಶನ, ನಿರ್ದೇಶನ–ಆರ್.ರಾಮಮೂರ್ತಿ, ಆಯೋಜನೆ–ರಂಗ ಕಳಸ ಕಲಾವಿದರು, ಸ್ಥಳ–ನಯನ ರಂಗಮಂದಿರ, ಸಂಜೆ 4.45

ಮಕ್ಕಳ ರಂಗತರಬೇತಿ ಶಿಬಿರದ ಸಮಾರೋಪ: ಅತಿಥಿಗಳು–ಎಂ.ಕೆ. ಸುಂದರ್ ರಾಜ್, ಅನಂತ ರಮೇಶ್, ಟಿ.ವಿಜಯ, ರಾಜೇಶ್ವರಿ ಜೋಶಿ, ಶಿಬಿರದ ಮಕ್ಕಳಿಂದ 'ನನ್ನ ಗೋಪಾಲ' ನಾಟಕ ಪ್ರದರ್ಶನ, ಆಯೋಜನೆ–ಬೆನಕ ಮಕ್ಕಳ ನಾಟಕ ಕೇಂದ್ರ, ಸ್ಥಳ–ಉದಯಭಾನು ಸಾಂಸ್ಕೃತಿಕ ಕಲಾಸಂಘ, ಗವಿಪುರ ಗುಟ್ಟಹಳ್ಳಿ, ಸಂಜೆ 6

ಮರೀಚಿಕೆಯಾದ ಲಿಂಗ ಸಮಾನತೆ

ಮಹಿಳಾ ದಿನ: ಎನ್‌ಎಚ್‌ಎಂ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ಬೇಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲಿಂಗ ಸಮಾನತೆ ಎನ್ನುವುದು ಮರೀಚಿಕೆಯಾಗಿಯೇ ಉಳಿದಿದೆ. ಮನೆಯ ಹಂತದಲ್ಲಿಯೆ ಲಿಂಗ ತಾರತಮ್ಯತೆ ನಿವಾರಣೆ ಆಗಬೇಕು’ ಎಂದ ರಾಷ್ಟ್ರೀಯ ಆರೋಗ್ಯ ಅಭಿಯಾನದ (ಎನ್‌ಎಚ್‌ಎಂ) ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ತಿಳಿಸಿದರು.

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರ ಸಂಘ ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು. ‘2022ರಲ್ಲಿಯೂ ಲಿಂಗ ಸಮಾನತೆ ಬಗ್ಗೆ ಮಾತನಾಡುತ್ತಾ ಇದ್ದೇವೆ. ಮಹಿಳೆಯರು ಪುರುಷರಿಗಿಂತಲೂ ಚೆನ್ನಾಗಿ ಕಾರ್ಯನಿರ್ವಹಿಸಿದರೂ ಅದನ್ನು ನಿರೂಪಿಸಬೇಕಾದ ಸವಾಲಿದೆ. ಪೋಷಕರಿಗೆ ಲಿಂಗ ಸಮಾನತೆ ಬಗ್ಗೆ ಅರಿವು ಮೂಡಿಸಬೇಕು. ಮಹಿಳೆಯರಿಗೆ ಸುರಕ್ಷಿತ ವಾತಾವರಣ ನಿರ್ಮಿಸಿಕೊಡುವ ಬಗ್ಗೆಯೂ ಯೋಚನೆ ಮಾಡಬೇಕು’ ಎಂದು ಹೇಳಿದರು.



ಅರುಂಧತಿ ಚಂದ್ರಶೇಖರ್ ಅವರಿಗೆ ‘ಕಿತ್ತೂರು ರಾಣಿ ಚನ್ನಮ್ಮ ಅತ್ಯುತ್ತಮ ಮಹಿಳಾ ಸೇವಾ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. (ಎಡದಿಂದ) ಆರೋಗ್ಯ ಇಲಾಖೆ ಲೆಕ್ಕಪತ್ರ ಅಧಿಕಾರಿ ಬೀನಾ, ಡಾ.ಪರಿಮಳಾ ಎಸ್‌. ಮರೂರ್‌, ಇಲಾಖೆಯ ಆಡಳಿತಾಧಿಕಾರಿ (ಸಾಮಾನ್ಯ) ಕಲಾವತಿ ಎಸ್‌., ಸಿ.ಎಸ್ ಷಡಾಕ್ಷರಿ, ಇಲಾಖೆಯ ಮುಖ್ಯ ಆಡಳಿತಾಧಿಕಾರಿ ಸಿ.ಎನ್‌. ಮಂಜುನಾಥ್ ಸ್ವಾಮಿ ಮತ್ತು ಆರ್‌. ಶ್ರೀನಿವಾಸ್ ಇದ್ದಾರೆ ಪ್ರಜಾವಾಣಿ ಚಿತ್ರ

ರಾಜ್ಯ ಕ್ಷ–ಕಿರಣ ಸುರಕ್ಷತಾ ನಿರ್ದೇಶನಾಲಯದ ನಿರ್ದೇಶಕಿ ಡಾ. ಪರಿಮಳಾ ಎಸ್. ಮರೂರ್, ‘ಮಹಿಳೆಯರು ಏಕ ಕಾಲದಲ್ಲಿ ಹಲವು ಕೆಲಸ ಮಾಡುವ ಸಾಮರ್ಥ್ಯ ಹೊಂದಿದ್ದಾರೆ. ತಮ್ಮ ಕೆಲಸದ ಬಗ್ಗೆ ಬದ್ಧತೆ ಹೊಂದಿರುತ್ತಾರೆ. ಅದನ್ನು ಗುರುತಿಸಿ, ಪ್ರೋತ್ಸಾಹಿಸುವ ಕೆಲಸವಾಗಬೇಕು. ಕುಟುಂಬದ ನಿರ್ವಹಣೆ ಹೊತ್ತಿರುವ ಅವರು, ಎಷ್ಟೇ ಕಷ್ಟಗಳಿದ್ದರೂ ತಾಳ್ಮೆಯಿಂದ ಕಾರ್ಯನಿರ್ವಹಿಸುತ್ತಾರೆ’ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ, ‘ಮಹಿಳೆಯರ ಜವಾಬ್ದಾರಿ ಈ ಸಮಾಜದಲ್ಲಿ ದೊಡ್ಡದಿದೆ. ಆರ್ಥಿಕ, ಸಾಮಾಜಿ, ಶಿಕ್ಷಣ, ವಿಜ್ಞಾನ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ಸಾಧನೆ ಮಾಡುತ್ತಿದ್ದಾರೆ. ಮೀಸಲಾತಿಯ ಮೂಲಕ ಮಹಿಳೆಯರನ್ನು ಮುಖ್ಯವಾಹಿನಿಗೆ ತರುವ ಕೆಲಸ ಸರ್ಕಾರ ಮಾಡುತ್ತಿದೆ’ ಎಂದರು.

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರ ಸಂಘದ ಅಧ್ಯಕ್ಷ ಆರ್. ಶ್ರೀನಿವಾಸ್, ‘ಎರಡು ವರ್ಷಗಳಿಂದ ಕೋವಿಡ್ ನಿಯಂತ್ರಣಕ್ಕೆ ಶ್ರಮಿಸುತ್ತಿದ್ದೇವೆ. ಇದರಿಂದಾಗಿ ಸರ್ಕಾರಕ್ಕೆ ಉತ್ತಮ ಹೆಸರು ಬಂದಿದೆ. ನೌಕರರಿಗೆ ಪ್ರತಿ ತಿಂಗಳ 5ರೊಳಗೆ ವೇತನ ಪಾವತಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು’ ಎಂದು ಆಗ್ರಹಿಸಿದರು.

ಮಕ್ಕಳಿಗೆ ಕೋವಿಡ್ ಲಸಿಕೆ: ಬಿಬಿಎಂಪಿ ಕಡೆಯ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 12ರಿಂದ 14 ವರ್ಷದ ಮಕ್ಕಳಿಗೆ ‘ಕೊರ್ಬೆವ್ಯಾಕ್ಸ್’ ಕೋವಿಡ್ ಲಸಿಕೆ ವಿತರಣೆಯಲ್ಲಿ ಬಿಬಿಎಂಪಿ ಹಿಂದೆ ಬಿದ್ದಿದ್ದು, ನಿಗದಿಪಡಿಸಲಾದ ಮಕ್ಕಳಲ್ಲಿ ಶೇ 7.5 ರಷ್ಟು ಮಾತ್ರ ಸಾಧನೆಯಾಗಿದೆ.

ಇಲ್ಲಿನ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಸಂಸ್ಥೆಯಲ್ಲಿ ಮಾ.16ರಂದು ಈ ವಯೋಮಾನದವರಿಗೆ ಲಸಿಕೆ ವಿತರಣೆಗೆ ಚಾಲನೆ ನೀಡಲಾಗಿತ್ತು. ಸದ್ಯ ಲಸಿಕಾ ಅಭಿಯಾನಗಳನ್ನು ಆರೋಗ್ಯ ಕೇಂದ್ರಗಳಲ್ಲಿ ಮಾತ್ರ ನಡೆಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಶಾಲೆಗಳಲ್ಲಿ ಈ ಅಭಿಯಾನ ಹಮ್ಮಿಕೊಳ್ಳಲು ಆರೋಗ್ಯ ಇಲಾಖೆ ಕಾರ್ಯಯೋಜನೆ ರೂಪಿಸಿದೆ. ಕೋವಿಡ್ ನಿಯಂತ್ರಣದಿಂದ ಆರೋಗ್ಯ ಕೇಂದ್ರಗಳಿಗೆ ತೆರಳಿ, ಲಸಿಕೆ ಪಡೆದುಕೊಳ್ಳುವವರ ಸಂಖ್ಯೆ ಇಳಿಮುಖ ಆಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 2,81,541 ಮಕ್ಕಳನ್ನು ಲಸಿಕೆಗೆ ಗುರುತಿಸಲಾಗಿದೆ. ಅವರಲ್ಲಿ 21,178 ಮಕ್ಕಳು ಮಾತ್ರ ಎರಡು ವಾರಗಳ ಅವಧಿಯಲ್ಲಿ ಲಸಿಕೆ ಪಡೆದುಕೊಂಡಿದ್ದಾರೆ.

ರಾಜ್ಯದಲ್ಲಿ 20.24 ಲಕ್ಷ ಮಕ್ಕಳು ‘ಕೊರ್ಬೆವ್ಯಾಕ್ಸ್’ ಲಸಿಕೆ ಪಡೆಯಲು ಅರ್ಹರಾಗಿದ್ದಾರೆ. ಅವರಲ್ಲಿ ಈವರೆಗೆ 5.78 ಲಕ್ಷ ಮಕ್ಕಳು ಲಸಿಕೆ ಹಾಕಿಸಿಕೊಂಡಿದ್ದಾರೆ. ಶೇ 28.6 ರಷ್ಟು ಮಕ್ಕಳು ಮಾತ್ರ ಲಸಿಕೆ ಪಡೆದುಕೊಂಡಿದ್ದಾರೆ. 12ರಿಂದ 14 ವರ್ಷದವರಿಗೆ ಲಸಿಕೆ ವಿತರಣೆಯಲ್ಲಿ ಕೋಲಾರ ಜಿಲ್ಲೆಯು ಶೇ 64.7 ರಷ್ಟು ಸಾಧನೆ ಮಾಡಿದೆ. ಈ ಮೂಲಕ ಮುಂಚೂಣಿಯಲ್ಲಿ ಇದೆ. ಉಡುಪಿ, ಹಾಸನ ಸೇರಿದಂತೆ ಐದು ಜಿಲ್ಲೆಗಳು ಶೇ 50ಕ್ಕಿಂತ ಅಧಿಕ ಸಾಧನೆ ಮಾಡಿವೆ.

ವಿಜಯಪುರ, ಬೆಂಗಳೂರು ನಗರ, ಶಿವಮೊಗ್ಗ ಸೇರಿದಂತೆ 11 ಜಿಲ್ಲೆಗಳಲ್ಲಿ ಮಕ್ಕಳಿಗೆ ಲಸಿಕೆ ವಿತರಣೆ ಪ್ರಮಾಣ ರಾಜ್ಯದ ಸರಾಸರಿಗಿಂತ ಕಡಿಮೆ ಇದೆ

ರಾಜ್ಯದಲ್ಲಿ ಸದ್ಯ 4,421 ಸರ್ಕಾರಿ ಹಾಗೂ 129 ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ ಲಸಿಕೆ ವಿತರಿಸಲಾಗುತ್ತಿದೆ. ಲಸಿಕೆ ಪಡೆಯಲು ಅರ್ಹರಾದವರಲ್ಲಿ 5.29 ಕೋಟಿ ಮಂದಿ ಮೊದಲ ಡೋಸ್ ಹಾಗೂ 4.93 ಕೋಟಿ ಮಂದಿ ಎರಡನೇ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. 13.57 ಲಕ್ಷ ಮಂದಿ ಮುನ್ನೆಚ್ಚರಿಕೆ ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ.

ಬಿಬಿಎಂಪಿಗೆ ₹1 ಸಾವಿರ ಕೋಟಿ ಅನುದಾನ ಬಿಡುಗಡೆ

ಬೆಂಗಳೂರು: ಆಮೆಗತಿಯಲ್ಲಿ ನಡೆಯುತ್ತಿರುವ ನಗರದ ಕಾಮಗಾರಿಗಳಿಗೆ ವೇಗ ನೀಡಲು ಮುಂದಾಗಿರುವ ರಾಜ್ಯ ಸರ್ಕಾರ, ಬಿಬಿಎಂಪಿಯ ಬಾಕಿ ಬಿಲ್‌ಗಳಿಗೆ ಮುಕ್ತಿ ನೀಡಲು ₹1 ಸಾವಿರ ಕೋಟಿ ಬಿಡುಗಡೆ ಮಾಡಿದೆ.

ನವ ನಗರೋತ್ಥಾನ ಯೋಜನೆಯಡಿ ಕಾಮಗಾರಿಗೆ ಸಂಬಂಧಿಸಿದ ಬಾಕಿ ಇರುವ ಬಿಲ್‌ಗಳ ಪಾವತಿಗೆ ₹1,300 ಕೋಟಿ ಬಿಡುಗಡೆ ಮಾಡುವಂತೆ ಕೋರಿ ರಾಜ್ಯ ಸರ್ಕಾರಕ್ಕೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಪತ್ರ ಬರೆದಿದ್ದರು.

ಮಳೆ ನೀರಿನ ಚರಂಡಿಗಳ ಮರು ನಿರ್ಮಾಣ, ಮೇಲ್ಸೇತುವೆಗಳ ನಿರ್ಮಾಣ ಮತ್ತು ಪ್ರಮುಖ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳು ಈ ಯೋಜನೆಯಡಿ ಇವೆ. 2021-22ನೇ ಹಣಕಾಸು ವರ್ಷದಲ್ಲಿ ನಗರದಲ್ಲಿ ವಿಶೇಷ ಮೂಲಸೌಕರ್ಯ ಯೋಜನೆಗಳನ್ನು ಕೈಗೊಳ್ಳಲು ₹3 ಸಾವಿರ ಕೋಟಿ ಬಿಡುಗಡೆ ಮಾಡುವುದಾಗಿ ರಾಜ್ಯ ಸರ್ಕಾರ ಭರವಸೆ ನೀಡಿತ್ತು. ಈ ಹಿಂದೆ ಮೂರು ಹಂತಗಳಲ್ಲಿ ₹1,550 ಕೋಟಿ ಬಿಡುಗಡೆ ಮಾಡಿತ್ತು.


ಕಳೆದ ಐದು ವರ್ಷಗಳಲ್ಲಿ ಬಿಬಿಎಂಪಿಗೆ ಪಾವತಿಸಬೇಕಾದ ₹7,922 ಕೋಟಿ ಮೊತ್ತವನ್ನು ಸರ್ಕಾರ ಇನ್ನೂ ಬಾಕಿ ಉಳಿಸಿಕೊಂಡಿದೆ. ಕೋಟಿಗಟ್ಟಲೆ ವೆಚ್ಚದ ಹೊಸ ಕಾಮಗಾರಿಗಳಿಗೆ ಅನುಮೋದನೆ ನೀಡಿದ್ದರೂ, ಕಾಮಗಾರಿಯ ಗುಣಮಟ್ಟ ಹಾಗೂ ಸಕಾಲದಲ್ಲಿ ಪೂರ್ಣಗೊಳ್ಳಲು ಹಣ ಬಿಡುಗಡೆ ಮಾಡುವ ಪ್ರಯತ್ನ ತೋರಿಲ್ಲ ಎಂಬ ಆರೋಪವೂ ಇದೆ.

ಮರುಮೌಲ್ಯಮಾಪನ ಪದ್ಧತಿ ಪರಿಷ್ಕರಣೆಗೆ ಪಿಯು ಇಲಾಖೆ ಚಿಂತನೆ

ಒಂದು ಅಂಕ ವ್ಯತ್ಯಾಸ ಇದ್ದರೂ ಅಂಕಪಟ್ಟಿ ಬದಲು?

• ರಶ್ಮಿ ಬೇಲೂರು

ಬೆಂಗಳೂರು: ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನ ಪದ್ಧತಿಯಲ್ಲಿ ಮಹತ್ವದ ಬದಲಾವಣೆ ತರಲು ರಾಜ್ಯ ಪದವಿಪೂರ್ವ ಶಿಕ್ಷಣ ಇಲಾಖೆ ಮುಂದಾಗಿದ್ದು, ಇನ್ನು ಮುಂದೆ ಒಂದು ಅಂಕದ ವ್ಯತ್ಯಾಸ ಇದ್ದರೂ ಅಂಕ ಪಟ್ಟಿ ಬದಲಿಸಲು ನಿರ್ಧರಿಸಿದೆ. ಮುಂದಿನ ಶೈಕ್ಷಣಿಕ ಸಾಲಿನಿಂದಲೇ ಹೊಸ ನಿಯಮ ಜಾರಿಗೆ ಬರುವ ಸಾಧ್ಯತೆ ಇದೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ.



ಹಾಲಿ ನಿಯಮದ ಪ್ರಕಾರ ಮರು ಮೌಲ್ಯಮಾಪನದ ವೇಳೆ ಆರು ಅಂಕಗಳಿಗಿಂತ ಹೆಚ್ಚು ಅಂಕಗಳ ವ್ಯತ್ಯಾಸ ಇದ್ದರೆ ಮಾತ್ರ ವಿದ್ಯಾರ್ಥಿಯ ಅಂಕ ಪಟ್ಟಿಯನ್ನು ಬದಲಿಸಿ ನೀಡಲಾಗುತ್ತಿದೆ. ಆರು ಅಂಕಗಳಿಗಿಂತ ಕಡಿಮೆ ಅಂಕಗಳ ವ್ಯತ್ಯಾಸ ಇದ್ದರೆ ಫಲಿತಾಂಶದಲ್ಲಿ ಯಾವುದೇ ಪರಿಣಾಮ ಉಂಟಾಗುತ್ತಿಲ್ಲ. ಇನ್ನು ಮುಂದೆ, ವಿದ್ಯಾರ್ಥಿ ಗಳಿಸಿದ ಒಂದೊಂದು ಅಂಕವನ್ನೂ ಪರಿಗಣಿಸಲು ತೀರ್ಮಾನಿಸಲಾಗಿದೆ. ಮರು ಮೌಲ್ಯಮಾಪನದಲ್ಲಿ ಒಂದು ಅಂಕದ ವ್ಯತ್ಯಾಸ ಬಂದರೂ ಅಂಕಪಟ್ಟಿ ಬದಲಿಸಲು ನಿರ್ಧರಿಸಲಾಗಿದೆ ಎಂದು ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

‘ಮರು ಮೌಲ್ಯಮಾಪನದ ವೇಳೆ ಒಂದು ಅಂಕದ ವ್ಯತ್ಯಾಸ ಬಂದರೂ ಪರಿಗಣಿಸುವಂತೆ ವಿದ್ಯಾರ್ಥಿಗಳು ಮತ್ತು ಪೋಷಕರಿಂದ ಮನವಿಗಳ ಮಹಾಪೂರವೇ ಬರುತ್ತಿದೆ. ಹೀಗಾಗಿ, ಮರು ಮೌಲ್ಯಮಾಪನ ಪದ್ಧತಿಯಲ್ಲಿ ಬದಲಾವಣೆ ತರಲು ಚಿಂತನೆ ನಡೆದಿದೆ’ ಎಂದು ಎರಡು ದಿನಗಳ ಹಿಂದೆ ವಿಧಾನಪರಿಷತ್‌ನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದ್ದರು.

‘ಒಂದು ಅಂಕದ ವ್ಯತ್ಯಾಸ ಇದ್ದರೂ ಪರಿಗಣಿಸುವ ಕುರಿತ ಪ್ರಸ್ತಾವವನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸರ್ಕಾರದ ಅನುಮೋದನೆ ಸಿಕ್ಕಿದ ಬಳಿಕ ಹೊಸ ನಿಯಮ ಜಾರಿಗೆ ಬರಲಿದೆ. ಹಾಲಿ ಮೌಲ್ಯಮಾಪನ ನಿಯಮ 1997ರಿಂದ ಜಾರಿಯಲ್ಲಿದೆ. ನಿಯಮ ತಿದ್ದುಪಡಿಗೆ ಹಲವು ಬಾರಿ ಪ್ರಸ್ತಾವನೆಗಳನ್ನು ಸಲ್ಲಿಸಿದ್ದರೂ ನಂತರ ವರ್ಷಗಳಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ’ ಎಂದೂ ಅಧಿಕಾರಿ ಮಾಹಿತಿ ನೀಡಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಸಚಿವ ಬಿ.ಸಿ.ನಾಗೇಶ್, ‘ಹಾಲಿ ಜಾರಿಯಲ್ಲಿರುವ ಮರು ಮೌಲ್ಯಮಾಪನ ನಿಯಮವನ್ನು ಪರಿಷ್ಕರಿಸಲು ಉದ್ದೇಶಿಸಲಾಗಿದೆ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಕೇವಲ ಶೇ 0.5ರಷ್ಟು ಅಂಕಗಳ ವ್ಯತ್ಯಾಸ ಇದ್ದರೂ ಫಲಿತಾಂಶದ ಮೇಲೆ ದೊಡ್ಡ ಪರಿಣಾಮವನ್ನೇ ಉಂಟು ಮಾಡುತ್ತದೆ’ ಎಂದು ತಿಳಿಸಿದರು.

‘ಒ.ಸಿ ಇಲ್ಲದೆ ವಿದ್ಯುತ್ ಸಂಪರ್ಕ: ಅಕ್ರಮಕ್ಕೆ ರಹದಾರಿ’

ರಾಜಧಾನಿ ಒಡಲದನಿ

ಬೆಂಗಳೂರು: ಮಂಜೂರಾದ ಕಟ್ಟಡ ಯೋಜನೆಯನ್ನು ಉಲ್ಲಂಘಿಸಿ ಕಟ್ಟಡ ನಿರ್ಮಿಸುವ ಪರಿಪಾಠ ಅವ್ಯಾಹತವಾಗಿರುವ ಬೆನ್ನಲ್ಲೇ ಸ್ವಾಧೀನಾನುಭವ ಪತ್ರ (ಒ.ಸಿ) ಇಲ್ಲದೆಯೇ ‘ಬೆಳಕು’ ಯೋಜನೆಯಡಿ ವಿದ್ಯುತ್ ಸಂಪರ್ಕ ನೀಡಲು ಸರ್ಕಾರ ಮುಂದಾಗಿದೆ. ನಕ್ಷೆ ಉಲ್ಲಂಘಿಸಿ ಮನೆ ನಿರ್ಮಾಣಕ್ಕೆ ಇದು ರಹದಾರಿ ಆಗಲಿದೆ ಎಂಬ ಆತಂಕ ವ್ಯಕ್ತವಾಗಿದೆ.

ನಿಯಮ ಉಲ್ಲಂಘನೆಯನ್ನು ನಿಯಂತ್ರಿಸಲೆಂದೇ ಸ್ವಾಧೀನಾನುಭವ ಪ್ರಮಾಣಪತ್ರ (ಒ.ಸಿ) ಪಡೆಯದ ಕಟ್ಟಡಗಳಿಗೆ ವಿದ್ಯುತ್ ಹಾಗೂ ಕುಡಿಯುವ ನೀರಿನ ಕಾಯಂ ಸಂಪರ್ಕ ನೀಡುವುದನ್ನು 2017ರ ಡಿಸೆಂಬರ್‌ನಿಂದ ಸ್ಥಗಿತಗೊಳಿಸಲಾಗಿದೆ. ಈ ನಿಯಮ ಸಡಿಲಿಸುವಂತೆ ಸರ್ಕಾರದ ಮೇಲೆ ಒತ್ತಡ ಹೆಚ್ಚುತ್ತಲೇ ಇತ್ತು.

5 ಲಕ್ಷಕ್ಕೂ ಹೆಚ್ಚು ಕುಟುಂಬಗಳು ವಿದ್ಯುತ್ ಸಂಪರ್ಕವಿಲ್ಲದೆ ತೊಂದರೆಗೆ ಒಳಗಾಗಿವೆ ಎಂದು ಬೆಂಗಳೂರು ನಗರದ ಹಲವು ಶಾಸಕರೂ ಇಂಧನ ಇಲಾಖೆಗೆ ಮನವಿ ಸಲ್ಲಿಸಿದ್ದರು. ಒ.ಸಿ ಇಲ್ಲದವರಿಗೂ ಸಂಪರ್ಕ ನೀಡುವ ಬಗ್ಗೆ ಸದ್ಯದಲ್ಲೇ ಆದೇಶ ಹೊರಡಿಸುವುದಾಗಿ ಇಂಧನ ಸಚಿವ ವಿ. ಸುನೀಲ್‌ಕುಮಾರ್ ಪ್ರಕಟಿಸಿದ್ದಾರೆ. ಈ ಬಗ್ಗೆ ನಾಗರಿಕ ಸಂಘಟನೆಗಳ ಮುಖಂಡರು ‘ಪ್ರಜಾವಾಣಿ’ ಜತೆ ಅಭಿಪ್ರಾಯ ಹಂಚಿಕೊಂಡಿದ್ದಾರೆ.

‘ಸಮನ್ವಯತೆ ಇಲ್ಲದಿರುವುದೇ ಸಮಸ್ಯೆ’



ಯೋಜನಾ ಬದ್ಧವಾಗಿ ಬೆಂಗಳೂರು ನಗರ ಕಟ್ಟುವ ದೃಷ್ಟಿಕೋನ ಸರ್ಕಾರಕ್ಕೆ ಇಲ್ಲವಾಗಿದೆ. ಕಾಂಗ್ರೆಸ್ ಅವಧಿಯಲ್ಲಿ ರಚನೆಯಾದ ಬೆಂಗಳೂರು ಮಹಾನಗರ ಯೋಜನಾ ಸಮಿತಿ (ಬಿಎಂಪಿಸಿ) ಕಾರ್ಯರೂಪಕ್ಕೆ ಬರಲಿಲ್ಲ. ಬಿಬಿಎಂಪಿ, ಜಲ ಮಂಡಳಿ, ಬೆಸ್ಕಾಂ, ಬಿಎಂಟಿಸಿ, ಪೊಲೀಸ್ ಇಲಾಖೆಗಳು ತಮ್ಮ ಪಾಡಿಗೆ ತಾವು ಪ್ರತ್ಯೇಕವಾಗಿ ಯೋಜನೆಗಳನ್ನು ರೂಪಿಸಿಕೊಂಡು ಅನುಷ್ಠಾನ ಮಾಡುತ್ತಿವೆ. ಎಲ್ಲಾ ಇಲಾಖೆಗಳ ಸಮನ್ವಯತೆಯಿಂದ ಕೆಲಸ ಮಾಡಿದರೆ ನಕ್ಷೆ ಉಲ್ಲಂಘನೆ ಮಾಡಿ ಮನೆ ಕಟ್ಟುವವರಿಗೆ ಕಡಿವಾಣ ಹಾಕಲು ಸಾಧ್ಯವಾಗುತ್ತದೆ. ಮಂಜೂರಾತಿ ಪಡೆದಿರುವ ನಕ್ಷೆ ಆಧರಿಸಿ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆಯಲಾಗುತ್ತದೆ. ಬಳಿಕ ಅದನ್ನು ಉಲ್ಲಂಘಿಸಿ ಮನೆ ಕಟ್ಟುವುದನ್ನು ನೋಡಿದ್ದರೂ ಬಿಬಿಎಂಪಿ ವಾರ್ಡ್ ಎಂಜಿನಿಯರ್‌ಗಳು ಸುಮ್ಮನಿರುತ್ತಾರೆ. ಕಟ್ಟಡ ನಿರ್ಮಾಣವಾದ ನಂತರ ಮನೆಯ ಮಾಲೀಕರಿಂದ ಲಂಚ ಪಡೆಯುವ ಸುಲಭದ ಮಾರ್ಗವನ್ನು ಅಧಿಕಾರಿಗಳು ಕಂಡುಕೊಂಡಿದ್ದಾರೆ. ಇದೆಲ್ಲವನ್ನು ಸರಿಯಾಗಬೇಕೆಂದರೆ ಬಿಎಂಪಿಸಿ ಕಾರ್ಯರೂಪಕ್ಕೆ ಬರಬೇಕು. ಒ.ಸಿ ಇಲ್ಲದೆ ವಿದ್ಯುತ್ ಸಂಪರ್ಕ ನೀಡುವುದು ಸೂಕ್ತ ಅಲ್ಲ.

ಡಿ.ಎಸ್. ರಾಜಶೇಖರ್, ಬೆಂಗಳೂರು ಪ್ರಜಾ ವೇದಿಕೆ


‘ನಕ್ಷೆ ಉಲ್ಲಂಘನೆಗೆ ಕಡಿವಾಣ ಬೇಕು’



ಕಟ್ಟಡ ನಿಯಮ ಉಲ್ಲಂಘನೆಗೆ ಕಡಿವಾಣ ಹಾಕದಿದ್ದರೆ ನಗರ ಅನಿಯಂತ್ರಿತವಾಗಿ ಬೆಳೆಯುತ್ತದೆ. ಆದ್ದರಿಂದ ಯಾವುದಾದರೂ ಒಂದು ಹಂತದಲ್ಲಿ ಕಡಿವಾಣ ಹಾಕಲೇಬೇಕು. ಒ.ಸಿ ಸಿಗದ ಕಾರಣಕ್ಕೆ 5 ಲಕ್ಷ ಮನೆಗಳಿಗೆ ವಿದ್ಯುತ್ ಸಂಪರ್ಕ ಬೆಂಗಳೂರಿನಲ್ಲಿ ಸಿಕ್ಕಿಲ್ಲ ಎಂದು ಇಂಧನ ಸಚಿವರೇ ಹೇಳುತ್ತಿದ್ದಾರೆ. ನಕ್ಷೆ ಉಲ್ಲಂಘಿಸಲು ಅಧಿಕಾರಿಗಳೇ ಅವಕಾಶ ಮಾಡಿಕೊಟ್ಟಿದ್ದಾರೆ. ಮೊದಲು ಆ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು. ಆಗ ಮಾತ್ರ ಮುಂದಿನ ದಿನಗಳಲ್ಲಿ ನಕ್ಷೆ ಉಲ್ಲಂಘನೆ ಆಗುವುದು ತಪ್ಪಲಿದೆ. ಇಲ್ಲದಿದ್ದರೆ ಅಕ್ರಮ–ಸಕ್ರಮ ಯೋಜನೆಯನ್ನು ಬಡವರ ಜೊತೆಗೆ ಶ್ರೀಮಂತರು, ರಿಯಲ್ ಎಸ್ಟೇಟ್ ಮಾಫಿಯಾದವರೂ ದುರ್ಬಳಕೆ ಮಾಡಿಕೊಳ್ಳುತ್ತಾರೆ. ಅದಕ್ಕೆ ಅವಕಾಶವನ್ನು ಅಧಿಕಾರಿಗಳೇ ಮಾಡಿಕೊಡುತ್ತಾರೆ. ಬರಲಿರುವ ವಿಧಾನಸಭೆ ಮತ್ತು ಬಿಬಿಎಂಪಿ ಚುನಾವಣೆ ಒಂದನ್ನೇ ದೃಷ್ಟಿಯಾಗಿಟ್ಟುಕೊಂಡು ಸರ್ಕಾರ ಈ ರೀತಿಯ ಆದೇಶ ಹೊರಡಿಸುವುದು ಸೂಕ್ತವಲ್ಲ. ನಕ್ಷೆ ಉಲ್ಲಂಘನೆ ತಡೆಯಬೇಕು. ಆ ಮೂಲಕ ಮುಂದಾಗಲಿರುವ ಅಪಾಯಗಳನ್ನೂ ತಡೆಯಬೇಕು.

ಮಂಜುಳಾ ವೆಂಕಟೇಶ್, ಹಲಸೂರು

‘ಚುನಾವಣೆ ದೃಷ್ಟಿಕೋನದ ನಿರ್ಧಾರ ಸರಿಯಲ್ಲ’



ನಾಗರಿಕರಿಗೆ ನೀರು ಮತ್ತು ವಿದ್ಯುತ್ ಒದಗಿಸಬೇಕು ಎಂಬುದು ಒಂದು ದೃಷ್ಟಿಯಲ್ಲಿ ಸರಿಯಾದರೂ, ನಕ್ಷೆ ಉಲ್ಲಂಘಿಸಿ ಕಟ್ಟಡ ನಿರ್ಮಾಣ ಆಗುವುದನ್ನು ತಡೆಯಬೇಕು ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ಯೋಜನಾಬದ್ಧವಾಗಿ ನಗರ ನಿರ್ಮಾಣವಾಗಬೇಕೆಂದರೆ ನ್ಯಾಯಾಲಯದ ಆದೇಶ ಪಾಲನೆ ಮಾಡಬೇಕಾಗುತ್ತದೆ. ಒ.ಸಿ ಸಿಗದ ಕಾರಣಕ್ಕೆ 5 ಲಕ್ಷಕ್ಕೂ ಹೆಚ್ಚು ಕುಟುಂಬಗಳು ವಿದ್ಯುತ್ ಸಂಪರ್ಕ ಪಡೆಯಲು ಸಾಧ್ಯವಾಗಿಲ್ಲ ಎಂದಾದರೆ ಅದಕ್ಕೆ ಕಾರಣ ಕೂಡ ಸರ್ಕಾರವೇ ಆಗಿದೆ. ಈ ಸಂಖ್ಯೆ ದೊಡ್ಡದಾಗಲು ಬಿಟ್ಟಿದ್ದು ಇದೇ ಬಿಬಿಎಂಪಿ. ನಕ್ಷೆಯಾನುಸಾರವೇ ಕಟ್ಟಡಗಳನ್ನು ಕಟ್ಟುವಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಸರ್ಕಾರದ್ದೇ ಆಗಿದೆ. ಬಿಬಿಎಂಪಿ ಚುನಾವಣೆ ಸಮೀಪವಾಗಿದೆ ಎಂಬ ಕಾರಣಕ್ಕೆ ಈಗ ಒ.ಸಿ ಇಲ್ಲದಿದ್ದರೂ ವಿದ್ಯುತ್ ಸಂಪರ್ಕ ನೀಡಲಾಗುವುದು ಎಂದು ಹೇಳಲಾಗುತ್ತಿದೆ. ಒಳ ರಾಜಕೀಯ, ಮತೀಯ ರಾಜಕೀಯ ಮಾಡಿಕೊಂಡು ಕಾಲ ಕಳೆಯಲಾಗಿದೆ. ಅಭಿವೃದ್ಧಿ ದೃಷ್ಟಿಯಿಂದ ಏನನ್ನೂ ಸರ್ಕಾರ ಮಾಡಿಲ್ಲ. ಅದಕ್ಕಾಗಿ ಈಗ ಈ ರೀತಿಯ ಹೆಜ್ಜೆ ಇಡಲಾಗುತ್ತಿದೆ. ಸುಪ್ರೀಂ ಕೋರ್ಟ್ ಆದೇಶದ ವಿರುದ್ಧ ಹೋಗುವುದು ತಪ್ಪು ನಿರ್ಧಾರ. ಈ ರೀತಿಯ ಅಡ್ಡದಾರಿ ಬಿಟ್ಟು ಕಟ್ಟಡ ನಿರ್ಮಾಣಕ್ಕೆ ಅನುಮತಿಗಳನ್ನು ಪಡೆಯಲು ಏಕಗವಾಕ್ಷಿ ವ್ಯವಸ್ಥೆ ತರಬೇಕು.

ಎನ್.ಎಸ್.ಮುಕುಂದ್, ಬೆಂಗಳೂರು ಪ್ರಜಾ ವೇದಿಕೆ

ಸುದ್ದಿ 2 ನಿಮಿಷ

ಲಾರಿ ಕದ್ದು ಬಿಡಿಭಾಗ ಮಾರಾಟ

ಬೆಂಗಳೂರು: ಲಾರಿ ಕಳ್ಳತನ ಮಾಡಿದ್ದ ಆರೋಪದಡಿ ಮಜರ್ ಅಹ್ಮದ್ ಎಂಬುವವರನ್ನು ಕಾಮಾಕ್ಷಿಪಾಳ್ಯ ಪೊಲೀಸರು ಬಂಧಿಸಿದ್ದಾರೆ.

‘ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯ ಕೊಟ್ಟಿಗೆಪಾಳ್ಯದ ನಿವಾಸಿ ಮಾರುತಿ ಎಂಬುವವರ ಲಾರಿ ಇತ್ತೀಚೆಗೆ ಕಳ್ಳತನವಾಗಿತ್ತು. ಈ ಬಗ್ಗೆ ದಾಖಲಾಗಿದ್ದ ಪ್ರಕರಣದ ತನಿಖೆ ಕೈಗೊಂಡು ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಮಾರ್ಚ್ 15ರಂದು ನಕಲಿ ಕೀ ಬಳಸಿ ಲಾರಿ (ಕೆಎ 16 ಬಿ 0783) ಕದ್ದಿದ್ದ ಆರೋಪಿ, ವ್ಯಕ್ತಿಯೊಬ್ಬರಿಗೆ ಮಾರಿದ್ದರು. ನಂತರ, ಮಂಡ್ಯದ ಗ್ಯಾರೇಜೊಂದರಲ್ಲಿ ಲಾರಿಯ ಬಿಡಿಭಾಗಗಳನ್ನು ಬೇರ್ಪಡಿಸಿ ಮಾರಲಾಗುತ್ತಿತ್ತು. ಸದ್ಯ ಲಾರಿ ಹಾಗೂ ಬಿಡಿಭಾಗಗಳನ್ನು ಜಪ್ತಿ ಮಾಡಲಾಗಿದೆ’ ಎಂದರು.

ಟ್ರ್ಯಾಕ್ಟರ್ ಜಪ್ತಿ: ಬಂಡೆಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ₹ 5.50 ಲಕ್ಷ ಮೌಲ್ಯದ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಕಳ್ಳತನ ಮಾಡಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಪ್ರಭಾಕರ ಭಟ್‌ಗೆ ಆಹ್ವಾನ: ಎಸ್‌ಎಫ್‌ಐ ವಿರೋಧ

ಮಂಗಳೂರು: ಇಲ್ಲಿನ ಮಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ ಸ್ನಾತಕೋತ್ತರ ವಿದ್ಯಾರ್ಥಿ ಪರಿಷತ್ತಿನ ಉದ್ಘಾಟನಾ ಕಾರ್ಯಕ್ರಮಕ್ಕೆ ಆರ್‌ಎಸ್‌ಎಸ್ ಮುಖಂಡ ಡಾ.ಕಲ್ಲಡ್ಕ ಪ್ರಭಾಕರ ಭಟ್ ಅವರನ್ನು ಆಹ್ವಾನಿಸಿರುವುದಕ್ಕೆ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್‌ಎಫ್‌ಐ) ವಿರೋಧ ವ್ಯಕ್ತಪಡಿಸಿದೆ.

‘ಕೋಮು ಮತಾಂಧತೆಗೆ ವಿದ್ಯಾರ್ಥಿಗಳು ಬಲಿಯಾಗದಂತೆ ಎಚ್ಚರ ವಹಿಸುವ ಜವಾಬ್ದಾರಿ ಜಿಲ್ಲಾಡಳಿತಕ್ಕೆ ಇದೆ. ಡಾ.ಪ್ರಭಾಕರ್ ಭಟ್ ಅವರಂಥವರು ವಿದ್ಯಾರ್ಥಿ ಸಂಘದ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸದಂತೆ ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದೆ.

ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ವರ್ತಿಸುವ, ಕೋಮು ಪ್ರಚೋದಿತ ದ್ವೇಷಗಳನ್ನು ಹರಡುವ ಮತ್ತು ಅವೈಜ್ಞಾನಿಕ ಮನೋಭಾವ ಬಿತ್ತುವ ಡಾ.ಕಲ್ಲಡ್ಕ ಪ್ರಭಾಕರ ಭಟ್ಟರನ್ನು ವಿಶ್ವವಿದ್ಯಾಲಯದ ಕಾರ್ಯಕ್ರಮಕ್ಕೆ ಆಹ್ವಾನಿಸಲು ಅವಕಾಶ ಮಾಡಿಕೊಟ್ಟ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಪಿ. ಸುಬ್ರಮಣ್ಯ ಯಡಪಡಿತ್ತಾಯರ ನಡೆ ಖಂಡನೀಯ ಎಂದು ಹೇಳಿದೆ.

‘ಜಿಲ್ಲೆಯ ಕಾನೂನು ಸುವ್ಯವಸ್ಥೆ ರಕ್ಷಣೆಗಾಗಿ ಮತ್ತು ಕಾಲೇಜು ಕ್ಯಾಂಪಸ್‌ಗಳಲ್ಲಿ ಶಾಂತಿ ಕಾಪಾಡಬೇಕಿದ್ದರೆ ಡಾ.ಕಲ್ಲಡ್ಕ ಪ್ರಭಾಕರ ಭಟ್ ಅವರಿಗೆ ಈ ಕಾರ್ಯಕ್ರಮದಲ್ಲಿ ಅವಕಾಶ ನೀಡಬಾರದು. ಜಿಲ್ಲಾಡಳಿತ ಈ ಬಗ್ಗೆ ಕ್ರಮ ಕೈಗೊಳ್ಳಬೇಕು’ ಎಂದು ಎಸ್‌ಎಫ್‌ಐ ಮುಖಂಡರಾದ ವಿನಿತ್ ದೇವಾಡಿಗ, ವಿನುಶ ರಮಣ ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ನಿಂದನೆ: ಆರೋಪಿ ವಶಕ್ಕೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ ಆರೋಪದಡಿ ಶಾಬಾಜ್ ಉಲ್ಲಾ ಖಾನ್ ಎಂಬುವವರನ್ನು ನಗರದ ಸಿಸಿಬಿ ಪೊಲೀಸರು ವಶಕ್ಕೆ ಪಡೆದು, ವಿಚಾರಣೆ ನಡೆಸುತ್ತಿದ್ದಾರೆ.

‘ಹೊಳೆನರಸೀಪುರದ ಶಾಬಾಜ್ ಅವರು ಮಾತನಾಡಿದ್ದ ವಿಡಿಯೊ ಸಾಮಾಜಿಕ ಮಾಧ್ಯಮಗಳನ್ನು ಹರಿದಾಡಿತ್ತು. ವಿಡಿಯೊ ಆಧರಿಸಿ ತನಿಖೆ ಕೈಗೊಂಡು ಶಾಬಾಜ್ ಅವರನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಮೂಲಗಳು ಹೇಳಿವೆ.

‘ಮುಖ್ಯಮಂತ್ರಿ ಅವರನ್ನು ನಿಂದಿಸಿರುವ ಶಾಬಾಜ್, ಕೋಮು ಸೌಹಾರ್ದ ಕದಡುವ ಹೇಳಿಕೆ ನೀಡಿದ್ದಾರೆ’ ಎಂದು ಆರೋಪಿಸಿ ಭರತ್ ಶೆಟ್ಟಿ ಎಂಬುವರು ಕಬ್ಬನ್ ಪಾರ್ಕ್ ಠಾಣೆಗೆ ದೂರು ನೀಡಿದ್ದರು. ಅದರನ್ವಯ ಪ್ರಕರಣ ದಾಖಲಾಗಿದ್ದು, ಅದರ ತನಿಖೆಯನ್ನು ಕಮಿಷನರ್ ಅವರು ಸಿಸಿಬಿಗೆ ವರ್ಗಾಯಿಸಿದ್ದಾರೆ’ ಎಂದೂ ತಿಳಿಸಿವೆ.

ಸಂಜಯನಗರ ಠಾಣೆ ವ್ಯಾಪ್ತಿಯಲ್ಲಿ ಘಟನೆ • ನಾಲ್ವರು ರಾಷ್ಟ್ರೀಯ ಈಜುಪಟುಗಳ ಬಂಧನ

ಆ್ಯಪ್‌ನಲ್ಲಿ ಪರಿಚಯ: ಸಾಮೂಹಿಕ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಡೇಟಿಂಗ್ ಆ್ಯಪ್‌ನಲ್ಲಿ ಯುವತಿಯನ್ನು ಪರಿಚಯ ಮಾಡಿಕೊಂಡು, ಅವರ ಮೇಲೆ ಅತ್ಯಾಚಾರ ಎಸಗಿದ್ದ ಆರೋಪದಡಿ ನಾಲ್ವರು ರಾಷ್ಟ್ರೀಯ ಈಜುಪಟುಗಳನ್ನು ಸಂಜಯನಗರ ಪೊಲೀಸರು ಬಂಧಿಸಿದ್ದಾರೆ.

‘ದೆಹಲಿಯ ರಜತ್ (23), ಶಿವ್ ರಾಣಾ (22), ದೇವ್ ಸರೋಯಿ (25) ಹಾಗೂ ಯೋಗೇಶ್ ಕುಮಾರ್ (26) ಬಂಧಿತರು. ರಾಷ್ಟ್ರ ಮಟ್ಟದ ಈಜು ಸ್ಪರ್ಧೆಯಲ್ಲಿ ಭಾಗವಹಿಸಲು ಅಗತ್ಯವಿದ್ದ ತರಬೇತಿ ಪಡೆಯಲೆಂದು ನಗರಕ್ಕೆ ಬಂದಿದ್ದ ಆರೋಪಿಗಳು, ಸಂಜಯನಗರದ 80 ಅಡಿ ರಸ್ತೆಯಲ್ಲಿರುವ ಮನೆಯೊಂದರಲ್ಲಿ ವಾಸವಿದ್ದರು’ ಎಂದು ಪೊಲೀಸರು ಹೇಳಿದರು.

‘ಪಶ್ಚಿಮ ಬಂಗಾಳದ ಯುವತಿಯೊಬ್ಬರ ಮೇಲೆ ಮಾರ್ಚ್ 24ರಂದು ಆರೋಪಿಗಳು ಅತ್ಯಾಚಾರ ಎಸಗಿದ್ದರು. ಕೃತ್ಯದ ಬಗ್ಗೆ ಯುವತಿ ನೀಡಿದ್ದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದೂ ತಿಳಿಸಿದರು.

ಊಟಕ್ಕೆ ಕರೆದು ಕೃತ್ಯ: ‘ಎರಡು ವರ್ಷಗಳ ಹಿಂದಷ್ಟೇ ನಗರಕ್ಕೆ ಬಂದಿರುವ ಯುವತಿ, ವಸಂತನಗರದ ಆಸ್ಪತ್ರೆಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ಡೇಟಿಂಗ್ ಆ್ಯಪ್‌ನಲ್ಲಿ ಖಾತೆ ಹೊಂದಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಆರೋಪಿ ರಜತ್, ಆ್ಯಪ್‌ನಲ್ಲಿ ಯುವತಿಗೆ ರಿಕ್ವೆಸ್ಟ್ ಕಳುಹಿಸಿದ್ದರು. ಅದನ್ನು ಸ್ವೀಕರಿಸಿದ್ದ ಯುವತಿ, ಚಾಟಿಂಗ್ ಮಾಡಲಾರಂಭಿಸಿದ್ದರು. ಮೊಬೈಲ್ ನಂಬರ್ ಸಹ ವಿನಿಮಯ ಮಾಡಿಕೊಂಡಿದ್ದರು. ಇಬ್ಬರ ನಡುವೆ ಸಲುಗೆಯೂ ಬೆಳೆದಿತ್ತು.’

‘ಹೋಟೆಲ್‌ನಲ್ಲಿ ಊಟ ಮಾಡೋಣವೆಂದು ಹೇಳಿ ಯುವತಿಯನ್ನು ಮಾರ್ಚ್ 24ರಂದು ರಜತ್ ಸಂಜಯನಗರಕ್ಕೆ ಕರೆಸಿಕೊಂಡಿದ್ದರು. ಯುವತಿ ಸ್ಥಳಕ್ಕೆ ಬರುತ್ತಿದ್ದಂತೆ, ‘ಹೋಟೆಲ್ ಬೇಡ, ಮನೆಯಲ್ಲೇ ಊಟ ಮಾಡೋಣ’ ಎಂದಿದ್ದರು. ಆತನ ಮಾತಿನಂತೆ ಯುವತಿ, ಮನೆಗೆ ಹೋಗಿದ್ದರು. ಅಲ್ಲಿಯೇ ಯುವತಿಗೆ ಇತರೆ ಆರೋಪಿಗಳ ಪರಿಚಯವಾಗಿತ್ತು’. ‘ಯುವತಿ ಹಾಗೂ ಆರೋಪಿಗಳು, ಮದ್ಯ ಸೇವಿಸಿ ಮನೆಯಲ್ಲಿ ಊಟ ಮಾಡಿದ್ದರು. ನಂತರ, ರಜತ್ ಜೊತೆ ಕೊಠಡಿಗೆ ಯುವತಿ ಹೋಗಿದ್ದರು. ಅದೇ ವೇಳೆಯೇ ಅವರ ಮೇಲೆ ರಜತ್ ಅತ್ಯಾಚಾರ ಎಸಗಿದ್ದರು. ಬಳಿಕ, ಮೂವರು ಆರೋಪಿಗಳು ಕೊಠಡಿಗೆ ಹೋಗಿ ಸಾಮೂಹಿಕ ಅತ್ಯಾಚಾರ ಮಾಡಿದ್ದರು. ಘಟನೆಯಿಂದ ನೊಂದ ಸಂತ್ರಸ್ತೆ, ಆರೋಪಿಗಳಿಂದ ತಪ್ಪಿಸಿಕೊಂಡು ಹೋಗಿ ಸ್ನೇಹಿತರಿಗೆ ವಿಷಯ ತಿಳಿಸಿದ್ದರು. ನಂತರ ಠಾಣೆಗೆ ಬಂದು ದೂರು ನೀಡಿದ್ದರು’ ಎಂದೂ ಪೊಲೀಸರು ತಿಳಿಸಿದರು.

ರಾಯಚೂರು ಸದಸ್ಯೆ ಅಪಹರಣ: ಕಮಿಷನರ್‌ಗೆ ದೂರು

ಬೆಂಗಳೂರು: ‘ರಾಯಚೂರು ನಗರಸಭೆಯ 26ನೇ ವಾರ್ಡ್ ಸದಸ್ಯೆ ಶೈನಾಜ್ ಬೇಗಂ ಅವರನ್ನು ಶಾಸಕ ಡಾ. ಶಿವರಾಜ್ ಪಾಟೀಲ ಹಾಗೂ ಇತರರು ಅಪಹರಣ ಮಾಡಿದ್ದಾರೆ’ ಎಂದು ಆರೋಪಿಸಿ ಸದಸ್ಯೆಯ ಮಗ ಎಂ.ಡಿ. ಅಲಿ ಅವರು ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಮಂಗಳವಾರ ದೂರು ನೀಡಿದ್ದಾರೆ.

ದೂರು ಸ್ವೀಕರಿಸಿರುವ ಕಮಲ್ ಪಂತ್, ಪರಿಶೀಲನೆ ನಡೆಸುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

‘ನಗರಸಭೆ ಅಧ್ಯಕ್ಷ ಸ್ಥಾನಕ್ಕೆ ಮಾರ್ಚ್ 30ರಂದು ಚುನಾವಣೆ ನಿಗದಿಯಾಗಿದೆ. ಇದರ ನಡುವೆಯೇ ನನ್ನ ತಾಯಿ ಶೈನಾಜ್ ಬೇಗಂ ಆರೋಗ್ಯ ಹದಗೆಟ್ಟಿತ್ತು. ಚಿಕಿತ್ಸೆಗೆಂದು ಇನ್ಫೆಂಟ್ರಿ ರಸ್ತೆಯಲ್ಲಿರುವ ಸ್ಪರ್ಶ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರನ್ನು ನೋಡಿಕೊಳ್ಳಲು ತಮ್ಮ ಮೊಹಮ್ಮದ್ ಆಲಂ ಹಾಗೂ ಅತ್ತೆ ಖಾಜಾಬಿ ಜೊತೆಯಲ್ಲಿದ್ದರು’ ಎಂದು ಅಲಿ ದೂರಿನಲ್ಲಿ ತಿಳಿಸಿದ್ದಾರೆ.

‘ಮಂಗಳವಾರ ನಸುಕಿನಿಂದ ತಾಯಿ, ತಮ್ಮ ಹಾಗೂ ಅತ್ತೆ ಮೊಬೈಲ್‌ಗೆ ಕರೆ ಮಾಡಿದರೂ ಪ್ರತಿಕ್ರಿಯೆ ಬಂದಿರಲಿಲ್ಲ. ಎಲ್ಲರ ಮೊಬೈಲ್ ಸ್ವಿಚ್ ಆಫ್ ಆಗಿದ್ದವು. ಗಾಬರಿಕೊಂಡು ನಾನೇ ಹೊಸಪೇಟೆಯಿಂದ ಬೆಂಗಳೂರಿಗೆ ಬಂದು, ಆಸ್ಪತ್ರೆಯಲ್ಲಿ ವಿಚಾರಿಸಿದೆ. ಪರಿಚಿತ ವ್ಯಕ್ತಿಗಳು ಬಿಳಿ ಬಣ್ಣದ ಇನ್ನೋವಾ ಕಾರಿನಲ್ಲಿ ತಾಯಿಯನ್ನು ಕರೆದೊಯ್ದಿರುವುದಾಗಿ ಆಸ್ಪತ್ರೆಯವರು ಹೇಳಿದರು. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಪರಿಶೀಲಿಸಿದಾಗ, ಶಿವರಾಜ್ ಪಾಟೀಲ ಅವರ ಕಾರು ಎಂಬುದು ತಿಳಿಯಿತು’ ಎಂದೂ ಹೇಳಿದ್ದಾರೆ.

‘ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಮತ ಚಲಾಯಿಸದಂತೆ ಮಾಡಲು ತಾಯಿಯನ್ನು ಅಪಹರಿಸಿ ಅಕ್ರಮ ಬಂಧನದಲ್ಲಿರಿಸಲಾಗಿದೆ. ಅವರನ್ನು ರಕ್ಷಿಸಿ’ ಎಂದು ಅಲಿ ಕೋರಿದ್ದಾರೆ. ‘ತಾಯಿ ಹಾಗೂ ನಮ್ಮ ಕುಟುಂಬಕ್ಕೆ ಏನಾದರೂ ಆದರೆ, ಅದಕ್ಕೆ ಶಾಸಕ ಶಿವರಾಜ್ ಪಾಟೀಲ ಹೊಣೆ’ ಎಂಬುದಾಗಿಯೂ ಅವರು ಹೇಳಿದ್ದಾರೆ.

ಆರೋಪದ ಬಗ್ಗೆ ಪ್ರತಿಕ್ರಿಯಿಸಲು ಶಾಸಕ ಶಿವರಾಜ್ ಪಾಟೀಲ ಲಭ್ಯರಾಗಲಿಲ್ಲ.

ಮಾಲೂರು ಬಿಟ್ಟು ಬೆಂಗಳೂರಿನಿಂದ ಸ್ಪರ್ಧೆ: ಕೃಷ್ಣಯ್ಯ ಶೆಟ್ಟಿ ಇಂಗಿತ

ಮಾಲೂರು (ಕೋಲಾರ): ’ಮಾಲೂರಿನ ಜನರು ಎರಡು ಬಾರಿ ಚುನಾವಣೆಯಲ್ಲಿ ನನ್ನನ್ನು ಸೋಲಿಸಿದ್ದರಿಂದ ಈ ಬಾರಿ ಬೆಂಗಳೂರಿನ ಗಾಂಧಿನಗರ ಕ್ಷೇತ್ರದಿಂದ ಬಿಜೆಪಿಯಿಂದ ಸ್ಪರ್ಧಿಸುವ ಇಂಗಿತ ಇದೆ’ ಎಂದು ಮಾಜಿ ಸಚಿವ ಎಸ್.ಎನ್ ಕೃಷ್ಣಯ್ಯ ಶೆಟ್ಟಿ ತಿಳಿಸಿದ್ದಾರೆ.

ಪಟ್ಟಣದಲ್ಲಿ ಮಂಗಳವಾರ ಯುಗಾದಿ ಪ್ರಯುಕ್ತ ಉಡುಗೊರೆ ಕಿಟ್ ವಿತರಿಸಿ ಮಾತನಾಡಿದ ಅವರು, ‘ಗಾಂಧಿನಗರ ಕ್ಷೇತ್ರದಿಂದ ಸ್ಪರ್ಧಿಸಲು ಬಿಜೆಪಿ ಟಿಕೆಟ್‌ಗೆ ಪ್ರಯತ್ನಿಸುತ್ತೇನೆ. ಆದರೆ, ಮಾಲೂರು ಕ್ಷೇತ್ರದಿಂದ ಮಾತ್ರ ಚುನಾವಣೆಗೆ ಸ್ಪರ್ಧಿಸುವುದಿಲ್ಲ. ಬೇರೆಯವರಿಗೆ ಟಿಕೆಟ್ ನೀಡಿದರೂ ಅವರ ಗೆಲುವಿಗೆ ಶ್ರಮಿಸುತ್ತೇನೆ’ ಎಂದರು.

ಈ ಹಿಂದೆ ಬಿಜೆಪಿಯಲ್ಲಿ ಸಚಿವರಾಗಿದ್ದ ಕೃಷ್ಣಯ್ಯ ಶೆಟ್ಟಿ ಅವರು ಚುನಾವಣೆಯಲ್ಲಿ ಸೋತ ನಂತರ ಕಾಂಗ್ರೆಸ್ ಸೇರಿದ್ದರು. ಈಗ ಮತ್ತೆ ಬಿಜೆಪಿಗೆ ಹಿಂದಿರುಗಿದ್ದಾರೆ.

ಆರ್‌ಬಿಐ ನಿವೃತ್ತ ಅಧಿಕಾರಿ ಸುಲಿಗೆ

ಬೆಂಗಳೂರು: ಮಲ್ಲೇಶ್ವರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಒಂಟಿಯಾಗಿ ವಾಸವಿದ್ದ ನಳಿನಾ ನಾಗರಾಜ್ (80) ಎಂಬುವವರಿಗೆ ಮಚ್ಚಿನಿಂದ ಹೊಡೆದು ಚಿನ್ನಾಭರಣ ಸುಲಿಗೆ ಮಾಡಿದ್ದ ಆರೋಪದಡಿ ಆರ್. ಸಭಾಪತಿ (45) ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

‘ತಮಿಳುನಾಡು ಕೃಷ್ಣಗಿರಿ ಜಿಲ್ಲೆಯ ಸಭಾಪತಿ, ಕೆಲ ತಿಂಗಳ ಹಿಂದಷ್ಟೇ ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಉದ್ಯಾನ ಸ್ವಚ್ಛತೆ ಹಾಗೂ ತೆಂಗಿನ ಮರವೇರಿ ಕಾಯಿ ಕೀಳುವ ಕೆಲಸ ಮಾಡುತ್ತಿದ್ದರು. ಸದ್ಯ ಅವರಿಂದ ₹ 2 ಲಕ್ಷ ಮೌಲ್ಯದ 50 ಗ್ರಾಂ ಚಿನ್ನಾಭರಣ ಹಾಗೂ ಕೃತ್ಯಕ್ಕೆ ಬಳಸಿದ್ದ ಮಚ್ಚು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ವೃದ್ಧೆ ನಳಿನಾ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ (ಆರ್‌ಬಿಐ) ನಿವೃತ್ತ ಅಧಿಕಾರಿ. ಅವರ ಪತಿ ನಾಗರಾಜ್, ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್ಸಿ) ವಿಜ್ಞಾನಿ ಆಗಿದ್ದರು. ಪತಿ ತೀರಿಕೊಂಡಿದ್ದರಿಂದ ನಳಿನಾ ಅವರು ಒಂಟಿಯಾಗಿ ವಾಸವಿದ್ದರು. ಅವರ ಮಕ್ಕಳು ಬೇರೆಡೆ ನೆಲೆಸಿದ್ದಾರೆ’ ಎಂದರು.

ಕಾಯಿ ಕೀಳುವಾಗ ಸಂಚು: ‘ನಳಿನಾ ಅವರ ಮನೆ ಎದುರು ತೆಂಗಿನ ಮರಗಳಿವೆ. ಅವುಗಳ ಕಾಯಿ ಕೀಳಿಸಲು ಕೂಲಿ ಕೆಲಸಗಾರರಿಗಾಗಿ ಹುಡುಕಾಡುತ್ತಿದ್ದರು. ಮೊದಲ ಬಾರಿ ಮನೆಗೆ ಹೋಗಿದ್ದ ಸಭಾಪತಿ, ಕಾಯಿ ಕಿತ್ತುಕೊಟ್ಟಿದ್ದರು. ವೃದ್ಧೆ ಒಬ್ಬರೇ ಇರುವುದನ್ನು ತಿಳಿದುಕೊಂಡಿದ್ದ ಆರೋಪಿ, ಸುಲಿಗೆ ಮಾಡಲು ಸಂಚು ರೂಪಿಸಿದ್ದರು’ ಎಂದರು.

‘ಎರಡನೇ ಬಾರಿ ಮನೆಗೆ ಹೋಗಿದ್ದ ಆರೋಪಿ, ಮಚ್ಚಿನಿಂದ ವೃದ್ಧೆ ಮೇಲೆ ಹಲ್ಲೆ ಮಾಡಿದ್ದರು. ಚಿನ್ನದ ಸರ ಕಿತ್ತುಕೊಂಡು ತಮ್ಮೂರಿಗೆ ಹೋಗಿ ತಲೆಮರೆಸಿಕೊಂಡಿದ್ದರು. ಘಟನೆ ಬಗ್ಗೆ ನಳಿನಾ ನೀಡಿದ್ದ ದೂರು ಆಧರಿಸಿ ಆರೋಪಿಯನ್ನು ತಮಿಳುನಾಡಿನಲ್ಲಿ ಬಂಧಿಸಲಾಯಿತು’ ಎಂದೂ ತಿಳಿಸಿದರು.

ಎ.ಸಿ. ಶಿವಣ್ಣ ವಿರುದ್ಧ ಕ್ರಮ ಏಕಿಲ್ಲ: ಎಎಪಿ ಪ್ರಶ್ನೆ

‘ಭೂಮಾಫಿಯಾಗೆ ಸಚಿವ ಅಶೋಕ ರಕ್ಷಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದ ಭೂಮಾಫಿಯಾಗೆ ಕಂದಾಯ ಸಚಿವ ಆರ್.ಅಶೋಕ ಬೆನ್ನೆಲುಬಾಗಿ ನಿಂತಿದ್ದಾರೆ. ಅಕ್ರಮದಲ್ಲಿ ಭಾಗಿಯಾದ ಅಧಿಕಾರಿಗಳನ್ನು ಅವರು ರಕ್ಷಿಸುತ್ತಿದ್ದಾರೆ’ ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ವಕೀಲರ ಘಟಕದ ಅಧ್ಯಕ್ಷ ಮಂಜುನಾಥ್ ಸ್ವಾಮಿ ಆರೋಪಿಸಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬೆಂಗಳೂರು ದಕ್ಷಿಣ ಉಪವಿಭಾಗಾಧಿಕಾರಿಯಾಗಿದ್ದ ಎಂ.ಜಿ.ಶಿವಣ್ಣ ಹಾಗೂ ತಹಶೀಲ್ದಾರ್ ಶಿವಪ್ಪ ಲಮಾಣಿ ಅವರು ಮುನಿರಾಜು ಹಾಗೂ ಇತರೆ ಭೂಗಳ್ಳರ ಜತೆಗೂಡಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ದೊಡ್ಡತೋಗೂರು ಗ್ರಾಮದಲ್ಲಿ ಭೂಕಬಳಿಕೆ ಮಾಡಿದ್ದಾರೆ’ ಎಂದರು.

‘ಸಂತ್ರಸ್ತರು ಹೈಕೋರ್ಟ್ ಮೆಟ್ಟಿಲೇರಿದಾಗ, ಇಬ್ಬರು ಅಧಿಕಾರಿಗಳು ಅಕ್ರಮ ಎಸಗಿರುವುದು ಸಾಬೀತಾಗಿದೆ. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಹೈಕೋರ್ಟ್ ಆದೇಶಿಸಿದೆ. ಆದರೆ, ಸಚಿವ ಅಶೋಕ ಅವರ ಪ್ರಭಾವದಿಂದಾಗಿ ತಪ್ಪಿತಸ್ಥರಿಗೆ ಯಾವುದೇ ಶಿಕ್ಷೆಯಾಗಿಲ್ಲ’ ಎಂದು ಹೇಳಿದರು.

ಕಾನೂನು ಘಟಕದ ಅಧ್ಯಕ್ಷ ನಂಜಪ್ಪ ಕಾಳೇಗೌಡ, ‘ಅಶೋಕ ಅವರು ಸಚಿವರಾದಾಗಿನಿಂದ ಬೆಂಗಳೂರಿನಲ್ಲಿ ಭೂಮಾಫಿಯಾ ಹಾವಳಿ ಹೆಚ್ಚಾಗಿದೆ. ಅಕ್ರಮವಾಗಿ ಜಮೀನನ್ನು ವಶಪಡಿಸಿಕೊಳ್ಳುವುದು, ಬೆದರಿಕೆಯೊಡ್ಡಿ ಒಕ್ಕಲೆಬ್ಬಿಸುವಂತಹ ಧೋರಣೆಗಳು ಅವ್ಯಾಹತವಾಗಿ ನಡೆಯುತ್ತಿವೆ. ಕಂದಾಯ ಇಲಾಖೆಯ ಅಧಿಕಾರಿಗಳೇ ಭೂಮಾಫಿಯಾಗೆ ಸಹಕಾರ ನೀಡುತ್ತಿದ್ದಾರೆ. ಬಡ ಹಾಗೂ ಮಧ್ಯಮ ವರ್ಗದ ಜನರು ಆತಂಕದಲ್ಲೇ ಜೀವನ ನಡೆಸಬೇಕಾಗಿದೆ’ ಎಂದು ದೂರಿದರು.

ಕಸಬ್ ಸೆರೆಹಿಡಿದ ಪೊಲೀಸರಿಗೆ ಬಡ್ತಿ

ಮುಂಬೈ (ಪಿಟಿಐ): ಮುಂಬೈ ಭಯೋತ್ಪಾದನಾ ದಾಳಿ (26/11) ಸಂದರ್ಭದಲ್ಲಿ ಪಾಕಿಸ್ತಾನಿ ಭಯೋತ್ಪಾದಕ ಮೊಹಮ್ಮದ್ ಅಜ್ಮಲ್ ಕಸಬ್‌ನನ್ನು ಜೀವಂತವಾಗಿ ಸೆರೆ ಹಿಡಿದ ಪೊಲೀಸ್ ಸಿಬ್ಬಂದಿಗೆ 2008ರಿಂದ ಜಾರಿಗೆ ಬರುವಂತೆ ಬಡ್ತಿ ನೀಡಲಾಗಿದೆ ಎಂದು ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದ್ದಾರೆ.

ಈ ಕೆಚ್ಚೆದೆಯ ಪೊಲೀಸರು ಪದಕಗಳು, ಪ್ರಶಸ್ತಿಗಳು ಮತ್ತು ನಗದು ಬಹುಮಾನಗಳನ್ನು ಹೇರಳವಾಗಿ ಪಡೆದಿದ್ದಾರೆ. ಆದರೆ ಅವರಿಗೆ ಬಡ್ತಿ ದೊರೆತಿರಲಿಲ್ಲ. ಹೀಗಾಗಿ ಅವರಿಗೆ ಒಂದು ಹಂತದ ಬಡ್ತಿ ನೀಡಲು ಸರ್ಕಾರ ಮಾರ್ಚ್ 22ರಂದು ನಿರ್ಧರಿಸಿ ಆದೇಶಿಸಿದೆ ಎಂದು ಅವರು ಹೇಳಿದರು.

ಬಡ್ತಿ ಪಡೆದ ಪೊಲೀಸರಿಗೆ ₹2 ಲಕ್ಷದಿಂದ ₹8 ಲಕ್ಷದವರೆಗೆ ಹಣಕಾಸಿನ ಪ್ರಯೋಜನ ಸಿಗಲಿದೆ. 15 ಮಂದಿಗೆ ಇದರ ಪ್ರಯೋಜನ ಸಿಗಲಿದೆ. ಈಗಾಗಲೇ 8 ಮಂದಿ ನಿವೃತ್ತರಾಗಿದ್ದಾರೆ. ಕಸಬ್‌ನನ್ನು ಸೆರೆ ಹಿಡಿಯವ ವೇಳೆ ಎಎಸ್‌ಐ ತುಕಾರಾಂ ಓಂಬಳೆ ಮೃತಪಟ್ಟಿದ್ದರು.

ಚಿತ್ರಾವಳಿ



ಬ್ಯಾಟರಾಯನಪುರ ಕ್ಷೇತ್ರದ ವಾರ್ಡ್ ವ್ಯಾಪ್ತಿಯ ಕೊಡಿಗೇಹಳ್ಳಿ ರೈಲ್ವೆ ಅಂಡರ್‌ಪಾಸ್– ತಿಂಡ್ಲು ಮುಖ್ಯರಸ್ತೆ ಮತ್ತು ವಿರೂಪಾಕ್ಷಪುರ ಅಡ್ಡರಸ್ತೆಗಳ ಅಭಿವೃದ್ಧಿ ಹಾಗೂ ಡಾಂಬರೀಕರಣಕ್ಕೆ ₹85 ಲಕ್ಷ ವೆಚ್ಚದಲ್ಲಿ ಕೈಗೊಂಡಿರುವ ಕಾಮಗಾರಿಗೆ ಶಾಸಕ ಕೃಷ್ಣ ಬೈರೇಗೌಡ ಚಾಲನೆ ನೀಡಿದರು. ಕಾಂಗ್ರೆಸ್ ಮುಖಂಡರಾದ ಎನ್.ಎನ್. ಶ್ರೀನಿವಾಸಯ್ಯ, ವಿ.ಹರಿ, ಟಿ.ಜಿ.ಚಂದ್ರು, ಯುವಮುಖಂಡ ದಿಲೀಪ್ ಕುಮಾರ್ ಮತ್ತಿತರರು ಇದ್ದರು.



ಗೋರ್ ಬಂಜಾರ ಸಂಸ್ಕೃತಿ ಸಂಶೋಧನಾ ಅಕಾಡೆಮಿಯು ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರೊ.ಭಾಂಗ್ಯ ಭೂಕ್ಯ ಅವರ ‘ದಮನಿತ ಅಲೆಮಾರಿಗಳು’ ಪುಸ್ತಕವನ್ನು ಸಾಹಿತಿ ಎಸ್‌.ಜಿ.ಸಿದ್ದರಾಮಯ್ಯ (ಎಡದಿಂದ ಮೂರನೆಯವರು) ಬಿಡುಗಡೆ ಮಾಡಿದರು. ವಕೀಲ ಎನ್‌.ಅನಂತನಾಯ್ಕ, ಲೇಖಕಿ ಬಿ.ಟಿ.ಲಲಿತಾ ನಾಯಕ್, ಲೇಖಕ ಭಾಂಗ್ಯ ಭೂಕ್ಯ, ನಾಗವೇಣಿ, ಎನ್‌.ಎಸ್‌.ಜಾಧವ್, ಸಂದೇಶ್ ಚೌಹಾಣ್ ಇದ್ದಾರೆ

ಆರ್ಕಿಟೆಕ್ಚರ್ ಕೋರ್ಸ್ ಪ್ರವೇಶ: ಪಿಸಿಎಂ ಕಡ್ಡಾಯವಲ್ಲ

ನವದೆಹಲಿ (ಪಿಟಿಐ): ಆರ್ಕಿಟೆಕ್ಚರ್ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಇನ್ನು ಮುಂದೆ 12ನೇ ತರಗತಿ ಅಥವಾ ದ್ವಿತೀಯ ಪಿಯುನಲ್ಲಿ ಭೌತ ವಿಜ್ಞಾನ, ರಸಾಯನ ವಿಜ್ಞಾನ ಮತ್ತು ಗಣಿತ (ಪಿಸಿಎಂ) ವಿಷಯಗಳನ್ನು ವಿದ್ಯಾರ್ಥಿಗಳು ಕಡ್ಡಾಯವಾಗಿ ಅಧ್ಯಯನ ಮಾಡಿರಲೇಬೇಕು ಎಂದೇನಿಲ್ಲ.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ (ಎಐಸಿಟಿಇ) ಮಂಗಳವಾರ ಬಿಡುಗಡೆ ಮಾಡಿರುವ 2022–23ರ ಅನುಮೋದನೆ ಕೈಪಿಡಿಯಲ್ಲಿ ತಿಳಿಸಲಾಗಿದೆ.

ಜತಗೆ ‘ಫ್ಯಾಷನ್ ತಂತ್ರಜ್ಞಾನ’ ಮತ್ತು ‘ಪ್ಯಾಕೇಜಿಂಗ್ ತಂತ್ರಜ್ಞಾನ’ ಕೋರ್ಸ್‌ಗಳ ಪ್ರವೇಶಕ್ಕೂ 12ನೇ ತರಗತಿಯಲ್ಲಿ ಕಡ್ಡಾಯವಾಗಿ ಪಿಸಿಎಂ ವಿಷಯಗಳನ್ನು ಓದಿರಲೇಬೇಕು ಎಂದೇನಿಲ್ಲ ಎಂದೂ ಕೈಪಿಡಿಯಲ್ಲಿ ಹೇಳಲಾಗಿದೆ.

12ನೇ ತರಗತಿಯಲ್ಲಿ ಪಿಸಿಎಂ ಅಧ್ಯಯನ ಮಾಡದ ವಿದ್ಯಾರ್ಥಿಗಳೂ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕುರಿತ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಸಾಧ್ಯವಾಗುತ್ತದೆ ಎಂದು ತಾಂತ್ರಿಕ ಶಿಕ್ಷಣ ನಿಯಂತ್ರಕ ಸಂಸ್ಥೆ ಕಳೆದ ವರ್ಷ ಘೋಷಿಸಿತ್ತು.

‘ಯಾವ ಕೋರ್ಸ್‌ಗಳಿಗೆ ಪಿಸಿಎಂ ಅನ್ನು ಐಚ್ಛಿಕವಾಗಿ ಮಾಡಬಹುದು ಎಂಬುದರ ಕುರಿತು ಶಿಫಾರಸುಗಳನ್ನು ಮಾಡಲು ನಾವು ತಜ್ಞರ ಸಮಿತಿಯನ್ನು ರಚಿಸಿದ್ದೇವೆ. ಸಮಿತಿಯ ಶಿಫಾರಸುಗಳ ಆಧಾರದ ಮೇಲೆ ಮೂರು ಕೋರ್ಸ್‌ಗಳನ್ನು ಆಯ್ಕೆ ಮಾಡಲಾಗಿದೆ’ ಎಂದು ಎಐಸಿಟಿಇ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಪಿಸಿಎಂ ಜತೆಗೆ, ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ, ಜೀವ ವಿಜ್ಞಾನ, ಇನ್ಫರ್ಮ್ಯಾಟಿಕ್ಸ್ ಪ್ರಾಕ್ಟೀಸಸ್, ಜೈವಿಕ ತಂತ್ರಜ್ಞಾನ, ತಾಂತ್ರಿಕ ವೃತ್ತಿಪರ ವಿಷಯ, ಕೃಷಿ, ಎಂಜಿನಿಯರಿಂಗ್ ಗ್ರಾಫಿಕ್ಸ್, ವ್ಯವಹಾರ ಅಧ್ಯಯನ, ಉದ್ಯಮಶೀಲತೆ ವಿಷಯಗಳನ್ನು ಅಧ್ಯಯನ ಮಾಡಿರುವ ವಿದ್ಯಾರ್ಥಿಗಳು ಈ ಮೂರು ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಅರ್ಹವಾಗಿರುತ್ತಾರೆ.

ರುದ್ರೇಶ್ ಹತ್ಯೆ: ಸೆಷನ್ಸ್ ಕೋರ್ಟ್ ವರ್ಗ ಕೋರಿಕೆ ಅರ್ಜಿ ವಜಾ

ಬೆಂಗಳೂರು: ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಸ್ವಯಂ ಸೇವಕ ರುದ್ರೇಶ್ ಕೊಲೆ ಪ್ರಕರಣದ ವಿಚಾರಣೆಯನ್ನು ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ವಿಶೇಷ ನ್ಯಾಯಾಲಯದಿಂದ ಸಾಮಾನ್ಯ ಸೆಷನ್ಸ್ ನ್ಯಾಯಾಲಯಕ್ಕೆ ವರ್ಗಾವಣೆ ಮಾಡಲು ಆದೇಶಿಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ಆರೋಪಿ ಇರ್ಫಾನ್ ಪಾಷಾ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ಆಲಿಸಿ ಕಾಯ್ದಿರಿಸಿದ್ದ ತೀರ್ಪನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ, ನ್ಯಾಯಮೂರ್ತಿಗಳಾದ ಬಿ.ವೀರಪ್ಪ ಮತ್ತು ಪಿ.ಕೃಷ್ಣ ಭಟ್ ಅವರಿದ್ದ ಪೂರ್ಣಪೀಠ ಮಂಗಳವಾರ ಪ್ರಕಟಿಸಿದೆ.

‘ಎನ್‌ಐಎ ಕಾಯ್ದೆ–2008ರ ಕಲಂ 20ರ ಅಡಿಯಲ್ಲಿನ ಅರ್ಜಿಗಳನ್ನು ತಿರಸ್ಕರಿಸಿ ವಿಶೇಷ ನ್ಯಾಯಾಲಯ ಹೊರಡಿಸಿದ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ಅವಕಾಶವಿಲ್ಲ. ಹೀಗಾಗಿ, ವಿಚಾರಣಾ ಮಾನ್ಯತೆ ಇಲ್ಲದ ಕಾರಣ ಮೇಲ್ಮನವಿಗಳನ್ನು ತಿರಸ್ಕರಿಸಲಾಗಿದೆ‘ ಎಂದು ಪೂರ್ಣಪೀಠ ವಿವರಿಸಿದೆ.

‘ಜಾಮೀನು ಕೋರಿದ ಅರ್ಜಿಗಳನ್ನು ತಿರಸ್ಕರಿಸಿ ಅಥವಾ ಪುರಸ್ಕರಿಸಿ ಎನ್‌ಐಎ ವಿಶೇಷ ನ್ಯಾಯಾಲಯ ಹೊರಡಿಸಿದ ಆದೇಶಗಳನ್ನು ಪ್ರಶ್ನಿಸಿ ಎನ್‌ಐಎ ಕಾಯ್ದೆಯ ಕಲಂ 21ರ ಅಡಿಯಲ್ಲಿ ಸಲ್ಲಿಸಿದ ಮೇಲ್ಮನವಿಗಳು ವಿಭಾಗೀಯ ನ್ಯಾಯಪೀಠದ ಮುಂದೆ ವಿಚಾರಣೆ ಮಾನ್ಯತೆ ಹೊಂದಿರುತ್ತವೆ‘ ಎಂದು ಪೂರ್ಣಪೀಠ ಇದೇ ವೇಳೆ ಸ್ಪಷ್ಟಪಡಿಸಿದೆ. ಇದರಿಂದಾಗಿ ಎನ್‌ಐಎ ಆದೇಶಗಳಿಗೆ ಸಂಬಂಧಿಸಿದಂತೆ ಭವಿಷ್ಯದಲ್ಲಿ ಉದ್ಭವಿಸಬಹುದಾದ ಪ್ರಕರಣಗಳಿಗೆ ಈ ತೀರ್ಪು ಮಾರ್ಗಸೂಚಿಯಾಗಿದೆ.

ಅರ್ಜಿದಾರರ ಪರ ವಕೀಲರಾದ ಎಸ್. ಬಾಲನ್ ಮತ್ತು ಮೊಹಮದ್ ತಾಹಿರ್, ‘ಎನ್‌ಐಎ ನ್ಯಾಯಾಲಯ ನೀಡಿರುವುದು ಮಧ್ಯಂತರ ಆದೇಶವಲ್ಲ‘ ಎಂದು ಪ್ರತಿವಾದಿಸಿದ್ದರು. ಅಂತಿಮವಾಗಿ ಪೂರ್ಣಪೀಠವು ಎನ್‌ಐಎ ಪರ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನಕುಮಾರ್ ವಾದವನ್ನು ಮಾನ್ಯ ಮಾಡಿದೆ

ಬಾಂಬೆ ಐಐಟಿ ಪ್ರಾಧ್ಯಾಪಕ ಪ್ರೊ.ಚೇತನ್ ಸಿಂಗ್ ಸೋಲಂಕಿ

‘ಮಿತಿ ಮೀರಿದ ಇಂಧನ ಬಳಕೆ ಮಾರಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇಂಧನ ಬಳಕೆಯು ಮಿತಿಯಲ್ಲಿರಬೇಕು. ಅದು ಅತಿಯಾದರೆ ಮನುಕುಲಕ್ಕೆ ಅಪಾಯ ಎದುರಾಗಲಿದೆ’ ಎಂದು ಬಾಂಬೆ ಐಐಟಿ ಪ್ರಾಧ್ಯಾಪಕ ಪ್ರೊ.ಚೇತನ್ ಸಿಂಗ್ ಸೋಲಂಕಿ ಅಭಿಪ್ರಾಯಪಟ್ಟರು.

ಇಂಧನ ಸ್ವರಾಜ್ ಯಾತ್ರೆ ಅಂಗವಾಗಿ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು ಹಮ್ಮಿಕೊಂಡಿದ್ದ ಸೌರಶಕ್ತಿ ಬಳಕೆಯ ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

‘ಗಾಳಿ ಮತ್ತು ನೀರು ಮನುಷ್ಯರಿಗೆ ಅತಿ ಅವಶ್ಯ. ಅವು ಕಲುಷಿತಗೊಳ್ಳದಂತೆ ಕಾಪಾಡಲು ನಾವೇನು ಮಾಡಿದ್ದೇವೆ. ಒಂದೆಡೆ ಭಾರತದ ಆರ್ಥಿಕ ಬೆಳವಣಿಗೆ ದರ ಹೆಚ್ಚುತ್ತಿದೆ. ಮತ್ತೊಂದೆಡೆ ಪ್ರಕೃತಿ ನಾಶ ಮುಂದುವರಿಯುತ್ತಿದೆ. ಮೊಬೈಲ್, ಕಂಪ್ಯೂಟರ್ ಇಲ್ಲದೆ ನಾವು ಬದುಕಬಹುದು. ಆದರೆ ಶುದ್ಧ ಗಾಳಿ, ನೀರು, ಬೆಳಕು ಇಲ್ಲದೆ ಜೀವಿಸಲು ಸಾಧ್ಯವೇ’ ಎಂದು ಪ್ರಶ್ನಿಸಿದರು.



ಬಿ.ಎಂ.ಎಸ್‌.ತಾಂತ್ರಿಕ ಮಹಾವಿದ್ಯಾಲಯದ ಎಲೆಕ್ಟ್ರಿಕಲ್ ಆ್ಯಂಡ್ ಎಲೆಕ್ಟ್ರಾನಿಕ್ಸ್ ವಿಭಾಗ ಹೊರ ತಂದಿರುವ ಕಿರು ಹೊತ್ತಿಗೆಯನ್ನು ಪ್ರೊ.ಚೇತನ್ ಸಿಂಗ್ ಸೋಲಂಕಿ (ಮಧ್ಯ) ಬಿಡುಗಡೆ ಮಾಡಿದರು. (ಎಡದಿಂದ) ಉಪ ಪ್ರಾಚಾರ್ಯ (ಆಡಳಿತ) ಡಾ.ಕೆ.ಆರ್‌.ಸುರೇಶ್, ಪ್ರಾಚಾರ್ಯ ಡಾ.ಎಸ್‌.ಮುರಳೀಧರ, ಶೈಕ್ಷಣಿಕ ವಿಭಾಗದ ಉಪ ಪ್ರಾಚಾರ್ಯ ಡಾ.ಭೀಮಶಾ ಹಾಗೂ ಎಲೆಕ್ಟ್ರಿಕಲ್ ಆ್ಯಂಡ್ ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥೆ ಡಾ ಎ.ಎನ್‌.ನಾಗಶ್ರೀ ಇದ್ದಾರೆ– ಪ್ರಜಾವಾಣಿ ಚಿತ್ರ

‘ಗಾಳಿಯ ಗುಣಮಟ್ಟ ದಿನೇ ದಿನೇ ಕುಸಿಯುತ್ತಿದೆ. ಮರಗಳ ಹನನ ಮುಂದುವರಿಯುತ್ತಿದೆ. ಭೂಮಿಯ ಮೇಲಿನ ಶೇ 33 ರಷ್ಟು ಮಣ್ಣು ದೂಳಾಗಿ ಪರಿವರ್ತನೆಯಾಗಿದೆ. ಇಂಧನ ನಮ್ಮ ಬದುಕಿಗೆ ಬಹಳ ಅಗತ್ಯ. ಕೈಗಾರಿಕಾ ಕ್ರಾಂತಿಯ ನಂತರ ಇಂಧನದ ಬಳಕೆ ಹೆಚ್ಚಿದೆ. ವಾತಾವರಣದಲ್ಲಿ ಇಂಗಾಲದ ಪ್ರಮಾಣ ಏರುತ್ತಿದೆ. ಜಾಗತಿಕ ತಾಪಮಾನ ಹೆಚ್ಚಳದಿಂದ ವಿಪತ್ತುಗಳು ಸಂಭವಿಸುತ್ತಿವೆ’ ಎಂದು ತಿಳಿಸಿದರು.

‘ಹವಾಮಾನ ವೈಪರೀತ್ಯದಿಂದಾಗಿ ಅಕಾಲಿಕ ಮಳೆಯಾಗುತ್ತಿದ್ದು, ಪ್ರವಾಹದಿಂದಾಗಿ ಆಸ್ಟ್ರೇಲಿಯಾ, ಚೀನಾ, ಜಪಾನ್, ಯುರೋಪ್, ಬೆಲ್ಜಿಯಂ ಹಾಗೂ ಬ್ರೆಜಿಲ್‌ನಲ್ಲಿ ಜನ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಮರುಭೂಮಿಯ ನಾಡು ಎನಿಸಿರುವ ಸೌದಿ ಅರೇಬಿಯಾದಲ್ಲೂ ಪ್ರವಾಹ ಸ್ಥಿತಿ ನಿರ್ಮಾಣವಾಗುತ್ತಿರುವುದು ಆತಂಕಕಾರಿ’ ಎಂದರು.

‘ತಾಪಮಾನದ ಏರಿಕೆಯಿಂದಾಗಿ ಕಾಳ್ಗಿಚ್ಚು ಸಂಭವಿಸಿ ಲಕ್ಷಾಂತರ ಎಕರೆ ಅರಣ್ಯ ನಾಶವಾಗುತ್ತಿದೆ. ವನ್ಯ ಸಂಪತ್ತು, ಪ್ರಾಣಿ, ಪಕ್ಷಿ ಸಂಕುಲ ಹಾಗೂ ಕೀಟಗಳು ಸಾಯುತ್ತಿವೆ. ಪರಿಸರ ವ್ಯವಸ್ಥೆಯಲ್ಲಿ ಪ್ರಾಣಿ, ಪಕ್ಷಿ ಹಾಗೂ ಕೀಟಗಳ ಪಾತ್ರ ಮಹತ್ವದ್ದು. ಅವು ನಾಶವಾದರೆ ಇಡೀ ಮನುಷ್ಯ ಕುಲವೇ ಅವನತಿ ಹೊಂದುತ್ತದೆ. ಈ ಬಗ್ಗೆ ನಾವೆಲ್ಲಾ ಗಂಭೀರ ಚಿಂತನೆ ನಡೆಸಬೇಕು’ ಎಂದು ಕಿವಿಮಾತು ಹೇಳಿದರು.

‘ಅಕ್ಕಯ್’ ಕೃತಿಗೆ ಎರಡು ಪ್ರಶಸ್ತಿ



ಕೃತಿಯ ಮುಖಪುಟ

ಬೆಂಗಳೂರು: ಬಹುರೂಪಿ ಪ್ರಕಾಶನದ ‘ಅಕ್ಕಯ್’ ಕೃತಿಗೆ ಪ್ರಕಟಣೆಯ ಉತ್ಕೃಷ್ಟತೆಗಾಗಿ 2 ರಾಷ್ಟ್ರೀಯ ಪ್ರಶಸ್ತಿಗಳು ಸಿಕ್ಕಿವೆ.

ಪಬ್ಲಿಷಿಂಗ್ ನೆಕ್ಸ್ಟ್ ಆಯೋಜಿಸಿದ್ದ ವಾರ್ಷಿಕ ಸ್ಪರ್ಧೆಯಲ್ಲಿ ‘ಅಕ್ಕಯ್’ ಕೃತಿಯು ಪ್ರಕಟಣೆಯ ಉತ್ಕೃಷ್ಟತೆಗೆ, ‘ಕುಪ್ಪಳಿ ಡೈರಿ’ ಮುಖಪುಟ ವಿನ್ಯಾಸಕ್ಕಾಗಿ ಅಂತಿಮ ಸುತ್ತಿಗೆ ಆಯ್ಕೆಯಾಗಿದ್ದವು.

ವಿವಿಧ ಪ್ರತಿಷ್ಠಿತ ಪ್ರಕಟಣಾ ಸಂಸ್ಥೆಗಳು ಭಾಗವಹಿಸಿದ್ದ ಈ ಸ್ಪರ್ಧೆಯಲ್ಲಿ ಅಂತಿಮವಾಗಿ ಅಕ್ಕಯ್ ಕೃತಿಯು ಪ್ರಕಟಣೆಯ ಉತ್ಕೃಷ್ಟತೆ ವಿಭಾಗದಲ್ಲಿ ರನ್ನರ್ ಅಪ್ ಸ್ಥಾನ ಗಳಿಸಿತು. ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿ (ಪಿಆರ್‌ಸಿಐ) ನಡೆಸುವ ಸಾರ್ವಜನಿಕ ರಂಗದ ವಾರ್ಷಿಕ ಪ್ರಶಸ್ತಿ ಸ್ಪರ್ಧೆಯಲ್ಲಿ ಪುಸ್ತಕ ಪ್ರಕಟಣಾ ವಿಭಾಗದಲ್ಲೂ ‘ಅಕ್ಕಯ್’ ಕೃತಿ ಪ್ರಕಟಣೆಯಲ್ಲಿನ ಉತ್ಕೃಷ್ಟತೆಗಾಗಿ ಬೆಳ್ಳಿ ಪದಕ ಪಡೆದಿದೆ.

ಈ ಕೃತಿಯ ವಿನ್ಯಾಸಕ್ಕೆ ಎಸ್.ಎಂ.ಸಾಗರ್, ಅರುಣ್ ಕುಮಾರ್, ಛಾಯಾಗ್ರಾಹಕ ಮನುಕುಮಾರ್, ರೀಗಲ್ ಪ್ರಿಂಟರ್ಸ್ ವೆಂಕಟೇಶ್ ಅವರ ಕೊಡುಗೆ ಇದೆ. ‘ಅಕ್ಕಯ್’ ಸಾಮಾಜಿಕ ಕಾರ್ಯಕರ್ತೆ ಅಕ್ಕೈ ಪದ್ಮಶಾಲಿ ಅವರ ಆತ್ಮಕಥೆ. ಪ್ರೊ.ಡೊಮಿನಿಕ್ ಡಿ. ಅವರು ಇದನ್ನು ನಿರೂಪಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕುರುಬರ ಸಂಘದ ಕಾರ್ಯವೈಖರಿಗೆ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕುರುಬರ ಸಂಘದ ಗಾಂಧಿನಗರದ ಕಟ್ಟಡ ಮತ್ತು ಶ್ರೀನಿವಾಸನಗರದ ಆಸ್ತಿಗೆ 2008ರಿಂದ ಈವರೆಗೆ ಸುಮಾರು ₹2.5 ಕೋಟಿ ತೆರಿಗೆಯನ್ನೇ ಕಟ್ಟಿಲ್ಲ. ಹೀಗಿರುವಾಗ ಸಂಘವಿದ್ದು ಏನು ಪ್ರಯೋಜನ. ಇದನ್ನೇ ಆಧರಿಸಿ ಸರ್ಕಾರ ಭೂಮಿ ಹಿಂಪಡೆದರೆ ಏನು ಗತಿ' ಎಂದು ಮೇಲ್ಮನೆಯ, ಬಿಜೆಪಿ ಸದಸ್ಯ ಎಚ್.ವಿಶ್ವನಾಥ್ ಮಂಗಳವಾರ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ಪ್ರದೇಶ ಕುರುಬರ ಸಂಘದ ಆಡಳಿತ ಮಂಡಳಿ ನಿಯಮ ಬಾಹಿರವಾಗಿ ವರ್ತಿಸುತ್ತಿದೆ ಎಂದು ಆರೋಪಿಸಿ ಹಮ್ಮಿಕೊಳ್ಳಲಾಗಿದ್ದ ಪ್ರತಿಭಟನೆಯಲ್ಲಿ ಮಾತನಾಡಿದರು.

ಸಂಘದ ನಿರ್ದೇಶಕ ಟಿ.ಬಿ. ಬಳಗಾವಿ, 'ಬೀರೇಶ್ವರ ದೇವಸ್ಥಾನದ ಜಾಗದಲ್ಲಿರುವ ವಿದ್ಯಾರ್ಥಿ ನಿಲಯಕ್ಕೆ ಕಾರ್ಯಕಾರಿ ಸಮಿತಿಯಲ್ಲಿ ಅನುಮೋದನೆ ಪಡೆಯದೇ ಸುಮಾರು ₹20 ಲಕ್ಷ ಹಣ ಖರ್ಚು ಮಾಡಲಾಗಿದೆ. ಸರ್ಕಾರ ಮತ್ತು ಬಿಬಿಎಂಪಿ ಅನುದಾನ ದಿಂದ ಬನಶಂಕರಿಯಲ್ಲಿ ಕನಕ ಭವನ ನಿರ್ಮಿಸಲಾಗಿದೆ. ಅಲ್ಲಿ ಒಂದು ವರ್ಷದಲ್ಲಿ 23 ವಿವಾಹಗಳು ನಡೆದಿವೆ. ಈ ಪೈಕಿ 10 ಮದುವೆಗಳಿಗಷ್ಟೇ ರಶೀದಿ ನೀಡಲಾಗಿದೆ. ಉಳಿದ ಹಣವನ್ನು ಸಂಘದ ಖಜಾಂಚಿ ಹಾಗೂ ಪ್ರಧಾನ ಕಾರ್ಯದರ್ಶಿ ದುರುಪಯೋಗ ಪಡಿಸಿಕೊಂಡಿದ್ದಾರೆ' ಎಂದು ದೂರಿದರು.

'ಎಷ್ಟೇ ಒತ್ತಾಯಿಸಿದರೂ ಸಂಘದ ಸರ್ವ ಸದಸ್ಯರ ಸಭೆ ಕರೆಯುತ್ತಿಲ್ಲ. ಮಂಡ್ಯದಲ್ಲಿ ಕಟ್ಟಲಿರುವ ಸಮುದಾಯ ಭವನಕ್ಕೆ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅನುಮತಿ ಪಡೆಯದೇ ₹2 ಕೋಟಿ ಮೊತ್ತ ಸಂದಾಯ ಮಾಡಲಾಗಿದೆ. ರಾಜ್ಯದಲ್ಲಿ 30 ಜಿಲ್ಲಾ ಸಂಘಗಳಿವೆ. ಅವುಗಳಿಗೆ ಅನುದಾನ ನೀಡುತ್ತಿಲ್ಲ' ಎಂದು ಆರೋಪಿಸಿದರು.

'ಕಟ್ಟಡದ ಬಾಡಿಗೆ ಹಣದುಬಳಕೆ ಆಗುತ್ತಿದೆ. ಸಂಘದಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಮಾಹಿತಿ ಕೋರಿದ ಸದಸ್ಯರನ್ನು ಅಮಾನತು ಮಾಡಲಾಗಿದೆ. ತಾಲ್ಲೂಕು, ಜಿಲ್ಲಾ ಸಂಘಗಳಿಗೆ ಚುನಾವಣೆ ನಡೆಸದೇ ಕಾನೂನು ಬಾಹಿರವಾಗಿ ಪದಾಧಿಕಾರಿಗಳ ನೇಮಿಸಲಾಗಿದೆ. ಗಡಿನಾಡ ಸದಸ್ಯರ ಸ್ಥಾನಕ್ಕೆ ಪಾಲಿಕೆಯ ಮಾಜಿ ಸದಸ್ಯರನ್ನು ನೇಮಿಸಲಾಗುತ್ತಿದೆ' ಎಂದು ದೂರಿದರು.



ಟಿ.ಬಿ.ಬಳಗಾವಿ, ಎಚ್‌ಕೃಷ್ಣಕುಮಾರ್ ಎನ್‌ಮಲ್ಲೇಶ್ ಹಾಗೂ ಕೇಶವಮೂರ್ತಿ ನೇತೃತ್ವದಲ್ಲಿ ಕುರುಬ ಸಮುದಾಯದವರು ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಕೋಮು ಸಂಘರ್ಷ ತಡೆಗೆ 'ಭಾವೈಕ್ಯತಾ ಸಮಾವೇಶ'

ಬೆಂಗಳೂರು: ರಾಜ್ಯದಲ್ಲಿ ಭುಗಿಲೆದ್ದಿರುವ ಕೋಮು ಸಂಘರ್ಷ ತಡೆಯಲು ಏಪ್ರಿಲ್ ಎರಡನೇ ವಾರದಲ್ಲಿ ಎಲ್ಲ ಧರ್ಮಗಳ ಧರ್ಮಗುರುಗಳ ಸಾನ್ನಿಧ್ಯದಲ್ಲಿ 'ಭಾವೈಕ್ಯತಾ ಸಮಾವೇಶ'ವನ್ನು ಬೆಂಗಳೂರಿನಲ್ಲಿ ಆಯೋಜಿಸಲು ಪ್ರಗತಿಪರರು, ಸಾಹಿತಿಗಳು ಹಾಗೂ ಚಿಂತಕರು ನಿರ್ಧರಿಸಿದ್ದಾರೆ.

ರಾಜ್ಯದಲ್ಲಿ ಭುಗಿಲೆದ್ದಿರುವ ಹಿಜಾಬ್ ವಿವಾದ, ಕೋಮು ದ್ವೇಷ ಹಾಗೂ ವಿವಿಧ ಗಂಭೀರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಕುರಿತು 'ಸಮನ್ವಯ ವೇದಿಕೆ'ಯ ಪ್ರಗತಿಪರ 'ಚಿಂತನಾ ಸಭೆ' ಮಂಗಳವಾರ ನಡೆಯಿತು.

ಪ್ರಗತಿಪರರು, ಸಾಹಿತಿಗಳು ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಸಭೆಯಲ್ಲಿ ಭಾಗವಹಿಸಿದ್ದರು. 'ಕೋಮುವಾದಿ ಶಕ್ತಿಗಳು ತಮ್ಮ ಕದಂಬ ಬಾಹುಗಳನ್ನು ರಾಜ್ಯದಾದ್ಯಂತ ಹರಡುತ್ತಿವೆ. ರಾಜಕೀಯವಾಗಿ ಈ ವಿಷಯಗಳನ್ನು ಬಳಸಿಕೊಂಡು ಜನರಲ್ಲಿ ದ್ವೇಷ ಬಿತ್ತುವ ಕೆಲಸ ನಡೆಯುತ್ತಿದೆ. ಇದನ್ನು ತುರ್ತಾಗಿ ನಿಯಂತ್ರಣಕ್ಕೆ ತರಬೇಕು. ಈ ಮೂಲಕ ಸಮಾಜದಲ್ಲಿ ಶಾಂತಿ ಕಾಪಾಡುವುದು ಅಗತ್ಯ' ಎಂದು ಒಮ್ಮತದ ಅಭಿಪ್ರಾಯ ವ್ಯಕ್ತಪಡಿಸಿದರು.

ಸಾಹಿತಿ ಎಸ್.ಜಿ.ಸಿದ್ದರಾಮಯ್ಯ, 'ಕೋಮುಶಕ್ತಿಗಳು ಹಾಗೂ ಸಂವಿಧಾನ ವಿರೋಧಿಗಳು ಬಹುತ್ವ ಭಾರತವನ್ನು ಹಾಳು ಮಾಡುತ್ತಿದ್ದಾರೆ' ಎಂದರು.

ಮಹಿಳಾ ಹೋರಾಟಗಾರ್ತಿ ಕೆ.ಎಸ್.ವಿಮಲಾ, 'ಹಿಜಾಬ್ ವಿಚಾರ ಮುಂದಿಟ್ಟುಕೊಂಡು ಹೆಣ್ಣುಮಕ್ಕಳ ಮೇಲೆ ಅತಿಯಾದ ಶೋಷಣೆ ನಡೆಯುತ್ತಿದೆ. ಇದು, ಮಹಿಳೆಯರನ್ನು ಶಿಕ್ಷಣದಿಂದ ಹೊರಗಿಡುವ ಹುನ್ನಾರ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಶಾಸಕ ಎನ್.ಎ.ಹ್ಯಾರಿಸ್, ಪತ್ರಕರ್ತ ಬಿ.ಎಂ.ಹನೀಫ್, ಕಾಂಗ್ರೆಸ್ ಮುಖಂಡ ಸಿ.ಎಸ್.ದ್ವಾರಕಾನಾಥ್, 'ಮುಖ್ಯಮಂತ್ರಿ' ಚಂದ್ರು, ಲೇಖಕಿ ಬಿ.ಟಿ. ಲಲಿತಾ ನಾಯಕ್, ಕೆ.ಆರ್.ರಾಧಾಕೃಷ್ಣ, ಸಾಮಾಜಿಕ ಕಾರ್ಯಕರ್ತ ಎಚ್.ವಿ. ವಾಸು ಸೇರಿ ಹಲವರು ಸಭೆಯಲ್ಲಿದ್ದರು.

12–14 ವರ್ಷ: ಶಾಲೆಗಳಲ್ಲಿ ಲಸಿಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದಲ್ಲಿ 12–14 ವರ್ಷ ವಯೋಮಾನದ ಮಕ್ಕಳಿಗೆ ಏ.1ರಿಂದ ಶಾಲೆಗಳಲ್ಲಿಯೂ 'ಕೋರ್ಬೆವ್ಯಾಕ್ಸ್' ಲಸಿಕೆ ನೀಡಲಾಗುವುದು ಎಂದು ಆರೋಗ್ಯ ಇಲಾಖೆ ತಿಳಿಸಿದೆ.

2022ರ ಮಾ.16ರಿಂದ ಈ ವಯೋಮಾನದವರಿಗೆ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ನೀಡಲಾಗುತ್ತಿದೆ. 20.25 ಲಕ್ಷ ಮಕ್ಕಳು 12–14 ವರ್ಷದವರಾಗಿದ್ದು, 5.36 ಲಕ್ಷ ಮಕ್ಕಳಿಗೆ ಈವರೆಗೆ ಒಂದು ಡೋಸ್ ಲಸಿಕೆ ವಿತರಿಸಲಾಗಿದೆ. ಈಗಾಗಲೇ ಶಾಲೆಗಳಲ್ಲಿ 15ರಿಂದ 17 ವರ್ಷದವರಿಗೆ ಲಸಿಕೆ ನೀಡಲಾಗುತ್ತಿದೆ. ಅದರಂತೆ 12–14 ವರ್ಷದವರಿಗೂ ಲಸಿಕೆ ಒದಗಿಸಲಾಗುವುದು. ಶಾಲೆಗಳಲ್ಲಿ ಮೂರು ಕೊಠಡಿಗಳು, ಸಿಬ್ಬಂದಿ, ನೀರು ಸೇರಿದಂತೆ ಅಗತ್ಯ ಸೌಲಭ್ಯಗಳು ಇರಬೇಕು ಎಂದು ಇಲಾಖೆ ಸುತ್ತೋಲೆಯಲ್ಲಿ ಸೂಚಿಸಿದೆ.



ಸುಭಾಷಿತ

ನೀವು ಸ್ವಾರ್ಥವನ್ನು ತ್ಯಜಿಸಿದ್ದೇ ಆದರೆ, ಆವರೆಗೂ ನಿಮ್ಮ ಆತ್ಮಕ್ಕೆ ಎಷ್ಟು ಹಿಂಸೆ ಕೊಟ್ಟುಕೊಳ್ಳುತ್ತಿದ್ದಿರಿ ಎಂಬುದು ನಿಮಗೆ ತಿಳಿಯುತ್ತದೆ.

–ರೂಮಿ

ಶ್ರೀಲಂಕಾದಲ್ಲಿ ಆರ್ಥಿಕ ಬಿಕ್ಕಟ್ಟು ನೆರವು ನೀಡಿ, ಸದ್ಭಾವ ಮೂಡಿಸಿ

ಭಾರತದ ಜೊತೆ ಗಟ್ಟಿ ಸಾಂಸ್ಕೃತಿಕ ಸಂಬಂಧವನ್ನು ಹೊಂದಿರುವ ನೆರೆಯ ಪುಟ್ಟ ರಾಷ್ಟ್ರ ಶ್ರೀಲಂಕಾದ ಆರ್ಥಿಕ ಪರಿಸ್ಥಿತಿ ಬಿಗಡಾಯಿಸಿದೆ. ಅಲ್ಲಿ ವಿದೇಶಿ ವಿನಿಮಯದ ಕೊರತೆಯಿಂದಾಗಿ ಕಾಗದ ಖರೀದಿಸಲು ಆಗದೆ, ಕೆಲವು ಪರೀಕ್ಷೆಗಳನ್ನು ಮುಂದೂಡಲಾಗಿದೆ. ಲಂಕಾದ ಆಸ್ಪತ್ರೆಯೊಂದರಲ್ಲಿ ನಿಗದಿಯಾಗಿದ್ದ ಶಸ್ತ್ರಚಿಕಿತ್ಸೆಗಳು ಔಷಧಿಯ ಕೊರತೆಯಿಂದಾಗಿ ನಡೆಯುತ್ತಿಲ್ಲ ಎಂದು ಸಾಮಾಜಿಕ ಜಾಲತಾಣಗಳ ಮೂಲಕ ವರದಿಯಾಗಿದೆ. ಇಂತಹ ಸಂದರ್ಭದಲ್ಲಿ ಅದಕ್ಕೆ ಆಹಾರ, ಔಷಧ ಮತ್ತು ಇತರ ಕೆಲವು ಅಗತ್ಯ ವಸ್ತುಗಳನ್ನು ಖರೀದಿಸಲು ₹ 7,500 ಕೋಟಿ ಸಾಲ ಕೊಡಲು ಮುಂದಾಗುವ ಮೂಲಕ ಭಾರತ ಸರ್ಕಾರ ಒಳ್ಳೆಯ ಕೆಲಸ ಮಾಡಿದೆ. ಜನವರಿಯಲ್ಲಿ ಕೂಡ ಕೇಂದ್ರ ಸರ್ಕಾರವು ಶ್ರೀಲಂಕಾಕ್ಕೆ ಅಂದಾಜು ₹ 10 ಸಾವಿರ ಕೋಟಿ ಮೊತ್ತದ ನೆರವು ಒದಗಿಸಿತ್ತು. ಶ್ರೀಲಂಕಾ ಕಡೆಯಿಂದ ಭಾರತಕ್ಕೆ ಬರಬೇಕಿರುವ ಅಂದಾಜು ₹ 3,780 ಕೋಟಿ ಸಾಲದ ಮರುಪಾವತಿಗೆ ಹೆಚ್ಚಿನ ಸಮಯಾವಕಾಶ ನೀಡಲಾಗಿದೆ. ಈ ವರ್ಷದಲ್ಲಿ ಭಾರತವು ಇದುವರೆಗೆ ಶ್ರೀಲಂಕಾಕ್ಕೆ ಸರಿಸುಮಾರು ₹ 18 ಸಾವಿರ ಕೋಟಿ ಮೊತ್ತದ ನೆರವು ನೀಡಿದೆ. ಇದು ದೊಡ್ಡ ಮೊತ್ತ. ಆದರೆ, ಆರ್ಥಿಕವಾಗಿ ಬಹಳ ಕೆಟ್ಟ ಸ್ಥಿತಿಯನ್ನು ತಲುಪಿರುವ ಶ್ರೀಲಂಕಾಕ್ಕೆ ಇದು ಸಾಕಾಗಲಿರಲಾರದು. ಶ್ರೀಲಂಕಾ ಈಗ ಅಂದಾಜು ₹ 53 ಸಾವಿರ ಕೋಟಿ ಮೊತ್ತದ ವಿದೇಶಿ ಸಾಲ ತೀರಿಸಬೇಕಾಗಿದೆ. ಆದರೆ, ಆ ದೇಶ ಈಗ ತೀವ್ರವಾದ ವಿದೇಶಿ ವಿನಿಮಯ ಕೊರತೆಯನ್ನು ಎದುರಿಸುತ್ತಿದೆ. ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ₹ 7,500 ಕೋಟಿಗಿಂತ ಕಡಿಮೆ ಮಟ್ಟಕ್ಕೆ ಕುಸಿದಿದೆ ಎನ್ನಲಾಗಿದೆ. ಆರ್ಥಿಕ ಮುಗ್ಗಟ್ಟಿನ ಪರಿಣಾಮವಾಗಿ ಶ್ರೀಲಂಕಾ ಸರ್ಕಾರವು ಮೂಲಭೂತ ಅವಶ್ಯಕತೆಗಳಾದ ಆಹಾರ, ಹಾಲು, ಇಂಧನ ಆಮದಿನ ಮೇಲೆ ಮಿತಿ ವಿಧಿಸಬೇಕಾದ ಸ್ಥಿತಿ ತಲುಪಿದೆ. ದೇಶವು ಸಾಲ ಮರುಪಾವತಿ ಮಾಡಲಾಗದೆ ದಿವಾಳಿಯ ಅಂಚಿಗೆ ಬಂದು ನಿಂತಿದೆ.



ಭಾರತಕ್ಕೂ ಶ್ರೀಲಂಕಾಕ್ಕೂ ಸಮೃದ್ಧಿಯನ್ನು ತರುವ ಮಾರ್ಗವನ್ನು ಕೇಂದ್ರವು ಅನುಸರಿಸಬೇಕು

ವಿದೇಶಿ ವಿನಿಮಯ ಕೊರತೆಯು ಶ್ರೀಲಂಕಾದ ಜನಸಾಮಾನ್ಯರ ಮೇಲೆ ಬೀರಿರುವ ಪರಿಣಾಮ ಅಗಾಧ. ಆಹಾರ ವಸ್ತುಗಳು ಮತ್ತು ಹಾಲಿನ ಕೊರತೆ ಅಲ್ಲಿ ಉಂಟಾಗಿದೆ. ಜನಸಾಮಾನ್ಯರು ಇವುಗಳನ್ನು ಖರೀದಿಸುವುದೇ ದುಸ್ತರವಾಗಿದೆ. ಮುದ್ರಣ ಕಾಗದದ ಕೊರತೆಯಿಂದಾಗಿ ಶ್ರೀಲಂಕಾದ ಎರಡು ದಿನಪತ್ರಿಕೆಗಳು ಮುದ್ರಣ ಆವೃತ್ತಿಯನ್ನು ನಿಲ್ಲಿಸಿವೆ. ಭಾರತದಿಂದ ಈಗ ದೊರೆತಿರುವ ಹಣಕಾಸಿನ ನೆರವು ಅಲ್ಲಿನವರಿಗೆ ಒಂದಿಷ್ಟು ಅನುಕೂಲ ತಂದುಕೊಡಬಹುದು. ಆದರೆ, ಭಾರತದಿಂದ ಪಡೆದ ಸಾಲದ ಪರಿಣಾಮಗಳ ಬಗ್ಗೆ ಅಲ್ಲಿ ಕಳವಳ ವ್ಯಕ್ತವಾಗಿದೆ ಎಂಬ ವರದಿಗಳು ಬಂದಿವೆ. ಭಾರತವು ಸಮುದ್ರ ಪ್ರದೇಶದ ಭದ್ರತೆಗೆ ಸಂಬಂಧಿಸಿದ ಕೆಲವು ಒಪ್ಪಂದಗಳಿಗೆ, ಇಂಧನ ಹಾಗೂ ಇತರ ಕ್ಷೇತ್ರಗಳಿಗೆ ಸಂಬಂಧಿಸಿದ ಕೆಲವು ಒಪ್ಪಂದಗಳಿಗೆ ಸಹಿ ಮಾಡುವಂತೆ ಶ್ರೀಲಂಕಾವನ್ನು ಕೇಳುತ್ತಿದೆ ಎಂಬ ವರದಿಗಳು ಸೂಚಿಸುತ್ತಿವೆ. ಇವು ಅಲ್ಲಿನ ಜನರಲ್ಲಿ ಭಾರತ ವಿರೋಧಿ ಭಾವನೆ ಬೆಳೆಯುವಂತೆ ಮಾಡಬಲ್ಲವು.

ಶ್ರೀಲಂಕಾ ವಿಚಾರದಲ್ಲಿ ಚೀನಾದ ಹಾದಿಯನ್ನು ಭಾರತ ತುಳಿಯಬಾರದು. ಈ ದ್ವೀಪರಾಷ್ಟ್ರದ ವಿಚಾರದಲ್ಲಿ ಚೀನಾ ತೋರಿದ ಧೋರಣೆ ಈಗ ವಿಶ್ವದ ಎಲ್ಲೆಡೆ ಖಂಡನೆಗೆ ಗುರಿಯಾಗಿದೆ. ಚೀನಾ ತನ್ನ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ಶ್ರೀಲಂಕಾವನ್ನು ಸಾಲದ ಸುಳಿಗೆ ತಳ್ಳಿತು ಎಂಬ ಭಾವನೆ ವ್ಯಾಪಕವಾಗಿದೆ. ಶ್ರೀಲಂಕಾಕ್ಕೆ ಈಗ ಎದುರಾಗಿರುವ ಬಿಕ್ಕಟ್ಟನ್ನು ಕೇಂದ್ರ ಸರ್ಕಾರವು ಅಲ್ಲಿನ ಜನರಲ್ಲಿ ಭಾರತದ ಬಗ್ಗೆ ಸದ್ಭಾವನೆ ಬೆಳೆಯುವಂತೆ ಮಾಡಿಕೊಳ್ಳಲು ಕೂಡ ಬಳಸಿಕೊಳ್ಳಬೇಕು. ಹಾಗೆ ಮಾಡಿದರೆ ಶ್ರೀಲಂಕಾದ ಜೊತೆ ಇನ್ನಷ್ಟು ಗಟ್ಟಿಯಾದ ಬಾಂಧವ್ಯವನ್ನು ಬೆಳೆಸಿಕೊಳ್ಳಲು ಭಾರತಕ್ಕೆ ಸಾಧ್ಯವಾಗುತ್ತದೆ. ದೀರ್ಘಾವಧಿಯಲ್ಲಿ ಶ್ರೀಲಂಕಾ ದೇಶವನ್ನು ಭಾರತದ ಆಪ್ತ ವಲಯಕ್ಕೆ ಸೇರಿಸಿಕೊಳ್ಳಲು ಕೂಡ ಇದು ನೆರವಾಗುತ್ತದೆ. ಶ್ರೀಲಂಕಾ ಪಾಲಿಗೆ ಬಲಾಢ್ಯ ಪಾಲುದಾರ ಚೀನಾದ ಬದಲು ತಾನಾಗಬೇಕು ಎಂಬ ಬಯಕೆ ಭಾರತಕ್ಕೆ ಇದ್ದಲ್ಲಿ, ಕೇಂದ್ರವು ತನ್ನದೇ ಆದ ಹಾದಿಯನ್ನು ಕಂಡುಕೊಳ್ಳಬೇಕು. ಭಾರತಕ್ಕೂ ಶ್ರೀಲಂಕಾಕ್ಕೂ ಸಮೃದ್ಧಿಯನ್ನು ತರುವ ಮಾರ್ಗವನ್ನು ಕೇಂದ್ರವು ಅನುಸರಿಸಬೇಕು. ಇಲ್ಲವಾದರೆ, ಭಾರತ ಈಗ ನೀಡಿರುವ ನೆರವು ಮರೆತುಹೋಗಿ, ಭಾರತ ವಿರೋಧಿ ಭಾವನೆಯು ಅಲ್ಲಿನ ಜನರ ಮನಸ್ಸಿನಲ್ಲಿ ಮತ್ತೆ ಮನೆ ಮಾಡಬಹುದು. ಶ್ರೀಲಂಕಾ, ಭಾರತದ ಪಾಲಿಗೆ ನೆರೆಯ ದೇಶ ಮಾತ್ರವೇ ಅಲ್ಲ; ಅದು ಭಾರತದ ಜೊತೆ ಬಹು ಹಿಂದಿನ ಕಾಲದಿಂದಲೂ ಸಾಂಸ್ಕೃತಿಕ ಕೊಡು–ಕೊಳ್ಳುವ ಸಂಬಂಧ ಹೊಂದಿರುವ ಅತ್ಯಂತ ಪ್ರಮುಖ ದೇಶಗಳಲ್ಲಿ ಒಂದು.

ಪ್ರಜೆಗಳ ಪಾಲಿಗೆ ಮುಖ್ಯಮಂತ್ರಿ ತಾಯಿ ಆಗಬೇಕೇ ವಿನಾ ಕೆಲವರ ಪಾಲಿಗೆ 'ಮಲತಾಯಿ' ಆಗಬಾರದು

ಆಯಿ ಆಗಲಿ ಬೊಮ್ಮಾಯಿ!



ಅನುಸಂಧಾನ

ರವೀಂದ್ರ ಭಟ್ಟ

ಬೊಮ್ಮಾಯಿ ಹೆಸರಿನಲ್ಲಿಯೇ ಆಯಿ ಇದೆ. ಕೇವಲ ಹೆಸರಿನಲ್ಲಿ ಆಯಿ ಇದ್ದರೆ ಸಾಲದು. ಅವರ ಹೃದಯದಲ್ಲಿಯೂ ಮಾತಿನಲ್ಲಿಯೂ ಕೃತಿಯಲ್ಲಿಯೂ ಆಯಿ ಇರಬೇಕು. ಅದು ರಾಜ್ಯದ ಜನರಿಗೆ ಗೊತ್ತಾಗಬೇಕು. ಆಗ ಮಾತ್ರ ರಾಜ್ಯದ ಜನರು ಸುರಕ್ಷಿತ ಭಾವದಲ್ಲಿ ಇರಲು ಸಾಧ್ಯ. ಆದರೆ ಬಸವರಾಜ ಬೊಮ್ಮಾಯಿ ಅವರ ಆಯಿ ಭಾವ ಈಗ ಹೊರಜಗತ್ತಿಗೆ ಕಾಣುತ್ತಿಲ್ಲ. ಅವರು ಕಳೆದ ಕೆಲವು ತಿಂಗಳುಗಳಿಂದ ನಡೆದುಕೊಂಡ ರೀತಿ ಕೆಲವು ಪ್ರಜೆಗಳಿಗೆ ಮಲತಾಯಿ ಧೋರಣೆಯಂತೆ ಕಂಡರೆ ಅಚ್ಚರಿಯಿಲ್ಲ.

ಇತ್ತೀಚೆಗೆ ಶಿವಮೊಗ್ಗದಲ್ಲಿ ಹರ್ಷ ಎಂಬ ಬಜರಂಗದಳದ ಕಾರ್ಯಕರ್ತನ ಹತ್ಯೆ ನಡೆಯಿತು. ಈ ಹತ್ಯೆ ಖಂಡನಾರ್ಹ. ಹತ್ಯೆಗೆ ಕಾರಣರಾದವರನ್ನು ಕಠಿಣ ಶಿಕ್ಷೆಗೆ ಒಳಪಡಿಸಬೇಕು. ಹತ್ಯೆಯಾದ ವ್ಯಕ್ತಿಯ ಕುಟುಂಬಕ್ಕೆ ಸಾಂತ್ವನವನ್ನೂ ಹೇಳಬೇಕು. ನಾಗರಿಕ ವ್ಯಕ್ತಿಯ ಕರ್ತವ್ಯ ಅದು. ಆದರೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಹರ್ಷನ ಮನೆಗೆ ತೆರಳಿ, ಸರ್ಕಾರದ ವತಿಯಿಂದ ₹25 ಲಕ್ಷ ಪರಿಹಾರ ನೀಡುವುದಾಗಿ ಘೋಷಿಸಿದರು. ಅವರ ಮಾತನ್ನು ಈಗಿನ ಮುಖ್ಯಮಂತ್ರಿ ಚಾಚೂ ತಪ್ಪದೆ ಪಾಲಿಸಿದರು. ಕೋಮು ದ್ವೇಷಕ್ಕೆ ಬಲಿಯಾದ ವ್ಯಕ್ತಿಯ ಕುಟುಂಬಕ್ಕೆ ಹೀಗೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಪರಿಹಾರ ನೀಡುತ್ತಿರುವುದು ಇದೇ ಮೊದಲು. ಇದೊಂದು ಹೊಸ ಪದ್ಧತಿಗೆ ಮುಖ್ಯಮಂತ್ರಿ ನಾಂದಿ ಹಾಡಿದರು. ಆದರೆ, ಇದೇ ರೀತಿ ಹತ್ಯೆಗೊಳಗಾದ ಇತರ ಕೆಲವರ ಕುಟುಂಬಗಳಿಗೆ ಈ ಭಾಗ್ಯ ಸಿಗಲಿಲ್ಲ.

ಹರ್ಷ ಹತ್ಯೆಯ ನಂತರ ಶಿವಮೊಗ್ಗದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿತ್ತು. ರಾಜ್ಯದ ಪ್ರಭಾವಿ ಸಚಿವರಾದ ಕೆ.ಎಸ್.ಈಶ್ವರಪ್ಪ ಮತ್ತು ಲೋಕಸಭಾ ಸದಸ್ಯ ಬಿ.ವೈ. ರಾಘವೇಂದ್ರ ನೇತೃತ್ವದಲ್ಲಿ ಹರ್ಷ ಮೃತದೇಹದ ಮೆರವಣಿಗೆ ನಡೆಸಲಾಯಿತು. ಈ ಸಂದರ್ಭದಲ್ಲಿ ಹಿಂಸಾಚಾರ ಕೂಡ ನಡೆಯಿತು. ಕಲ್ಲು ತೂರಾಟ, ಮನೆಗಳ ಲೂಟಿ, ಬೆಂಕಿ ಹಚ್ಚುವುದು ಮುಂತಾದ ಕಾನೂನುಬಾಹಿರ ಚಟುವಟಿಕೆಗಳು ನಡೆದವು. ಇದಕ್ಕೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳುವಲ್ಲಿ ರಾಜ್ಯ ಸರ್ಕಾರ ಸೋತುಹೋಯಿತು.

ಹರ್ಷ ಹತ್ಯೆಯ ನಂತರ ಸಚಿವ ಈಶ್ವರಪ್ಪ ಸಹಿತ ಸರ್ಕಾರದ ಭಾಗವಾಗಿದ್ದವರೇ ಕೋಮು ದ್ವೇಷದ ಮಾತನ್ನು ಆಡಿದರು. ಅದನ್ನು ತಡೆಯುವ ಪ್ರಯತ್ನ-ವನ್ನೂ ಮುಖ್ಯಮಂತ್ರಿ ಮಾಡಲಿಲ್ಲ. ಸರ್ಕಾರದಿಂದ ಹೊರಗಿದ್ದವರು ಕಡಿಯುವ, ಕೊಲ್ಲುವ ಮಾತನ್ನು ಆಡಿದರು. ಇದ್ಯಾವುದಕ್ಕೂ ಸೂಕ್ತ ಪ್ರತಿಕ್ರಿಯೆ ಬೊಮ್ಮಾಯಿ ಅವರಿಂದ ಬರಲಿಲ್ಲ. ರಾಜ್ಯದಲ್ಲಿ ಕೋವಿಡ್ ಮೊದಲ ಅಲೆ ಹರಡುತ್ತಿದ್ದ ಕಾಲದಲ್ಲಿ ತಬ್ಲಿಗ್ ಸಂಘಟನೆಗೆ ಸೇರಿದವರೇ ಕೋವಿಡ್ ಹರಡಲು ಕಾರಣ ಎಂದು ಹುಯಿಲೆಬ್ಬಿಸಲಾಗಿತ್ತು. ಆ ಸಂದರ್ಭದಲ್ಲಿ ಆಗಿನ ಮುಖ್ಯಮಂತ್ರಿ, ಆರ್‌ಎಸ್‌ಎಸ್ ಮೂಲದವರಾದ ಬಿ.ಎಸ್.ಯಡಿಯೂರಪ್ಪ ಅವರು 'ಕೋವಿಡ್ ಹರಡಲು ತಬ್ಲಿಗ್ ಸಂಘಟನೆಯೇ ಕಾರಣ ಎಂದು ಹೇಳಬಾರದು. ಯಾರೂ ಈ ರೀತಿಯ ವದಂತಿ ಹರಡಬಾರದು' ಎಂದು ಸ್ಪಷ್ಟ ಮಾತುಗಳಲ್ಲಿ ಹೇಳಿ ತಮ್ಮವರನ್ನು ಸುಮ್ಮನಿರಿಸಿದ್ದರು. ಸಂಘ ಪರಿವಾರ ಮೂಲದ ಯಡಿಯೂರಪ್ಪ ಅವರು ತೋರಿದ ಧೈರ್ಯವನ್ನು ಸಮಾಜವಾದ ಮೂಲದ ಬೊಮ್ಮಾಯಿ ಈಗ ತೋರಲಿಲ್ಲ. ಬೊಮ್ಮಾಯಿ ಈಗ ಖಡಕ್ ಮಾತುಗಳನ್ನು ಆಡಿದ್ದರೂ ಅವರ ಹುದ್ದೆಗೆ ಕುತ್ತು ಬರುತ್ತಿರಲಿಲ್ಲ. ಯಾಕೆಂದರೆ ಅವರನ್ನು ಇಳಿಸಿ ಹೊಸಬರನ್ನು ತರುವ ಉತ್ಸಾಹವನ್ನು ಬಿಜೆಪಿ ಹೈಕಮಾಂಡ್ ತೋರುತ್ತಿರಲಿಲ್ಲ. ಹಿಂದಿನ ಅನುಭವದಿಂದ ಕಲಿತ ಪಾಠ ಬಿಜೆಪಿ ಹೈಕಮಾಂಡ್ ಮುಂದೆ ಇದೆ.


ಈಗ ರಾಜ್ಯದಲ್ಲಿ ಮುಸ್ಲಿಮರ ಬಗ್ಗೆ ದ್ವೇಷ ವ್ಯಾಪಕವಾಗಿದೆ. ಹಿಂದೂ ಜಾತ್ರೆಗಳಲ್ಲಿ ಮುಸ್ಲಿಂ ವರ್ತಕರಿಗೆ ವ್ಯಾಪಾರ ನಡೆಸಲು ಅವಕಾಶ ನೀಡಬಾರದು ಎನ್ನುವ ಒತ್ತಾಯ ದಕ್ಷಿಣ ಕನ್ನಡ, ಉಡುಪಿಯಿಂದ ಆರಂಭವಾಗಿ ಇಡೀ ರಾಜ್ಯವನ್ನು ವ್ಯಾಪಿಸಿದೆ. ಸಾಂವಿಧಾನಿಕ ಹುದ್ದೆಯಲ್ಲಿರುವ ಮುಖ್ಯಮಂತ್ರಿ ಅದನ್ನಾದರೂ ತಡೆಯಬಹುದಾಗಿತ್ತು. ಜಾತ್ರೆಗಳಲ್ಲಿ ವ್ಯಾಪಾರ ಮಾಡುವ ಮುಸ್ಲಿಂ ವರ್ತಕರು ಕೋಟ್ಯಧಿಪತಿಗಳೇನಲ್ಲ. ಬಡ ವ್ಯಾಪಾರಿಗಳ ವ್ಯಾಪಾರಕ್ಕೂ ಕುತ್ತು ತರುವ ವಿದ್ಯಮಾನ ನಡೆಯುತ್ತಿದ್ದಾಗ ದೊಡ್ಡ ದನಿಯಲ್ಲಿಯೇ ಅದನ್ನು ಖಂಡಿಸಿ ಸ್ವಪಕ್ಷೀಯರ ಬಾಯಿ ಮುಚ್ಚಿಸಬೇಕಿತ್ತು. ವಿಧಾನಮಂಡಲದಲ್ಲಿ ಇದು ಪ್ರಸ್ತಾಪವಾದಾಗ ಕಾನೂನು ಮಂತ್ರಿಗಳು 'ಇದು ಕಾಂಗ್ರೆಸ್ ಸರ್ಕಾರ ಜಾರಿಗೆ ತಂದ ನಿಯಮಾವಳಿ' ಎಂದು ಅರ್ಧ ಸತ್ಯವನ್ನು ಹೇಳಿದಾಗಲಾದರೂ ಮುಖ್ಯಮಂತ್ರಿ ಮಧ್ಯಪ್ರವೇಶಿಸಿ ಪೂರ್ಣ ಸತ್ಯವನ್ನು ಹೇಳಬೇಕಾಗಿತ್ತು. ಅಲ್ಲದೆ ಮುಸ್ಲಿಂ ವ್ಯಾಪಾರಿಗಳಿಗೆ ಅಡ್ಡಿ ಮಾಡುವುದು ತರವಲ್ಲ ಎಂದು ಕಟ್ಟುನಿಟ್ಟಾಗಿ ಸೂಚಿಸಬೇಕಿತ್ತು. 'ಜಾತ್ರೆ ಸಂದರ್ಭದಲ್ಲಿ ವ್ಯಾಪಾರಕ್ಕೆ ಯಾರಿಗೆ ಅವಕಾಶ ನೀಡಬೇಕು ಎನ್ನುವುದು ಸ್ಥಳೀಯ ಆಡಳಿತ ಮಂಡಳಿಗೆ ಸಂಬಂಧಿಸಿದ್ದು. ಅದರಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಲಾಗದು' ಎಂದು ಕಾನೂನು ಸಚಿವರು ಹೇಳಿದಾಗಲಾದರೂ 'ಇಲ್ಲ, ಹೀಗೆ ಸರ್ಕಾರ ಸುಮ್ಮನಿರಲಾಗದು' ಎಂದು ಹೇಳಬಹುದಾಗಿದ್ದರೂ ಬೊಮ್ಮಾಯಿ ಬಾಯಿ ಬಿಡಬೇಕಿತ್ತು. ಆಗಲೂ ಅವರು ಹಾಗೆ ಮಾಡಲಿಲ್ಲ.

'ದಿ ಕಾಶ್ಮೀರ್ ಫೈಲ್ಸ್' ಚಲನಚಿತ್ರಕ್ಕೆ ರಾಜ್ಯದಲ್ಲಿ ತೆರಿಗೆ ವಿನಾಯಿತಿ ನೀಡಲಾಯಿತು. ಸರ್ಕಾರವೇ ಮುಂದೆ ನಿಂತು ಜನರಿಗೆ ಈ ಸಿನಿಮಾ ಪ್ರದರ್ಶಿಸಿತು. ಬಿಜೆಪಿ ಕೂಡ ಉಚಿತ ಪ್ರದರ್ಶನವನ್ನು ಏರ್ಪಡಿಸಿತು. ಬಿಜೆಪಿ ಶಾಸಕರು ತಮ್ಮ ಕ್ಷೇತ್ರಗಳಲ್ಲಿ ಉತ್ಸಾಹದಿಂದ ಉಚಿತವಾಗಿಯೇ ತಮ್ಮ ಮತದಾರರಿಗೆ ಈ ಚಿತ್ರದ ಪ್ರದರ್ಶನಕ್ಕೆ ಏರ್ಪಾಟು ಮಾಡಿದರು. ಆದರೆ ಇಂತಹ ಭಾಗ್ಯ 'ಜೈ ಭೀಮ್' ಚಿತ್ರಕ್ಕೆ ಲಭ್ಯವಾಗಲಿಲ್ಲ.


ಉಡುಪಿಯಲ್ಲಿ ಆರಂಭವಾದ ಹಿಜಾಬ್ ವಿವಾದ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳೆಯಿತು. ಉಗುರಿನಲ್ಲಿ ಹೋಗುವುದಕ್ಕೆ ಕೊಡಲಿಯನ್ನು ತೆಗೆದುಕೊಂಡಿದ್ದರಿಂದ ಅದೊಂದು ಭಾರಿ ಸಂಘರ್ಷಕ್ಕೆ ಕಾರಣವಾಯಿತು. ಇದು ಉಡುಪಿ ಜಿಲ್ಲೆಯಿಂದ ಹೊರಕ್ಕೆ ಹಬ್ಬದಂತೆ ತಡೆಯಲು ಸಾಧ್ಯವಿತ್ತು. ಕೋರ್ಟ್ ಮೆಟ್ಟಿಲು ಏರದಂತೆ ನೋಡಿಕೊಳ್ಳಬಹುದಾಗಿತ್ತು. ತಾಯಿ ಹೃದಯದಿಂದ ಸಮಸ್ಯೆಯನ್ನು ಆಲಿಸಿದ್ದರೆ ಖಂಡಿತ ಪರಿಹಾರ ಸಿಗುತ್ತಿತ್ತು. ಆದರೆ ಅಂತಹ ಪ್ರಯತ್ನವೇ ನಡೆಯಲಿಲ್ಲ. ಈಗಲೂ ಸರ್ಕಾರ ಈ ವಿಷಯದಲ್ಲಿ ದ್ವಂದ್ವ ನಿಲುವನ್ನೇ ಅನುಸರಿಸುತ್ತಿದೆ. ಹಿಜಾಬ್ ಕುರಿತಂತೆ ಹೈಕೋರ್ಟ್ ಮಧ್ಯಂತರ ಆದೇಶ ನೀಡಿದ ನಂತರವೂ ಶಿಕ್ಷಣ ಇಲಾಖೆಯ ಎಡವಟ್ಟಿನಿಂದ, ಎಲ್ಲಿ ಅದನ್ನು ಜಾರಿ ಮಾಡಬೇಕು ಎಲ್ಲಿ ಜಾರಿ ಮಾಡಬಾರದು ಎಂಬ ಗೊಂದಲ ಮುಂದುವರಿದಿದೆ. ಮುಸ್ಲಿಂ ಹೆಣ್ಣು ಮಕ್ಕಳ ಶಿಕ್ಷಣದ ದೃಷ್ಟಿಯಿಂದ ಈ ವಿವಾದವನ್ನು ನೋಡದೆ ಕೇವಲ ಹಟಮಾರಿತನದಿಂದ ನೋಡಿದ್ದೇ ಎಲ್ಲ ಸಂಕಟಗಳಿಗೆ ಕಾರಣವಾಯಿತು.

ದಕ್ಷಿಣ ಕನ್ನಡ, ಉಡುಪಿ ಮತ್ತು ರಾಜ್ಯದ ಇತರ ಭಾಗಗಳಲ್ಲಿ ಮತೀಯ ಗೂಂಡಾಗಿರಿ ನಡೆದಾಗ ಅದನ್ನು ಹತೋಟಿಗೆ ತರುವುದನ್ನು ಬಿಟ್ಟು ನಮ್ಮ ಮುಖ್ಯಮಂತ್ರಿಗಳು 'ಕ್ರಿಯೆಗೆ ತಕ್ಕ ಪ್ರತಿಕ್ರಿಯೆ ನಡೆಯುತ್ತಿದೆ' ಎಂಬ ಆಣಿಮುತ್ತು ಉದುರಿಸಿದ್ದೇ ಇಷ್ಟೆಲ್ಲಾ ರಾದ್ಧಾಂತಕ್ಕೆ ಕಾರಣವಾಗಿ ಹೋಯಿತು. ಸಂವಿಧಾನಬದ್ಧವಾಗಿ ಪ್ರಮಾಣವಚನ ಸ್ವೀಕರಿಸಿದ ಮುಖ್ಯಮಂತ್ರಿಯೊಬ್ಬರಿಗೆ ರಾಜ್ಯದ ಎಲ್ಲ ಪ್ರಜೆಗಳೂ ಒಂದೇ ಆಗಿರಬೇಕು. ಅವರು ಹೆಚ್ಚು ಇವರು ಕಡಿಮೆ ಎಂಬ ತಾರತಮ್ಯ ಇರಬಾರದು. ಈ ರೀತಿಯ ತಾರತಮ್ಯ ಮತವನ್ನು ತರಬಹುದು, ಆದರೆ ರಾಜ್ಯಕ್ಕೆ ಹಿತವನ್ನಂತೂ ಖಂಡಿತವಾಗಿಯೂ ತರಲಾರದು. ಈಗಿರುವ ಮುಖ್ಯಮಂತ್ರಿ ಹಿಂದುತ್ವದ ಪರವಾಗಿರುವ ಹಿಂದೂಗಳಿಗೆ ಮಾತ್ರ ಮುಖ್ಯಮಂತ್ರಿ ಆಗಿರಬಹುದೇ ಎಂಬ ಅನುಮಾನ ಯಾರಿಗಾದರೂ ಬಂದಿದ್ದರೆ ಅದನ್ನು ತಪ್ಪು ಎಂದು ಹೇಳಲು ಸಾಧ್ಯವಿಲ್ಲ.

ಹೆಸರಿನಲ್ಲಿ ಆಯಿಯನ್ನು ಅಡಗಿಸಿಟ್ಟುಕೊಂಡಿರುವ ಬೊಮ್ ಆಯಿ ಇನ್ನಾದರೂ ತಮ್ಮ ಒಡಲಿನಿಂದ ಆಯಿಯನ್ನು ಹೊರಕ್ಕೆ ತೆಗೆಯಬೇಕು. ಮಾತೃ ಹೃದಯದ ವಾತ್ಸಲ್ಯ ಎಲ್ಲ ಮತದಾರರಿಗೂ ದಕ್ಕುವಂತಾಗಬೇಕು. ಇಲ್ಲವಾದರೆ ಅವರು ಪಕ್ಷದಲ್ಲಿ ಗಟ್ಟಿಯಾಗಬಹುದು, ಅವರ ಕುರ್ಚಿಯೂ ಭದ್ರವಾಗಬಹುದು. ಆದರೆ ರಾಜ್ಯದ ಸೌಹಾರ್ದ ಪರಂಪರೆ ಸಡಿಲವಾಗುತ್ತದೆ. ಪ್ರತಿದಿನ ನಾವು ಹಾಡುವ ನಾಡಗೀತೆಯಲ್ಲಿ ಬರುವ 'ಸರ್ವಜನಾಂಗದ ಶಾಂತಿಯ ತೋಟ' ಎಂಬ ಸಾಲುಗಳು ನಮ್ಮನ್ನೇ ಅಣಕಿಸುತ್ತವೆ.



ಚುರುಮುರಿ



ಮೈಕ್ ಪ್ರಜ್ಞೆ

• ಮಣ್ಣೆರಾಜು

'ನೀವು ಉದ್ದಾಮ ಪಂಡಿತರೇ ಇರಬಹುದು, ವೇದಿಕೆ ಮೇಲೆ ಭಾಷಣ ಮಾಡುವಾಗ ಆಡುವ ಮಾತಿನ ಮೇಲೆ ನಿಗಾ ಇರಲಿ...' ಮೂರ್ಖರ ದಿನಾಚರಣೆಯ ಹಾಸ್ಯೋತ್ಸವ ಭಾಷಣಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದ ಗಂಡನಿಗೆ ಸುಮಿ ಹೇಳಿದಳು.

'ನಗೆರಂಜನೆಗಳಿಲ್ಲದೆ ಬರಗೆಟ್ಟಿರುವ ಜನ ಹಾಸ್ಯ ಕಾರ್ಯಕ್ರಮಗಳಿಗೆ ಹಲ್ಲು ಉಜ್ಜಿಕೊಂಡು, ಮನಸು ಬಿಚ್ಚಿಕೊಂಡು ನಗಲು ಸಿದ್ಧರಾಗೇ ಬರ್ತಾರೆ, ಸಣ್ಣ ಜೋಕಿಗೂ ದೊಡ್ಡದಾಗಿ ನಕ್ಕು ಆನಂದಿಸುತ್ತಾರೆ' ಎಂದ ಶಂಕ್ರಿ.

'ಓವರ್ ಕಾನ್ಫಿಡೆನ್ಸ್ ಬೇಡ, ಜನ ಈಗ ನಗುವ ಪರಿಸ್ಥಿತಿಯಲ್ಲಿಲ್ಲ, ಈಗ ನಕ್ಕರೆ ಕಾಯಿಲೆಯವರೇ ಜಾಸ್ತಿ. ಸಾಧಾರಣ ಜೋಕಿಗೆ ಹಲ್ಲು ಬಿಡುವುದಿಲ್ಲ. ಪ್ರೇಕ್ಷಕರ ಮನಃಸ್ಥಿತಿ, ಪರಿಸ್ಥಿತಿಗೆ ತಕ್ಕಂತಹ ಜೋಕ್ ಹೇಳಿ. ನಗೆಪಾಠ ಹೇಳಲು ಬಂದ ಎಷ್ಟೋ ಜನ ನಗೆಪಾಟಲಿಗೀಡಾಗಿದ್ದಾರೆ'.

'ಆತಂಕ ಪಡಬೇಡ, ನನ್ನಲ್ಲಿ ಲೋಡುಗಟ್ಟಲೆ ನಗೆ ಬಾಂಬು, ಹಾಸ್ಯ ಚಟಾಕಿ ಸ್ಟಾಕ್ ಇವೆ. ವೇದಿಕೆ ಮೇಲೆ ಒಂದೊಂದನ್ನೇ ಸಿಡಿಸಿದರೆ ಪ್ರೇಕ್ಷಕರು ಹೊಟ್ಟೆ ಹುಣ್ಣಾಗುವಂತೆ ನಕ್ಕು ನರಳುತ್ತಾರೆ. ಬಹಳಷ್ಟು ಕಾರ್ಯಕ್ರಮಗಳಲ್ಲಿ ಜನರನ್ನು ನಗಿಸಿ ಪ್ರಸಿದ್ಧನಾಗಿದ್ದೇನೆ. ನಗೆ ಅಭಿಮಾನಿಗಳು ನನಗೆ ನಗ್ಸಲಿಯ ಪ್ರಶಸ್ತಿ ನೀಡಿದ್ದಾರೆ' ಶಂಕ್ರಿ ಬೀಗಿದ.

'ಭಾಷಣಕಾರರಿಗೆ ಹಾಸ್ಯ ಪ್ರಜ್ಞೆ ಜೊತೆಗೆ ಮೈಮೇಲೆ ಪ್ರಜ್ಞೆ, ಮೈಕ್ ಪ್ರಜ್ಞೆಯೂ ಇರಬೇಕು. ಭಾಷಣವನ್ನು ಪ್ರೇಕ್ಷಕರು ಕೇಳುತ್ತಿದ್ದಾರೆ, ಆ ಭಾಷಣ ಟೀವಿ, ಪತ್ರಿಕೆಗಳಲ್ಲಿ ಸುದ್ದಿಯಾಗುತ್ತದೆ ಎಂಬ ಅರಿವೂ ಇರಬೇಕು. ಹೋದ ವಾರದ ಕಾರ್ಯಕ್ರಮದಲ್ಲಿ ನೀವು ನಾಲಿಗೆ ಚಟಕ್ಕೋ ಪ್ರಾಸದ ಹಟಕ್ಕೋ ಮಾತು ಹರಿಯಬಿಟ್ಟು ಮಾಡಿಕೊಂಡ ಯಡವಟ್ಟು ಸಾಮಾಜಿಕ ಜಾಲತಾಣದಲ್ಲಿ ಇವತ್ತಿಗೂ ಮಾನ ಕಳೆಯುತ್ತಲೇ ಇದೆ...'

ಶಂಕ್ರಿ ಗಾಬರಿಯಾದ.

'ಮಾತು ಮಾರಕವಾದಾಗ ತಕ್ಷಣ ಎಚ್ಚೆತ್ತುಕೊಂಡು, 'ಏಪ್ರಿಲ್ ಫೂಲ್...' ಅಂದುಬಿಡಿ, ಜನ ಸಿಂಪಥಿ ನಗೆ ನಕ್ಕು ಸಹಿಸಿಕೊಳ್ತಾರೆ...' ಎಂದು ಸಲಹೆ ಕೊಟ್ಟಳು ಸುಮಿ!

ದಿನದ ಟ್ವೀಟ್

ಸಾಮರ್ಥ್ಯಕ್ಕೆ ಮನ್ನಣೆ



'ಶಾಸನಸಭೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ವೃತ್ತಿಪರರನ್ನು ಕರೆತನ್ನಿ. ಪಂಜಾಬ್‌ನಲ್ಲಿ ಹಲವಾರು ವೈದ್ಯರು ಗೆದ್ದು ಬಂದಿರುವುದು ಸಂತಸದಾಯಕ ಸಂಗತಿ' ಎಂಬ ಮಾತನ್ನು ಕಳೆದ ಎರಡು ವಾರಗಳಲ್ಲಿ ನಾನು ಹಲವು ಬಾರಿ ಕೇಳಿದ್ದೇನೆ. ತಮ್ಮನ್ನು ಪ್ರತಿನಿಧಿಸುವ ನಾಯಕತ್ವದ ಗುಣಮಟ್ಟ ಸುಧಾರಿಸಿದಾಗ ಜನ ಅದನ್ನು ಗೌರವಿಸುತ್ತಾರೆ. ಸುಲಭವಾಗಿ ಮರೆಯುವಂತಹ ನೇತಾರರನ್ನೇ ಹಲವು ವರ್ಷಗಳಿಂದ ಕಂಡ ಬಳಿಕ, ಸಾಮರ್ಥ್ಯಕ್ಕೆ ಮನ್ನಣೆ ದೊರೆಯಲಾರಂಭಿಸಿರುವುದು ಅತ್ಯಂತ ಸಮಾಧಾನಕರ ಸಂಗತಿಯಾಗಿದೆ.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

ಕಿಡಿನುಡಿ



ಒಂದು ಕಡೆ ಕಾಂಗ್ರೆಸ್‌ಮುಕ್ತ ಭಾರತ ಮಾಡ್ತೀವಿ ಅಂತ ಹೇಳೋದು, ಇನ್ನೊಂದು ಕಡೆಯಿಂದ ಕಾಂಗ್ರೆಸ್ ಬಲಗೊಳ್ಳಬೇಕು ಅನ್ನೋದು. ಕೇಂದ್ರೀಕರಣ ಮತ್ತು ರಾಜ್ಯಗಳ ಅಧಿಕಾರ ಕಿತ್ತುಕೊಳ್ಳೋ ತರಹದ ಜನವಿರೋಧಿ ಕೆಲಸದಲ್ಲಿ ಬಿಜೆಪಿ, ಕಾಂಗ್ರೆಸ್ ಈ ಎರಡೂ ಪಕ್ಷಗಳು ಒಂದೇ ಅನ್ನೋದನ್ನು ಸಾಮಾನ್ಯ ಜನರು ಅರಿತುಕೊಳ್ಳಬೇಕಿದೆ.

ಅರುಣ್ ಜಾವಗಲ್, ಕನ್ನಡಪರ ಕಾರ್ಯಕರ್ತ

25 ವರ್ಷಗಳ ಹಿಂದೆ

ಭಾನುವಾರ, 30-3-1997

• ಉಭಯ ದೇಶಗಳ ಬಿಗಿ ಪಟ್ಟು ಕಗ್ಗಂಟಾದ ಕಾಶ್ಮೀರ ಸಮಸ್ಯೆ

ನವದೆಹಲಿ, ಮಾ. 29 (ಪಿಟಿಐ)– ಜಮ್ಮು ಮತ್ತು ಕಾಶ್ಮೀರ ವಿಷಯಕ್ಕೆ ಸಂಬಂಧಿಸಿದಂತೆ ಭಾರತ ಮತ್ತು ಪಾಕಿಸ್ತಾನ ಎರಡೂ ದೇಶಗಳು ತಮ್ಮ ನಿಲುವಿಗೇ ಪಟ್ಟು ಹಿಡಿದಿರುವ ಕಾರಣ, ನಿನ್ನೆಯಿಂದ ಇಲ್ಲಿ ಆರಂಭವಾಗಿರುವ ಎರಡೂ ರಾಷ್ಟ್ರಗಳ ವಿದೇಶಾಂಗ ಕಾರ್ಯದರ್ಶಿಗಳ ಮಟ್ಟದ ಮಾತುಕತೆಯು 2ನೇ ದಿನವಾದ ಇಂದು ತೀವ್ರ ಸ್ವರೂಪ ಪಡೆದುಕೊಂಡಿದೆ.

ಆದರೆ, ಸುಮಾರು ಎರಡು ಗಂಟೆಗಳ ಕಾಲ ನಿನ್ನೆ ನಡೆದ ಸಭೆಯಲ್ಲಿ ಕಾಶ್ಮೀರ ವಿಷಯಕ್ಕೆ ಸಂಬಂಧಿಸಿದಂತೆ ಯಾರೂ ತಮ್ಮ ಪಟ್ಟು ಬಿಟ್ಟುಕೊಡಲು ಸಿದ್ಧರಿಲ್ಲದಿದ್ದರೂ ಮಾತುಕತೆ ಮುಂದುವರಿಸಲು ನಿರ್ಧರಿಸಲಾಯಿತು.

• ಪ್ರಧಾನಿ– ಮಾಯಾವತಿ ಮಾತುಕತೆ

ನವದೆಹಲಿ, ಮಾ. 29 (ಪಿಟಿಐ)– ಉತ್ತರ ಪ್ರದೇಶದ ನೂತನ ಮುಖ್ಯಮಂತ್ರಿ ಮಾಯಾವತಿ ಅವರು ಅಧಿಕಾರ ವಹಿಸಿಕೊಂಡ ಬಳಿಕ ಮೊದಲ ಬಾರಿಗೆ ಇಂದು ಪ್ರಧಾನಿ ಎಚ್.ಡಿ. ದೇವೇಗೌಡ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

50 ವರ್ಷಗಳ ಹಿಂದೆ

ಗುರುವಾರ, 30-3-1972

• ಪಕ್ಷಾಂತರ ತಡೆಗೆ ಶಾಸನ ತರಲು ಆಲೋಚನೆ: ಪಂತ್

ನವದೆಹಲಿ, ಮಾ. 29– ಪಕ್ಷಾಂತರವನ್ನು ತಪ್ಪಿಸುವುದಕ್ಕಾಗಿ ಸಂಸತ್ ಮುಂದೆ ಶಾಸನವೊಂದನ್ನು ತರಲು ಸರ್ಕಾರ ಆಲೋಚಿಸುತ್ತಿದೆ ಎಂದು ಕೇಂದ್ರ ಗೃಹ ಖಾತೆ ಸ್ಟೇಟ್ ಸಚಿವ ಕೆ.ಸಿ. ಪಂತ್ ಅವರು ಇಂದು ಲೋಕಸಭೆಗೆ ತಿಳಿಸಿದರು.

ನಹಾರ್ ಲಾಸ್ಕರ್ ಅವರಿಗೆ ಉತ್ತರ ಕೊಡುತ್ತಿದ್ದ ಪಂತ್ ಅವರು 'ಪಕ್ಷಾಂತರ ತಡೆ ಕುರಿತು ಸಮಿತಿಯ ಶಿಫಾರಸಿನ ಆಧಾರದ ಮೇಲೆ ರೂಪಿಸಿದ ಈ ಶಾಸನ ಸಲಹೆ ಕುರಿತು ಪ್ರಧಾನಿ ಕಳೆದ ವರ್ಷದ ಡಿಸೆಂಬರ್‌ನಲ್ಲಿ ರಾಜಕೀಯ ಪಕ್ಷಗಳ ನಾಯಕರ ಜತೆ ಚರ್ಚಿಸಿದರು. ಈ ಚರ್ಚೆ ಅಪೂರ್ಣವಾ-ದ್ದರಿಂದ ಚರ್ಚೆಯಲ್ಲಿ ಎತ್ತಲಾದ ನಾನಾ ಅಂಶಗಳ ಬಗ್ಗೆ ಪ್ರಧಾನಿ ವಿವರಣೆ ನೀಡಿ ಈ ನಾಯಕರಿಗೆ ಪತ್ರ ಬರೆದು ಅವರ ಪ್ರತಿಕ್ರಿಯೆ ಕೇಳಿದರು. ಕೆಲವು ನಾಯಕರುಗಳಿಂದ ಇನ್ನೂ ಉತ್ತರ ಬಂದಿಲ್ಲ' ಎಂದರು.

• ಕಾಶ್ಮೀರದ ಜನರು ಸ್ವಯಂ ನಿರ್ಣಯಾಧಿಕಾರದ ಹಕ್ಕು ಕೇಳುವ ಪ್ರಶ್ನೆಯೇ ಇಲ್ಲ: ಪ್ರಧಾನಿ

ನವದೆಹಲಿ, ಮಾ. 29– ಜಮ್ಮು ಕಾಶ್ಮೀರ ರಾಜ್ಯದ ಜನರು ಯಾವುದೇ ಸ್ವಯಂ ನಿರ್ಣಯಾಧಿಕಾರದ ಹಕ್ಕು ಕೇಳುವ ಪ್ರಶ್ನೆಯೇ ಇಲ್ಲ ಎಂದು ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ಹೇಳಿದರು.

'ಸಮಕಾಲೀನ ಜಗತ್ತಿನಲ್ಲಿ ಸಾಮಾಜಿಕ ಪರಿವರ್ತನೆ, ಸ್ವಾತಂತ್ರ್ಯ ಮತ್ತು ಸಾಮ್ರಾಜ್ಯಶಾಹಿ' ಕುರಿತ ಅಂತರರಾಷ್ಟ್ರೀಯ ವಿಚಾರಗೋಷ್ಠಿಯಲ್ಲಿ ಭಾಗವಹಿಸಿರುವ ವಿದೇಶಿ ಪ್ರತಿನಿಧಿಯೊಬ್ಬರಿಗೆ ಉತ್ತರ ಕೊಡುತ್ತಿದ್ದ ಪ್ರಧಾನಿ ಅವರು, 'ಭಾರತದ ಅವಿಭಾಜ್ಯ ಭಾಗವಾಗಿರುವ ಜಮ್ಮು–ಕಾಶ್ಮೀರದ ಜನರು ರಾಷ್ಟ್ರದ ಜೀವನ ಹಾಗೂ ಆಶೋತ್ತರಗಳಲ್ಲಿ ಪಾಲ್ಗೊಂಡಿದ್ದಾರೆ. ತಪ್ಪು ದಾರಿಗೆಳೆಯಲ್ಪಟ್ಟಿರುವ, ತೀರಾ ಅತ್ಯಲ್ಪ ಜನರು ಮಾತ್ರ ಸ್ವಯಂ ನಿರ್ಣಯಾಧಿಕಾರದ ಹಕ್ಕು ಕೇಳಿದ್ದಾರೆ' ಎಂದರು.

ಸಂಗತ

ಅಂತರವಿರಲಿ... ಅದು ಅಂತರಂಗದ ಸಂಗತಿ!

ಅಧ್ಯಾತ್ಮ ಎನ್ನುವುದು ಸಾವಿರಾರು ಜನರ ನಡುವೆ ಕುಳಿತು ಸಾಧಿಸುವ ಸಾಧನೆಯಲ್ಲ

• ರಾಜಕುಮಾರ ಕುಲಕರ್ಣಿ


ಬೆಳಗಿನ ವಾಕಿಂಗ್ ಮುಗಿಸಿ ಮನೆಗೆ ಮರಳುತ್ತಿರು-ವಾಗ ನನ್ನೆದುರು ನಡೆದುಕೊಂಡು ಹೋಗುತ್ತಿದ್ದ ಮಹನೀಯರಿಬ್ಬರು ಗಹನವಾದ ಮಾತುಕತೆಯಲ್ಲಿ ತೊಡಗಿಕೊಂಡಿದ್ದರು. ಅವರ ಇಡೀ ಮಾತಿನುದ್ದಕ್ಕೂ ಬೇರೆ ವ್ಯಕ್ತಿಯ ಕುರಿತು ಅಸಹನೆ, ದ್ವೇಷ, ಸಿಟ್ಟು, ಭರ್ತ್ಸನೆ ವ್ಯಕ್ತವಾಗುತ್ತಿದ್ದವು. ತಮ್ಮ ಕೋಪಕ್ಕೆ ಕಾರಣನಾದ ವ್ಯಕ್ತಿಯನ್ನು ಅಪಮಾನಗೊಳಿಸಲು ಸೂಕ್ತ ಸಂದರ್ಭಕ್ಕಾಗಿ ಅವರು ಕಾಯುತ್ತಿದ್ದದ್ದು ಅವರಿಬ್ಬರ ಸಂಭಾಷಣೆಯಿಂದ ಅರ್ಥವಾಗುತ್ತಿತ್ತು. ಅವರಿಬ್ಬರೂ ಅದೇ ಆಗ ಅಧ್ಯಾತ್ಮದ ಪ್ರವಚನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮರಳಿ ಬರುತ್ತಿರುವರೆಂದು ಮಾತಿನ ನಡುವೆ ಗೊತ್ತಾಯಿತು. ಕೆಲವು ಕ್ಷಣಗಳ ಹಿಂದಷ್ಟೇ ಅಧ್ಯಾತ್ಮದ ವಿಚಾರಗಳನ್ನು ಆಲಿಸಿದವರು ಎಷ್ಟು ಬೇಗ ಲೌಕಿಕ ಬದುಕಿನ ತಾಮಸ ಗುಣಗಳಿಗೆ ಮರಳಿದರೆಂದು ನನಗೆ ದುಃಖವಾಯಿತು.

ನನ್ನ ಸ್ನೇಹಿತನ ಊರಿನಲ್ಲಿ ಅಧ್ಯಾತ್ಮ ಪ್ರಸಾರ ಮಂಡಳಿಯೊಂದು ಇತ್ತೀಚೆಗೆ ಹತ್ತು ದಿನಗಳ ಅಧ್ಯಾತ್ಮ ತರಬೇತಿ ಕಾರ್ಯಕ್ರಮ ಆಯೋಜಿಸಿತ್ತು. ಊರ ಮಧ್ಯದ ವಿಶಾಲವಾದ ಶಾಲಾ ಮೈದಾನದಲ್ಲಿ ಬೃಹತ್ ಸಭಾಂಗಣವನ್ನು ನಿರ್ಮಿಸಿ, ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಸಾರ್ವಜನಿಕರಿಗೆ ಉಚಿತ ಅಧ್ಯಾತ್ಮ ತರಬೇತಿ ನೀಡಲಾಯಿತು. ದಿನದ ತರಬೇತಿಯ ಕೊನೆಯಲ್ಲಿ ಸಭಾಂಗಣದ ಪ್ರವೇಶದ್ವಾರದ ಹತ್ತಿರದ ಮಳಿಗೆಯಲ್ಲಿ ಜನರು ಅಧ್ಯಾತ್ಮ ಸಂಬಂಧಿತ ಪುಸ್ತಕಗಳು ಮತ್ತು ಸಿ.ಡಿ.ಗಳನ್ನು ಮುಗಿಬಿದ್ದು ಖರೀದಿಸಿದರು. ಜೊತೆಗೆ ಮಾರಾಟಕ್ಕಿಟ್ಟಿದ್ದ ತರಹೇವಾರಿ ತಿಂಡಿಗಳನ್ನು ಸವಿದರು. ಸಾರ್ವಜನಿಕರು ಈ ತರಬೇತಿ ಕಾರ್ಯ-ಕ್ರಮದಿಂದ ಅಧ್ಯಾತ್ಮವನ್ನು ಅದೆಷ್ಟು ಪ್ರಮಾಣದಲ್ಲಿ ಮೈಗೂಡಿಸಿಕೊಂಡರು ಎಂಬುದಕ್ಕಿಂತ ಆಯೋಜಕರು ಮಾತ್ರ ನಿವ್ವಳ ಲಾಭದೊಂದಿಗೆ ಮುಂದಿನ ಊರಿಗೆ ಪ್ರಯಾಣ ಬೆಳೆಸಿದರು ಎನ್ನುವುದು ಚರ್ಚೆಯ ಸಂಗತಿಯಾಗಿತ್ತು.

ಇಂದು ಅಧ್ಯಾತ್ಮ ಮತ್ತು ಯೋಗಕ್ಕೆ ಮಾರುಕಟ್ಟೆಯ ಮೌಲ್ಯ ಪ್ರಾಪ್ತವಾಗಿದೆ. ಒಂದರ್ಥದಲ್ಲಿ ಈ ಸಂಗತಿಗಳು ಬಿಕರಿಗಿಟ್ಟ ಮಾರಾಟದ ಸರಕುಗಳಾಗಿವೆ. ಅದಕ್ಕೆಂದೇ ಇಲ್ಲಿ ಢೋಂಗಿ ಬಾಬಾಗಳು ಮತ್ತು ಝುಟಕಾ ಸ್ವಾಮಿಗಳು ಹುಟ್ಟಿಕೊಳ್ಳುತ್ತಾರೆ. ಪಂಚತಾರಾ ಹೋಟೆಲುಗಳನ್ನೂ ಮೀರಿಸುವ ಐಷಾರಾಮಿ ಸವಲತ್ತುಗಳ ಯೋಗ ಮತ್ತು ಅಧ್ಯಾತ್ಮ ಕೇಂದ್ರಗಳು ಅಸ್ತಿತ್ವಕ್ಕೆ ಬರುತ್ತವೆ. ಸಾವಿರಾರು ರೂಪಾಯಿ ಪಾವತಿಸಿ ಸಾರ್ವಜನಿಕರು ಅಧ್ಯಾತ್ಮವನ್ನು ಮೈಗೂಡಿಸಿಕೊಳ್ಳಲು ಹಪಹಪಿಸುತ್ತಾರೆ.

ಅರಿವೇ ಗುರು ಎಂದಿರುವರು ಅನುಭಾವಿಗಳು. ಈ ನಾಡಿನಲ್ಲಿ ಶರಣರು, ಸಂತರು, ಸೂಫಿಗಳು ಲೌಕಿಕ ಬದುಕಿನ ನಡುವೆಯೂ ಅಲೌಕಿಕವನ್ನು ಸಾಧಿಸಿದರು. ದಿನನಿತ್ಯದ ಕಾಯಕದಲ್ಲೇ ಶರಣತ್ವವನ್ನು ಪಾಲಿಸಿದರು. ಕಳಬೇಡ/ ಕೊಲಬೇಡ/ ಹುಸಿಯ ನುಡಿಯಲುಬೇಡ/ ಮುನಿಯಬೇಡ/ ಅನ್ಯರಿಗೆ ಅಸಹ್ಯಪಡಬೇಡ/ ತನ್ನ ಬಣ್ಣಿಸಬೇಡ/ ಇದಿರ ಹಳಿಯಲುಬೇಡ/ ಇದೇ ಅಂತರಂಗಶುದ್ಧಿ/ ಇದೇ ಬಹಿರಂಗಶುದ್ಧಿ ಎಂದು ಇಡೀ ಬದುಕನ್ನೇ ಅಧ್ಯಾತ್ಮದ ನೆಲೆಯಲ್ಲಿ ನೋಡಿದರು. ಅಂತರಂಗ ಮತ್ತು ಬಹಿರಂಗ ಎಂದು ಎರಡು ಪ್ರತ್ಯೇಕ ಬದುಕುಗಳನ್ನು ಬದುಕದೆ ಎರಡನ್ನೂ ಏಕತ್ರವಾಗಿಸಿ ಇಹ ಮತ್ತು ಪರ ಎರಡನ್ನೂ ಒಂದಾಗಿಸಿದರು.

ಬದುಕಿನ ಪಯಣ ಎನ್ನುವುದು ಹೂವು ಹಾಸಿದ ಹಾದಿಯ ಮೇಲಿನ ನಡಿಗೆಯಲ್ಲ. ಕಲ್ಲು ಮುಳ್ಳುಗಳನ್ನು ಬದಿಗೆ ಸರಿಸಿ ತಾನು ನಡೆಯಬೇಕಾದ ದಾರಿಯನ್ನು ಪಥಿಕ ತಾನೇ ಸೃಷ್ಟಿಸಿಕೊಳ್ಳಬೇಕು. ಬದುಕೆಂದ ಮೇಲೆ ಸವಾಲುಗಳು, ಸಮಸ್ಯೆಗಳು ಸಹಜ. ಕಥೆಗಾರ್ತಿ ಕಸ್ತೂರಿ ಬಾಯರಿ ಸಂದರ್ಶನವೊಂದರಲ್ಲಿ ಬದುಕಿನ ಕುರಿತು ತುಂಬ ಅರ್ಥಪೂರ್ಣವಾದ ಮಾತು ಹೇಳಿರುವರು- 'ಅಸಹಾಯಕತೆ, ಹಸಿವು ನಮಗೆ ಕಾಡಲಿಲ್ಲ ಅಂದರೆ, ಹೌ ಮಚ್ ವಿ ಆರ್ ಸ್ಟ್ರಾಂಗ್ ಇನ್ ಫ್ರಂಟ್ ಆಫ್ ಹಂಗರ್ ಅಂತ ಹ್ಯಾಂಗ ಗೊತ್ತಾಗೋದು? ಯಾರು ನಮ್ಮನ್ನು ನೋಡಿದರೂ ಒಂದು ಕೆಟ್ಟ ಭಾವ ಬರದಂಗ ಘನತೆಯ ಬದುಕು ಬದುಕೀವಿ ಅಂದರ ಅದು ಸಣ್ಣ ಮಾತಲ್ಲ'. ಯಾವ ಆಧ್ಯಾತ್ಮಿಕ ತರಬೇತಿ ಕೇಂದ್ರದಲ್ಲೂ ಕೇಳಲು ಸಿಗದ ಬದುಕಿನ ಅರ್ಥ ಮತ್ತು ಅನ್ವೇಷಣೆ ಇದು.



ಅಧ್ಯಾತ್ಮಕ್ಕೆ ಮಾರುಕಟ್ಟೆ ಮೌಲ್ಯ ಪ್ರಾಪ್ತವಾಗಿರುವುದಕ್ಕೆ ಸಾರ್ವಜನಿಕರ ಕೊಡುಗೆ ಬಹಳಷ್ಟಿದೆ. ಬದಲಾಗುತ್ತಿರುವ ಕುಟುಂಬ ಘಟಕ ಮತ್ತು ಬದುಕಿನ ಮೌಲ್ಯಗಳು ಜೀವನದ ರೀತಿ ನೀತಿಗಳನ್ನು ನಿಯಂತ್ರಿಸುತ್ತಿವೆ. ಕೂಡುಕುಟುಂಬಗಳಿಂದ ದೂರವಾ-ಗುತ್ತಿರುವ ಮನುಷ್ಯ ಒಂಟಿಯಾಗುತ್ತಿದ್ದಾನೆ. ಜೊತೆಗೆ ಉದ್ಯೋಗ ಕ್ಷೇತ್ರದಲ್ಲಿ ಕಾಣಿಸಿಕೊಳ್ಳುತ್ತಿರುವ ಅನಿಶ್ಚಿತತೆ ಮತ್ತು ಸ್ಪರ್ಧೆ ಬಹುದೊಡ್ಡ ಸವಾಲಾಗಿ ಪರಿಣಮಿಸುತ್ತಿವೆ. ಏಕಮುಖವಾದ ಬದುಕಿನ ಪಯಣದಲ್ಲಿ ಕಿಂಚಿತ್ ಏರುಪೇರಾದರೂ ಮನುಷ್ಯ ಹತಾಶೆ, ಖಿನ್ನತೆ, ಉದ್ವಿಗ್ನತೆಯತ್ತ ವಾಲುತ್ತಿದ್ದಾನೆ. ಜನರ ಇಂಥ ಮಾನಸಿಕ ದೌರ್ಬಲ್ಯವನ್ನೇ ಬಂಡವಾಳವಾಗಿಸಿಕೊಂಡು ಕೆಲವು ಅಧ್ಯಾತ್ಮದ ಕೇಂದ್ರಗಳು ಹಣ ಮಾಡುತ್ತಿವೆ.

ಅಧ್ಯಾತ್ಮ ಎನ್ನುವುದು ಸಾವಿರಾರು ಜನರ ನಡುವೆ ಕುಳಿತು ಸಾಧಿಸುವ ಸಾಧನೆಯಲ್ಲ. ನಿಶ್ಶಬ್ದ, ನೀರವ ವಾತಾವರಣದಲ್ಲಿ ಒಬ್ಬಂಟಿಯಾಗಿ ಕುಳಿತು ಮನಸ್ಸನ್ನು ನಿಗ್ರಹಿಸಿಕೊಳ್ಳುವ ಸಾಧನೆಯದು. ಆತ್ಮಪರೀಕ್ಷೆ, ಆತ್ಮವಿಮರ್ಶೆಗೆ ಇವತ್ತು ಮನುಷ್ಯ ಒಳಗಾಗುತ್ತಿಲ್ಲ. ಭೌತಿಕವೇ ಪ್ರಧಾನವಾದ ಬದುಕಿನಲ್ಲಿ ಅಂತರಂಗಕ್ಕಿಳಿಯುವ ಸಮಯವಾಗಲೀ ಸಂಯಮವಾಗಲೀ ಇವತ್ತಿನ ಮನುಷ್ಯನಿಗಿಲ್ಲ. ಎಲ್ಲವನ್ನೂ ಬಹಿರಂಗದಲ್ಲೇ ಹುಡುಕುತ್ತಿದ್ದಾನೆ. ಅದಕ್ಕೆಂದೇ ಅಧ್ಯಾತ್ಮದಂಥ ಅಂತರಂಗದ ಸಂಗತಿ ಕೂಡ ಇಂದು ಮಾರುಕಟ್ಟೆಯಲ್ಲಿ ಮಾರಾಟಕ್ಕಿಟ್ಟ ಸರಕಿನಂತೆ ಗೋಚರಿಸುತ್ತಿದೆ.

ಬದುಕಿನ ಅರ್ಥವನ್ನು ವಿಶ್ಲೇಷಿಸಲು, ಬದುಕಿಗೆ ಅಧ್ಯಾತ್ಮದ ರೂಪ ನೀಡಲು ಕುವೆಂಪು, ಕಾರಂತ, ಚಿತ್ತಾಲ, ಬೇಂದ್ರೆ ಅಂತಹವರ ಸಾಹಿತ್ಯ ಕೃತಿಗಳಿಗಿರುವ ಶಕ್ತಿಯು ಮಾರಾಟಕ್ಕಿಟ್ಟ ಈ ಆಧ್ಯಾತ್ಮಿಕ ಸರಕಿಗಿಲ್ಲ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕಿದೆ.

ವಾಚಕರ ವಾಣಿ

ಸಂದರ್ಶನದ ಅಂಕ ಕಡಿತ: ಸಲ್ಲದ ಆತಂಕ

ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ಕರ್ನಾಟಕ ಲೋಕಸೇವಾ ಆಯೋಗವು ನಡೆಸುವ ಪರೀಕ್ಷೆಯಲ್ಲಿ ಸಂದರ್ಶನದ ಅಂಕಗಳನ್ನು ಕಡಿತಗೊಳಿಸಿರುವ ಸರ್ಕಾರದ ಕ್ರಮದಿಂದ ಗ್ರಾಮೀಣ ಮತ್ತು ದುರ್ಬಲ ವರ್ಗಗಳ ಅಭ್ಯರ್ಥಿಗಳಿಗೆ ತೊಂದರೆಯಾಗುತ್ತದೆ ಎಂದು ಇತ್ತೀಚೆಗೆ ಉಭಯ ಸದನಗಳ ಕಲಾಪಗಳ ಚರ್ಚೆಯಲ್ಲಿ ಕೆಲವು ಜನಪ್ರತಿನಿಧಿ-ಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇದು ಅನಗತ್ಯ ಆತಂಕವಾಗಿದೆ. ಸರ್ಕಾರದ ಈ ಕ್ರಮವು ಪ್ರತಿಭಾವಂತ, ಗ್ರಾಮೀಣ ಮತ್ತು ದುರ್ಬಲ ವರ್ಗಗಳ ಅಭ್ಯರ್ಥಿಗಳ ಆಯ್ಕೆಗೆ ಪೂರಕವಾಗಿ ಇದೆ. ಸಂದರ್ಶನಕ್ಕೆ ಹೆಚ್ಚಿನ ಅಂಕಗಳು ಇದ್ದಾಗ ಭ್ರಷ್ಟಾಚಾರಕ್ಕೆ ಹೆಚ್ಚಿನ ಅವಕಾಶವಿರುತ್ತದೆ. ಅಲ್ಲದೆ, ಮೆರಿಟ್ ಅಭ್ಯರ್ಥಿಗಳು ಹುದ್ದೆಯಿಂದ ವಂಚಿತರಾದ ಆರೋಪ ಹಿಂದಿನ ನೇಮಕಾತಿಯಲ್ಲಿ ಕೇಳಿಬಂದಿದೆ. ಸರ್ಕಾರವು ಯಾವುದೇ ಒತ್ತಡಕ್ಕೆ ಮಣಿಯದೆ, ಈ ದಿಟ್ಟ ಕ್ರಮವನ್ನು ಮುಂದಿನ ನೇಮಕಾತಿಗಳಲ್ಲಿ ಅಳವಡಿಸಬೇಕು.

ಸತೀಶ, ಸಂಗಪ್ಪ ಹಡಪದ, ಲಕ್ಕಣ್ಣ, ಸಚಿನ, ಧಾರವಾಡ

ಜಯಂತಿಗಳಿಗೆ ಮಿತಿ ಬೇಡವೇ?

ಬಿ.ಎಸ್.ಯಡಿಯೂರಪ್ಪ ಅವರ ಅಧಿಕಾರಾವಧಿಯಿಂದ ಆರಂಭವಾದ ಜಯಂತಿಗಳ ಆಚರಣೆಯ ಪರ್ವ ಸಿದ್ದರಾಮಯ್ಯ ಅವರ ಆಡಳಿತದ ಕಾಲ ಮಾತ್ರವಲ್ಲದೆ ಇದೀಗ ಬಸವರಾಜ ಬೊಮ್ಮಾಯಿ ಅವರ ನೇತೃತ್ವದ ಸರ್ಕಾರದಲ್ಲೂ ಮುಂದುವರಿದಿದೆ. ಧ್ವನಿ ಇಲ್ಲದ ಸಮುದಾಯಗಳಿಗೆ ಜಯಂತಿಗಳು ಸಂಘಟನೆಗೆ ದಾರಿ ಮಾಡಿ-ಕೊಡಬೇಕಾಗಿತ್ತು. ಆದರೆ ಅವು ಮಹಾಪುರುಷರ ಜಾತಿ ಬಿಂಬಿಸುವ ಕಾರ್ಯಕ್ರಮಗಳಾಗುವ ಮೂಲಕ ಮತ್ತಷ್ಟು ಜಾತೀಯತೆಗೆ ಕಾರಣವಾಗುತ್ತಿವೆ. ರಾಷ್ಟ್ರೀಯ ನಾಯಕರಿಗೆ ಸೀಮಿತವಾಗಿದ್ದ ಜಯಂತಿಗಳ ಸಾಲಿಗೆ ನಾಡಿನ ಐತಿಹಾಸಿಕ ಪುರುಷರ ಜಯಂತಿಗಳು ಸೇರಿದವು. ಇದೀಗ ಪೌರಾಣಿಕ ಪುರುಷರ ಜಯಂತಿಗಳು ಆರಂಭವಾಗಿವೆ. ಇದು ಎಲ್ಲಿಗೆ ಹೋಗಿ ನಿಲ್ಲುವುದೋ?

ಎಮ್.ಆರ್.ಶೆಟ್ಟರ್, ಚಿಂಚೋಳಿ

ಕಲಾವಿದೆಗೆ ನಿರ್ಬಂಧ: ಇತಿಹಾಸ ನೆನಪಾಗದೇ?

ಕೇರಳದ ತ್ರಿಶ್ಶೂರು ಜಿಲ್ಲೆಯ ಇರಿಂಜಲಕೂಡದಲ್ಲಿರುವ ಕೂಡಲ್ ಮಾಣಿಕ್ಯಂ ದೇವಸ್ಥಾನದಲ್ಲಿ ನೃತ್ಯ ಪ್ರದರ್ಶಿಸಲು ಹಿಂದೂ ಅಲ್ಲ ಎಂಬ ಕಾರಣಕ್ಕೆ ಕಲಾವಿದೆ ಮಾನ್ಸಿಯಾ ಅವರಿಗೆ ಅವಕಾಶ ನೀಡದೇ ಇರುವ ಮೂಲಕ ದೇವಸ್ಥಾನದ ಆಡಳಿತ ಮಂಡಳಿಯು ಅಪ್ರಬುದ್ಧತೆಯ ಪರಾಕಾಷ್ಠೆ ಮೆರೆದಿದೆ. ತಳವರ್ಗಗಳ ಕಲೆಗಳನ್ನೇ ಹೈಜಾಕ್ ಮಾಡಿಕೊಂಡು ಹೊಟ್ಟೆ ಹೊರೆಯುವ ಕೆಲವು ಮೇಲ್ವರ್ಗಗಳು ಈ ಹಿಂದೆ ನೃತ್ಯಕ್ಕೆ ಶೂದ್ರರ, ದಲಿತರ, ತಳವರ್ಗದವರ, ವೇಶ್ಯೆಯರ ಕಲೆ ಎಂಬ ಹಣೆಪಟ್ಟಿ ಕಟ್ಟಿದ್ದವು. ಈಗ ಈ ಮಾತು ಹೇಳಲು ಇಂಥವರಿಗೆ ನಾಚಿಕೆಯಾಗಬೇಕು. ಕಲೆ–ಕಲಾವಿದ, ಸಾಹಿತ್ಯ– ಸಾಹಿತಿ ಸದಾ ಸ್ವಸ್ಥ ಸಮಾಜ, ಸ್ವಸ್ಥ ಪರಿಸರ, ಮಾನವೀಯತೆ, ಜೀವಪರತೆಯ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುವವರು. ಅಂಥವರಿಗೆ ಈ ರೀತಿಯ ನಿರ್ಬಂಧ ಹೇರುವುದು ತೀವ್ರ ದುರದೃಷ್ಟಕರ.

ಇಂತಹ ಪ್ರವೃತ್ತಿ ಮುಂದೆ ಬೇರೆ ಬೇರೆ ಕಡೆ ಬೇರೆ ಬೇರೆ ಬಗೆಯಲ್ಲಿ ವಿಸ್ತರಣೆ ಆಗಬಹುದು. ಹೀಗಾಗಿ ಇದನ್ನು ಈಗಲೇ ಎಲ್ಲ ಸಾಹಿತಿಗಳು, ಕಲಾವಿದರು, ಚಿಂತಕರು, ಪ್ರಗತಿಪರರು ಹಾಗೂ ಕೇರಳ ಸರ್ಕಾರ ವಿರೋಧಿಸಬೇಕು.

ಡಾ. ಅ.ರಾ.ಗೋವಿಂದಸ್ವಾಮಿ ನಾಯಕ್, ಬೆಂಗಳೂರು

ಕರಗುತಿದೆ...

ಮೋಡದ ಮರೆಯಲಿ
ಕರಗುತಿದೆ
ಸ್ವಾತಂತ್ರ್ಯದ ಕೂಗು
ಅಮೆರಿಕನ್ನರ ಕುಮ್ಮಕ್ಕಿಗೆ
ಉಕ್ರೇನ್
ಹರಕೆಯ ಕುರಿಯಾಯ್ತು
ಸ್ವಾತಂತ್ರ್ಯ ಹರಣವಾಗಿ
ಮಾನವೀಯತೆಗೆ
ಸೋಲಾಯ್ತು
ಲಿಬರ್ಟಿ ಪ್ರತಿಮೆ
ಮೂಕಪ್ರೇಕ್ಷಕವಾಯ್ತು.

ಡಾ. ಅರುಣ ಇನಾಮದಾರ
ವಿಜಯಪುರ

ಭಾವುಕ ನೆಲೆಯ ಮಾದರಿ ಚಳವಳಿ

ಇವತ್ತಿನ ಅಧಿಕಾರದ ಹಸಿವಿನ ರಾಜಕೀಯವು ವಿಘಟನಾ ವಿನ್ಯಾಸದ್ದೇ ವಿನಾ 'ಕೂಡಿಬಾಳುವ ಸಮುದಾಯದ ವಿವೇಕ'ದ ವಿನ್ಯಾಸ ಅದರಿಂದ ಸಾಧ್ಯವಾಗುತ್ತದೆ ಎಂಬುದು ಕನಸಿನಲ್ಲಿಯೂ ಊಹಿಸಿಕೊಳ್ಳಲು ಆಗದಂತಹ ಸಂದರ್ಭದಲ್ಲಿ ನಾವಿದ್ದೇವೆ. ಆದರೆ ಡಾ. ಕಿರಣ್ ಎಂ. ಗಾಜನೂರು ಅವರು ಪುನೀತ್ ರಾಜಕುಮಾರ್ ಅವರಿಗೆ ಸಂಬಂಧಿಸಿದಂತೆ ಮಾಡಿರುವ ವಿಶ್ಲೇಷಣೆಯಲ್ಲಿ (ಸಂಗತ, ಮಾರ್ಚ್ 28), 'ಕೂಡಿಬಾಳುವ ಸಮುದಾಯದ ವಿವೇಕ' ಜಾಗೃತಿಯು ಅಪ್ಪು ಮರಣದ ಮುಖೇನ ಸಾಧ್ಯವಾಗಿದೆ ಎಂದಿದ್ದಾರೆ. ಇದನ್ನು 'ಅಪ್ಪು ಚಳವಳಿ' ಎಂದು ಬಣ್ಣಿಸಿ, ಇದೊಂದು ಆರೋಗ್ಯಕರವಾದ 'ರಾಜಕೀಯ ವಿದ್ಯಮಾನ' ಎಂದಿದ್ದಾರೆ. ಅಧಿಕಾರ ರಾಜಕೀಯದ ವಿಘಟನೆಯ ಸ್ವರೂಪಕ್ಕೆ ರೋಸಿಹೋಗಿ, ಅದರ ಎದುರಾಗಿ, 'ಕೂಡಿಬಾಳುವ' ರಾಜಕೀಯ ವಿದ್ಯಮಾನವು ಪುನೀತ್ ಅವರ ಮರಣದ ಹಿನ್ನೆಲೆಯಲ್ಲಿ ಘಟಿಸಿರುವುದನ್ನು ಸ್ವಾಗತದ ನೆಲೆಯಲ್ಲಿ ವಿಶ್ಲೇಷಿಸಿರುವುದು ಲೇಖಕರ ಸಮುದಾಯದ ಸ್ವಸ್ಥ ರಾಜಕೀಯ ನಿಲುವನ್ನು ತೋರಿಸುತ್ತದೆ. ಆದರೆ ಸಾಂಸ್ಕೃತಿಕ ಜಗತ್ತಿನಲ್ಲಿ, ಜನಮಾನಸಕ್ಕೆ ಹತ್ತಿರವಾದ ವ್ಯಕ್ತಿ ಕಲಾವಿದನಾಗಿದ್ದು, ಅವನ ನಿರ್ಗಮನ 'ಒಂದು ಚಳವಳಿ' ಮಾದರಿಯಾಗಿ ರೂಪಾಂತರವಾಗಿರುವುದು ಭಾವುಕ-ವಾಗಿಯಲ್ಲವೇ? ಜನರ ಅಭಿಮಾನದ ನೆಲೆಯ ಭಾವುಕತೆ 'ಕೂಡಿಬಾಳುವ ವಿವೇಕ ಜಾಗೃತಿ' ಉಂಟು ಮಾಡುತ್ತಿದೆ ಎನ್ನುವುದು ತತ್ಕಾಲೀನದ್ದಲ್ಲದೆ, ದೀರ್ಘ ಕಾಲದಲ್ಲಿ ಇರಲಾರದಲ್ಲವೇ?

ಅಧಿಕಾರ ರಾಜಕೀಯದ ಸಮುದಾಯ ವಿಘಟನೆಯೂ ಭಾವುಕ ನೆಲೆಯದ್ದೇ ಆಗಿದೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಅದಕ್ಕೆ ಸಾಂಸ್ಕೃತಿಕ ವ್ಯಕ್ತಿಯ ಹಿನ್ನೆಲೆಯ ಭಾವುಕವಾದ 'ಕೂಡಿಬಾಳುವ ವಿವೇಕ' ಪರ್ಯಾಯ ಆಗಬಲ್ಲುದೇ? ಪ್ರಜಾಪ್ರಭುತ್ವ ಎಲ್ಲಿಯವರೆಗೆ ಬೌದ್ಧಿಕ ಹಂತವನ್ನು ಹೊಂದದೆ, ಭಾವುಕ ಹಂತದಲ್ಲೇ ಇರುತ್ತದೆಯೋ ಅಲ್ಲಿಯವರೆಗೆ ಅದರ ವೈಫಲ್ಯದ ಸಾಧ್ಯತೆಯೂ ನಿಚ್ಚಳವಾಗಿರುತ್ತದೆ. ಯಾಕೆಂದರೆ ಸಂವಿಧಾನವು ಬೌದ್ಧಿಕವಾಗಿಯೇ 'ಸಮುದಾಯದ ಕೂಡಿಬಾಳುವ ವಿವೇಕ'ವನ್ನು ಹೇಳುತ್ತಲೇ ಇದೆ. ಅದಕ್ಕೆ ವಿಮುಖರಾಗುತ್ತಲೇ ಬೌದ್ಧಿಕವಾಗಿ ಸಾಧ್ಯವಾಗದ ವಿವೇಕವು ಭಾವುಕವಾಗಿ ಸಾಧ್ಯವಾದಾಗ ವಾಸ್ತವಿಕ ನೆಲೆಯಲ್ಲಿ ಉಪಯುಕ್ತವಾಗಬಲ್ಲುದೇ ಎಂಬ ಪ್ರಶ್ನೆ ಉಳಿಯುತ್ತದೆ. 'ಅಪ್ಪು ರಾಜಕೀಯ ವಿದ್ಯಮಾನ' ಸಮುದಾಯದ ಹೊಸ ಭರವಸೆಯಂತೆ ಲೇಖಕರಿಗೆ ಕಂಡಿರುವುದು ಸಹಜ. ಆದಾಗ್ಯೂ ಭಾವುಕ ಮತ್ತು ಬೌದ್ಧಿಕ ನೆಲೆಯ ಸಮುದಾಯದ ಜಾಗೃತಿಯ ವ್ಯತ್ಯಾಸ ವೇದ್ಯ-ವಾಗುವಂತಹದ್ದಲ್ಲವೇ?

ದೊಡ್ಡಿಶೇಖರ, ಮದ್ದೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

34,884 ಸುದ್ದಿ ರೂಪದ ಜಾಹೀರಾತುಗಳು

2019ರ ಲೋಕಸಭಾ ಚುನಾವಣೆಯಿಂದ ಆರಂಭವಾಗಿ 2020ರ ಮಹಾರಾಷ್ಟ್ರ ವಿಧಾನಸಭಾ ಚುನಾವಣೆವರೆಗಿನ ಒಟ್ಟು 10 ಚುನಾವಣೆಗಳಲ್ಲಿ ಫೇಸ್‌ಬುಕ್, ಬಿಜೆಪಿಗೆ ನೆರವಾಗಿದೆ. ತನ್ನ ವೇದಿಕೆಯಲ್ಲಿ ಬಿಜೆಪಿ ಪರವಾದ ಸುದ್ದಿ ರೂಪದ ಜಾಹೀರಾತುಗಳು ಭಾರಿ ಸಂಖ್ಯೆಯಲ್ಲಿ ಪ್ರಕಟವಾಗಲು ಫೇಸ್‌ಬುಕ್ ಅವಕಾಶ ನೀಡಿದೆ. ಈ ಅವಧಿಯಲ್ಲಿ ಫೇಸ್‌ಬುಕ್‌ನಲ್ಲಿ ಪ್ರಕಟವಾದ, ಬಿಜೆಪಿ ಪರವಾದ ಸುದ್ದಿ ರೂಪದ ಜಾಹೀರಾತುಗಳ ಸಂಖ್ಯೆ 34 ಸಾವಿರವನ್ನು ದಾಟುತ್ತದೆ. ಆದರೆ ಇಂಥದ್ದೇ ಅವಕಾಶವನ್ನು ಫೇಸ್‌ಬುಕ್ ಕಾಂಗ್ರೆಸ್‌ಗೆ ನಿರಾಕರಿಸಿದೆ. ಈ ಮೂಲಕ ಬಿಜೆಪಿ ಪರವಾಗಿ ಫೇಸ್‌ಬುಕ್ ಕೆಲಸ ಮಾಡಿದೆ. ಈ ಅವಧಿಯಲ್ಲಿ ನಡೆದ 10 ಚುನಾವಣೆಗಳಲ್ಲಿ, ಬಿಜೆಪಿ ಒಂಬತ್ತು ಚುನಾವಣೆಗಳನ್ನು ಗೆದ್ದಿದೆ

• ಕುಮಾರಸಂಭವ ಶ್ರೀವಾಸ್ತವ, ನಯನತಾರಾ ರಂಗನಾಥನ್, ಶ್ರೀಗಿರೀಶ್ ಜಾಲಿಹಾಳ್

ಚುನಾವಣೆಗಳಲ್ಲಿ ಪ್ರಚಾರಕ್ಕೆ ಬಿಜೆಪಿಗೆ ಫೇಸ್‌ಬುಕ್ ನೆರವು

ಭಾಗ–2




ರಾಜಕೀಯ ಪಕ್ಷ ಮತ್ತು ರಾಜಕೀಯ ನಾಯಕ ಅಥವಾ ಚುನಾವಣೆ ಕಣದಲ್ಲಿರುವ ಅಭ್ಯರ್ಥಿಗೆ ಯಾವುದೇ ರೀತಿಯ ಸಂಬಂಧ ಇರದ ವ್ಯಕ್ತಿ ಅಥವಾ ಸಂಸ್ಥೆಯು, ಆ ಅಭ್ಯರ್ಥಿಯ ಪರವಾಗಿ ನೀಡುವ ಜಾಹೀರಾತುಗಳು ಮತ್ತು ಸುದ್ದಿರೂಪದ ಜಾಹೀರಾತನ್ನು ಪ್ರಕಟಿಸುವುದಿಲ್ಲ ಎಂಬುದು ಫೇಸ್‌ಬುಕ್‌ನ ನಿಯಮಗಳಲ್ಲಿ ಒಂದು. ಅಮೆರಿಕದ ಅಧ್ಯಕ್ಷರ ಚುನಾವಣೆಯಲ್ಲಿ ಫೇಸ್‌ಬುಕ್ ಒಬ್ಬ ಅಭ್ಯರ್ಥಿಯ ಪರವಾಗಿ ಲಾಬಿ ನಡೆಸಿತ್ತು ಎಂಬ ಆರೋಪ ಕೇಳಿಬಂದ ನಂತರ ಇಂತಹ ಒಂದು ನಿಯಮವನ್ನು ಫೇಸ್‌ಬುಕ್ 2018ರಲ್ಲಿ ಜಾರಿಗೆ ತಂದಿತ್ತು. ಆದರೆ, ಭಾರತದಲ್ಲಿ ನಡೆದ 10 ಚುನಾವಣೆಗಳ ಸಂದರ್ಭದಲ್ಲಿ ಫೇಸ್‌ಬುಕ್ ಈ ನಿಯಮವನ್ನು ಒಂದೇ ರೀತಿಯಲ್ಲಿ ಅನುಷ್ಠಾನಕ್ಕೆ ತಂದಿಲ್ಲ. ಬಿಜೆಪಿ ಪರ ಪ್ರಕಟವಾದ ಇಂತಹ ಜಾಹೀರಾತುಗಳು ಮತ್ತು ಸುದ್ದಿ ರೂಪದ ಜಾಹೀರಾತುಗಳ ವಿಚಾರದಲ್ಲಿ ಫೇಸ್‌ಬುಕ್ ಜಾಣಕುರುಡು ಪ್ರದರ್ಶಿಸಿದೆ. ಆದರೆ, ಪ್ರಮುಖ ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್ ವಿರುದ್ಧ ಮಾತ್ರ ಕ್ರಮ ತೆಗೆದುಕೊಂಡಿದೆ.

2019ರ ಫೆಬ್ರುವರಿಯಿಂದ 2020ರ ನವೆಂಬರ್ 18ರವರೆಗೆ ಬಿಜೆಪಿ, ಆ ಪಕ್ಷದ ನಾಯಕರು, ಅಭ್ಯರ್ಥಿಗಳು ಮತ್ತು ಬಿಜೆಪಿ ಪರವಾದ ಅಧಿಕೃತ ಪ್ರಚಾರ ಸಂಸ್ಥೆಗಳು 26,291 ಅಧಿಕೃತ ಜಾಹೀರಾತುಗಳನ್ನು ನೀಡಿವೆ. ಆದರೆ ಇದೇ ಅವಧಿಯಲ್ಲಿ ಬಿಜೆಪಿ ಜತೆಗೆ ಯಾವುದೇ ರೀತಿ ಸಂಬಂಧವಿಲ್ಲದ 23 ಸಂಸ್ಥೆಗಳು, ಬಿಜೆಪಿ/ಬಿಜೆಪಿ ನಾಯಕರು/ಪ್ರಧಾನಿ ನರೇಂದ್ರ ಮೋದಿ/ಬಿಜೆಪಿ ಅಭ್ಯರ್ಥಿಗಳ ಪರವಾಗಿ ಮತ್ತು ಕಾಂಗ್ರೆಸ್ ವಿರುದ್ಧವಾಗಿ 34,884 ಜಾಹೀರಾತುಗಳನ್ನು ನೀಡಿವೆ. ಇವುಗಳಲ್ಲಿ ಬಹುತೇಕವು ಸುದ್ದಿರೂಪದ ಜಾಹೀರಾತುಗಳು. ಇವುಗಳನ್ನು ಪ್ರಕಟಿಸುವುದಕ್ಕಾಗಿ ಈ 23 ಸಂಸ್ಥೆಗಳು ಫೇಸ್‌ಬುಕ್‌ಗೆ ಒಟ್ಟು ₹5.83 ಕೋಟಿ ಶುಲ್ಕ ಪಾವತಿಸಿವೆ. ಈ ಜಾಹೀರಾತುಗಳನ್ನು ಒಟ್ಟು 131 ಕೋಟಿ ಬಾರಿ ವೀಕ್ಷಿಸಲಾಗಿದೆ. ಈ 23 ಸಂಸ್ಥೆಗಳು ಬಿಜೆಪಿ ಜತೆಗೆ ಯಾವ ರೀತಿ ಸಂಬಂಧ ಹೊಂದಿವೆ ಎಂಬುದನ್ನು ಬಹಿರಂಗಪಡಿಸಿಲ್ಲ. ಫೇಸ್‌ಬುಕ್‌ನ ನಿಯಮಗಳ ಪ್ರಕಾರ ಈ ಜಾಹೀರಾತುಗಳನ್ನು ತೆಗೆದುಹಾಕಬೇಕಿತ್ತು. ಆದರೆ, ತೆಗದುಹಾಕಿಲ್ಲ.

ಬಿಜೆಪಿ ಪರವಾದ ಈ ಸುದ್ದಿರೂಪದ ಜಾಹೀರಾತುಗಳ ವಿರುದ್ಧ ಫೇಸ್‌ಬುಕ್ ಕ್ರಮ ತೆಗೆದುಕೊಳ್ಳದೇ ಇರುವುದು, ಆ ಪಕ್ಷದ ಪರವಾಗಿ ಪ್ರಚಾರವು ಹೆಚ್ಚು ಪರಿಣಾಮಕಾರಿ ಆಗುವಲ್ಲಿ ಮಹತ್ವದ ಪಾತ್ರ ವಹಿಸಿದೆ. ಬಿಜೆಪಿ ಅಧಿಕೃತವಾಗಿ ನೀಡಿದ ಜಾಹೀರಾತುಗಳನ್ನು ಒಟ್ಟು 136 ಕೋಟಿ ಬಾರಿ ವೀಕ್ಷಿಸಲಾಗಿದೆ. ಆದರೆ ಬಿಜೆಪಿ ಪರವಾಗಿ ಅನಧಿಕೃತವಾಗಿ ಪ್ರಕಟವಾದ ಸುದ್ದಿರೂಪದ ಜಾಹೀರಾತುಗಳನ್ನು 131 ಕೋಟಿ ಬಾರಿ ವೀಕ್ಷಿಸಲಾಗಿದೆ. ಎರಡೂ ರೀತಿಯ ಜಾಹೀರಾತುಗಳನ್ನು ಒಟ್ಟು 267 ಕೋಟಿ ಬಾರಿ ವೀಕ್ಷಿಸಲಾಗಿದೆ. ಹೀಗೆ ಬಿಜೆಪಿ ಪರವಾದ ಜಾಹೀರಾತುಗಳು ಮತ್ತು ಸುದ್ದಿ ರೂಪದ ಜಾಹೀರಾತುಗಳು ಹೆಚ್ಚು ಜನರನ್ನು ತಲುಪುವಂತೆ ಮಾಡುವಲ್ಲಿ ಫೇಸ್‌ಬುಕ್ ನೆರವಾಗಿದೆ.

ಭಾರತದಲ್ಲಿ ಫೇಸ್‌ಬುಕ್‌ಗೆ, ಬಿಜೆಪಿ ನಂತರ ಕಾಂಗ್ರೆಸ್ ಎರಡನೇ ಅತಿದೊಡ್ಡ ಜಾಹೀರಾತು ನೀಡುವ ಗ್ರಾಹಕ. ಈ ಹತ್ತು ಚುನಾವಣೆಗಳ ಅವಧಿಯಲ್ಲಿ ಕಾಂಗ್ರೆಸ್ ಅಧಿಕೃತವಾಗಿ ಒಟ್ಟು 30,374 ಜಾಹೀರಾತುಗಳನ್ನು ನೀಡಿದೆ. ಇವುಗಳನ್ನು 110 ಕೋಟಿ ಬಾರಿ ವೀಕ್ಷಿಸಲಾಗಿದೆ. ಇದಕ್ಕಾಗಿ ಕಾಂಗ್ರೆಸ್ ₹6.44 ಕೋಟಿ ಶುಲ್ಕವನ್ನು ಪಾವತಿಸಿದೆ. ಕಾಂಗ್ರೆಸ್ ಜತೆಗೆ ಯಾವುದೇ ಸಂಬಂಧ ಇಲ್ಲದ ಎರಡು ಸಂಸ್ಥೆಗಳಷ್ಟೇ, ಕಾಂಗ್ರೆಸ್ ಪರವಾಗಿ ಜಾಹೀರಾತು ಮತ್ತು ಸುದ್ದಿರೂಪದ ಜಾಹೀರಾತು ಪ್ರಕಟಿಸಿವೆ. ಅವುಗಳ ಸಂಖ್ಯೆ 3,130 ಮಾತ್ರ. ಇವುಗಳನ್ನು ಕೇವಲ 7.38 ಕೋಟಿ ಬಾರಿ ವೀಕ್ಷಿಸಲಾಗಿದೆ. ಇದಕ್ಕಾಗಿ ಆ ಎರಡು ಸಂಸ್ಥೆಗಳು ಫೇಸ್‌ಬುಕ್‌ಗೆ ₹23 ಲಕ್ಷ ಶುಲ್ಕ ಪಾವತಿಸಿವೆ.

ಬಿಜೆಪಿಗೆ ಅನುಕೂಲ



ಕಾಂಗ್ರೆಸ್ ಪರವಾಗಿ ನೀಡಲಾದ ಅನಧಿಕೃತ ಮತ್ತು ಸುದ್ದಿರೂಪದ ಜಾಹೀರಾತುಗಳ ಸಂಖ್ಯೆ ಮತ್ತು ಅವುಗಳ ವೀಕ್ಷಣೆ ಸಂಖ್ಯೆ ಕಡಿಮೆ ಇರಲು, ಫೇಸ್‌ಬುಕ್ ತೆಗೆದುಕೊಂಡಿದ್ದ ಕ್ರಮಗಳೇ ಕಾರಣ. ಕಾಂಗ್ರೆಸ್ ಪರವಾಗಿ ಹೀಗೆ ಪ್ರಕಟವಾಗಿದ್ದ ಅನಧಿಕೃತ ಜಾಹೀರಾತು ಮತ್ತು ಸುದ್ದಿರೂಪದ ಜಾಹೀರಾತುಗಳನ್ನು ಪ್ರಕಟಿಸಿದ್ದ 687 ಪುಟಗಳು ಮತ್ತು ಖಾತೆಗಳನ್ನು ಫೇಸ್‌ಬುಕ್ ತೆಗೆದುಹಾಕಿತ್ತು. ಹೀಗಾಗಿ ಈ ಸ್ವರೂಪದಲ್ಲಿ ಹೆಚ್ಚು ಜನರನ್ನು ತಲುಪಲು ಕಾಂಗ್ರೆಸ್‌ಗೆ ಸಾಧ್ಯವಾಗಿರಲಿಲ್ಲ. ಆದರೆ ಇದೇ ರೀತಿ ಸುದ್ದಿರೂಪದ ಜಾಹೀರಾತುಗಳನ್ನು ಬಿಜೆಪಿ ಪರವಾಗಿ ಪ್ರಕಟಿಸಿದ್ದ 1 ಪುಟ ಮತ್ತು 14 ಖಾತೆಗಳನ್ನು ಮಾತ್ರ ಫೇಸ್‌ಬುಕ್ ತೆಗೆದುಹಾಕಿತ್ತು.

ಹೀಗೆ ಪ್ರಕಟವಾಗುವ ಜಾಹೀರಾತುಗಳ ವೆಚ್ಚವು ಪಕ್ಷ ಮತ್ತು ಅಭ್ಯರ್ಥಿಯ ಚುನಾವಣಾ ವೆಚ್ಚದಲ್ಲಿ ಸೇರುವುದಿಲ್ಲ. ಇದರ ವಿರುದ್ಧ ಚುನಾವಣಾ ಆಯೋಗವು ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ. ಈ ಬಗ್ಗೆ ಪ್ರತಿಕ್ರಿಯೆ ಕೇಳಿ ಕಳುಹಿಸಲಾಗಿದ್ದ ಇ–ಮೇಲ್‌ಗೆ ಚುನಾವಣಾ ಆಯೋಗವು ಪ್ರತಿಕ್ರಿಯೆ ನೀಡಿಲ್ಲ. ಫೇಸ್‌ಬುಕ್ ಸಹ ಇದನ್ನು ನಿಯಂತ್ರಿಸದೇ ಇದ್ದ ಕಾರಣ, ಬಿಜೆಪಿ ಅಭ್ಯರ್ಥಿಗಳು ಚುನಾವಣಾ ಪ್ರಚಾರಕ್ಕೆ ಎದುರಾಳಿಗಳಿಗಿಂತ ಹೆಚ್ಚು ಹಣ ವೆಚ್ಚ ಮಾಡಲು ಸಾಧ್ಯವಾಗಿದೆ. ಫೇಸ್‌ಬುಕ್ ಮೂಲಕ ಬಿಜೆಪಿ ಹೆಚ್ಚು ಜನರನ್ನು ತಲುಪುವುದು ಸಾಧ್ಯವಾಗಿದೆ. ಅಂತಿಮವಾಗಿ ಈ ಅವಧಿಯಲ್ಲಿ ನಡೆದಿದ್ದ 10 ಚುನಾವಣೆಗಳಲ್ಲಿ 9ರಲ್ಲಿ ಬಿಜೆಪಿ ಗೆಲುವು ಸಾಧಿಸಿದೆ.

ಫೇಸ್‌ಬುಕ್ ಜಾಹೀರಾತು ಶುಲ್ಕ (ಪ್ರತಿ 10 ಲಕ್ಷ ವೀಕ್ಷಣೆಗಳಿಗೆ/ವ್ಯೂಸ್‌ಗೆ)

ಚುನಾವಣೆ	ಪಕ್ಷ	ಶುಲ್ಕ
ಲೋಕಸಭೆ, ಒಡಿಶಾ, ಅರುಣಾಚಲ ಪ್ರದೇಶ, ಸಿಕ್ಕಿಂ ಹಾಗೂ ಆಂಧ್ರಪ್ರದೇಶ ವಿಧಾನಸಭಾ ಚುನಾವಣೆ–2019	ಬಿಜೆಪಿ	₹61,584
	ಕಾಂಗ್ರೆಸ್	₹66,250
ಹರಿಯಾಣ ವಿಧಾನಸಭೆ ಚುನಾವಣೆ– 2019	ಬಿಜೆಪಿ	₹35,856
	ಕಾಂಗ್ರೆಸ್	₹42,302
ಜಾರ್ಖಂಡ್ ವಿಧಾನಸಭೆ ಚುನಾವಣೆ –2019	ಬಿಜೆಪಿ	₹34,905
	ಕಾಂಗ್ರೆಸ್	₹51,350
ದೆಹಲಿ ವಿಧಾನಸಭೆ ಚುನಾವಣೆ –2020	ಬಿಜೆಪಿ	₹35,595
	ಕಾಂಗ್ರೆಸ್	₹39,909
	ಎಎಪಿ	₹64,173
ಬಿಹಾರ ವಿಧಾನಸಭೆ ಚುನಾವಣೆ –2020	ಬಿಜೆಪಿ	₹37,285
	ಕಾಂಗ್ರೆಸ್	₹45,207
	ಜೆಡಿಯು	₹66,703

ಕಾಂಗ್ರೆಸ್‌ಗೆ ದುಬಾರಿ ಶುಲ್ಕ

ಬೇರೆಲ್ಲ ಪಕ್ಷಗಳಿಗೆ ಹೋಲಿಸಿದರೆ, ಬಿಜೆಪಿಗೆ ಅತಿಕಡಿಮೆ ಶುಲ್ಕದಲ್ಲಿ ಜಾಹೀರಾತುಗಳನ್ನು ಪ್ರಕಟಿಸಲು ಫೇಸ್‌ಬುಕ್ ಅಲ್ಗಾರಿದಂ ವ್ಯವಸ್ಥೆಯು ಅವಕಾಶ ಮಾಡಿಕೊಟ್ಟಿದೆ. 22 ತಿಂಗಳಲ್ಲಿ ನಡೆದ 10 ಚುನಾವಣೆಗಳ ಜಾಹೀರಾತುಗಳನ್ನು ವಿಶ್ಲೇಷಿಸಿದಾಗ ಈ ಅಂಶ ಸ್ಪಷ್ಟವಾಗಿದೆ.

ಭಾರತದಲ್ಲಿ ಫೇಸ್‌ಬುಕ್‌ನ ಅತಿದೊಡ್ಡ ರಾಜಕೀಯ ಗ್ರಾಹಕ ಎನಿಸಿರುವ ಬಿಜೆಪಿಗೆ ಅನುಕೂಲಕರ ಶುಲ್ಕದಲ್ಲಿ ಜಾಹೀರಾತು ಪ್ರಕಟಣೆಗೆ ಅವಕಾಶ ನೀಡಿದ್ದರಿಂದ, ಪಕ್ಷವು ಕಡಿಮೆ ಹಣದಲ್ಲಿ ಹೆಚ್ಚು ಮತದಾರರನ್ನು ತಲುಪಲು ಸಾಧ್ಯವಾಗಿದೆ.

ಬಿಜೆಪಿ, ಪಕ್ಷದ ಅಭ್ಯರ್ಥಿಗಳು ಅಥವಾ ಪಕ್ಷಕ್ಕೆ ಸಂಬಂಧಿಸಿದರವರು ನೀಡಿದ್ದ ಜಾಹೀರಾತು 10 ಲಕ್ಷ ಬಾರಿ (1 ಮಿಲಿಯನ್) ವೀಕ್ಷಣೆಗೆ ಒಳಪಟ್ಟರೆ, ಅದಕ್ಕೆ ಸರಾಸರಿ ₹41,844 ಶುಲ್ಕವನ್ನು ಫೇಸ್‌ಬುಕ್ ಅಲ್ಗಾರಿದಂ ವಿಧಿಸಿದೆ. ಆದರೆ ಕಾಂಗ್ರೆಸ್ ಪಕ್ಷ ನೀಡಿದ್ದ ಜಾಹೀರಾತಿಗೆ ಸರಾಸರಿ ₹53,776 ಶುಲ್ಕ ವಿಧಿಸಿದೆ. ಅಂದರೆ ಬಿಜೆಪಿಗಿಂತ ಶೇ 29ರಷ್ಟು ಹೆಚ್ಚು ಶುಲ್ಕವನ್ನು ಕಾಂಗ್ರೆಸ್‌ನಿಂದ ಫೇಸ್‌ಬುಕ್ ವಸೂಲಿ ಮಾಡಿದೆ.

22 ತಿಂಗಳ ಅವಧಿಯಲ್ಲಿ ಬಿಜೆಪಿ ಹಾಗೂ ಪಕ್ಷಕ್ಕೆ ಸಂಬಂಧಪಟ್ಟವರು ತಮ್ಮ ಅಧಿಕೃತ ಖಾತೆಗಳಿಂದ ಜಾಹೀರಾತು ನೀಡಲು ಫೇಸ್‌ಬುಕ್‌ಗೆ ₹10.4 ಕೋಟಿ ಹಣ ಪಾವತಿಸಿದ್ದಾರೆ. ಈ ಹಣಕ್ಕೆ ಬಿಜೆಪಿ 136 ಕೋಟಿ ವೀಕ್ಷಣೆಗಳನ್ನು ಪಡೆದಿದೆ. ಇದೇ ಅವಧಿಯಲ್ಲಿ ಕಾಂಗ್ರೆಸ್ ಹಾಗೂ ಕಾಂಗ್ರೆಸ್‌ಗೆ ಸಂಬಂಧಪಟ್ಟವರು ಫೇಸ್‌ಬುಕ್‌ಗೆ ಜಾಹೀರಾತು ಮೊತ್ತವಾಗಿ ₹6.44 ಕೋಟಿ ಪಾವತಿಸಿದ್ದಾರೆ. ಈ ಮೊತ್ತಕ್ಕೆ ಕಾಂಗ್ರೆಸ್ 110 ಕೋಟಿ ವೀಕ್ಷಣೆಗಳನ್ನು ಪಡೆದಿದೆ. ಇಷ್ಟು ವೀಕ್ಷಣೆಗಳನ್ನು ನೀಡಲು ಫೇಸ್‌ಬುಕ್, ಬಿಜೆಪಿಗಿಂತ 1.1 ಕೋಟಿ ರೂಪಾಯಿ ಹೆಚ್ಚುವರಿ ಹಣವನ್ನು ಕಾಂಗ್ರೆಸ್‌ನಿಂದ ಪಡೆದಿದೆ. ಬಿಜೆಪಿಗೆ ಕಡಿಮೆ ಶುಲ್ಕ ವಿಧಿಸಿ ಕಾಂಗ್ರೆಸ್‌ಗೆ ಹೆಚ್ಚು ನಿಗದಿಪಡಿಸಿದ್ದರಿಂದ, ಬಿಜೆಪಿಗಿಂತ ಕಾಂಗ್ರೆಸ್ ಹೆಚ್ಚು ಹಣ ಪಾವತಿಸಿದೆ.

ಬಿಜೆಪಿ ಪರವಾಗಿ ಸುದ್ದಿರೂಪದ ಜಾಹೀರಾತು ನೀಡುವ ಜಾಹೀರಾತುದಾರರಿಗೆ ಫೇಸ್‌ಬುಕ್ ₹39,552 ಶುಲ್ಕ (ಪ್ರತಿ 10 ಲಕ್ಷ ವ್ಯೂಸ್) ನಿಗದಿಪಡಿಸಿದ್ದರೆ, ಕಾಂಗ್ರೆಸ್ ಪರವಾಗಿ ಸುದ್ದಿರೂಪದ ಜಾಹೀರಾತು ನೀಡುವವರಿಗೆ ₹52,150 ಶುಲ್ಕ ನಿಗದಿಪಡಿಸಿದೆ. ಅಂದರೆ ಶೇ 32ರಷ್ಟು ಅಧಿಕ ಹಣವನ್ನು ಫೇಸ್‌ಬುಕ್ ಅಲ್ಗಾರಿದಂ ಗೊತ್ತುಪಡಿಸಿದೆ. ದೇಶದ ಚುನಾವಣಾ ನೀತಿಗಳು ಮತ್ತು ಪ್ರಜಾಪ್ರಭುತ್ವಕ್ಕೆ ಫೇಸ್‌ಬುಕ್‌ನ ನೀತಿಗಳು ಹಾಗೂ ಅಲ್ಗಾರಿದಂ ಬೆದರಿಕೆಗಳಾಗಿವೆ ಎಂದು ಸುಪ್ರೀಂಕೋರ್ಟ್ ವ್ಯಕ್ತಪಡಿಸಿದ್ದ ಕಳವಳವನ್ನು, ಈ ವಿಶ್ಲೇಷಣೆಯಿಂದ ಕಂಡುಬಂದ ಅಂಶಗಳೂ ಬಿಂಬಿಸುತ್ತವೆ.


ತನ್ನನ್ನು ತಟಸ್ಥ ವೇದಿಕೆ ಎಂದು ಬಿಂಬಿಸಲು ಮುಂದಾಗಿದ್ದ ಫೇಸ್‌ಬುಕ್‌ನ ವಾದವನ್ನು ತಿರಸ್ಕರಿಸಿದ್ದ ಸುಪ್ರೀಂಕೋರ್ಟ್, ಚುನಾವಣೆ ಹಾಗೂ ಮತದಾನ ಪ್ರಕ್ರಿಯೆಗಳಿಗೆ ಸಾಮಾಜಿಕ ಜಾಲತಾಣಗಳ ತಿರುಚಿದ ವರದಿಗಳು ಬೆದರಿಕೆಗಳಾಗಿವೆ ಎಂದಿತ್ತು. 2020ರ ದೆಹಲಿ ಗಲಭೆ ಪ್ರಕರಣದಲ್ಲಿ ಕೋರ್ಟ್ ಈ ಅಭಿಪ್ರಾಯ ವ್ಯಕ್ತಪಡಿಸಿತ್ತು.

ಬಿಜೆಪಿಗೆ ಒಂದು, ಕಾಂಗ್ರೆಸ್‌ಗೆ ಮತ್ತೊಂದು ದರ ನಿಗದಿಪಡಿಸಿರುವ ಕುರಿತು ಕೇಳಿದ ಪ್ರಶ್ನೆಗೆ ಫೇಸ್‌ಬುಕ್ ಮಾತೃಸಂಸ್ಥೆ 'ಮೆಟಾ' ಉತ್ತರಿಸುವ ಗೋಜಿಗೆ ಹೋಗಿಲ್ಲ. ಭಾರತದ ಚುನಾವಣಾ ಆಯೋಗ, ಬಿಜೆಪಿ ಐಟಿ ಘಟಕದ ಮುಖ್ಯಸ್ಥ ಅಮಿತ್ ಮಾಳವೀಯ ಹಾಗೂ ಬಿಜೆಪಿ ವಕ್ತಾರ ಅನಿಲ್ ಬಲೂನಿ ಅವರೂ ಉತ್ತರಿಸಿಲ್ಲ.

ಆಧಾರ: ದಿ ರಿಪೋರ್ಟರ್ಸ್ ಕಲೆಕ್ಟಿವ್ ವರದಿ. ಈ ವರದಿಯ ಇಂಗ್ಲಿಷ್ ಆವೃತ್ತಿ ಆಲ್‌ಜಜೀರಾ ಸುದ್ದಿತಾಣದಲ್ಲಿ ಪ್ರಕಟವಾಗಿದೆ

ಬಿಜೆಪಿ ಪರವಾಗಿ ಸುದ್ದಿರೂಪದ ಪ್ರಚಾರ ನೀಡಿದವರು

ಬಿಜೆಪಿ ಪರವಾಗಿ ಅನಧಿಕೃತವಾಗಿ ಸುದ್ದಿರೂಪದ ಜಾಹೀರಾತು ನೀಡಿದ ಸಂಸ್ಥೆಗಳಲ್ಲಿ, ಹಲವಕ್ಕೆ ವಿಳಾಸವೇ ಇಲ್ಲ. ಹಲವು ಸಂಸ್ಥೆಗಳ ಜಾಲತಾಣಗಳು ಚಾಲ್ತಿಯಲ್ಲಿಲ್ಲ. ಕೆಲವು ಸಂಸ್ಥೆಗಳು ತಮ್ಮ ಹಣಕಾಸಿನ ಮೂಲ ಯಾವುದು ಎಂಬುದನ್ನೂ ಬಹಿರಂಗಪಡಿಸಿಲ್ಲ



ಪ್ರಜಾವಾಣಿ ಗ್ರಾಫಿಕ್ಸ್



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 81

ನಾರದನಿಗೆ ಶಿವತತ್ವ ಬೋಧಿಸಿದ ಬ್ರಹ್ಮ

ರುದ್ರಸಂಹಿತೆಯ ಮೊದಲನೇ ಖಂಡವಾದ ಸೃಷ್ಟಿಖಂಡದ ಆರನೆಯ ಅಧ್ಯಾಯವಾದ 'ವಿಷ್ಣುವಿನ ಉತ್ಪತ್ತಿ ವರ್ಣನ'ದಲ್ಲಿ ಬ್ರಹ್ಮನು ನಾರದನಿಗೆ ಶಿವತತ್ವವನ್ನ ಬೋಧಿಸುತ್ತಾನೆ. ಬ್ರಹ್ಮ ಹೇಳುತ್ತಾನೆ: 'ಎಲೈ ಮಹಾಜ್ಞಾನಿಯಾದ ವತ್ಸನೇ, ಸದಾ ಪ್ರಪಂಚಕ್ಕೆ ಉಪಕಾರವನ್ನು ಮಾಡುತ್ತಿರುವ ನಿನಗೆ ಯಾವುದನ್ನು ಕೇಳಿದೊಡನೆಯೇ ಜನರೆಲ್ಲರ ಪಾಪಗಳೆಲ್ಲವೂ ನಶಿಸಿ ಹೋಗುವುವೋ, ಅಂತಹ ವಿಕಾರರಹಿತವಾದ ಶುದ್ಧ ಶಿವತತ್ವವನ್ನು ಬೋಧಿಸುತ್ತೇನೆ. ಶಿವತತ್ವವನ್ನು, ಆತನ ಅದ್ಭುತ ರೂಪವನ್ನು ನಾನಾಗಲಿ, ವಿಷ್ಣುವಾಗಲಿ, ಮತ್ತಿನ್ನಾರಾದರೂ ಆಗಲಿ, ಯಥಾರ್ಥವಾಗಿ ಯಾರೂ ಅರಿಯರು.

'ಮಹಾಪ್ರಳಯದ ಸಮಯದಲ್ಲಿ ಚರಚರಾತ್ಮಕವಾದ ಈ ಪ್ರಪಂಚವೆಲ್ಲ ನಾಶವಾದ ನಂತರ ಗ್ರಹಗಳೂ ನಕ್ಷತ್ರಗಳೂ ಇಲ್ಲದೆ ಎಲ್ಲ ಕತ್ತಲಿನಿಂದ ಆವರಿಸಲ್ಪಟ್ಟಿತ್ತು. ಅಂದರೆ ಜಗತ್ ಪ್ರಳಯದ ನಂತರ ಇಡೀ ಜಗತ್ತಿನ ಎಲ್ಲೆಡೆ ಕತ್ತಲೆ ತುಂಬಿ ಹೋಗಿತ್ತು. ಆಗ ಬಾನಲ್ಲಿ ಚಂದ್ರನಿರಲಿಲ್ಲ. ಹಗಲು ರಾತ್ರಿಗಳಿರಲಿಲ್ಲ. ಬೆಂಕಿ, ಗಾಳಿ, ನೀರು, ನೆಲ ಯಾವುದೂ ಇರಲಿಲ್ಲ. ಬೇರಾವ ತೇಜಸ್ಸೂ ಇಲ್ಲದೆ, ಎಲ್ಲಿ ನೋಡಿದರೂ ಬರೀ ಶೂನ್ಯವೇ ತೋರುತ್ತಿತ್ತು. ನೋಡುವುದಕ್ಕೆ ಸಾಧ್ಯವಾದ ಯಾವ ವಸ್ತುಗಳು ಇಲ್ಲದ್ದರಿಂದ ಶಬ್ದ ಸ್ಪರ್ಶಗಳು ಕಂಡುಬರುತ್ತಿರಲಿಲ್ಲ. ಗಂಧ ಮತ್ತು ರೂಪಗಳ ಗೋಚರವೇ ಆಗುತ್ತಿರಲಿಲ್ಲ. ರಸವಿರಲೇ ಇರಲಿಲ್ಲ. ದಿಕ್ಕುಗಳೇ ಗೊತ್ತಾಗುತ್ತಿರಲಿಲ್ಲ.

'ಈ ರೀತಿಯಾಗಿ ಸೂರ್ಯಚಂದ್ರಾದಿಯಾದ ಚರಾಚರಾತ್ಮಕ ಪ್ರಪಂಚವಿಲ್ಲದೆ ಶೂನ್ಯ ಆವರಿಸಿತ್ತು. ಎಲ್ಲೆಲ್ಲೂ ನೀರವ ಸ್ಮಶಾನಮೌನ, ಕಗ್ಗತ್ತಲು. ಒತ್ತಾದ ತಮಸ್ಸಿನಿಂದ ಆವೃತವಾಗಿರುವ ಆ ಸಮಯದಲ್ಲಿ ಪರಬ್ರಹ್ಮವಸ್ತು ಒಂದೇ ಗೋಚರಿಸುತ್ತಿತ್ತು. ಯಾವ ಪರಬ್ರಹ್ಮವಸ್ತುವನ್ನು 'ತತ್ ಸದ್ ಬ್ರಹ್ಮ' ಎಂದು ಕರೆಯಲಾ ಗುತ್ತೋ, ಶ್ರುತಿಯು ತ್ರಿಕಾಲಾಬಾಧಿ ತವಾದ ಏಕಮಾತ್ರ ವಸ್ತುವೆಂದು ಪ್ರತಿಪಾದಿಸುವುದೋ, ಯಾವುದು ಸದ್ರೂಪದಿಂದ ಮತ್ತು ಅಸದ್ರೂಪದಿಂದ ಗೋಚರಿಸುವುದೋ, ಆ ಪರಬ್ರಹ್ಮವಸ್ತುವೊಂದೇ ಪ್ರಕಾಶಿಸುತ್ತಿದ್ದಿತು.


'ಯೋಗಿಗಳು ಮಾತ್ರ ಆ ಪರಬ್ರಹ್ಮವಸ್ತುವನ್ನು ಅಂತರ್ಹಿತವಾದ ಹೃದಯಾಕಾಶದಲ್ಲಿ ಎಡೆಬಿಡದೆ ಸಾಕ್ಷಾತ್ಕರಿಸುವರು. ಆ ವಸ್ತುವೆಂದಿಗೂ ಮನಸ್ಸಿಗೆ ಗೋಚರವಾಗಲಾರದು. ಮಾತುಗಳಿಗೆ ನಿಲುಕಲಾರದು. ಅದಕ್ಕೆ ಹೆಸರು, ರೂಪ, ಬಣ್ಣ, ಯಾವುದೊಂದು ಇಲ್ಲ. ಅದು ದಪ್ಪವಾದುದೂ ಅಲ್ಲ, ಕೃಶವಾ ದುದೂ ಅಲ್ಲ. ಅಲ್ಲದೆ ಅದು ಗಿಡ್ಡಾಗಿಯೂ ಇಲ್ಲ, ಹಗುರವಾ ಗಿಯೂ ಇಲ್ಲ, ಭಾರವಾಗಿಯೂ ಇಲ್ಲ. ಅದಕ್ಕೆ ಬೆಳವಣಿಗೆಯೂ ಇಲ್ಲ, ಸವೆದುಹೋಗುವಿಕೆಯೂ ಇಲ್ಲ. ಶ್ರುತಿಯೂ ಸಹ ಹೆದರಿ ಹೆದರಿಕೊಂಡೇ 'ಅಸ್ತಿ' (ಇದೆ) ಎಂಬುದಾಗಿ ಅದನ್ನು ಬಣ್ಣಿಸುವುದು. ಆ ಪರಬ್ರಹ್ಮವು ಸತ್ಯಸ್ವರೂಪವಾದುದು.

'ಅದಕ್ಕೆ ಯಾವಾಗಲೂ ಹುಟ್ಟೂ ಇಲ್ಲ-ನಾಶವೂ ಇಲ್ಲ. ಅಲ್ಲದೆ ಜ್ಞಾನಮಯವಾದುದು (ಸ್ವಪ್ರಕಾಶವಾದುದು) ಮತ್ತು ಅನಂತವಾದುದು (ಕೊನೆಯಿಲ್ಲದುದು). ಅದೂ ಅಲ್ಲದೆ, ಉತ್ತಮೋತ್ತಮವಾದ ಆನಂದಸ್ವರೂಪವಾದುದು, ಅದ್ಭುತವಾದ ತೇಜಸ್ಸಿನಿಂದ ಬೆಳಗುವಂಥದ್ದೂ ಆಗಿರುವುದು. ಪ್ರಮಾಣಗಳಿಗೆ ಅದು ನಿಲುಕು ವುದಿಲ್ಲ. ಅದಕ್ಕೆ ಬೇರೊಂದು ಆಧಾರವಾದುದೂ ಇಲ್ಲ. ಅದು ವಿಕಾರವನ್ನು ಹೊಂದತಕ್ಕುದಲ್ಲ, ಮತ್ತೆ ಅದಕ್ಕೆ ಆಕಾರವೇ ಇಲ್ಲ. ಸತ್ವರಜಸ್ತಮೋಗುಣಗಳಿಗೆ ಅಲ್ಲಿ ಅವಕಾಶವಿಲ್ಲ. ಯೋಗಿಗಳು ಮಾತ್ರ ಆ ವಸ್ತುವನ್ನು ಸಾಕ್ಷಾತ್ಕರಿಸಬಲ್ಲರು.

ಆ ವಸ್ತುವು, ಎಲ್ಲವನ್ನೂ ವ್ಯಾಪಿಸಿ ಎಲ್ಲೆಲ್ಲಿಯೂ ತಾನೇತಾನಾಗಿದೆ. ಅದನ್ನು ನಿರ್ವಿಕಲ್ಪವೆಂತಲೂ, ನಿರಾರಂಭವೆಂತಲೂ (ಕ್ರಿಯಾರಹಿತವಾದುದು) ನಿರ್ಮಾಯ (ಮಾಯೆಗೆ ಸಿಲುಕದೆ ಇರುವಂಥದು), ನಿರುಪದ್ರವ (ಯಾವ ಉಪದ್ರವಗಳೂ ಅದನ್ನು ಕೋಟಲೆಗೊಳಿ ಸಲಾರವು), ಅದ್ವಿತೀಯ (ಅದ ಕ್ಕಿಂತಲೂ ಎರಡನೆಯ ವಸ್ತುವಿಲ್ಲ), ಅವಕಾಶ, ಚಿದಾತ್ಮಕ ಎಂದು ಮುಂತಾದ ಸಂಜ್ಞಾ ವಚನಗಳಿಂದಲೂ, ನಾನಾವಿಧವಾಗಿ ಯೋಗಿಗಳು ಊಹಿಸಬಲ್ಲರು.

'ಅಂಥ ಪರಬ್ರಹ್ಮವಸ್ತುವು ಜಗತ್ತಿನಲ್ಲಿ ಬಹುಕಾಲ ನಿಶ್ಚಲವಾಗಿತ್ತು. ಬಹುಕಾಲದ ನಂತರ ಕ್ರಿಯಾಶೀಲವಾಗುವ ಇಚ್ಛೆಯಾಯಿತು. ನಿಷ್ಕ್ರಿಯವಾಗಿದ್ದ ಪರಬ್ರಹ್ಮವಸ್ತುವು. ತನ್ನ ಲೀಲಾಮಾತ್ರದಿಂದಲೇ ತನ್ನ ಶರೀರವನ್ನು ಸೃಷ್ಟಿಸಿತು. ಆ ಶರೀರವು ಸರ್ವೈಶ್ವರ್ಯಗುಣಗಳಿಂದ ಕೂಡಿತ್ತು. ಸರ್ವಜ್ಞಾನಮಯವಾದು ದಾಗಿತ್ತು. ಮಂಗಳಮಯವಾಗಿತ್ತು. ಆ ಬ್ರಹ್ಮವಸ್ತು ಮೂರ್ತಿಯು ಎಲ್ಲೆಡೆಯಲ್ಲೂ ಇರುವಂಥದ್ದಾಗಿತ್ತು. ಸರ್ವರೂಪವಾಗಿತ್ತು. ಎಲ್ಲವನ್ನೂ ಸೃಷ್ಟಿ ಮಾಡುವಂಥ ಮತ್ತು ಎಲ್ಲರಿಂದಲೂ ನಮಸ್ಕರಿಸಲ್ಪಡುವಂಥದ್ದಾಗಿತ್ತು. ಎಲ್ಲಕ್ಕೂ ಮೊದಲನೆಯ ದಾಗಿಯೂ, ಎಲ್ಲವನ್ನೂ ಕೊಡುವಂಥದ್ದೂ, ಎಲ್ಲ ರೀತಿಯ ಸಂಸ್ಕಾರರೂಪ ವಾದುದೂ ಆಗಿತ್ತು' ಅಂತ ನಾರದನಿಗೆ ಹೇಳುತ್ತಾನೆ.

ಗುಂಡಣ್ಣ





ಜಯಕಿಂತ ಮಿಗಿಲು ಪೌರುಷತೆ

ಎನಿತು ನೀಂ ಗೆಲಿದೆಯೆಂದೆನರು ಬಲ್ಲವರೆಂದುಮ್ |
ಎನಿತು ನೀಂ ಪೋರ್ದೆಯೆನಿತನು ಪೊತ್ತೆಯೆನುವರ್ ||
ಗಣನೆ ಸಲುವುದು ತೋರ್ದ ಪೌರುಷಕೆ, ಜಯಕಲ್ಲ |
ದಿನದಿನದ ಗರಡಿಯಿದು – ಮಂಕುತಿಮ್ಮ || 595 ||

ಪದ-ಅರ್ಥ: ಎನಿತು = ಎಷ್ಟು, ಗೆಲಿದೆಯೆಂದೆನರು = ಗೆಲಿದೆ (ಗೆದ್ದೆ) + ಎಂದು + ಎನರು, ಬಲ್ಲವರೆಂದುಮ್ = ಬಲ್ಲವರು (ತಿಳಿದವರು) + ಎಂದುಮ್ (ಎಂದಿಗೂ), ಪೋರ್ದೆ = -ಹೋರಾಡಿದೆ, ಪೊತ್ತೆ = ಹೊತ್ತೆ, ಗಣನೆ = ಲೆಕ್ಕ, ತೋರ್ದ = ತೋರಿದ, ಗರಡಿ = ವ್ಯಾಯಾಮ ಮಾಡುವ ಸ್ಥಳ.

ವಾಚ್ಯಾರ್ಥ: ತಿಳಿದವರು ಎಂದಿಗೂ ನೀನು ಎಷ್ಟು ಗೆದ್ದೆ ಎಂದು ಕೇಳುವುದಿಲ್ಲ. ಬದಲಾಗಿ ನೀನು ಎಷ್ಟು ಹೋರಾಡಿದೆ, ಎಷ್ಟು ಜವಾಬ್ದಾರಿಯನ್ನು ಹೊತ್ತೆ ಎಂದು ಕೇಳುತ್ತಾರೆ. ಕೊನೆಗೆ ಜಗತ್ತು ಗಣಿಸುವುದು ನೀನು ತೋರಿದ ಪೌರುಷಕ್ಕೆ, ಪಡೆದ ಜಯಕ್ಕಲ್ಲ. ಇದು ದಿನನಿತ್ಯದ ಗರಡಿ ಕೆಲಸ.

ವಿವರಣೆ: ಮೊನ್ನೆ ಅಮೆರಿಕೆದಲ್ಲಿ ಮಕ್ಕಳೊಂದಿಗೆ 'ಕಾರ್ಸ್' (Cars) ಎಂಬ ಅನಿಮೇಶನ್ ಚಲನಚಿತ್ರವನ್ನು ನೋಡಿದೆ. ಅದೊಂದು ಕಾರ್ ರೇಸಿನ ಕಥೆ. ಅದರ ನಾಯಕ ಕಾರು ಲೈಟನಿಂಗ್ ಮ್ಯಾಕ್‌ಕ್ವೀನ್. ಅದೊಂದು ಬಲು ವೇಗವಾಗಿ ಹೋಗುವ ಕಾರು. ಆದ್ದರಿಂದ ಅದಕ್ಕೆ ಜಂಬ, ಅಹಂಕಾರ. ಅನೇಕ ರೇಸುಗಳನ್ನು ಗೆದ್ದ ಅದಕ್ಕೆ ಅತ್ಯಂತ ಪ್ರಮುಖವಾದ ಪಿಸ್ಟನ್ ಕಪ್ ಗೆಲ್ಲುವ ಆಸೆ. ಅದು ಬದುಕಿನ ಪರಮಗುರಿ. ರೇಸ್ ನಡೆಯಿತು. ರೇಸಿನ ಕಾರುಗಳಲ್ಲಿ ಒಂದು ಕುತಂತ್ರಿ ಕಾರು. ಅದರ ಹೆಸರು ಚಿಕ್‌ಹಿಕ್ಸ್. ಇನ್ನೊಂದು ಉತ್ತಮ ರೇಸ್ ಕಾರು, ದಿ ಕಿಂಗ್. ರೇಸ್ ಕೊನೆಯ ಹಂತಕ್ಕೆ ಬಂದಾಗ ಚಿಕ್‌ಹಿಕ್ಸ್ ಕಾರು ದಿ ಕಿಂಗ್ ಕಾರಿನ ಬಳಿಗೆ ಬಂದು ಅದಕ್ಕೆ ಢಿಕ್ಕಿ ಹೊಡೆದು ದೂರ ತಳ್ಳಿ ಬಿಡುತ್ತದೆ. ಎರಡೂ ಕಾರುಗಳು ನುಜ್ಜುನುಜ್ಜಾಗುತ್ತವೆ. ಈಗ ಮ್ಯಾಕ್‌ಕ್ವೀನ್‌ಗೆ ಅತ್ಯಂತ ಸುಲಭದ ಜಯ ಸಾಧ್ಯ, ಅದರ ಮುಂದೆ ಯಾರೂ ಇಲ್ಲ. ಆದರೆ ಮ್ಯಾಕ್‌ಕ್ವೀನ್ ಪಕ್ಕಕ್ಕೆ ಸರಿದು, ಅಲ್ಲಿ ಬಿದ್ದಿದ್ದ ಕಿಂಗ್ ಕಾರಿನ ಹಿಂದೆ ಹೋಗಿ ಅದನ್ನು ಹಿಂದಿನಿಂದ ನೂಕಿಕೊಂಡು ಕೊನೆಯ ಗೆರೆಯನ್ನು ದಾಟಿಸಿ, ಅದನ್ನು ಚಾಂಪಿಯನ್ನನಾಗಿ ಮಾಡುತ್ತದೆ. ಆಗ ದಿ. ಕಿಂಗ್, 'ನಿನಗೆ ದೊರೆಯಬಹುದಾದ ಕಪ್ಪನ್ನು ಕಳೆದುಕೊಂಡೆಯಲ್ಲ' ಎಂದಾಗ ಮ್ಯಾಕ್‌ಕ್ವೀನ್ ಹೇಳುತ್ತದೆ, 'ನಾನು ಕಪ್ ಸೋತೆ, ಆದರೆ ರೇಸ್ ಗೆದ್ದೆ'. ಕೊನೆಗೆ ಕೆಲವರ್ಷಗಳ ನಂತರ ಜನ ನೆನಪಿಡುವುದು ರೇಸ್ ಗೆದ್ದವನನ್ನಲ್ಲ, ತನ್ನ ಧೀಮಂತಿಕೆಯನ್ನು ಮೆರೆದ ಮ್ಯಾಕ್‌ಕ್ವೀನ್‌ನನ್ನು. ಕಪ್ ಜೊತೆಗೆ ಮ್ಯಾಕ್‌ಕ್ವೀನ್ ಬೇಕಾದಷ್ಟು ಹಣ ಗಳಿಸಬಹುದಾಗಿತ್ತು. ಆದರೆ ಶಾಶ್ವತವಾಗಿಸುವ ಹೆಸರು ಉಳಿಯುತ್ತಿರಲಿಲ್ಲ. ಅದೇ ಕಗ್ಗದ ಮಾತು. ಪ್ರಪಂಚ ನಿಮ್ಮ ಜಯವನ್ನು ನೆನಪಿಡುವುದಿಲ್ಲ, ನೀವು ತೋರಿದ ಧೀಮಂತಿಕೆಯನ್ನು ಪೌರುಷತೆಯನ್ನು ನೆನಪಿಡುತ್ತದೆ.

ಮಹಾತ್ಮಾ ಗಾಂಧೀಜಿ ತೀರಿಕೊಂಡ ದಿನ ಆ ಸುದ್ದಿ ಕಾಳ್ಗಿಚ್ಚಿನಂತೆ ಎಲ್ಲೆಡೆಗೆ ಹರಡಿ, ಅಮೆರಿಕದ ನ್ಯೂಯಾರ್ಕ್‌ನಲ್ಲಿದ್ದ ವಿಶ್ವಸಂಸ್ಥೆಯನ್ನು ತಲುಪಿತು. ಆಗ ನಡೆದದ್ದು ಪವಾಡ. ವಿಶ್ವಸಂಸ್ಥೆಯ ಕಾರ್ಯದರ್ಶಿ ಕಟ್ಟಡದ ಮೇಲಿದ್ದ ಭಾರತದ ಧ್ವಜವನ್ನು ಗಾಂಧೀಜಿಯ ಗೌರವಕ್ಕಾಗಿ ಅರ್ಧಕ್ಕೆ ಇಳಿಸಿದರು. ಅಷ್ಟೇ ಅಲ್ಲ, ಪ್ರಪಂಚದ ಎಲ್ಲ ದೇಶದ ಧ್ವಜಗಳನ್ನು ಮತ್ತು ವಿಶ್ವಸಂಸ್ಥೆಯ ಧ್ವಜವನ್ನು ಅರ್ಧಕ್ಕೆ ಇಳಿಸಲು ಆಜ್ಞೆ ಮಾಡಿದರು. ವಿಶ್ವಸಂಸ್ಥೆಯ ಪ್ರಾರಂಭದಿಂದ ಈ ಕ್ಷಣದವರೆಗೆ ಅಂಥದ್ದು ಎಂದೂ ಆಗಿರಲಿಲ್ಲ. ಅದೂ ಅಲ್ಲದೆ ಯಾವುದೇ ಅಧಿಕಾರವನ್ನು ಹೊಂದಿರದ ವ್ಯಕ್ತಿಯ ಗೌರವಕ್ಕೆ ಪ್ರಪಂಚದ ಎಲ್ಲ ದೇಶದ ಧ್ವಜಗಳನ್ನು ಅರ್ಧಕ್ಕಿಳಿಸಿದ್ದು ಅದೇ ಮೊದಲ ಸಲ ಮತ್ತು ಈ ಗಳಿಗೆಯವರೆಗೆ ಕಡೆಯ ಸಲ.

ಕಗ್ಗ ತಿಳಿ ಹೇಳುತ್ತದೆ. ಬಲ್ಲವರು ನೀವು ಎಷ್ಟು ಗಳಿಸಿದಿರಿ ಎಂದು ಕೇಳುವುದಿಲ್ಲ. ಹೇಗೆ ಹೋರಾಡಿದಿರಿ, ಯಾವ ಜವಾಬ್ದಾರಿಗಳನ್ನು ಹೊತ್ತಿರಿ ಎಂದು ಕೇಳುತ್ತಾರೆ. ಜನಮಾನಸದಲ್ಲಿ ಕೊನೆಯವರೆಗೆ ಉಳಿಯುವುದು ನಾವು ತೋರಿದ ಪೌರುಷ, ಪ್ರಯತ್ನ, ಜಯವಲ್ಲ. ಈ ಪ್ರಕ್ರಿಯೆ ಪ್ರತಿದಿನದ ಗರಡಿಯ ಕೆಲಸ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಬುಧವಾರ ಮಾರ್ಚ್ 30, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ –ಶಿಶಿರ ಋತು ಮೀನ ಮಾಸದ 16 ನೇ ದಿನ ತಿಥಿ: (ಫಾಲ್ಗುಣ ಕೃಷ್ಣ) ತ್ರಯೋದಶಿ ಗಂ. 13-20 ನಕ್ಷತ್ರ: ಶತಭಿಷ ಗಂ. 10-49 ಯೋಗ: ಶುಭ ಗಂ. 13-01, ಕರಣ: ವಣಿಜ ಗಂ. 13-20. ರಾಹುಕಾಲ : ಮಧ್ಯಾಹ್ನ 12:00 – 01:30 ಸೂರ್ಯೋದಯ : 06-31 ಸೂರ್ಯಾಸ್ತ : 06-39 ಮುಸ್ಲಿಂ ದಿನಾಂಕ : 26 ಶಬನ್ ದಿನ ವಿಶೇಷ : ಮಧು ಕೃಷ್ಣತ್ರಯೋದಶಿ, ವಾರುಣಿ ಅದೃಷ್ಟ ಸಂಖ್ಯೆ : 2, 9

ಮೇಷ: ಕೆಲಸದ ಒತ್ತಡದಿಂದ ದೇಹಾಯಾಸ ತೋರಿ ಬಂದು ಆರೋಗ್ಯದ ಮೇಲೆ ಪರಿಣಾಮ ಬೀರಲಿದೆ. ಅನ್ನದಾನ ಮಾಡುವ ಯೋಚನೆ ಬರಲಿದೆ. ಸ್ಟೇಷನರಿ ಮತ್ತು ಫ್ಯಾನ್ಸಿ ವಸ್ತುಗಳ ಹೆಚ್ಚಿನ ಮಾರಾಟದಿಂದ ಲಾಭ ಹೊಂದುವಿರಿ.

ವೃಷಭ: ರಾಜಕಾರಣಿಗಳಿಗೆ ಅಧಿಕಾರ ಸಿಗುವಂತಹ ಶುಭಸುದ್ದಿ. ಸಾಧ್ಯಾಸಾಧ್ಯತೆಗಳನ್ನು ಅರಿತುಕೊಂಡು ವ್ಯವಹಾರದಲ್ಲಿ ಮುಂದುವರೆಯುವುದು ಉತ್ತಮ. ಪ್ರತಿಫಲವನ್ನು ಅಪೇಕ್ಷಿಸಿ ಯಾವ ಕೆಲಸವನ್ನು ಮಾಡಬೇಡಿ.

ಮಿಥುನ: ಕಾರ್ಯಕ್ಷೇತ್ರದಲ್ಲಿ ಎಚ್ಚರ ವಹಿಸದೆ ಅತಿಯಾದ ವಿಶ್ವಾಸದಿಂದ ಮುಂದುವರೆದರೆ ನಿಮ್ಮ ಮೇಲಧಿಕಾರಿಗಳಿಂದ ಮುಖಭಂಗವಾಗಬಹುದು. ಕುಟುಂಬದಲ್ಲಿ ಊಹೆಗೂ ನಿಲುಕದ ಜವಾಬ್ದಾರಿ ನಿಭಾಯಿಸಬೇಕಾಗುತ್ತದೆ.

ಕರ್ಕಾಟಕ: ಸ್ವತ್ತು ವಿಚಾರದಲ್ಲಿ ಬಂಧುಗಳು ನೆರವಿಗೆ ಬರುವರು. ತಂದೆಯವರ ಮನಸ್ಸನ್ನು ನೋಯಿಸದೇ, ತಂದೆಯವರ ಮಾತಿನಂತೆ ನಡೆಯುವುದು ಶ್ರೇಯಸ್ಕರವಾಗಿರುತ್ತದೆ. ಹೊಸ ಉದ್ಯೋಗ ದೊರೆತು ಮನೆಯವರಿಗೆ ಸಮಾಧಾನ.

ಸಿಂಹ: ಕೃಷಿಗೆ ಸಂಬಂಧಿಸಿದಂತೆ ಕೆಲಸಗಳು ಯಾವುದೇ ಅಡೆತಡೆಗಳಿಲ್ಲದೆ ಮುಂದುವರಿಯುವುದು. ವಿದೇಶಿ ವಸ್ತುಗಳ ಖರೀದಿಗಾಗಿ ಧನ ವ್ಯಯವಾಗಬಹುದು. ವಿದ್ಯಾರ್ಥಿಗಳಿಗೆ ಓದಿನಲ್ಲಿ ಆಸಕ್ತಿ ಹೆಚ್ಚಲಿದೆ. ಅದೃಷ್ಟದ ದಿನವಾಗಿದೆ.

ಕನ್ಯಾ: ಅಸಹಾಯಕ ಪರಿಸ್ಥಿತಿಯಲ್ಲಿರುವ ನಿಮಗೆ ಪರಿಣಿತರ ಸಲಹೆ, ಸೂಚನೆಗಳೊಂದಿಗೆ ಮುಂದುವರಿದರೆ ಪರಿಸ್ಥಿತಿ ತಿಳಿಯಾಗುತ್ತದೆ, ಕಾರ್ಯ ನೆರವೇರುವುದು. ದುರ್ಗಾದೇವಿಯ ಆರಾಧನೆಯು ಮನಸ್ಸಿಗೆ ನೆಮ್ಮದಿ.

ತುಲಾ: ನಿಮಗಿರುವ ಸ್ನೇಹಪರ ಸ್ವಭಾವದಿಂದಾಗಿ ವೈಯಕ್ತಿಕ ಸ್ಥಾನಮಾನಗಳು ಲಭಿಸುವುದು. ಅವಿರೋಧ ಆಯ್ಕೆಗೆ ಒಲವು ತೋರಿದ್ದರಿಂದ ನೀವು ಸುಲಭವಾಗಿ ಸ್ಥಾನಗಳಿಸುವಲ್ಲಿ ಸಫಲರಾಗುವಿರಿ. ಕೆಂಪು ವಸ್ತ್ರ ಶುಭದಾಯಕ.

ವೃಶ್ಚಿಕ: ಬಹಳ ದಿನಗಳಿಂದ ನಿರೀಕ್ಷಿಸಿದ ರೀತಿಯಲ್ಲಿ ಉದ್ಯೋಗ ಸಿಕ್ಕದಿದ್ದರೂ, ಸಣ್ಣಮಟ್ಟನ ಉದ್ಯೋಗ ಸಿಕ್ಕಿರುವುದು ಸಂತೋಷ ಪಡುವ ವಿಚಾರ. ಮುಂದಿನ ದಿನಗಳಲ್ಲಿ ನಿಮ್ಮ ಎಲ್ಲಾ ಯೋಜನೆಗಳಲ್ಲಿ ಪ್ರಾಬಲ್ಯ ಸಾಧಿಸುವಿರಿ.

ಧನು: ಮುಕ್ತ ಮಾತುಕತೆ ಮೂಲಕ ಕಾರ್ಮಿಕರ ಸಮಸ್ಯೆ ಬಗೆಹರಿಸುವಿರಿ. ಎಣ್ಣೆ ಮತ್ತು ಬೇಳೆ ಕಾಳು ವ್ಯಾಪಾರದಲ್ಲಿ ಮಾರಾಟ ಅಧಿಕವಾಗಿರಲಿದೆ. ಮಕ್ಕಳಿಗೆ ಖರ್ಚುವೆಚ್ಚಗಳ ಬಗ್ಗೆ ನಿಗಾ ವಹಿಸಲು ಹೇಳಬೇಕಾದ ಪರಿಸ್ಥಿತಿ ಬರಲಿದೆ.

ಮಕರ: ಸತ್ಕಾರ ಸಮಾರಂಭಗಳಲ್ಲಿ ಭಾಗವಹಿಸುವಿರಿ ಅಥವಾ ಬಂಧುಮಿತ್ರರು ಮನೆಗೆ ಬರಲಿದ್ದಾರೆ. ಟ್ರಾವೆಲ್ ಏಜೆನ್ಸಿಯವರಿಗೆ ಆರ್ಥಿಕ ಮುನ್ನಡೆ ಇದ್ದು ಹೆಚ್ಚಿನ ಅವಕಾಶಗಳನ್ನು ಕಾಣುವಿರಿ. ಉದ್ಯಮಗಳಲ್ಲಿ ಸ್ವಂತ ಶ್ರಮ ಅಗತ್ಯ.


ಕುಂಭ: ವಿವಾಹದ ವಿಷಯದಲ್ಲಿ ಮೌನ ಮುರಿಯುವುದು ಅನಿವಾರ್ಯವಾಗಬೇಕಾಗುವುದು. ಕೃಷಿ ಕಾರ್ಯಗಳು ಈ ದಿನ ಬಿಡುವಿಲ್ಲದೆ ನಡೆಯಲಿದೆ. ಯಾವುದೇ ರೀತಿಯಲ್ಲಿ ಹಣಕಾಸಿನ ಕೊರತೆ ಇರುವುದಿಲ್ಲ.

ಮೀನ: ನಿಮ್ಮ ಎಲ್ಲಾ ಪ್ರಯತ್ನಗಳು ಫಲಕಾರಿಯಾಗಿ ಆರ್ಥಿಕವಾಗಿ ಅನುಕೂಲವಾಗುವುದು. ಸಾಮಾಜಿಕ ಬದುಕಿನಲ್ಲಿ ಹೊಸ ಹುರುಪು ಕಾಣಲಿದ್ದೀರಿ. ದಂತ ವೇದನೆ ಸಂಭವಿಸಿ ವೈದ್ಯರನ್ನು ಸಂಪರ್ಕಿಸಬೇಕಾಗಬಹುದು.

ಪದಬಂಧ 4913 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈ ಪ್ರಕಾರವಾಗಿ ಕಾಣುತ್ತಿರುವ ಗೋಡೆ (3)
3.ಕಿರುಬೆರಳ ಪಕ್ಕದ ಕೈ ಬೆರಳು (4)
5.ಇದು ಹೊಸದು (3)
7.ಉತ್ತೇಜನ ಕೊಡುವವನು (4)
9.ಇದು ಹಾರ ಧರಿಸಿ ನಡೆಸಿದ ವ್ಯಾಪಾರ (4)
11.ಮಗನೊಡನಿರುವ ಪುತ್ರಿ (3)
14.ಆಟದ ಬಯಲು (4)
15.ಕಲೆಸಿದ ಗೋಧಿಹಿಟ್ಟು (3)

ಮೇಲಿಂದ ಕೆಳಕ್ಕೆ
1.ಹಿಂದಿನ ಕಾಲದ್ದನ್ನು ಹೀಗೆನ್ನಿ (3)
2.ದ್ರವ ಒಸರುವ ಜಿಹ್ವೆ (3)
3.ಭಗವಂತನ ಸಾಕ್ಷಾತ್ಕಾರ ಮಾಡುವುದು (4)
4.ಕಿವಿ ಕೇಳಿಸದವನು (2)
6.ಶೌರ್ಯಸಾಹಸಗಳನ್ನು ವರ್ಣಿಸುವ ಕಾವ್ಯ (4)
7.ಹರನನ್ನು ಕೊನೆಗಿಟ್ಟು ಸ್ತುತಿಸಿದರೂ ಬಿದ್ದ ಹೊಡೆತ! (3)
8.ವಾಡಿಕೆಯಂತೆ ಗೊಲ್ಲ ಬಂದಿದ್ದಾನೆ (4)
10.ಅತಿ ಘೋರವಾದ ವಿಷ (4)
11.ಕರುವಿಗೆ ತೋರಿಸಿದ ದಯೆ (3)
12.ಪಚನಾಂಗ ಉಲ್ಟಾ ಕಾಣುತ್ತಿದೆ (3)
13.ಬಯಕೆಯು ಉಲ್ಟಾ ಪಲ್ಟಾ ಆಗಿಬಿಟ್ಟಿದೆ (2)



4912ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಭಿಷೇಕ 3.ಅಸ್ತಿಭಾರ 5.ದಿವಾನ 7.ಹವನ 9.ಮಯೂರ 10.ರಮಣ 11.ಶಕಟ 15.ಮೃಗಜಲ 16.ತಾರುಮಾರು
ಮೇಲಿಂದ ಕೆಳಕ್ಕೆ: 1.ಅನಾದಿ 2.ಕರ್ಣ 3.ಅಸಹಕಾರ 4.ರಫ್ತು 6.ವಾಗ್ಗೇಯಕಾರ 8.ನಯವಂಚಕ 9. ಮರಣಕಾಲ 12.ಟಗರು 13.ತ್ಯುಮ್ಮ 14.ಕ್ಷೌತಾ

ಸುಡೊಕು 5299

	5		7		2		8	6
						3	7	4
	7	8	3		9		1	
1		4			5		2	3
				3				
8		7	6				5	9
		3	9		6	5	4	8
5								
	8		5		4		3	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5298 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ಹಣ ವಸೂಲಿ: ಏಳು ಪೊಲೀಸರ ಅಮಾನತು

ಶಿವಮೊಗ್ಗ: ಹೆದ್ದಾರಿಗಳಲ್ಲಿ ಮರಳು ಮತ್ತಿತರ ಸರಕು ಸಾಗಣೆ ವಾಹನಗಳಿಂದ ಹಣ ವಸೂಲಿ ಮಾಡುತ್ತಿದ್ದ ಆರೋಪದ ಮೇಲೆ 7 ಪೊಲೀಸರನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮಾನತು ಮಾಡಿದ್ದಾರೆ.

ಪೊಲೀಸ್ ಸಿಬ್ಬಂದಿ ಸುರೇಶ್, ಸುದರ್ಶನ್, ನಾಗರಾಜ್, ಲೋಕೇಶ್, ಗಂಗಾಧರ್, ಕುಮಾರ್, ಬಸವಲಿಂಗಪ್ಪ ಅಮಾನತುಗೊಂಡವರು.

ಪೊಲೀಸ್ ಗಸ್ತುವಾಹನದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವರು ಹೆದ್ದಾರಿಗಳಲ್ಲಿ ಸಂಚರಿಸುವ ಸರಕು ಸಾಗಣೆ ವಾಹನಗಳನ್ನು ತಡೆದು, ಅವರಿಂದ ಹಣ ವಸೂಲಿ ಮಾಡುತ್ತಿದ್ದರು ಎಂಬ ಆರೋಪದ ಮೇಲೆ ಅಮಾನತು ಮಾಡಲಾಗಿದೆ. ಇಲಾಖಾ ತನಿಖೆಗೆ ಆದೇಶಿಸಲಾಗಿದೆ ಎಂದು ಎಸ್‌ಪಿ ಬಿ.ಎಂ. ಲಕ್ಷ್ಮೀಪ್ರಸಾದ್ ಮಾಹಿತಿ ನೀಡಿದರು.

ಅಡುಗೆ ಅನಿಲ ಸಿಲಿಂಡರ್ ಮನೆ ಮುಂದಿಟ್ಟು ಹೂವಿನ ಹಾರ ಹಾಕಿ, ಜಾಗಟೆ ಬಾರಿಸಿ ಪ್ರತಿಭಟನೆ ನಾಳೆ

ಕೇಂದ್ರದಿಂದ ಜನರ ಜೇಬಿಗೆ ಕತ್ತರಿ: ಡಿಕೆಶಿ ತರಾಟೆ

ಪ್ರಜಾವಾಣಿ ವಾರ್ತೆ


ಡಿ.ಕೆ. ಶಿವಕುಮಾರ್

ಬೆಂಗಳೂರು: 'ಇಂಧನ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಸುವ ಮೂಲಕ ಕೇಂದ್ರ ಸರ್ಕಾರ ಜನರ ಪಿಕ್ ಪಾಕೆಟ್ ಮಾಡುತ್ತಿದೆ. ಇದನ್ನು ಪ್ರತಿಭಟಿಸಿ ಇದೇ 31ರಂದು ಕಾಂಗ್ರೆಸ್ ನಾಯಕರು, ಕಾರ್ಯಕರ್ತರು ತಮ್ಮ ವಾಹನ, ಅಡುಗೆ ಅನಿಲ ಸಿಲಿಂಡರ್‌ನ್ನು ಮನೆ ಮುಂದಿಟ್ಟು ಹೂವಿನ ಹಾರ ಹಾಕಿ, ಜಾಗಟೆ ಬಾರಿಸಿ ಪ್ರತಿಭಟಿಸಲಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿಳಿಸಿದರು.

31ರಂದು ರಾಜ್ಯಕ್ಕೆ ರಾಹುಲ್ ಗಾಂಧಿ

'ಶಿವಕುಮಾರ ಸ್ವಾಮೀಜಿ ಅವರ 115ನೇ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಇದೇ 31ರಂದು ಮಧ್ಯಾಹ್ನ 3.30ಕ್ಕೆ ಪಕ್ಷದ ನಾಯಕ ರಾಹುಲ್ ಗಾಂಧಿ ತುಮಕೂರಿನ ಸಿದ್ದಗಂಗಾ ಮಠಕ್ಕೆ ಭೇಟಿ ನೀಡಲಿದ್ದಾರೆ' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

'ಅಂದು ಮಧ್ಯಾಹ್ನ 2 ಗಂಟೆಗೆ ಬೆಂಗಳೂರು ತಲುಪಲಿರುವ ರಾಹುಲ್, ನೇರವಾಗಿ ಸಿದ್ದಗಂಗಾ ಮಠಕ್ಕೆ ತೆರಳುವರು. ಬಳಿಕ ಬೆಂಗಳೂರಿನಲ್ಲಿ ಪಕ್ಷದ ಕಚೇರಿಯಲ್ಲಿ ಬಿಬಿಎಂಪಿಯ ವ್ಯಾಪ್ತಿಯ ಪಕ್ಷದ ನಾಯಕರನ್ನು ಭೇಟಿ ಮಾಡಲಿದ್ದಾರೆ. ಏ.1ರಂದು ವಿವಿಧ ಮುಖಂಡರ ಸಭೆ ನಡೆಸುವರು ಎಂದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಈ ವಿಷಯ ತಿಳಿಸಿದ ಅವರು, 'ಅಂದು ಬೆಳಿಗ್ಗೆ 8 ಗಂಟೆಯಿಂದ 11 ಗಂಟೆ ಮಧ್ಯೆ ಪ್ರತಿಭಟನೆ ನಡೆಸಿ, ಅದರ ವಿಡಿಯೊ ತುಣುಕು ಮತ್ತು ಭಾವಚಿತ್ರವನ್ನು ಸಾಮಾಜಿಕ ಜಾಲತಾಣಗಳಲ್ಲಿ ಪ್ರಧಾನಿ ನರೇಂದ್ರ ಮೋದಿಗೆ ಟ್ಯಾಗ್ ಮಾಡಬೇಕು' ಎಂದು ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರಿಗೆ ಸೂಚಿಸಿದರು.

'ಬೆಲೆ ಏರಿಕೆ ಖಂಡಿಸಿ ಏ.7ರಂದು ಜಿಲ್ಲಾ ಮಟ್ಟದಲ್ಲಿ ರ್‍ಯಾಲಿ ಹಮ್ಮಿಕೊಳ್ಳಲಾಗುವುದು. ಏ.2ರಂದು ಯುಗಾದಿ, ಏ.5ರಂದು ಬಾಬು ಜಗಜೀವನ್‌ರಾಮ್ ಜನ್ಮದಿನದ ಕಾರಣ 7ರಂದು ರ್‍ಯಾಲಿ ನಡೆಸಲು ಜಿಲ್ಲಾ ಕಾಂಗ್ರೆಸ್ ಸಮಿತಿಗಳಿಗೆ ಸೂಚಿಸಲಾಗಿದೆ.' ಎಂದರು.

ಬಿಜೆಪಿಯಿಂದ ಹೈಜಾಕ್: 'ರಾಜ್ಯದ ನಾಯಕರ ಸಲಹೆಯಂತೆ ಸಿದ್ಧಗಂಗಾ ಮಠಕ್ಕೆ ರಾಹುಲ್ ಗಾಂಧಿ ಭೇಟಿ ನೀಡುತ್ತಿದ್ದಾರೆಯೇ' ಎಂಬ ಪ್ರಶ್ನೆಗೆ, 'ಗಾಂಧಿ ಕುಟುಂಬ ಮೊದಲಿನಿಂದಲೂ ಮಠಗಳಿಗೆ ಗೌರವ ನೀಡುತ್ತಿದೆ. ಇದೇನು ಹೊಸದಾಗಿ ಸೃಷ್ಟಿ ಮಾಡುತ್ತಿಲ್ಲ. ಆದರೆ, ಈಗ ಬಿಜೆಪಿಯ ಕೆಲವು ನಾಯಕರು ಅದನ್ನು ಹೈಜಾಕ್ ಮಾಡಲು ಹೊರಟಿದ್ದಾರೆ' ಎಂದರು.

ಅವಧಿಪೂರ್ವ ಚುನಾವಣೆ ಬರುವ ಸಾಧ್ಯತೆ ಇದೆಯೇ ಎಂಬ ಪ್ರಶ್ನೆಗೆ, 'ಈ ತಿಂಗಳು ಅಥವಾ ನಾಳೆಯೇ ಮಾಡಲಿ. ನವೆಂಬರ್ 27ಕ್ಕೆ ಚುನಾವಣೆ ಪ್ರಕಟಿಸಲಿ. ಕಾಂಗ್ರೆಸ್ ಸಜ್ಜಾಗಿದೆ' ಎಂದರು.

'ನವೆಂಬರ್ 27 ಎಂದು ಹೇಗೆ ಹೇಳುತ್ತೀರಾ' ಎಂಬ ಪ್ರಶ್ನೆಗೆ, 'ನಿಮಗೆ ಮಾಹಿತಿ ನೀಡಲು ಮೂಲಗಳು ಇರುವಂತೆ ನಮಗೂ ಇದ್ದಾರೆ' ಎಂದರು.

ಪಠ್ಯಪುಸ್ತಕದಲ್ಲಿ ಟಿಪ್ಪು ಅವರ ವಿಚಾರಕ್ಕೆ ಕತ್ತರಿ ಹಾಕುವ ಸರ್ಕಾರದ ನಿರ್ಧಾರದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಬ್ರಿಟಿಷರ ಜತೆ ಟಿಪ್ಪು ಹೋರಾಟ, ಕೊಲ್ಲೂರು, ಶೃಂಗೇರಿ ಮಠಗಳಿಗೆ ಏನೇನು ಮಾಡಿದ್ದ ಎಂಬುದು ಇತಿಹಾಸದಲ್ಲಿದ್ದು, ತಿರುಚಲಾಗದು' ಎಂದರು.

ಕಾರ್ಯಾಧ್ಯಕ್ಷರಾದ ರಾಮಲಿಂಗಾ ರೆಡ್ಡಿ, ಆರ್. ಧ್ರುವನಾರಾಯಣ, ಸಲೀಂ ಅಹ್ಮದ್, ಎಂ.ಬಿ.ಪಾಟೀಲ ಇದ್ದರು.

ರಸ್ತೆ ಬದಿ ಮಲಗಿದ್ದ ಹಕ್ಕಿಪಿಕ್ಕಿ ಬಾಲಕಿ ವಾಹನ ಹರಿದು ಸಾವು

ಬೆಂಗಳೂರು: ನಗರದ ಕೆ.ಆರ್. ಮಾರುಕಟ್ಟೆ ಪ್ರದೇಶದಲ್ಲಿ ಮಂಗಳವಾರ ನಸುಕಿನಲ್ಲಿ ಅಪಘಾತ ಸಂಭವಿಸಿದ್ದು, ಬೊಲೆರೊ ವಾಹನದ ಹರಿದು ಏಳು ವರ್ಷದ ಬಾಲಕಿ ಶಿವನ್ಯಾ ಮೃತಪಟ್ಟಿದ್ದಾಳೆ.

'ಮೃತ ಶಿವನ್ಯಾ, ತಮಿಳುನಾಡು ವೆಲ್ಲೂರಿನ ಹಕ್ಕಿಪಿಕ್ಕಿ ಜನಾಂಗದವಳು. ಅಪಘಾತದಿಂದ ತೀವ್ರ ಗಾಯಗೊಂಡು ಬಾಲಕಿ ಅಸುನೀಗಿದ್ದಾಳೆ. ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ, ಸಂಬಂಧಿಕರಿಗೆ ಹಸ್ತಾಂತರಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಬೊಲೆರೊ ಗೂಡ್ಸ್ ವಾಹನದ ಚಾಲಕನ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿದೆ. ಮೃತ ಬಾಲಕಿ ತಂದೆ ವೆಂಕಟೇಶ್ ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅಪಘಾತದ ನಂತರ ವಾಹನ ಸ್ಥಳದಲ್ಲೇ ಬಿಟ್ಟು ಚಾಲಕ ಪರಾರಿಯಾಗಿದ್ದಾನೆ' ಎಂದೂ ತಿಳಿಸಿದರು.

ಜಾತ್ರೆಗೆ ಬಂದಿದ್ದ ಕುಟುಂಬ: 'ಬಾಲಕಿ ಪೋಷಕರು ಹಾಗೂ ಸಂಬಂಧಿಕರು, ಅರಣ್ಯದಲ್ಲಿ ಸಿಗುವ ವಸ್ತುಗಳನ್ನು ಬಳಸಿ ಕಿವಿಯೋಲೆ, ಸರ ಹಾಗೂ ಇತರೆ ಅಲಂಕಾರಿಕ ವಸ್ತುಗಳನ್ನು ತಯಾರಿಸುತ್ತಾರೆ. ಜಾತ್ರೆಗಳಿಗೆ ಹೋಗಿ ಮಾರುತ್ತಾರೆ. ಅದರಿಂದ ಬಂದ ಹಣದಲ್ಲಿ ಜೀವನ ಸಾಗಿಸುತ್ತಾರೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಬಾಲಕಿ, ತಂದೆ–ತಾಯಿ ಸೇರಿ ಒಂಬತ್ತು ಮಂದಿ ಇತ್ತೀಚೆಗೆ ಯಲಹಂಕ ಬಳಿಯ ಹುಸ್ಕೂರಿನಲ್ಲಿ ನಡೆಯುತ್ತಿದ್ದ ಜಾತ್ರೆಗೆ ಬಂದಿದ್ದರು. ಅಲಂಕಾರಿಕ ವಸ್ತುಗಳನ್ನು ಮಾರಿದ್ದರು. ಜಾತ್ರೆ ಮುಗಿಸಿ ತಮ್ಮೂರಿಗೆ ಹೋಗಲೆಂದು ಸಿಟಿ ಮಾರ್ಕೆಟ್ ಬಳಿಯ ಬಸ್ ತಂಗುದಾಣಕ್ಕೆ ಸೋಮವಾರ ರಾತ್ರಿ ಬಂದಿದ್ದರು' ಎಂದೂ ತಿಳಿಸಿದರು.

ಬಸ್ ಸಿಗದಿದ್ದರಿಂದ ಮಳಿಗೆ ಎದುರು ನಿದ್ದೆ: 'ಬಾಲಕಿ ಪೋಷಕರು ಹಾಗೂ ಸಂಬಂಧಿಕರು, ನಿಲ್ದಾಣದಲ್ಲಿ ತಡರಾತ್ರಿಯವರೆಗೂ ಕಾದರೂ ಬಸ್ ಸಿಕ್ಕಿರಲಿಲ್ಲ. ನಿಲ್ದಾಣದಲ್ಲಿ ಮಲಗಲು ಸಾಧ್ಯವಾಗಿರಲಿಲ್ಲ. ಹೀಗಾಗಿ, ನಿಲ್ದಾಣದಿಂದ ನಡೆದುಕೊಂಡು ಕೆ.ಆರ್. ಮಾರುಕಟ್ಟೆ ಪ್ರದೇಶಕ್ಕೆ ಬಂದಿದ್ದರು. ತೆಂಗಿನಕಾಯಿ ಮಂಡಿಯ ಮಳಿಗೆಗಳ ಎದುರು ಖುಲ್ಲಾ ಜಾಗವಿದ್ದು, ಅಲ್ಲಿಯೇ ಮಲಗಿದ್ದರು' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ನಸುಕಿನಲ್ಲಿ ಮಾರುಕಟ್ಟೆಗೆ ಬರುವ ವಾಹನಗಳು, ಮಳಿಗೆ ಎದುರು ಎಲ್ಲೆಂದರಲ್ಲಿ ಸಂಚರಿಸುತ್ತವೆ. ಕೆಲವರು,ಅಲ್ಲಿಯೇ ವಾಹನ ನಿಲುಗಡೆ ಮಾಡುತ್ತಾರೆ. ಹೂವು ತಂದಿದ್ದ ಬೊಲೆರೊ ವಾಹನದ ಚಾಲಕ, ಅವುಗಳನ್ನು ಮಾರುಕಟ್ಟೆಯಲ್ಲಿ ಇಳಿಸಿದ್ದರು. ವಾಪಸು ಹೋಗುವಾಗ ಮಳಿಗೆ ಎದುರು ನಿರ್ಲಕ್ಷ್ಯದಿಂದ ವೇಗವಾಗಿ ವಾಹನ ಚಲಾಯಿಸಿದ್ದರು. ಅದೇ ವೇಳೆ ವಾಹನದ ಮುಂಭಾಗದ ಎಡಬದಿ ಚಕ್ರ ಬಾಲಕಿ ಮೈ ಮೇಲೆ ಹರಿದಿತ್ತು' ಎಂದು ತಿಳಿಸಿದರು

'ವೈದ್ಯರಿಂದ ಗರ್ಭಕೋಶ ತೆಗೆಯುವ ದಂಧೆ'

ಬೆಂಗಳೂರು: 'ಹೊಟ್ಟೆನೋವು ಎಂದು ಆಸ್ಪತ್ರೆಗಳಿಗೆ ಬರುವ ಹೆಣ್ಣುಮಕ್ಕಳಿಗೆ ಗರ್ಭಕೋಶ ಸಮಸ್ಯೆ ಇದೆ ಎಂದು ಹೆದರಿಸಿ, ಗರ್ಭಕೋಶ ತೆಗೆಸುವ ದಂಧೆ ವೈದ್ಯರಿಂದಲೇ ನಡೆಯುತ್ತಿದೆ' ಎಂದು ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಕೆ.ಜಿ.ನಾಗಲಕ್ಷ್ಮಿಬಾಯಿ ಮಂಗಳವಾರ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಅವರು, 'ಹಣದ ಆಸೆಗಾಗಿ ವೈದ್ಯರೇ ಈ ಕೃತ್ಯ ಎಸಗಿದ್ದಾರೆ. ಕಲಬುರಗಿ, ಹಾವೇರಿ, ಬೀದರ್, ಚಿಕ್ಕಮಗಳೂರು, ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳು ಸೇರಿದಂತೆ ರಾಜ್ಯದಲ್ಲಿ 5 ಸಾವಿರಕ್ಕೂ ಹೆಚ್ಚು ಮಂದಿಗೆ ಗರ್ಭಕೋಶ ತೆಗೆಯಲಾಗಿದೆ' ಎಂದು ದೂರಿದರು.

'ಹೊಟ್ಟೆನೋವು ಮತ್ತು ಇತರ ಸಮಸ್ಯೆಗಳಿಂದ ಆಸ್ಪತ್ರೆಗಳಿಗೆ ಬರುವ ವಿವಾಹಿತ ಮಹಿಳೆಯರು ಮತ್ತು ಅವಿವಾಹಿತ ಹೆಣ್ಣುಮಕ್ಕಳಿಗೆ, 'ಹೊಟ್ಟೆಯಲ್ಲಿ ಗಡ್ಡೆ ಬೆಳೆದಿದೆ, ತೆಗೆಯದಿದ್ದರೆ ಜೀವಕ್ಕೆ ಕುತ್ತು' ಎಂದು ಭಯ ಸೃಷ್ಟಿಸಿ, ಸುಮಾರು ₹ 50 ಸಾವಿರದವರೆಗೆ ಹಣ ಪಡೆದು, ಗರ್ಭಕೋಶ ತೆಗೆದಿದ್ದಾರೆ' ಎಂದು ವಿವರಿಸಿದರು.

'ಈ ಕೃತ್ಯಕ್ಕೆ ಸಿಲುಕಿದ ಅನೇಕ ಮುಗ್ಧ ಮಹಿಳೆಯರು ಶಸ್ತ್ರಚಿಕಿತ್ಸೆ ನಂತರ ಮೃತಪಟ್ಟಿದ್ದಾರೆ. ಕೆಲವರು ನರ ದೌರ್ಬಲ್ಯ, ಕೂದಲು ಉದುರುವಿಕೆ, ಖಿನ್ನತೆಯಂತಹ ಸಮಸ್ಯೆಗಳಿಂದ ಈಗಲೂ ಬಳಲುತ್ತಿದ್ದಾರೆ. ಇವರಿಗೆ ಸರ್ಕಾರ ಸಹಾಯಧನ ಘೋಷಿಸಿ, ಬದುಕಿಗೆ ಆಸರೆಯಾಗಬೇಕು' ಎಂದರು.

ದುರುಪಯೋಗ ಆಗದಿರಲಿ 'ಯಶಸ್ವಿನಿ' ಯೋಜನೆ

'ರಾಜ್ಯದಲ್ಲಿ ಸ್ಥಗಿತಗೊಂಡಿದ್ದ 'ಯಶಸ್ವಿನಿ' ಆರೋಗ್ಯ ಯೋಜನೆ ಏ.1ರಿಂದ ಮರು ಜಾರಿಯಾಗಲಿದೆ. ಯೋಜನೆಯಿಂದ ಸಿಗುವ ಹಣದ ಆಸೆಗಾಗಿ ಗರ್ಭಕೋಶ ತೆಗೆಯುವ ದಂಧೆ ಹೆಚ್ಚಾಗುವ ಸಾಧ್ಯತೆಗಳಿವೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ಯೋಜನೆ ದುರ್ಬಳಕೆ ಆಗದಂತೆ ಎಚ್ಚರ ವಹಿಸಬೇಕು' ಎಂದು ಕೆ.ಜಿ.ನಾಗಲಕ್ಷ್ಮಿಬಾಯಿ ಒತ್ತಾಯಿಸಿದರು.

ಲಂಬಾಣಿ ಮಹಿಳೆಯರೇ ಹೆಚ್ಚು: 'ಪ್ರಸೂತಿ ತಜ್ಞೆ ವೆಂಕಟಕಾಮೇಶ್ವರಿ ಅವರು ಆಂಧ್ರಪ್ರದೇಶದ ಲಂಬಾಣಿ ತಾಂಡಾಗಳಲ್ಲಿ ತಪಾಸಣೆ ನಡೆಸಿದಾಗ, ಅಲ್ಲಿನ ಶೇ 40ರಷ್ಟು ಮಹಿಳೆಯರು ಗರ್ಭಕೋಶ ತೆಗೆಸಿಕೊಂಡಿರುವ ವಿಚಾರ ಬಹಿರಂಗವಾಗಿತ್ತು. ತಮಗೆ ಗರ್ಭಚೀಲಗಳೇ ಇಲ್ಲ ಎನ್ನುವ ವಿಚಾರ ಕೆಲವರಿಗೆ ತಿಳಿದಿಲ್ಲ. ರಾಜ್ಯದಲ್ಲೂ ಲಂಬಾಣಿ ಜನಾಂಗದ ಹೆಣ್ಣುಮಕ್ಕಳೇ ಈ ದಂಧೆಗೆ ಗುರಿಯಾಗಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ' ಎಂದು ನಾಗಲಕ್ಷ್ಮಿಬಾಯಿ ತಿಳಿಸಿದರು.

ಶಿವಮೊಗ್ಗದಲ್ಲಿ ಆಲಿಕಲ್ಲು ಮಳೆ


ಶಿವಮೊಗ್ಗ: ಜಿಲ್ಲೆಯಲ್ಲಿ ಹಲವೆಡೆ ಮಂಗಳವಾರ ಗುಡುಗು ಸಹಿತ ಜೋರು ಮಳೆ ಸುರಿದಿದೆ. ತಾಲ್ಲೂಕು ಭಾಗದಲ್ಲಿ ಅರ್ಧಗಂಟೆಗೂ ಹೆಚ್ಚು ಕಾಲ ಆಲಿಕಲ್ಲು ಮಳೆಯಾಗಿದೆ.

ಚೆನ್ನಹಳ್ಳಿಯಲ್ಲಿ ಮನೆಯ ಹೆಂಚುಗಳಿಗೆ ಹಾನಿಯಾಗಿದೆ. ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು. ಆನಂದಪುರ, ರಿಪ್ಪನ್ ಪೇಟೆಯಲ್ಲಿ ತುಂತುರು ಮಳೆಯಾಗಿದೆ.

ಹಾರಿದ ಚಾವಣಿಗಳು (ಹಲಗೂರು): ಸಮೀಪದ ಡಿ.ಹಲಸಹಳ್ಳಿ ವ್ಯಾಪ್ತಿಯ ತಾಳೆಹಳ್ಳಿಯಲ್ಲಿ ಸೋಮವಾರ ಸಂಜೆಅಕಾಲಿಕ ಮಳೆ ಮತ್ತು ಬಿರುಗಾಳಿಗೆ ಹಲವು ಮನೆಗಳ ಚಾವಣಿ ಶೀಟುಗಳು ಹಾರಿ ಹೋದವು. ಮಾದಪ್ಪ ಅವರ ರೇಷ್ಮೆ ಸಾಕಣೆಯ ಮನೆಯ ಚಾವಣಿಯೂ ಕಿತ್ತು ಬಂತು.

'ಬಿರುಗಾಳಿಯಿಂದ ಅಪಾರ ನಷ್ಟವಾಗಿದೆ. ರೇಷ್ಮೆ ಹುಳು ಹಾನಿಯಾಗಿದೆ. ಅಧಿಕಾರಿಗಳು ಸ್ಥಳ ಪರಿಶೀಲಿಸಿ ಪರಿಹಾರ ನೀಡಬೇಕು' ಎಂದು ಮಾದಪ್ಪ ಒತ್ತಾಯಿಸಿದರು.

ಮೂವರಿಗೆ ಗೌರವ ಡಾಕ್ಟರೇಟ್


ರಂಗನಾಥ್


ಮೀನಾಕ್ಷಿ ಸುಂದರಂ


ಸೀತವ್ವ

ಗದಗ: ನಿವೃತ್ತ ಐಎಎಸ್ ಅಧಿಕಾರಿ ಎಸ್.ವಿ.ರಂಗನಾಥ್ ಸೇರಿ ಮೂವರಿಗೆ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಿದೆ.

ವಿಶ್ವವಿದ್ಯಾಲಯದ ಎರಡನೇ ಘಟಿಕೋತ್ಸವ ಬುಧವಾರ (ಮಾರ್ಚ್ 30) ನಡೆಯಲಿದ್ದು, ಗಣನೀಯ ಸೇವೆಗಾಗಿ ಮೂವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುವುದು ಎಂದು ಕುಲಪತಿ ಪ್ರೊ. ವಿಷ್ಣುಕಾಂತ ಎಸ್.ಚಟಪಲ್ಲಿ ತಿಳಿಸಿದರು.

ಸಾರ್ವಜನಿಕ ನೀತಿ ಮತ್ತು ಸೇವಾ ಕ್ಷೇತ್ರದ ಸೇವೆಗೆ ಎಸ್.ವಿ.ರಂಗನಾಥ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವ್ಯವಸ್ಥೆಯ ಪ್ರಗತಿಗೆ ನೀಡಿದ ಕೊಡುಗೆಗಾಗಿ ಡಾ.ಎಸ್.ಎಸ್. ಮೀನಾಕ್ಷಿ ಸುಂದರಂ, ದೇವದಾಸಿಯರ ಜೀವನಾಭಿವೃದ್ಧಿಗೆ ಶ್ರಮಿಸಿದ ಸೀತವ್ವ ದುಂಡಪ್ಪ ಜೋಡಟ್ಟಿ ಅವರಿಗೆ ಗೌರವ ಡಾಕ್ಟರೇಟ್ ನೀಡಲಾಗುವುದು ಎಂದು ತಿಳಿಸಿದರು.

ತಾರಸಿ ಗೋಡೆ ಕುಸಿದು ಮಹಿಳೆ ಸಾವು

ಮದ್ದೂರು: ತಾಲ್ಲೂಕಿನ ಹುಲಿಗೆರೆಪುರದಲ್ಲಿ ಬಸವೇಶ್ವರಸ್ವಾಮಿ ದೇವಸ್ಥಾನದ ಕೊಂಡೋತ್ಸವ ವೀಕ್ಷಿಸಲು ಗ್ರಾಮಸ್ಥರು ನಿಂತಿದ್ದ ಮನೆಯ ತಾರಸಿ ಗೋಡೆ ಮಂಗಳವಾರ ಕುಸಿದು ಪುಟ್ಟಲಿಂಗಮ್ಮ (45) ಮೃತಪಟ್ಟಿದ್ದು, 44 ಮಂದಿ ಗಾಯಗೊಂಡರು.

ಬೆಳಗಿನ ಜಾವ ಘಟನೆ ನಡೆದಿದೆ. ತೀವ್ರವಾಗಿ ಗಾಯ ಗೊಂಡಿರುವ ಅದೇ ಗ್ರಾಮದ ಸರೋಜಮ್ಮ ಅವರನ್ನು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲಿಸಲಾಗಿದೆ.

ದೇವಸ್ಥಾನ ಸಮೀಪ, ಪಟೇಲ್ ಸಿದ್ದೇಗೌಡ ಅವರ 65 ವರ್ಷ ಹಳೆಯ ಮನೆಯ ಮೇಲೆ 90ಕ್ಕೂ ಹೆಚ್ಚು ಮಂದಿ ಹತ್ತಿದಾಗ ಅವಘಡ ಸಂಭವಿಸಿದೆ. ಜಿಲ್ಲಾಉಸ್ತುವಾರಿ ಸಚಿವ ಕೆ. ಗೋಪಾಲಯ್ಯ, ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಗ್ರಾಮಕ್ಕೆ ಭೇಟಿ ನೀಡಿ ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿದ್ದು, ತಲಾ ₹ 1 ಲಕ್ಷ ಪರಿಹಾರ ನೀಡಿದರು.

ರಾಜ್ಯದ ಎರಡು ಹೆದ್ದಾರಿ ಯೋಜನೆಗಳಿಗೆ ಕೇಂದ್ರ ಅನುಮೋದನೆ

ನವದೆಹಲಿ: ಕರ್ನಾಟಕದಲ್ಲಿ ₹ 890 ಕೋಟಿಗೂ ಹೆಚ್ಚು ವೆಚ್ಚದ ಎರಡು ಪ್ರಮುಖ ರಸ್ತೆ ಯೋಜನೆಗಳಿಗೆ ಕೇಂದ್ರ ಸರ್ಕಾರ ಮಂಗಳವಾರ ಅನುಮೋದನೆ ನೀಡಿದೆ.

ಮಂಗಳೂರು– ತುಮಕೂರು ರಾಷ್ಟ್ರೀಯ ಹೆದ್ದಾರಿ– 73ರಲ್ಲಿ ಪುಂಜಾಲಕಟ್ಟೆಯಿಂದ ಚಾರ್ಮಾಡಿವರೆಗೆ ₹ 718.52 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಎರಡು ಪಥಗಳ ರಸ್ತೆ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ–173ರ ಹೊಸದುರ್ಗ- ಹೊಳಲ್ಕೆರೆ ಮಾರ್ಗವನ್ನು ₹170.34 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಎರಡು ಲೇನ್ ರಸ್ತೆಯನ್ನಾಗಿ ವಿಸ್ತರಿಸಲು ಸರ್ಕಾರ ಅನುಮೋದನೆ ನೀಡಿದೆ ಎಂದು ಗಡ್ಕರಿ ಹೇಳಿದ್ದಾರೆ.

'ಪಚೌರಿ ಮೇಲೆ ಕಳಂಕ ಹೊರಿಸಲಾಗದು'

ನವದೆಹಲಿ (ಪಿಟಿಐ): ಟಿಇಆರ್ಐ ಮಾಜಿ ಮುಖ್ಯಸ್ಥ ಹಾಗೂ ಪರಿಸರವಾದಿ ಆರ್.ಕೆ. ಪಚೌರಿ ಬದುಕಿದ್ದಾಗ, ಅವರ ವಿರುದ್ಧದ ಲೈಂಗಿಕ ಹಗರಣದ ಆರೋಪವನ್ನು ಸಾಬೀತುಪಡಿಸಲು ಪ್ರಾಸಿಕ್ಯೂಷನ್‌ಗೆ ಸಾಧ್ಯವಾಗದ ಕಾರಣ, ಅವರ ಮೇಲೆ ಕಳಂಕವನ್ನು ಹೊರಿಸಲಾಗದು ಎಂದು ದೆಹಲಿ ಹೈಕೋರ್ಟ್ ಹೇಳಿದೆ.

ಒಂದು ದೇಶ, ಒಂದು ಚುನಾವಣೆಯಿಂದ ಪ್ರಾದೇಶಿಕ ಪಕ್ಷಗಳ ವಿನಾಶ: ಕೃಷ್ಣ ಬೈರೇಗೌಡ ಕಳವಳ

'ಪ್ರಬಲರ ಕಪಿಮುಷ್ಠಿಯಲ್ಲಿ ಭಾರತದ ಜನತಂತ್ರ'

ಪ್ರಜಾವಾಣಿ ವಾರ್ತೆ



ಕೃಷ್ಣ ಬೈರೇಗೌಡ

ಬೆಂಗಳೂರು: 'ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ಹೆಸರಿಗಷ್ಟೇ ಇದ್ದು, ಅವು 'ವಶಾಧೀನ ಜನತಂತ್ರ' ವ್ಯವಸ್ಥೆಯತ್ತ ಹೊರಳುತ್ತಿವೆ. ಪ್ರಬಲರು ಜನತಂತ್ರವನ್ನೇ ತಮ್ಮ ಕಪಿಮುಷ್ಠಿಗೆ ತೆಗೆದುಕೊಳ್ಳುತ್ತಿದ್ದಾರೆ. ಭಾರತವೂ ಈ ದಿಕ್ಕಿನಲ್ಲಿ ಸಾಗುತ್ತಿದೆ' ಎಂದು ಕಾಂಗ್ರೆಸ್‌ನ ಕೃಷ್ಣ ಬೈರೇಗೌಡ ಕಳವಳ ವ್ಯಕ್ತಪಡಿಸಿದರು.

ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆಗಳ ಅಗತ್ಯದ ಕುರಿತು ವಿಧಾನಸಭೆಯಲ್ಲಿ ಮಂಗಳವಾರ ನಡೆದ ವಿಶೇಷ ಚರ್ಚೆಯಲ್ಲಿ ಮಾತನಾಡಿದ ಅವರು, 'ಮತದಾನ ನಡೆಯುತ್ತಿದೆ ಎಂಬ ಮಾತ್ರಕ್ಕೆ ದೇಶದಲ್ಲಿ ಜನತಂತ್ರ ವ್ಯವಸ್ಥೆ ಇದೆ ಎನ್ನಲಾಗದು. ಸಮಾನತೆಯ ತತ್ವಗಳಿಗೆ ಹಾಗೂ ಸಂವಿಧಾನದ ಆಶಯಗಳಿಗೆ ವಿರುದ್ಧವಾದ ಬೆಳವಣಿಗೆಗಳು ಇಲ್ಲಿ ನಡೆಯುತ್ತಿವೆ. ಭಾರತವು ಇನ್ನು ಮುಂದೆಯೂ ಪ್ರಜಾಪ್ರಭುತ್ವ ದೇಶವಾಗಿಯೇ ಉಳಿಯಬೇಕು ಎನ್ನುವುದು ನನ್ನ ಬಯಕೆ' ಎಂದರು.

ಈ ಹೇಳಿಕೆಯನ್ನು ಬಿಜೆಪಿ ಸದಸ್ಯರು ಕಟುವಾಗಿ ವಿರೋಧಿಸಿದರು.

ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, 'ಚುನಾಯಿತ ಸರ್ಕಾರ ಅಸ್ತಿತ್ವದಲ್ಲಿದ್ದರೂ ಇದು ಸರ್ವಾಧಿಕಾರಿ ಸರ್ಕಾರ ಎಂದು ಆರೋಪ ಮಾಡುವುದರಲ್ಲಿ ಅರ್ಥವಿಲ್ಲ. ಅನೇಕ ಚುನಾವಣೆಗಳನ್ನು ಕಂಡ ಬಳಿಕ ಜನರೂ ಬುದ್ಧಿವಂತರಾಗಿದ್ದಾರೆ. ಅದನ್ನು ನಿಮಗೆ ಅರಗಿಸಿಕೊಳ್ಳಲಾಗುತ್ತಿಲ್ಲ' ಎಂದರು.

ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, 'ಪ್ರಜಾಪ್ರಭುತ್ವ ವ್ಯವಸ್ಥೆಯಡಿ ಆಯ್ಕೆಯಾದ ಸರ್ಕಾರ ಸಂವಿಧಾನದ ಚೌಕಟ್ಟು ಮೀರಿ ಆಡಳಿತ ನಡೆಸಲು ಅವಕಾಶವೇ ಇಲ್ಲ' ಎಂದರು.

ಕೃಷ್ಣ ಬೈರೇಗೌಡ, 'ರಷ್ಯಾದಲ್ಲೂ ಚುನಾವಣೆ ನಡೆಯುತ್ತದೆ. ಅಂದ ಮಾತ್ರಕ್ಕೆ ಅದನ್ನು ಪ್ರಜಾಪ್ರಭುತ್ವ ವ್ಯವಸ್ಥೆ ಎನ್ನಲಾಗುತ್ತದೆಯೇ. ಆ ರೀತಿ ನಮ್ಮಲ್ಲಿ ಆಗಬಾರದು ಎನ್ನುವುದು ನನ್ನ ಆಶಯ' ಎಂದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಮಾಧುಸ್ವಾಮಿ, 'ಆ ರೀತಿ ಆತಂಕ ಪಡುವ ಸಂದರ್ಭ ಈಗ ಇಲ್ಲ. ತುರ್ತು ಪರಿಸ್ಥಿತಿ ಜಾರಿಯಾದಾಗ ಅಂತಹ ಪರಿಸ್ಥಿತಿ ಇತ್ತು' ಎಂದರು.

ಕೃಷ್ಣ ಬೈರೇಗೌಡ, 'ಘೋಷಿತ ತುರ್ತು ಪರಿಸ್ಥಿತಿ ಹೇರಿದ್ದು ಸರಿಯಲ್ಲ ಎಂಬುದನ್ನು ನೈತಿಕವಾಗಿ ನಾವು ಒಪ್ಪಿಕೊಂಡಿದ್ದೇವೆ. ಈಗ ಅಘೋಷಿತ ತುರ್ತು ಪರಿಸ್ಥಿತಿ ಇದೆ. ಈ ಮಾತನ್ನು ಜೆಡಿಎಸ್‌ನ ಎಚ್.ಡಿ.ಕುಮಾರಸ್ವಾಮಿ ಅವರೂ ಹೇಳಿದ್ದಾರೆ. ಇದನ್ನು ಒಪ್ಪಿಕೊಳ್ಳುವುದು ಬಿಡುವುದು ನಿಮಗೆ ಬಿಟ್ಟಿದ್ದು' ಎಂದರು.

'ಒಂದೇ ಚುನಾವಣೆ– ಪ್ರಾದೇಶಿಕ ಪಕ್ಷಗಳು ನಾಶವಾಗುವ ಅಪಾಯ'

'ಒಂದು ದೇಶ– ಒಂದು ಚುನಾವಣೆ ಎಂಬ ಘೋಷಣೆ ಕೇಳಲು ಚೆಂದ. ಆದರೆ, ಇದು ಪ್ರಾದೇಶಿಕ ಪಕ್ಷಗಳನ್ನೇ ನಾಶಪಡಿಸುವ ಅಪಾಯವಿದೆ' ಎಂದು ಕೃಷ್ಣ ಬೈರೇಗೌಡ ಆತಂಕ ವ್ಯಕ್ತಪಡಿಸಿದರು.

'ಚುನಾವಣೆಯಲ್ಲಿ ನಿರ್ದಿಷ್ಟ ಪಕ್ಷಕ್ಕೆ ಬಹುಮತ ಸಿಗದೇ ಹೋದರೆ, ಸಮ್ಮಿಶ್ರ ಸರ್ಕಾರ ರಚನೆಗೆ ಪಕ್ಷಗಳಲ್ಲಿ ಸಹಮತ ವ್ಯಕ್ತವಾಗದೇ ಹೋದರೆ ಮತ್ತೆ ಚುನಾವಣೆ ನಡೆಸಬೇಕಾಗುತ್ತದೆ. ಆಗ ಒಂದೇ ಚುನಾವಣೆ ಎಂಬ ಘೋಷಣೆ ಹುಸಿಯಾಗುವುದಿಲ್ಲವೇ' ಎಂದು ಅವರು ಪ್ರಶ್ನಿಸಿದರು.

'ಒಂದೇ ಚುನಾವಣೆಯ ನೆಪ ಇಟ್ಟುಕೊಂಡು ಕೇಂದ್ರ ಸರ್ಕಾರವು ರಾಜ್ಯಪಾಲರ ಆಳ್ವಿಕೆ ಹೇರಿದರೆ ಪರಿಸ್ಥಿತಿ ಹೇಗಿರಬೇಡ. ಡಿಎಂಕೆ, ತೃಣಮೂಲ ಕಾಂಗ್ರೆಸ್, ಆಮ್ ಆದ್ಮಿ ಪಾರ್ಟಿಯಂತಹ ಪಕ್ಷಗಳ ಗತಿ ಏನು. ಈಗಾಗಲೇ ಅರುಣಾಚಲ ಪ್ರದೇಶ ಹಾಗೂ ಉತ್ತರಖಂಡದಲ್ಲಿ ಏನೆಲ್ಲ ಬೆಳವಣಿಗೆ ನಡೆದಿವೆ ಎಂಬುದನ್ನು ನೋಡಿದ್ದೇವೆ' ಎಂದರು.

ಕಡ್ಡಾಯ ಮತದಾನ: ಪರ–ವಿರೋಧ

ದೇಶದಲ್ಲಿ ಕಡ್ಡಾಯ ಮತದಾನ ವ್ಯವಸ್ಥೆ ಜಾರಿಗೆ ತರುವ ವಿಚಾರ ಪರ–ವಿರೋಧದ ಚರ್ಚೆಗೆ ಕಾರಣವಾಯಿತು.

ಶ್ರೀಮಂತ ವರ್ಗದ ಜನರು ಮತದಾನ ಪ್ರಕ್ರಿಯೆಯಿಂದ ದೂರ ಉಳಿಯುತ್ತಿರುವುದನ್ನು ಅನೇಕ ಸದಸ್ಯರು ಪಕ್ಷಭೇದ ಮರೆತು ಟೀಕಿಸಿದರು. ಈ ಪ್ರವೃತ್ತಿಯನ್ನು ತಪ್ಪಿಸಬೇಕಾದರೆ ಮತದಾನ ಕಡ್ಡಾಯಗೊಳಿಸಬೇಕು ಎಂಬ ಅಭಿಪ್ರಾಯವನ್ನು ಕಾಂಗ್ರೆಸ್‌ನ ಎಚ್.ಕೆ.ಪಾಟೀಲ, ಕೆ.ಆರ್.ರಮೇಶ್ ಕುಮಾರ್, ಟಿ.ಡಿ.ರಾಜೇಗೌಡ, ಕಾನೂನು ಸಚಿವ ಮಾಧುಸ್ವಾಮಿ, ಬಿಜೆಪಿಯ ಸಿದ್ದು ಸವದಿ, ಎಲ್.ಎ. ರವಿ ಸುಬ್ರಹ್ಮಣ್ಯ ವ್ಯಕ್ತಪಡಿಸಿದರು.

ಇದಕ್ಕೆ ವಿರೋಧ ವ್ಯಕ್ತಪಡಿಸಿದ ಕೃಷ್ಣ ಬೈರೇಗೌಡ, 'ಮತದಾನವನ್ನು ಕಡ್ಡಾಯಗೊಳಿಸುವುದು ಪ್ರಜಾಪ್ರಭುತ್ವದ ಆಶಯಕ್ಕೆ ವಿರುದ್ಧವಾದುದು. ಸಂವಿಧಾನ ನಮಗೆ ಮತದಾನದ ಹಕ್ಕು ನೀಡಿದೆ. ಆದರೆ, ಇದನ್ನು ಸಂವಿಧಾನಬದ್ಧ ಕರ್ತವ್ಯ ಎಂದು ಹೇಳಿಲ್ಲ. ಜನತಂತ್ರದಲ್ಲಿ ಮತ ಹಾಕುವ ಅಥವಾ ಹಾಕದೇ ಇರುವ ಸ್ವಾತಂತ್ರ್ಯವನ್ನು ಜನರಿಗೆ ನೀಡಬೇಕಾಗುತ್ತದೆ. ಮತದಾನದಲ್ಲಿ ಪಾಲ್ಗೊಳ್ಳುವಂತೆ ಜನರ ಮನವೊಲಿಸಬೇಕೇ ಹೊರತು, ಇದನ್ನು ಅವರ ಮೇಲೆ ಹೇರಬಾರದು' ಎಂದರು.


ಬಿಜೆಪಿಯ ಪಿ.ರಾಜೀವ್, 'ಕಾನೂನು ತಿದ್ದುಪಡಿ ತರುವ ಮೂಲಕ ಮತದಾನವನ್ನೂ ಸಂವಿಧಾನಬದ್ಧ ಕರ್ತವ್ಯದ ಪಟ್ಟಿಗೆ ಸೇರಿಸಬೇಕು' ಎಂದರು.

ಮುಖ್ಯಾಂಶಗಳು

- ಪ್ರಜಾಪ್ರಭುತ್ವ ದೇಶವಾಗೇ-ಉಳಿಯಬೇಕು
- ಅನೇಕ ಚುನಾವಣೆ ಬಳಿಕ ಜನರೂ ಬುದ್ಧಿವಂತರಾಗಿದ್ದಾರೆ.

'ಮುಖ್ಯಮಂತ್ರಿ ಆಗಿದ್ದವನು ಕ್ಷೇತ್ರ ಹುಡುಕುತ್ತಿರೋದು ನಾಚಿಕೆ ಸಂಗತಿ'

ಪ್ರಜಾವಾಣಿ ವಾರ್ತೆ



ಎಚ್. ವಿಶ್ವನಾಥ್

ಬೆಂಗಳೂರು: 'ಮುಖ್ಯಮಂತ್ರಿಯಾಗಿದ್ದವನೊಬ್ಬ ಮುಂದಿನ ಚುನಾವಣೆಗಾಗಿ ಕ್ಷೇತ್ರ ಹುಡುಕುತ್ತಿದ್ದಾನೆ. ಇದು ಕುರುಬ ಸಮಾಜಕ್ಕೇ ನಾಚಿಕೆಯಾಗುವಂತಹದ್ದು. ಎಲ್ಲೂ ಬೇಡ ಹುಣಸೂರಿಗೆ ಬಾರಪ್ಪ. ನೀನು ಹುಣಸೂರಿಗೆ ಬಂದು ನನ್ನನ್ನು ಸೋಲಿಸಿದ್ದೆ. ಅದೇ ಕ್ಷೇತ್ರದಲ್ಲಿ ನಿನ್ನನ್ನು ಗೆಲ್ಲಿಸುತ್ತೇವೆ' ಎಂದು ವಿಧಾನಪರಿಷತ್‌ನ ಬಿಜೆಪಿ ಸದಸ್ಯ ಎಚ್. ವಿಶ್ವನಾಥ್ ಹೇಳಿದ್ದಾರೆ.

ಕರ್ನಾಟಕ ಪ್ರದೇಶ ಕುರುಬರ ಸಂಘದ ಆಡಳಿತ ಮಂಡಳಿಯ ನಿಯಮಬಾಹಿರ ಕಾರ್ಯವೈಖರಿ ವಿರುದ್ಧ ಹಮ್ಮಿಕೊಳ್ಳಲಾಗಿದ್ದ ಪ್ರತಿಭಟನೆಯಲ್ಲಿ ಮಂಗಳವಾರ ಮಾತನಾಡಿದ ಅವರು, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಿರುದ್ಧ ಕಿಡಿಕಾರಿದರು.

'ನಮಗೆ ವಿಶಾಲ ಮನೋಭಾವವಿದೆ. ಸಮಾಜದ ಹಿತಕ್ಕಾಗಿ ತ್ಯಾಗಕ್ಕೆ ಸಿದ್ಧವಿದ್ದೇವೆ. ಈಗ ಮಠದ ಸ್ಥಿತಿ ಏನಾಗಿದೆ. ಮಠಕ್ಕಾಗಿ ಎಲ್ಲಾ ತ್ಯಾಗ ಮಾಡಿದ್ದೆ. ಮೂರು ವರ್ಷ ಹೆಂಡತಿ–ಮಕ್ಕಳು, ಕ್ಷೇತ್ರ ಬಿಟ್ಟು ಸುತ್ತಾಡಿದ್ದೆ. ಮುಖ್ಯಮಂತ್ರಿಯಾಗಿದ್ದಾಗ (ಸಿದ್ದರಾಮಯ್ಯ) ನನ್ನನ್ನೇ ಬಿಟ್ಟು ಬೆಳ್ಳಿ ಹಬ್ಬ ಆಚರಣೆ ಮಾಡಿಸಿದ. ಇದಕ್ಕಿಂತ ಅನ್ಯಾಯ ಬೇಕೇ. ನಾಚಿಕೆ ಆಗುವುದಿಲ್ಲವೇ' ಎಂದು ಹರಿಹಾಯ್ದರು.

'ಇದೇನಾ ಸಂಘಟನೆ. ಇದೇನಾ ಕುರುಬರ ಉದ್ಧಾರ. ಮಠ ಇಬ್ಭಾಗ ಮಾಡಿದಿರಿ. ರಾಜಕೀಯ ಒಡೆದಿರಿ, ಕುರುಬರ ಸಂಘ ಇಬ್ಭಾಗ ಮಾಡಿದಿರಿ. ಇನ್ನೇನು ಉಳಿದಿದೆಯಪ್ಪಾ. ನಾನೂ ಕಾಯುತ್ತಿದ್ದೇನೆ. ದಾವಣಗೆರೆಯಲ್ಲಿ ಸಮುದಾಯದ ಸಭೆ ಕರೆಯುತ್ತೇನೆ. ನೀವೆಲ್ಲಾ ಬಂದು ತೀರ್ಮಾನ ಮಾಡಿ' ಎಂದರು.

'ರೇವಣ್ಣ ಏನಾದ. ಆತನನ್ನು ವಿಧಾನಪರಿಷತ್ ಸದಸ್ಯನಾಗಿ ಮಾಡಲು ಆಗಲಿಲ್ಲವಲ್ಲ. ಆತ ಈಗ ಬೀದಿಗೆ ಬಿದ್ದಿದ್ದಾನೆ. ನಿಮ್ಮನ್ನು ಕಾಂಗ್ರೆಸ್‌ಗೆ ಸೇರಿಸಿದ್ದು ನಾವು. ನಿಮಗೆ ಕೃತಜ್ಞತೆ ಇದೆಯಾ. ಕೃತಜ್ಞತೆ ಇಲ್ಲದ ನಾಯಕತ್ವ ಜಾಸ್ತಿ ದಿನ ಉಳಿಯದು' ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಿರ್ಮಾಣ ಚಟುವಟಿಕೆ: 'ಸುಪ್ರೀಂ' ಮೌಖಿಕ ತಡೆ

ಒಂದನೇ ಪುಟದಿಂದ

ಕಾರವಾರವು ಪರಿಸರ ಸೂಕ್ಷ್ಮ ಪ್ರದೇಶವಾಗಿದ್ದು, ದೇಶದ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದು. ಕರಾವಳಿ ಮತ್ತು ಕಡಲತೀರಗಳ ನೈಸರ್ಗಿಕ ಸೌಂದರ್ಯವು ಪ್ರವಾಸಿಗರನ್ನು ಆಕರ್ಷಿಸುತ್ತದೆ. ಈ ಮಹತ್ವವನ್ನು ಪರಿಗಣಿಸುವಲ್ಲಿ ಹೈಕೋರ್ಟ್ ವಿಫಲವಾಗಿದೆ. ವಾಣಿಜ್ಯ ಬಂದರಿನ 2ನೇ ಹಂತದ ವಿಸ್ತರಣೆಗೆ ರಾಜ್ಯ ಮಟ್ಟದ ಪ್ರಾಧಿಕಾರ ನೀಡಿರುವ ಪರಿಸರ ಅನುಮತಿಯು ಕಾನೂನುಬಾಹಿರವಾಗಿದೆ ಎಂದು ಅರ್ಜಿಯಲ್ಲಿ ಪ್ರತಿಪಾದಿಸಲಾಗಿದೆ.

ವಿಸ್ತರಣಾ ಯೋಜನೆಯು ಕಡಲತೀರದ ಸೌಂದರ್ಯವನ್ನು ಕಣ್ತುಂಬಿಕೊಳ್ಳಬೇಕೆಂಬ ಸಾರ್ವಜನಿಕರ ಹಕ್ಕನ್ನು ಕಿತ್ತುಕೊಳ್ಳಲಿದೆ ಎಂದೂ ಮೇಲ್ಮನವಿಯಲ್ಲಿ ಒತ್ತಿಹೇಳಲಾಗಿದೆ.

ಕಾರವಾರವನ್ನು 2011 ಮತ್ತು 2019ರ ಅಧಿಸೂಚನೆಗಳ ಪ್ರಕಾರ 'ಪರಿಸರ ಸೂಕ್ಷ್ಮ ಪ್ರದೇಶ' ಎಂದು ಪರಿಗಣಿಸಲಾಗಿದೆ. ಆದರೆ, ಹೈಕೋರ್ಟ್ ಆದೇಶವು ಈ ಪ್ರಕರಣದಲ್ಲಿ ಮೀನುಗಾರರ ಆಸ್ತಿಯ ಹಕ್ಕು ಹಾಗೂ ಜೀವನೋಪಾಯದ ಹಕ್ಕನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಯೋಜನೆಯಿಂದ ಮೀನುಗಾರರ ಜೀವನದ ಮೇಲೂ ಪ್ರತಿಕೂಲ ಪರಿಣಾಮ ಬೀರಲಿದೆ ಎಂಬುದನ್ನು ಗಣನೆಗೆ ತೆಗೆದುಕೊಂಡಿಲ್ಲ.

ಸುಸ್ಥಿರ ಅಭಿವೃದ್ಧಿಯನ್ನು ಮಾತ್ರ ಉಲ್ಲೇಖಿಸಿದ್ದರೂ, ಯೋಜನೆಯಿಂದ ಪರಿಸರದ ಮೇಲೆ ಉಂಟಾಗುವ ಪರಿಣಾಮವನ್ನು ಪರಿಗಣಿಸಿಲ್ಲ ಎಂದು ಅರ್ಜಿಯಲ್ಲಿ ದೂರಲಾಗಿದೆ.

ಜಾಲತಾಣಗಳಲ್ಲಿ ಟ್ರೋಲ್ ಆಗಿದ್ದ ಮದುವೆ

'ಶಂಕರಪ್ಪ' ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ



ಶಂಕರಪ್ಪ

ಕುಣಿಗಲ್: ತನಗಿಂತ ಅರ್ಧ ವಯಸ್ಸಿನ ಯುವತಿಯನ್ನು ಮದುವೆಯಾಗಿ ಕೆಲವು ತಿಂಗಳ ಹಿಂದೆ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗೆ ಗ್ರಾಸವಾಗಿದ್ದ ಹುಲಿಯೂರುದುರ್ಗ ಹೋಬಳಿ ಅಕ್ಕಿಮರಿಪಾಳ್ಯದ ಶಂಕರಪ್ಪ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

45 ವರ್ಷದ ಶಂಕರಪ್ಪ ಅವರ ಶವ ಮಂಗಳವಾರ ಜಮೀನಿನಲ್ಲಿ ಮರಕ್ಕೆ ನೇಣು ಹಾಕಿಕೊಂಡಿರುವ ಸ್ಥಿತಿಯಲ್ಲಿ ಪತ್ತೆಯಾಗಿದೆ. ಸೆಪ್ಟೆಂಬರ್‌ನಲ್ಲಿ ಸಂತೆಮಾವತ್ತೂರಿನ ಮೇಘನಾ ಹೆಸರಿನ 20 ವರ್ಷದ ಯುವತಿಯನ್ನು ಅವರು ಮದುವೆಯಾಗಿದ್ದರು.

ವಯಸ್ಸಿನ ಅಂತರದಿಂದಾಗಿ ಈ ಮದುವೆ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿತ್ತು. ಶಂಕರಪ್ಪ ಅವರನ್ನು 'ಅಂಕಲ್ ಶಂಕರಪ್ಪ' ಎಂದು ಟ್ರೋಲ್ ಮಾಡಲಾಗಿತ್ತು.

ಕೌಟುಂಬಿಕ ಕಲಹದಿಂದ ಬೇಸತ್ತು ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಹೇಳಲಾಗುತ್ತಿದೆ. ಮನೆಯ ಸಾಕು ನಾಯಿಯನ್ನು ಮೇಘನಾ ಸರಪಳಿ ಸಮೇತ ಬಿಚ್ಚಿ ಬಿಟ್ಟಿದ್ದರು. ನಾಯಿಗೆ ಕಟ್ಟಿದ್ದ ಸರಪಳಿ ರಂಗಮ್ಮನವರ ಕಾಲಿಗೆ ತೊಡರಾಗಿ ಬೀಳುತ್ತಿದ್ದರು. ಈ ವಿಷಯವಾಗಿ ಅತ್ತೆ ಮತ್ತು ಸೊಸೆ ಮಧ್ಯೆ ಸೋಮವಾರ ಜಗಳವಾಗಿತ್ತು. ಇದರಿಂದ ಬೇಸತ್ತ ಶಂಕರಪ್ಪ ರಾತ್ರಿ ಮನೆಯಿಂದ ತೆರಳಿದ್ದರು.

'ಸೊಸೆ ಮೇಘನ ಸದಾ ಗಂಡನೊಂದಿಗೆ ಜಗಳವಾಡುತ್ತಿದಳು' ಎಂದು ಶಂಕರಪ್ಪ ಅವರ ತಾಯಿ ರಂಗಮ್ಮ ಪೊಲೀಸರಿಗೆ ದೂರು ನೀಡಿದ್ದಾರೆ. ಪ್ರತಿಯಾಗಿ ಮೇಘನಾ ಸಹ ದೂರು ನೀಡಿದ್ದಾರೆ. ಹುಲಿಯೂರುದುರ್ಗ ಪೊಲೀಸ್ ಠಾಣೆಯಲ್ಲಿ ಎರಡೂ ಪ್ರಕರಣ ದಾಖಲಾಗಿವೆ.

ಐವರು ಶಿಕ್ಷಕರು, ಇಬ್ಬರು ಮುಖ್ಯ ಅಧೀಕ್ಷಕರು

ಹಿಜಾಬ್‌ಗೆ ಅವಕಾಶ: 7 ಮಂದಿ ಅಮಾನತು

ಪ್ರಜಾವಾಣಿ ವಾರ್ತೆ

ಗದಗ: ಸೋಮವಾರ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆ ಸಂದರ್ಭದಲ್ಲಿ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಕೊಠಡಿ ಪ್ರವೇಶಿಸಲು ಅವಕಾಶ ನೀಡಿದ್ದ ಶಿಕ್ಷಕರು ಹಾಗೂ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರನ್ನು ಮಂಗಳವಾರ ಅಮಾನತು ಮಾಡಿ ಆದೇಶಿಸಲಾಗಿದೆ.

'ನ್ಯಾಯಾಲಯದ ತೀರ್ಪು ಉಲ್ಲಂಘಿಸಿ ವಿದ್ಯಾರ್ಥಿಗಳು ಹಿಜಾಬ್ ಧರಿಸಿ ಕೊಠಡಿ ಒಳಗೆ ಬರಲು ಅವಕಾಶ ನೀಡಿದ ಗದುಗಿನ ಸಿ.ಎಸ್.ಪಾಟೀಲ ಬಾಲಕರ ಪ್ರೌಢಶಾಲೆ ಹಾಗೂ ಸಿ.ಎಸ್. ಪಾಟೀಲ ಬಾಲಕಿಯರ ಪ್ರೌಢಶಾಲೆ ಪರೀಕ್ಷಾ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶಿಕ್ಷಕರಾದ ಎಸ್.ಯು.ಹೊಕ್ಕಳದ, ಎಸ್.ಎಂ.ಪತ್ತಾರ ಎಸ್.ಜಿ.ಗೋಡಕೆ, ಎಸ್.ಎಸ್. ಗುಜಮಾಗಡಿ, ವಿ.ಎನ್.ಕಿವುಡರ ಅವರನ್ನು ಅಮಾನತು ಮಾಡಲಾಗಿದೆ' ಎಂದು ಗದಗ ಡಿಡಿಪಿಐ ಬಸವಲಿಂಗಪ್ಪ ಜಿ.ಎಂ. ತಿಳಿಸಿದ್ದಾರೆ.

ಈ ಎರಡೂ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಕೆ.ಬಿ.ಭಜಂತ್ರಿ ಮತ್ತು ಬಿ.ಎಸ್.ಹೊನಗುಡಿ ಅವರನ್ನು ಸಹ ಅಮಾನತು ಮಾಡಲಾಗಿದೆ ಎಂದು ತಿಳಿಸಿದ್ದಾರೆ.


ಹಿಜಾಬ್‌ಗೆ ಅವಕಾಶ ನಿರಾಕರಣೆ

ಉಡುಪಿ/ಕುಂದಾಪುರ: ಹಿಜಾಬ್ ಧರಿಸಿ ಪ್ರಥಮ ಪಿಯುಸಿ ಪರೀಕ್ಷೆ ಬರೆಯಲು ಅನುಮತಿ ನೀಡದ ಕಾರಣಕ್ಕೆ ಮಂಗಳವಾರ ಉಡುಪಿ, ಕುಂದಾಪುರ ಹಾಗೂ ಬೈಂದೂರು ತಾಲ್ಲೂಕಿನಲ್ಲಿ ಹಲವು ವಿದ್ಯಾರ್ಥಿನಿಯರು ಪರೀಕ್ಷೆಗೆ ಗೈರಾದರು.ಹಿಜಾಬ್‌ಗಾಗಿ ಕಾನೂನು ಹೋರಾಟ ನಡೆಸುತ್ತಿರುವ ಉಡುಪಿಯ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿಯರಾದ ಮುಸ್ಕಾನ್, ಶಫಾ ಬಿಸಿನೆಸ್ ಸ್ಟಡೀಸ್ ಪರೀಕ್ಷೆಗೆ ಬಂದಿಲ್ಲ ಎಂದು ಪ್ರಾಂಶುಪಾಲ ರುದ್ರೇಗೌಡ ತಿಳಿಸಿದ್ದಾರೆ.

ಕುಂದಾಪುರ ತಾಲ್ಲೂಕಿನ ಆರ್.ಎನ್.ಶೆಟ್ಟಿ ಪದವಿಪೂರ್ವ ಕಾಲೇಜಿನಲ್ಲಿ ಹಿಜಾಬ್ ಧರಿಸಿ ಬಂದ 9 ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಪರೀಕ್ಷೆ ಬರೆಯಲು ಅವಕಾಶ ನೀಡುವಂತೆ ಪ್ರಾಂಶುಪಾಲರನ್ನು ಆಗ್ರಹಿಸಿದರು. ಅನುಮತಿ ನಿರಾಕರಿಸಿದಾಗ ವಾಗ್ವಾದಕ್ಕಿಳಿದರು. ಶಾಲಾ ಶುಲ್ಕ ವಾಪಸು ನೀಡಲು ಒತ್ತಾಯಿಸಿದರು. ಪ್ರಾಂಶುಪಾಲರು ಒಪ್ಪದಿದ್ದಾಗ ಪರೀಕ್ಷೆ ಬಹಿಷ್ಕರಿಸಿ ಮನೆಗೆ ತೆರಳಿದರು.

ಕುಂದಾಪುರದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ 8 ವಿದ್ಯಾರ್ಥಿನಿಯರು, ಭಂಡಾರ್‌ಕರ್ಸ್ ಕಾಲೇಜಿನಲ್ಲಿ ಒಬ್ಬರು, ಬೈಂದೂರು ತಾಲ್ಲೂಕಿನ ನಾವುಂದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಆರು ಮತ್ತು ಬೈಂದೂರು ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಎಂಟು ಮಂದಿ ಮುಸ್ಲಿಂ ವಿದ್ಯಾರ್ಥಿನಿಯರು ಪರೀಕ್ಷೆಗೆ ಗೈರಾಗಿದ್ದರು.

ಎಂ.ಎಂ. ಶಿವಪ್ರಕಾಶ್‌ಗೆ ನಾಟಕ ಅಕಾಡೆಮಿ ಪುಸ್ತಕ ಬಹುಮಾನ



ಎಂ.ಎಂ. ಶಿವಪ್ರಕಾಶ್

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿ ನೀಡುವ 2020ನೇ ಸಾಲಿನ ಪುಸ್ತಕ ಬಹುಮಾನಕ್ಕೆ ಲೇಖಕ ಎಂ.ಎಂ. ಶಿವಪ್ರಕಾಶ್ ಅವರ 'ರಂಗದಿಗ್ಗಜ ಕೋಗಳಿ ಪಂಪಣ್ಣ' ಕೃತಿ ಆಯ್ಕೆಯಾಗಿದೆ.

ಈ ಬಹುಮಾನವು ₹ 25 ಸಾವಿರ ನಗದು ಒಳಗೊಂಡಿದೆ. ರಂಗಪಠ್ಯಗಳ ಹೊರತಾಗಿ ಕನ್ನಡ ರಂಗಭೂಮಿಯ ಬಗ್ಗೆ ಬರಹಗಳನ್ನು ಮತ್ತು ಪುಸ್ತಕಗಳನ್ನು ಉತ್ತೇಜಿಸುವ ಸಲುವಾಗಿ ರಂಗಭೂಮಿ ಕುರಿತಾದ ಪುಸ್ತಕವೊಂದಕ್ಕೆ ಬಹುಮಾನ ನೀಡಲಾಗುತ್ತಿದೆ.

ಏಪ್ರಿಲ್‌ನಲ್ಲಿ ಬಳ್ಳಾರಿಯಲ್ಲಿ ನಡೆಯುವ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪುಸ್ತಕ ಬಹುಮಾನ ನೀಡಲಾಗುವುದು ಎಂದು ಅಕಾಡೆಮಿ ರಿಜಿಸ್ಟ್ರಾರ್ ಬಿ. ಮಂಜುನಾಥ ಆರಾಧ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಹಲಾಲ್' ಜಾಗೃತಿ ಅಗತ್ಯ'

ಮಂಗಳೂರು: 'ಹಲಾಲ್ ಎನ್ನುವುದು ಇಸ್ಲಾಂನ ಅವಿಭಾಜ್ಯ ಅಂಗ. ಅಲ್ಲಾಹುವಿನ ಹೆಸರಿನಲ್ಲಿ ಕೊಯ್ದ ಮಾಂಸವನ್ನೇ ಸೇವಿಸಬೇಕು ಎಂಬುದು ಮುಸಲ್ಮಾನರಿಗೆ ಇರುವ ನಿಯಮ, ಇದು ಮುಸ್ಲಿಮೇತರರಿಗೆ ಅನ್ವಯವಾಗುವುದಿಲ್ಲ' ಎಂದು ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ರಹೀಂ ಉಚ್ಚಿಲ್ ಅವರು ಹೇಳಿದ್ದಾರೆ.

'ಹಲಾಲ್ ಮಾಂಸದ ಬಗೆಗಿನ ಸತ್ಯಾಸತ್ಯತೆಯನ್ನು ಮುಸ್ಲಿಮೇತರರು ಅರ್ಥ ಮಾಡಿಕೊಳ್ಳಬೇಕು. ಅಲ್ಲಾಹುವಿನ ಹೆಸರಿನಲ್ಲಿ ಕೊಯ್ದ ಮಾಂಸವು ತಮಗೆ ಒಪ್ಪಿಗೆ ಇಲ್ಲ ಎಂದಾದಲ್ಲಿ ಸ್ವ ಇಚ್ಛೆಯಿಂದ ತ್ಯಜಿಸಬಹುದು. ಮುಸ್ಲಿಮೇತರ ವ್ಯಾಪಾರಿಗಳಿಂದ ಮಾಂಸ ಖರೀದಿಸಿ ಸೇವಿಸುವುದೇ ಇದಕ್ಕೆ ಇರುವ ಪರಿಹಾರ' ಎಂದು ತಿಳಿಸಿದ್ದಾರೆ.

'ಗುತ್ತಿಗೆ ಕಾಮಗಾರಿಗಳಲ್ಲಿ ವಾರ್ಷಿಕ ₹ 25 ಸಾವಿರ ಕೋಟಿ ಲಂಚ ವ್ಯವಹಾರ'

ಶೇ 40 ಕಮಿಷನ್: ಕಾಂಗ್ರೆಸ್– ಬಿಜೆಪಿ ವಾಗ್ವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗುತ್ತಿಗೆ ಕಾಮಗಾರಿಗಳಲ್ಲಿ ಕಮಿಷನ್ ಪಡೆಯುವ ಮೂಲಕ ರಾಜ್ಯ ಸರ್ಕಾರದಲ್ಲಿ ವರ್ಷಕ್ಕೆ ₹ 25 ಸಾವಿರ ಕೋಟಿ ಮೊತ್ತದ ಭ್ರಷ್ಟಾಚಾರ ನಡೆಯುತ್ತಿದೆ' ಎಂದು ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಪ್ರಕಾಶ್ ರಾಥೋಡ್ ಮಾಡಿದ ಆರೋಪ ಕೋಲಾಹಲ ಎಬ್ಬಿಸಿತು. ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರ ಮಧ್ಯೆ ವಾಕ್ಸಮರಕ್ಕೆ ಕಾರಣವಾಯಿತು.

ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ರಾಥೋಡ್, 'ರಾಜ್ಯ ಸರ್ಕಾರದಲ್ಲಿ ಶೇ 40ರಷ್ಟು ಕಮಿಷನ್ ಪಡೆಯುವ ಪದ್ಧತಿ ನಿಂತಿಲ್ಲವೆಂದು ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಹೇಳಿದ್ದಾರೆ. ಶಾಸಕರಿಗೂ ಶೇ 15ರಷ್ಟು ಕಮಿಷನ್ ಕೊಡದಿದ್ದರೆ ಕಾಮಗಾರಿಯೇ ದೊರೆಯುತ್ತಿಲ್ಲ ಎಂದಿದ್ದಾರೆ. ಇದರಿಂದ ಗುತ್ತಿಗೆ ಕಾಮಗಾರಿಗಳಲ್ಲಿ ವಾರ್ಷಿಕ ₹ 25 ಸಾವಿರ ಕೋಟಿ ಲಂಚ ವ್ಯವಹಾರ ನಡೆಯುತ್ತಿದೆ. ಇದನ್ನು ವಿರೋಧಿಸಿ ಏಪ್ರಿಲ್ ಕೊನೆ ವಾರದಲ್ಲಿ 50 ಸಾವಿರ ಗುತ್ತಿಗೆದಾರರು ಬೃಹತ್ ಪ್ರತಿಭಟನೆ ನಡೆಸಲಿದ್ದಾರೆ' ಎಂದರು.

'ನಿರ್ಮಿತಿ ಕೇಂದ್ರದಿಂದ ನಡೆದ ₹ 20 ಸಾವಿರ ಕೋಟಿ ಮೊತ್ತದ ಕಾಮಗಾರಿಯಲ್ಲಿ ಶೇ 20ರಷ್ಟು ಕಾಮಗಾರಿ ಅನುಷ್ಠಾನಗೊಂಡಿಲ್ಲ. ಭ್ರಷ್ಟಾಚಾರದಿಂದ ಸರ್ಕಾರಕ್ಕೆ ನಷ್ಟವಾಗುತ್ತಿದೆ. ಈ ಹಗರಣವನ್ನು ಹೈಕೋರ್ಟ್ ನ್ಯಾಯಮೂರ್ತಿಗಳ ಅಥವಾ ಜಂಟಿ ಸದನ ಸಮಿತಿಯಿಂದ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, 'ನಿರ್ದಿಷ್ಟವಾಗಿ ಯಾರ ಮೇಲಾದರೂ ದೂರುಗಳಿದ್ದರೆ ಉತ್ತರ ನೀಡಲು ಸರ್ಕಾರ ಸಿದ್ಧವಿದೆ. ಅದನ್ನು ಬಿಟ್ಟು ಯಾರೋ, ಏನೋ ಹೇಳಿದರು ಎಂದು ಇಲ್ಲಿ ಚರ್ಚೆ ಮಾಡಲು ಅವಕಾಶ ಇಲ್ಲ. ನಿನ್ನೆ ಸದನ ಮುಗಿದ ಇವತ್ತು ಸದನ ಶುರುವಾಗುವ ಮೊದಲು ಆದ ಘಟನೆಗಳ ಬಗ್ಗೆ ಮಾತ್ರ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಬೇಕು. ಆದರೆ, ಮಾಧ್ಯಮಗಳ ವರದಿ ಆಧರಿಸಿ ಆರೋಪ ಮಾಡುತ್ತಿದ್ದಾರೆ. ರಾಥೋಡ್ ನನ್ನ ಬಳಿ ₹ 50 ಸಾವಿರ ಕೇಳಿದ್ದರೆಂದು ನಾನು ಹೇಳಿದರೆ ಅದನ್ನೂ ಇಲ್ಲಿ ಪ್ರಸ್ತಾಪಿಸಲು ಸಾಧ್ಯವೇ? ಇಂಥದ್ದಕ್ಕೆಲ್ಲ ಸಭಾಪತಿ ಅವಕಾಶ ನೀಡಬಾರದು' ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಇದರಿಂದ ಅಸಮಾಧಾನಗೊಂಡ ಪ್ರಕಾಶ್ ರಾಥೋಡ್, 'ಸಚಿವರು ನನ್ನ ಹೆಸರು ಹೇಳಿದ್ದಾರೆ. ಇದು ಸರಿಯಲ್ಲ. ಗುತ್ತಿಗೆದಾರರ ಸಂಘದ ಅಧ್ಯಕ್ಷರು ಆರೋಪ ಮಾಡಿದ್ದಾರೆ. ಪ್ರಧಾನಿಗೂ ದೂರು ನೀಡಿದ್ದಾರೆ. ಸರ್ಕಾರ ಇದಕ್ಕೆ ಉತ್ತರ ನೀಡಬೇಕು' ಎಂದು ಒತ್ತಾಯಿಸಿದರು. ಅದಕ್ಕೆ ದನಿಗೂಡಿಸಿದ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, 'ಕಮಿಷನ್ ದಂಧೆ ನಡೆಯುತ್ತಿಲ್ಲ ಎಂದಾದರೆ ಇಲ್ಲ ಎನ್ನಿ, ಚರ್ಚೆ ತರುವುದು ನಮ್ಮ ಕರ್ತವ್ಯ' ಎಂದು ಕಾಂಗ್ರೆಸ್ ಪ್ರಸ್ತಾಪವನ್ನು ಸಮರ್ಥಿಸಿದರು.

ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರ ಮಧ್ಯೆ ಮಾತಿನ ಚಕಮಕಿ ಜೋರಾಗಿಯೇ ಮುಂದುವರಿಯುತ್ತಿದ್ದಂತೆ ಎದ್ದುನಿಂತ ಸಭಾಪತಿ, ಪರಿಸ್ಥಿತಿ ತಿಳಿಗೊಳಿಸಿದರು.

ಕಮಿಷನ್ ಆರೋಪ: ಮಾನನಷ್ಟ ದಾಖಲಿಸಿದ ಈಶ್ವರಪ್ಪ

ಬೆಂಗಳೂರು: ಬೆಳಗಾವಿ ಜಿಲ್ಲೆಯ ಹಿಂಡಲಗಾದಲ್ಲಿ ₹4 ಕೋಟಿ ಕಾಮಗಾರಿಗೆ ಶೇ 40 ರಷ್ಟು ಕಮಿಷನ್ ಕೇಳಿದ್ದಾರೆ ಎಂಬ ಆರೋಪ ಮಾಡಿರುವ ಸಂತೋಷ್ ಕೆ.ಪಾಟೀಲ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿರುವುದಾಗಿ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ತಿಳಿಸಿದ್ದಾರೆ.

'ಸಂತೋಷ್ ಮಾಡಿರುವ ಆರೋಪದಲ್ಲಿ ಯಾವುದೇ ಹುರುಳಿಲ್ಲ. ಅಷ್ಟೇ ಅಲ್ಲ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಯಾವುದೇ ಆದೇಶ ಪಡೆದಿಲ್ಲ ಎಂದೂ ಆತ ಹೇಳಿಕೊಂಡಿದ್ದಾನೆ. ಆದರೆ, ಈತನ ತಲೆಬುಡವಿಲ್ಲದ ಹೇಳಿಕೆಯನ್ನು ಆಧರಿಸಿ ಕಾಂಗ್ರೆಸ್ ಸಂಸದರು ಕಮಿಷನ್ ನೀಡಲಾಗಿದೆ ಎಂದು ಆರೋಪಿಸಿದ್ದಾರೆ. ಯಾವುದೇ ಸಾಕ್ಷ್ಯ ಇಲ್ಲದೆ ಆರೋಪ ಮಾಡಿರುವುದು ದುರದೃಷ್ಟಕರ' ಎಂದು ಅವರು ಹೇಳಿದ್ದಾರೆ.

'ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿಯವರು ಈ ಸಂಬಂಧ ಈಗಾಗಲೇ ಸ್ಪಷ್ಟನೆ ನೀಡಿದ್ದು, ಸಂತೋಷ್ ಪಾಟೀಲ ಅವರು ಉಲ್ಲೇಖಿಸಿರುವ ಕಾಮಗಾರಿಗೆ ಇಲಾಖೆಯಿಂದ ಅನುಮೋದನೆ ಕೋರಿಲ್ಲ ಮತ್ತು ಯಾವುದೇ ಕಾಮಗಾರಿಯನ್ನು ಮಂಜೂರು ಮಾಡಿಲ್ಲ. ಕಾರ್ಯಾದೇಶವಾಗಲಿ, ಆಡಳಿತಾತ್ಮಕ ಅನುಮೋದನೆಯನ್ನೂ ನೀಡಿಲ್ಲ' ಎಂದು ಹೇಳಿದ್ದಾರೆ.

'ಹಿಂಡಲಗಾ ಗ್ರಾಮದಲ್ಲಿ ಸಂತೋಷ್ ಪಾಟೀಲ ಹೇಳುವ ಕಾಮಗಾರಿ ಇಲಾಖೆ ವತಿಯಿಂದ ಅನುಷ್ಠಾನಗೊಂಡಿಲ್ಲ. ಯಾವುದೇ ಸರ್ಕಾರಿ ಏಜೆನ್ಸಿಗಳು ಈ ಕಾಮಗಾರಿಗೆ ತಾಂತ್ರಿಕ ಅನುಮೋದನೆ ನೀಡಿಲ್ಲ ಅಥವಾ ಅನುಷ್ಠಾನ ಮಾಡಿಲ್ಲ. ಹೀಗಾಗಿ ಹಣ ಬಿಡುಗಡೆ ಮಾಡುವ ಪ್ರಶ್ನೆಯೂ ಉದ್ಭವವಾಗುವುದಿಲ್ಲ' ಎಂದು ಈಶ್ವರಪ್ಪ ಹೇಳಿದ್ದಾರೆ.

ಹತಾಶರಾಗಿರುವ ಕಾಂಗ್ರೆಸ್ ಇಲ್ಲ ಸಲ್ಲದ ಆರೋಪಗಳನ್ನು ಮಾಡಿದ್ದು, ದುರುದ್ದೇಶದಿಂದ ಕೂಡಿದ ಆರೋಪದಲ್ಲಿ ಯಾವುದೇ ಸತ್ಯ ಇಲ್ಲ ಎಂಬುದು ಬಯಲಿಗೆ ಬಂದಿದೆ. ಪಕ್ಷದ ಚಟುವಟಿಕೆಗಳಲ್ಲಿ ಭಾಗವಹಿಸಿದ್ದ ವ್ಯಕ್ತಿಯೊಬ್ಬ ದುರುದ್ದೇಶದಿಂದ ಕೂಡಿದ ಆರೋಪವನ್ನು ಬಿಜೆಪಿ ಸರ್ಕಾರದ ಕೆಟ್ಟ ಹೆಸರು ತರಲು ಬಳಸಿಕೊಂಡಿದ್ದಾರೆ ಎಂದು ಅವರು ಟೀಕಿಸಿದ್ದಾರೆ.

ಸಂತೋಷ್ ಪಾಟೀಲ ಅವರ ವಿರುದ್ಧ ಮಾರ್ಚ್ 10 ರಂದೇ ಮಾನನಷ್ಟ ಮೊಕದ್ದಮೆಯನ್ನು 6ನೇ ಹೆಚ್ಚುವರಿ ಮುಖ್ಯ ಮೆಟ್ರೋಪಾಲಿಟನ್ ನ್ಯಾಯಾಲಯದಲ್ಲಿ ಸಲ್ಲಿಸಲಾಗಿದೆ ಎಂದು ತಿಳಿಸಿದ್ದಾರೆ.


ಸುದ್ದಿ 2 ನಿಮಿಷ

'ರೈತರ ಆತ್ಮಹತ್ಯೆ ಸಂಖ್ಯೆ ಇಳಿಕೆ'

ಬೆಂಗಳೂರು: ರಾಜ್ಯದಲ್ಲಿ ರೈತರ ಆತ್ಮಹತ್ಯೆ ಸಂಖ್ಯೆ ಗಣನೀಯವಾಗಿ ಕಡಿಮೆ ಆಗಿದೆ. 2015-16 ರಲ್ಲಿ 1062 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರೆ, ಆ ಸಂಖ್ಯೆ 2020-21 ರಲ್ಲಿ 268 ಕ್ಕೆ ಇಳಿದಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ಹೇಳಿದರು.

ವಿಧಾನಸಭೆಯಲ್ಲಿ ಮಂಗಳವಾರ ಕೃಷಿ ಇಲಾಖೆಗಳ ಅನುದಾನ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ ನೀಡಿದ ಅವರು, ರೈತರನ್ನು ಸಶಕ್ತಗೊಳಿಸುವ ಹಲವು ಕಾರ್ಯಕ್ರಮಗಳಿಂದಾಗಿ ರೈತರಿಗೆ ಅನುಕೂಲವಾಗಿದೆ. ಇದರಿಂದ ಆತ್ಮಹತ್ಯೆ ಕಡಿಮೆ ಆಗುತ್ತಿದೆ ಎಂದರು.

ಕೋವಿಡ್ ಸಂದರ್ಭದಲ್ಲಿ ಸಾಕಷ್ಟು ಯುವಕರು ಕೃಷಿಯತ್ತ ಹೊರಳಿದರು. ಅಷ್ಟೇ ಅಲ್ಲ ಸೂಟು ಬೂಟು ಹಾಕಿದವರೂ ಕೃಷಿಯ ಬಗ್ಗೆ ಮಾತನಾಡುತ್ತಿದ್ದಾರೆ. ರೈತರ ಆದಾಯವನ್ನು ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಹಲವು ಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ಅದರಲ್ಲಿ ಮುಖ್ಯವಾಗಿ, ದೇಶದಲ್ಲೇ ಮೊದಲ ಬಾರಿಗೆ ಸೆಕೆಂಡರಿ ಕೃಷಿ ನಿರ್ದೇಶನಾಲಯವನ್ನು ಸ್ಥಾಪಿಸಲಾಗಿದೆ. ರೈತರ ಉತ್ಪನ್ನಗಳನ್ನು ಕೆಪೆಕ್ ಮೂಲಕ ಮೌಲ್ಯ ವರ್ಧಿತಗೊಳಿಸಿ, ಬ್ರ್ಯಾಂಡಿಂಗ್ ಮಾಡಿ ರಫ್ತು ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.



'ಕೃಷಿ ಹೊಂಡ ಯೋಜನೆ ಮುಂದುವರಿಕೆ'

ಬೆಂಗಳೂರು: ರಾಜ್ಯದಲ್ಲಿ ಕೃಷಿ ಹೊಂಡಗಳಿಗೆ ಬೇಡಿಕೆ ಇರುವ ಕಡೆಗಳಲ್ಲಿ ಆ ಯೋಜನೆ ಮುಂದುವರೆಸಲು ಕ್ರಮ ತೆಗೆದುಕೊಳ್ಳುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

'ಕೃಷಿ ಹೊಂಡ ಯೋಜನೆ ನಿಲ್ಲಿಸಲಾಗಿದೆ' ಎಂಬ ವಿರೋಧ ಪಕ್ಷ ನಾಯಕ ಸಿದ್ದರಾಮಯ್ಯ ಆರೋಪಕ್ಕೆ ಉತ್ತರಿಸಿದ ಅವರು, 'ನಿಮ್ಮ ಅವಧಿಯಲ್ಲಿ 5 ವರ್ಷಗಳಿಗೆಂದು ಕಾರ್ಯಕ್ರಮ ರೂಪಿಸಿದ್ದಿರಿ. ಅದರ ಅವಧಿ ಮುಗಿದು ಹೋಗಿದೆ. ನಾವು ಬೇಕೆಂದೇ ನಿಲ್ಲಿಸಿದ್ದೇವೆ ಎಂಬ ಆರೋಪ ಸರಿಯಲ್ಲ' ಎಂದರು.

ಈ ಯೋಜನೆ ಜಾರಿ ಇದ್ದಾಗ, ಕೆಲವು ಜಿಲ್ಲೆಗಳಲ್ಲಿ ಅತಿ ಹೆಚ್ಚು ಕೃಷಿ ಹೊಂಡಗಳು ಸಿಕ್ಕಿದ್ದರೆ, ಇನ್ನು ಕೆಲವು ಜಿಲ್ಲೆಗಳಿಗೆ ಕಡಿಮೆ ಸಿಕ್ಕಿದ್ದವು. ಮಳೆ ಕಡಿಮೆ ಇರುವ ಪ್ರದೇಶಗಳಲ್ಲಿ ಇದರ ಪ್ರಯೋಜನ ಆಗುತ್ತದೆ. ಬೇಡಿಕೆಯನ್ನು ಆಧರಿಸಿ ಕೃಷಿ ಹೊಂಡಗಳನ್ನು ನಿರ್ಮಿಸಿಕೊಡಲಾಗುವುದು ಎಂದು ಬೊಮ್ಮಾಯಿ ಭರವಸೆ ನೀಡಿದರು.

'ಖಾಸಗಿ ಶಾಲೆಗಳ ಸಮಸ್ಯೆ ಇತ್ಯರ್ಥಕ್ಕೆ ಸಭೆ'

ಬೆಂಗಳೂರು: ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ ಪ್ರಥಮ ಮಾನ್ಯತೆ ಹಾಗೂ ಮಾನ್ಯತೆ ನವೀಕರಣದಲ್ಲಿನ ಸಮಸ್ಯೆಗಳನ್ನು ನಿವಾರಿಸಲು ಶೀಘ್ರದಲ್ಲಿ ಉನ್ನತಮಟ್ಟದ ಸಭೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಪುಟ್ಟಣ್ಣ, ಮಂಗಳವಾರ ನಿಯಮ 330ರ ಅಡಿಯಲ್ಲಿ ನಡೆಸಿದ ಚರ್ಚೆಗೆ ಉತ್ತರಿಸಿದ ಅವರು, 'ಕಟ್ಟಡಗಳ ಸಾಮರ್ಥ್ಯ ಪ್ರಮಾಣಪತ್ರ, ಅಗ್ನಿಶಾಮಕ ವ್ಯವಸ್ಥೆಯ ಪರಿಶೀಲನಾ ಪ್ರಮಾಣಪತ್ರ ಸಲ್ಲಿಕೆ ಸೇರಿದಂತೆ ನಿಯಮಗಳ ಸರಳೀಕರಣಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಖಾಸಗಿ ಶಾಲೆಗಳ ಮಾನ್ಯತೆ ನವೀಕರಣ ಪ್ರಕ್ರಿಯೆಯನ್ನು ಸುಲಲಿತಗೊಳಿಸುವ ದಿಸೆಯಲ್ಲಿ ಸಭೆ ನಡೆಸಿ, ತೀರ್ಮಾನಕ್ಕೆ ಬರಲಾಗುವುದು' ಎಂದರು.

ವಿಧಾನಪರಿಷತ್‌ನಲ್ಲಿ ಗಣಿ ಮತ್ತು ಭೂವಿಜ್ಞಾನ ಸಚಿವ ಹಾಲಪ್ಪ ಆಚಾರ್ ಹೇಳಿಕೆ

ಗಣಿಗಾರಿಕೆ: ₹5,300 ಕೋಟಿ ರಾಜಧನ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಣಿಗಾರಿಕೆಯಿಂದ ಕಳೆದ ವರ್ಷ ₹ 4 ಸಾವಿರ ಕೋಟಿ ರಾಜಧನ ಸಂಗ್ರಹಿಸುವ ಗುರಿ ಹೊಂದಲಾಗಿತ್ತು. ಸೋರಿಕೆ ತಡೆಗಟ್ಟಿದ ಪರಿಣಾಮ ನಿಗದಿಪಡಿಸಿದ್ದ ಗುರಿಗಿಂತಲೂ ಹೆಚ್ಚು, ಅಂದರೆ ₹ 5,300 ಕೋಟಿ ರಾಜಧನ ಸಂಗ್ರಹವಾಗಿದೆ' ಎಂದು ಗಣಿ ಮತ್ತು ಭೂವಿಜ್ಞಾನ ಸಚಿವ ಹಾಲಪ್ಪ ಆಚಾರ್ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಜೆಡಿಎಸ್‌ನ ಸಿ.ಎನ್. ಮಂಜೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಅಗತ್ಯ ಇರುವ ಕಡೆ ಕಾನೂನು ಪ್ರಕಾರ ಗಣಿಗಾರಿಕೆಗೆ ಅನುಮತಿ ನೀಡಲಾಗಿದೆ. ಕಾನೂನುಬಾಹಿರ ಚಟುವಟಿಕೆಗೆ ಎಲ್ಲಿಯೂ ಅವಕಾಶ ನೀಡಿಲ್ಲ' ಎಂದರು.

'ಖನಿಜ ಸಾಗಣೆ ವಾಹನಗಳ ಮೇಲೆ ನಿಗಾ ವಹಿಸಲು ಇಂಟಿಗ್ರೇಟೆಡ್ ಲೀಸ್ ಮ್ಯಾನೇಜ್‌ಮೆಂಟ್ ಸಿಸ್ಟಂ (ಐಎಲ್‌ಎಂಎಸ್) ತಂತ್ರಾಂಶ ರೂಪಿಸಲಾಗಿದೆ. ಖನಿಜ ಸಾಗಣೆ ವಾಹನಗಳಿಗೆ ಜಿಪಿಎಸ್ ಅಳವಡಿಸಿ ಕೇಂದ್ರೀಕೃತ ನಿಗಾ ವಹಿಸಲು ತಂತ್ರಾಂಶ ರೂಪಿಸಲಾಗುತ್ತಿದೆ. ಗಣಿಗಾರಿಕೆಯ ಸರಕು ಸಾಗಣೆ ವಾಹನಗಳು ನಿಗದಿಗಿಂತ ಹೆಚ್ಚಿನ ಭಾರ ಸಾಗಿಸಿದ 27,763 ವಾಹನಗಳ ವಿರುದ್ಧ ಸಾರಿಗೆ ಇಲಾಖೆ ಪ್ರಕರಣ ದಾಖಲಿಸಿದ್ದು, ₹ 17.17 ಕೋಟಿ ದಂಡ ವಸೂಲು ಮಾಡಲಾಗಿದೆ' ಎಂದರು.

'ಸಾರಿಗೆ ಇಲಾಖೆಯಿಂದ ಒನ್ ನೇಷನ್, ಒನ್ ಜಿಪಿಎಸ್ ವ್ಯವಸ್ಥೆ ಜಾರಿ ಮಾಡಲಾಗುತ್ತಿದೆ. ಗಣಿ ಇಲಾಖೆಯಿಂದಲೂ ಒನ್ ಸ್ಟೇಟ್, ಒನ್ ಜಿಪಿಎಸ್ ಜಾರಿಗೆ ತರಲಾಗುತ್ತಿದೆ' ಎಂದೂ ವಿವರಿಸಿದರು.

ಬಿಜೆಪಿಯ ಸುನೀಲ್ ವಲ್ಯಾಪುರೆ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಜಿಲ್ಲಾ ಗಣಿಗಾರಿಕೆ ನಿಧಿ (ಡಿಎಂಎಫ್) ಅಡಿ ಸಂಗ್ರಹಿಸಿದ ಮೊತ್ತವನ್ನು ಬಾಧಿತ ಪ್ರದೇಶಗಳ ಅಭಿವೃದ್ಧಿಗೆ ಮಾತ್ರ ಬಳಕೆ ಮಾಡಲಾಗುತ್ತಿದೆ. ಡಿಎಂಎಫ್ ನಿಧಿ ಬಳಕೆಯ ಟ್ರಸ್ಟ್‌ಗೆ ಜಿಲ್ಲಾಧಿಕಾರಿ ಅಧ್ಯಕ್ಷರಾಗಿದ್ದು, ಒಂಬತ್ತು ಮಂದಿ ಸದಸ್ಯರಿರುತ್ತಾರೆ' ಎಂದರು.

ಸುನೀಲ್ ವಲ್ಯಾಪುರೆ, ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಕಾಂಗ್ರೆಸ್ಸಿನ ಪ್ರಕಾಶ್ ರಾಥೋಡ್, ಕೆ. ಗೋವಿಂದರಾಜು ಸೇರಿದಂತೆ ಹಲವರು, 'ಡಿಎಂಎಫ್ ಹಂಚಿಕೆಯಲ್ಲಿ ತಾರತಮ್ಯವಾಗುತ್ತಿದೆ' ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, 'ಗಣಿಗಾರಿಕೆ ಪ್ರದೇಶದ ಅನುದಾನ ಬೇರೆ ಪ್ರದೇಶಗಳ ಅಭಿವೃದ್ಧಿಗೆ ಬಳಕೆ ಮಾಡಲು ಅವಕಾಶ ಇಲ್ಲ. ಬಯಲು ಪ್ರದೇಶದ ಪ್ರದೇಶಾಭಿವೃದ್ಧಿ ನಿಧಿಗೆ ನೀಡಲಾದ ಅನುದಾನಕ್ಕೆ ಸದಸ್ಯರು ಇನ್ನೂ ಲೆಕ್ಕ ಕೊಟ್ಟಿಲ್ಲ' ಎಂದು ಆಕ್ಷೇಪಿಸಿದರು.

'ವಿದ್ಯಾರ್ಥಿ ವೇತನಕ್ಕೆ ₹ 100 ಕೋಟಿ'

ಬೆಂಗಳೂರು: ವಿವಿಧ ಸಮುದಾಯಗಳ ವಿದ್ಯಾರ್ಥಿಗಳಿಗೆ ಪಾವತಿಸಬೇಕಿರುವ ವಿದ್ಯಾರ್ಥಿ ವೇತನದ ಬಾಕಿಯನ್ನು ನೀಡಲು ₹ 100 ಕೋಟಿ ಅನುದಾನವನ್ನು ಒದಗಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಮಂಗಳವಾರ ಬಜೆಟ್‌ಗೆ ಅನುಮೋದನೆ ಪಡೆಯುವ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಿದ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, 'ನಿಮಗೆ ಅಲ್ಪಸಂಖ್ಯಾತರ ಮೇಲೆ ಸಿಟ್ಟಿರಬಹುದು. ಆದರೆ, ಆ ವರ್ಗದ ಮಕ್ಕಳ ಮೇಲೆ ಅದನ್ನು ತೋರಿಸಬೇಡಿ. ಅಲ್ಪಸಂಖ್ಯಾತ ಸಮುದಾಯದ ಮಕ್ಕಳ ವಿದ್ಯಾರ್ಥಿ ವೇತನ ತಡೆ ಹಿಡಿಯಲಾಗಿದೆ. ಅದನ್ನು ಬಿಡುಗಡೆ ಮಾಡಿ' ಎಂದರು.

ಆಗ ಉತ್ತರ ನೀಡಿದ ಮುಖ್ಯಮಂತ್ರಿ, 'ಅಲ್ಪಸಂಖ್ಯಾತರೂ ಸೇರಿದಂತೆ ಯಾವುದೇ ಸಮುದಾಯದ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನವನ್ನೂ ರದ್ದು ಮಾಡುವುದಿಲ್ಲ. ಬಾಕಿ ಇರುವ ವಿದ್ಯಾರ್ಥಿ ವೇತನ ವಿತರಿಸಲು ₹ 100 ಕೋಟಿ ಒದಗಿಸುತ್ತೇನೆ. ಎಲ್ಲ ವಿದ್ಯಾರ್ಥಿ ವೇತನಗಳೂ ಮೊದಲಿನಂತೆಯೇ ಮುಂದುವರಿಯುತ್ತವೆ' ಎಂದು ಭರವಸೆ ನೀಡಿದರು.

ಧನ ವಿನಿಯೋಗ ಮಸೂದೆಗೆ ಒಪ್ಪಿಗೆ

ಬೆಂಗಳೂರು: 2022-23 ನೇ ಹಣಕಾಸು ವರ್ಷಕ್ಕಾಗಿ ₹2.71ಲಕ್ಷ ಕೋಟಿ ಮೀರದಷ್ಟು ಮೊಬಲಗನ್ನು ಮಾತ್ರ ರಾಜ್ಯ ಸಂಚಿತ ನಿಧಿಯಿಂದ ಸಂದಾಯ ಮಾಡಲು 'ಕರ್ನಾಟಕ ಧನವಿನಿಯೋಗ ಮಸೂದೆ' ಸಂಖ್ಯೆ 2 ಕ್ಕೆ ವಿಧಾನಸಭೆ ಮಂಗಳವಾರ ಒಪ್ಪಿಗೆ ನೀಡಿತು.

ಹಣಕಾಸು ಖಾತೆಯನ್ನು ಹೊಂದಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಮಸೂದೆ ಮಂಡಿಸಿದರು. ಈ ಮೂಲಕ 2022-23 ನೇ ಸಾಲಿನ ಬಜೆಟ್‌ಗೆ ಅಂಗೀಕಾರ ಪಡೆಯಲಾಯಿತು.

ಆರ್ಥಿಕ ಹೊಣೆಗಾರಿಕೆ ಮಸೂದೆ: 2022-23 ನೇ ಸಾಲಿನಲ್ಲಿ ಆರ್ಥಿಕ ಕೊರತೆಯನ್ನು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ 3.5 ರವರೆಗೆ ಹೆಚ್ಚಿಸಲು ಅನುಮತಿ ನೀಡುವ 'ಕರ್ನಾಟಕ ಆರ್ಥಿಕ ಹೊಣೆಗಾರಿಕೆ(ತಿದ್ದುಪಡಿ) ಮಸೂದೆ 2022'ಕ್ಕೆ ವಿಧಾನಸಭೆ ಒಪ್ಪಿಗೆ ನೀಡಿತು.

2022-23 ನೇ ಆರ್ಥಿಕ ವರ್ಷದ ಅವಧಿಯಲ್ಲಿ ಕೋವಿಡ್ ಅಲೆಗಳ ಪರಿಣಾಮ, ಮಂದಗತಿಯ ಆರ್ಥಿಕ ಚೇತರಿಕೆ ಕಾರಣದಿಂದ ರಾಜಸ್ವ ಕೊರತೆ ಆಗಬಹುದು. ಅಲ್ಲದೆ, ಈ ಅವಧಿಯಲ್ಲಿ ಒಟ್ಟು ಹೊಣೆಗಾರಿಕೆ (ಸಾಲ) ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇ 25 ರಷ್ಟು ಮೀರಬಹುದು ಎಂಬ ಕಾರಣಕ್ಕಾಗಿ ಈ ಮಸೂದೆ ಮಂಡಿಸಿರುವುದಾಗಿ ಮುಖ್ಯಮಂತ್ರಿಯವರು ತಿಳಿಸಿದರು.

ಮೋಟಾರು ವಾಹನ ತೆರಿಗೆ ಮಸೂದೆ: ತೆರಿಗೆ ಪಾವತಿಯ ಅವಧಿಯನ್ನು 15 ದಿನಗಳಿಂದ ಒಂದು ತಿಂಗಳಿಗೆ ವಿಸ್ತರಿಸಲು, ₹30 ಸಾವಿರ ಮೂರು ತಿಂಗಳಿಗೊಮ್ಮೆ ಪಾವತಿಸಬೇಕಾದ ವಾಹನಕ್ಕೆ ಸಂಬಂಧಿಸಿದ ತೆರಿಗೆಯನ್ನು ತೆರಿಗೆಯ ಸಿಂಧುತ್ವ ಮುಗಿಯುವುದಕ್ಕೆ ಮೊದಲು ದಾಮಾಷಾ (ಪ್ರೊರೇಟಾ) ಆಧಾರದ ಮೇಲೆ ತಿಂಗಳಿಗೆ ಪಾವತಿಸುವ ಉದ್ದೇಶಕ್ಕಾಗಿ 'ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ(ತಿದ್ದುಪಡಿ) ಮಸೂದೆ'ಗೂ ವಿಧಾನಸಭೆ ಒಪ್ಪಿಗೆ ನೀಡಿತು. ಸಾರಿಗೆ ಸಚಿವ ಬಿ.ಶ್ರೀರಾಮುಲು ಮಸೂದೆ ಮಂಡಿಸಿದರು.

ವಿಧಾನ ಪರಿಷತ್‌ನಲ್ಲೂ ಬಜೆಟ್‌ಗೆ ಅನುಮೋದನೆ ದೊರೆಯಿತು

'ಡಿಸಿಸಿ ಬ್ಯಾಂಕ್‌ಗಳ ವಿಲೀನ: ಕೇಂದ್ರದ ನಿರ್ದೇಶನದಂತೆ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇರಳ, ಗುಜರಾತ್ ಮತ್ತು ಛತ್ತೀಸಗಡ ಮಾದರಿಯಲ್ಲಿ ರಾಜ್ಯದಲ್ಲಿಯೂ ಜಿಲ್ಲಾ ಕೇಂದ್ರ ಸಹಕಾರ (ಡಿಸಿಸಿ) ಬ್ಯಾಂಕ್‌ಗಳ ವಿಲೀನ ಕುರಿತು ಅಧಿಕಾರಿಗಳ ಜೊತೆ ಈಗಾಗಲೇ ಸಭೆ ನಡೆಸಲಾಗಿದೆ. ಈ ಬಗ್ಗೆ ಅಧ್ಯಯನಕ್ಕೆ ಅಧಿಕಾರಿಗಳ ತಂಡವನ್ನು ಆ ರಾಜ್ಯಗಳಿಗೆ ಕಳುಹಿಸಿ, ಕೇಂದ್ರ ಸರ್ಕಾರಕ್ಕೆ ವರದಿ ರವಾನಿಸಲಾಗುವುದು. ಕೇಂದ್ರದ ನಿರ್ದೇಶನದಂತೆ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಬಿಜೆಪಿಯ ವೈ.ಎ. ನಾರಾಯಣಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ರಾಜ್ಯದಲ್ಲಿರುವ ಯಾವುದೇ ಡಿಸಿಸಿ ಬ್ಯಾಂಕ್ ನಕಲಿ ಸಾಲ ನೀಡಿದ ಪ್ರಕರಣಗಳು ಕಂಡುಬಂದಿಲ್ಲ' ಎಂದರು.

'ಕೋಲಾರ-ಚಿಕ್ಕಬಳ್ಳಾಪುರ ಡಿಸಿಸಿ ಬ್ಯಾಂಕ್‌ನಲ್ಲಿ ಸ್ವಸ್ವಹಾಯ ಸಂಘಗಳ ಹೆಸರಿನಲ್ಲಿ ನಕಲಿ ಸಾಲ ನೀಡಲಾಗುತ್ತಿದೆ. ಅರ್ಹರಿಗೆ ಸಾಲ ನೀಡುತ್ತಿಲ್ಲ' ಎಂದು ನಾರಾಯಣಸ್ವಾಮಿ ಆರೋಪಿಸಿದಾಗ ಉತ್ತರಿಸಿದ ಸಚಿವರು, 'ಈ ಡಿಸಿಸಿ ಬ್ಯಾಂಕ್ ಉತ್ತಮವಾಗಿ ಕೆಲಸ ಮಾಡುತ್ತಿದೆ. ಇಲ್ಲಿ 2016ರಿಂದ ಈವರೆಗೂ ₹ 1,281 ಕೋಟಿ ಸಾಲ ನೀಡಲಾಗಿದೆ. ಕೃಷಿಯೇತರರಿಗೂ ಸಾಲ ನೀಡಲಾಗಿದೆ. ಸುಸ್ತಿಯಾಗಿರುವ ಸಾಲ ವಸೂಲಿಗೂ ಕ್ರಮ ಕೈಗೊಳ್ಳಲಾಗಿದೆ' ಎಂದು ವಿವರಿಸಿದರು.

'ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದಂತೆ ಈ ಬ್ಯಾಂಕಿನ ವ್ಯವಹಾರಗಳ ತನಿಖೆ ನಡೆಸಲಾಗುತ್ತಿದೆ. ಒಂದು ತಿಂಗಳಲ್ಲಿ ತನಿಖೆ ಪೂರ್ಣಗೊಳ್ಳಲಿದೆ. ನಕಲಿ ಸಾಲ ನೀಡಿದ ನಿರ್ದಿಷ್ಟ ಪ್ರಕರಣಗಳಿದ್ದರೆ ಅದನ್ನೂ ತನಿಖೆ ಮಾಡಿಸಲು ಸಿದ್ಧ' ಎಂದರು.



ವಿಧಾನಪರಿಷತ್‌ನಲ್ಲಿ ಮಂಗಳವಾರ ನಡೆದ ಕಲಾಪದಲ್ಲಿ ಸಚಿವರಾದ ಎಂ.ಟಿ.ಬಿ. ನಾಗರಾಜ್, ಜೆ.ಸಿ. ಮಾಧುಸ್ವಾಮಿ, ಬಿ.ಸಿ. ನಾಗೇಶ್, ಕೆ.ಎಸ್. ಈಶ್ವರಪ್ಪ ಮತ್ತು ಬಿಜೆಪಿಯ ಆಯನೂರು ಮಂಜುನಾಥ್ ಚರ್ಚೆಯಲ್ಲಿ ತೊಡಗಿದ್ದರು –ಪ್ರಜಾವಾಣಿ ಚಿತ್ರ

'ಎಲ್ಲ ಪಕ್ಷಗಳಲ್ಲೂ ಮೀಸಲಾತಿ ವಿರೋಧಿಗಳಿದ್ದಾರೆ'

ಬೆಂಗಳೂರು: 'ಎಲ್ಲ ರಾಷ್ಟ್ರೀಯ ಪಕ್ಷಗಳಲ್ಲೂ ಮೀಸಲಾತಿ ವಿರೋಧಿಗಳು ಇರುತ್ತಾರೆ. ಸಂದರ್ಭ ಬಂದಾಗಲೆಲ್ಲ ಅವರು ಮೀಸಲಾತಿಯನ್ನು ವಿರೋಧಿಸುತ್ತಾರೆ' ಎಂಬ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಮಾತಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಸಹಮತ ವ್ಯಕ್ತಪಡಿಸಿದರು.

ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಳಂಬ ಮತ್ತು ಹಿಂದುಳಿದ ವರ್ಗಗಳ ರಾಜಕೀಯ ಮೀಸಲಾತಿಗೆ ಸಂಬಂಧಿಸಿದಂತೆ ವಿಧಾನ ಪರಿಷತ್‌ನಲ್ಲಿ ಮಂಗಳವಾರ ಚರ್ಚೆ ನಡೆಯಿತು. 'ಬಿಜೆಪಿ ನಾಯಕರಾಗಿದ್ದ ಎಂ. ರಾಮಾ ಜೋಯಿಸ್ ಮೀಸಲಾತಿ ವಿರೋಧಿಸಿ ಸುಪ್ರೀಂಕೋರ್ಟ್‌ನಲ್ಲಿ ವಾದ ಮಂಡಿಸಿದ್ದರು. ಈಗ ನಡೆಯುತ್ತಿರುವ ಬೆಳವಣಿಗೆಗಳನ್ನು ಗಮನಿಸಿದರೆ ಮೀಸಲಾತಿ ವಿರುದ್ಧ ಯಾರೋ ಇದ್ದಾರೆ ಎಂಬ ಭಾವನೆ ಮೂಡುತ್ತದೆ' ಎಂದು ಕಾಂಗ್ರೆಸ್‌ನ ಪಿ.ಆರ್. ರಮೇಶ್ ಹೇಳಿದರು.

ಆಗ ಉತ್ತರ ನೀಡಿದ ಈಶ್ವರಪ್ಪ, 'ರಾಮಾ ಜೋಯಿಸ್ ಅವರದ್ದು ವೈಯಕ್ತಿಕ ಅಭಿಪ್ರಾಯ. ಒಬ್ಬರ ಅಭಿಪ್ರಾಯ ಪಕ್ಷದ ಅಭಿಪ್ರಾಯ ಆಗುವುದಿಲ್ಲ. ಮೀಸಲಾತಿ ವಿಚಾರದಲ್ಲಿ ಯಾರೇ ರಾಜಕೀಯ ಮಾಡಿದರೂ ಅವರು ಹಿಂದುಳಿದ ವರ್ಗಗಳಿಗೆ ದ್ರೋಹ ಬಗೆಯುವವರು. ನಮಗೆ ಅಂತಹ ವಿಷಯದಲ್ಲಿ ಆಸಕ್ತಿ ಇಲ್ಲ. ನಾವು ಯಾವತ್ತೂ ಮೀಸಲಾತಿ ಪರ ಇರುವವರು' ಎಂದರು.

'ರಾಷ್ಟ್ರೀಯ ಪಕ್ಷಗಳಲ್ಲಿ ಕೆಲವರು ಸುಲಭವಾಗಿ ಮೀಸಲಾತಿಯನ್ನು ಒಪ್ಪುವುದಿಲ್ಲ. ಅವರು ಯಾವಾಗಲೂ ಮೀಸಲಾತಿ ವಿರುದ್ಧವೇ ಇರುತ್ತಾರೆ. ಅಂತಹವರು ನಮ್ಮ ಪಕ್ಷದಲ್ಲೂ ಇದ್ದಾರೆ, ನಿಮ್ಮ ಪಕ್ಷದಲ್ಲೂ ಇದ್ದಾರೆ' ಎಂದು ಹರಿಪ್ರಸಾದ್ ಹೇಳಿದರು.

'ಪಕ್ಷವಾಗಿ ಆ ರೀತಿ ಇರುವುದಿಲ್ಲ. ಪಕ್ಷದೊಳಗೆ ಅಂತಹವರು ಇರುತ್ತಾರೆ ಎನ್ನುವುದನ್ನು ನಾನು ಒಪ್ಪುತ್ತೇನೆ' ಎಂದು ಸಚಿವರು ಸಹಮತ ವ್ಯಕ್ತಪಡಿಸಿದರು.

'ಮಹದಾಯಿ: ಅನುಷ್ಠಾನ ಸರ್ಕಾರದ ಬದ್ಧತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹದಾಯಿ ಯೋಜನೆ ಅನುಷ್ಠಾನ ನಮ್ಮ ಸರ್ಕಾರದ ಬದ್ಧತೆ. ಈ ಯೋಜನೆಯ ತ್ವರಿತ ಅನುಷ್ಠಾನಕ್ಕೆ ಅಗತ್ಯವಿರುವ ಎಲ್ಲ ಕ್ರಮಗಳನ್ನೂ ಸರ್ಕಾರ ಕೈಗೊಳ್ಳಲಿದೆ' ಎಂದು ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಸಲೀಂ ಅಹ್ಮದ್ ಮಂಡಿಸಿದ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡಿದ ಸಚಿವರು, 'ಮಹದಾಯಿ ನದಿ ನೀರನ್ನು ಬಳಸಿಕೊಂಡು ಕಳಸಾ ಬಂಡೂರಿ ನಾಲಾ ತಿರುವು ಕುಡಿಯುವ ನೀರಿನ ಯೋಜನೆಯನ್ನು ಆದಷ್ಟು ಬೇಗ ಜಾರಿಗೊಳಿಸಬೇಕು ಎಂಬುದು ಸರ್ಕಾರದ ನಿಲುವು. ಕೇಂದ್ರ ಜಲ ಆಯೋಗ ಹಾಗೂ ಕೇಂದ್ರ ಅರಣ್ಯ ಮತ್ತು ಪರಿಸರ ಇಲಾಖೆಯ ಅನುಮತಿಗಳು ಬಾಕಿ ಇವೆ. ಅವುಗಳು ದೊರೆತ ತಕ್ಷಣದಲ್ಲೇ ಕಾರ್ಯಪ್ರವೃತ್ತರಾಗುತ್ತೇವೆ' ಎಂದರು.

ಪ್ರಸಕ್ತ ಬಜೆಟ್‌ನಲ್ಲಿ ಮಹದಾಯಿ ಯೋಜನೆಗೆ ₹ 1,000 ಕೋಟಿ, ಮೇಕೆದಾಟು ಯೋಜನೆಗೆ ₹ 1,000 ಕೋಟಿ, ಎತ್ತಿನಹೊಳೆ ಯೋಜನೆಗೆ ₹ 3,000 ಕೋಟಿ ಅನುದಾನ ನೀಡಲಾಗಿದೆ. ಬಿಜೆಪಿ ಸರ್ಕಾರಕ್ಕೆ ಈ ವಿಚಾರದಲ್ಲಿ ಬದ್ಧತೆ ಇರುವ ಕಾರಣದಿಂದ ಈ ಕೆಲಸ ಮಾಡಿದೆ. ಹಿಂದೆ ಕಾಂಗ್ರೆಸ್ ಐದು ವರ್ಷಗಳ ಕಾಲ ಅಧಿಕಾರದಲ್ಲಿದ್ದರೂ ನೀರಾವರಿ ವಿಷಯದಲ್ಲಿ ಕೊಟ್ಟ ಮಾತಿನಂತೆ ನಡೆದುಕೊಳ್ಳಲಿಲ್ಲ ಎಂದು ಟೀಕಿಸಿದರು.

'ಮಹದಾಯಿ ಜಲ ವಿವಾದವನ್ನು ಪರಿಹರಿಸುವುದಾಗಿ ಪ್ರಧಾನಿ ನರೇಂದ್ರ ಮೋದಿ ಭರವಸೆ ನೀಡಿದ್ದರು. ಆದರೆ, ಯಾವ ಬೆಳವಣಿಗೆಯೂ ಆಗಿಲ್ಲ' ಎಂದು ಸಲೀಂ ಅಹ್ಮದ್ ದೂರಿದರು.

'ಹಿಂದಿನವರು ಏನೂ ಮಾಡಿಲ್ಲ ಎನ್ನಲಾಗದು'

'ಹಿಂದೆ ಆಡಳಿತ ನಡೆಸಿದವರು ದೇಶಕ್ಕಾಗಿ ಏನೂ ಮಾಡಿಲ್ಲ ಎನ್ನಲಾಗದು. ಅಧಿಕಾರದಲ್ಲಿದ್ದವು ಅವರವರ ಕಾಲಕ್ಕೆ ಶಕ್ತಿಗನುಗುಣವಾಗಿ ದೇಶಕ್ಕೆ ಕೆಲಸ ಮಾಡಿದ್ದಾರೆ' ಎಂದು ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.

ಮಹದಾಯಿ ಯೋಜನೆಗೆ ಸಂಬಂಧಿಸಿದ ಚರ್ಚೆಯ ವೇಳೆ, 'ಭಾಷಾವಾರು ಪ್ರಾಂತ್ಯಗಳ ರಚನೆಗೂ ಮೊದಲು ಮುಂಬೈ ಸರ್ಕಾರ ಕೊಯ್ನಾ ಅಣೆಕಟ್ಟೆ ನಿರ್ಮಾಣ ವೆಚ್ಚದಲ್ಲಿ ಮೈಸೂರು ಪ್ರಾಂತ್ಯದಿಂದ ₹ 2.2 ಕೋಟಿ ಪಾಲು ಕೇಳಿತ್ತು. ಅಷ್ಟು ನೀಡಿದ್ದರೆ ಆಗಲೇ ಹಲವು ಜಿಲ್ಲೆಗಳಿಗೆ ನೀರು ಸಿಗುತ್ತಿತ್ತು. ಕೇಂದ್ರ, ಮೈಸೂರು, ಮುಂಬೈ ಎಲ್ಲ ಕಡೆಯೂ ಕಾಂಗ್ರೆಸ್ ಅಧಿಕಾರದಲ್ಲಿದ್ದರೂ ಮೈಸೂರು ಪ್ರಾಂತ್ಯ ಈ ಪ್ರಸ್ತಾವವನ್ನು ಒಪ್ಪಿರಲಿಲ್ಲ' ಎಂದರು.

ಆಗ ಪ್ರತಿಕ್ರಿಯಿಸಿದ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, 'ಕರ್ನಾಟಕದಲ್ಲಿ 26 ಅಣೆಕಟ್ಟೆಗಳಿವೆ. ಅವುಗಳಲ್ಲಿ 20 ಕಾಂಗ್ರೆಸ್ ಆಡಳಿತದಲ್ಲಿ ನಿರ್ಮಾಣವಾಗಿದ್ದರೆ, ಒಂದು ಬ್ರಿಟಿಷರು ನಿರ್ಮಿಸಿದ್ದು. ಉಳಿದವು ಮಹಾರಾಜರು ಕಟ್ಟಿಸಿದ್ದು' ಎಂದು ಹೇಳಿದರು.

'ದೇಶಕ್ಕಾಗಿ 60 ವರ್ಷಗಳಲ್ಲಿ ಏನನ್ನೂ ಮಾಡಿಲ್ಲ ಎಂದು ಹೇಳುವುದು ಮೂರ್ಖತನವಾಗುತ್ತದೆ ಎಂದು ಅಟಲ್ ಬಿಹಾರಿ ವಾಜಪೇಯಿಯವರು ಮೊದಲ ಬಾರಿ ಪ್ರಧಾನಿ ಹುದ್ದೆಗೇರಿ ರಾಜೀನಾಮೆ ನೀಡುವಾಗ ಹೇಳಿದ್ದರು' ಎಂದು ನೆನಪಿಸಿದರು.

ಆಗ ಉತ್ತರಿಸಿದ ಕಾರಜೋಳ, 'ಹಿಂದಿನವರು ಕೆಲಸ ಮಾಡಿಲ್ಲ ಎಂದು ನಾನು ಹೇಳುವುದಿಲ್ಲ. ಯಾರು ಕೂಡ ಹಾಗೆ ಹೇಳಲು ಆಗುವುದಿಲ್ಲ' ಎಂದರು.

19 ಲಕ್ಷ ಇವಿಎಂ ನಾಪತ್ತೆ!

ಒಂದನೇ ಪುಟದಿಂದ

'ಇವಿಎಂಗಳನ್ನು ಪರೀಕ್ಷೆ ಮಾಡಲು ಚುನಾವಣಾ ಆಯೋಗವು ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಆಹ್ವಾನ ನೀಡಿತ್ತು. ಆದರೆ ಅವುಗಳನ್ನು ಪರೀಕ್ಷೆಗೆ ಒಳಪಡಿಸುವ ತಂತ್ರಜ್ಞರು ರಾಜಕೀಯ ಪಕ್ಷದಲ್ಲಿಲ್ಲ. ಅದರ ಬದಲು, ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ), ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರಿಂದ ಇದನ್ನು ಪರೀಕ್ಷೆಗೆ ಒಳಪಡಿಸಲಿ' ಎಂದು ಒತ್ತಾಯಿಸಿದ ಪಾಟೀಲರು, ಈ ಬಗ್ಗೆ ಹೆಚ್ಚಿನ ಮಾಹಿತಿ ಪ್ರಿಯಾಂಕ್ ಖರ್ಗೆ ಬಳಿ ಇದೆ ಎಂದರು.

ಆಗ ಮಾತನಾಡಿದ ಕಾಂಗ್ರೆಸ್‌ನ ಪ್ರಿಯಾಂಕ್, 'ಬಿಜೆಪಿಯವರೇ ಆದ ಜಿವಿಎಲ್ ನರಸಿಂಹ ರಾವ್ ಅವರು ಇವಿಎಂ ಹ್ಯಾಕಿಂಗ್ ಬಗ್ಗೆ ಪುಸ್ತಕವನ್ನೇ ಬರೆದಿದ್ದಾರೆ. ಚುನಾವಣಾ ಆಯೋಗವು ಇವಿಎಂನ ಲೋಪಗಳನ್ನು ಸಾಬೀತುಪಡಿಸುವಂತೆ ಸವಾಲೆಸೆದಾಗ ನಾನು ರಾಜ್ಯದ ಮಾಹಿತಿ ತಂತ್ರಜ್ಞಾನ ಸಚಿವನಾಗಿದ್ದೆ. ಲೋಪಗಳ ಬಗ್ಗೆ ಸರ್ಕಾರದಿಂದ ಎರಡು ಪತ್ರ ಬರೆದಿದ್ದೆವು. ಅದಕ್ಕೆ ಪ್ರತಿಯಾಗಿ ಇವಿಎಂ ನಿರ್ವಹಣೆಯ ಕೈಪಿಡಿಯನ್ನಷ್ಟೇ ಕಳುಹಿಸಿಕೊಟ್ಟ ಆಯೋಗವು ಸಂದೇಹಗಳಿಗೆ ಉತ್ತರ ನೀಡುವ ಗೋಜಿಗೇ ಹೋಗಿರಲಿಲ್ಲ' ಎಂದರು.

'ನೈತಿಕ ಹ್ಯಾಕಥಾನ್ ನಡೆಸಲಿ'

'ಇವಿಎಂ ಹ್ಯಾಕ್ ಮಾಡುವಂತೆ ರಾಜಕೀಯ ಪಕ್ಷಗಳನ್ನು ಕೇಳಿದರೆ ಪ್ರಯೋಜನವಿಲ್ಲ. ತಾಂತ್ರಿಕ ಜ್ಞಾನ ಇರುವವರೂ ರಾಜಕೀಯ ಪಕ್ಷಗಳ ಜೊತೆ ಗುರುತಿಸಿಕೊಳ್ಳಲು ಇಷ್ಟಪಡುವುದಿಲ್ಲ. ತಂತ್ರಜ್ಞಾನ ಕ್ಷೇತ್ರದ ಮುಂಚೂಣಿ ಸಂಸ್ಥೆಗಳನ್ನು ಹೊಂದಿರುವ ಬೆಂಗಳೂರಿನಲ್ಲಿ ಚುನಾವಣಾ ಆಯೋಗವು ಇವಿಎಂನ ಲೋಪಗಳ ಕುರಿತ 'ನೈತಿಕ ಹ್ಯಾಕಥಾನ್' ಏರ್ಪಡಿಸಲಿ. ಇವಿಎಂನಲ್ಲಿ ದೋಷಗಳಿರುವುದು ಅದರಲ್ಲಿ ಸಾಬೀತಾದರೆ ಅವುಗಳನ್ನು ಸರಿಪಡಿಸಿಕೊಳ್ಳಬಹುದು' ಎಂದು ಪ್ರಿಯಾಂಕ್ ಖರ್ಗೆ ಸಲಹೆ ನೀಡಿದರು.

ವಿತ್ತೀಯ ಶಿಸ್ತು ಹಳಿಗೆ ತರಲು ಏಪ್ರಿಲ್‌ನಿಂದಲೇ ಇನ್ನಷ್ಟು ಶ್ರಮ: ಬೊಮ್ಮಾಯಿ

'₹9,500 ಕೋಟಿ ಹೆಚ್ಚುವರಿ ತೆರಿಗೆ ಸಂಗ್ರಹ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 2021-22 ನೇ ಸಾಲಿನಲ್ಲಿ ನಿಗದಿತ ಗುರಿಗಿಂತ ₹9,500 ಕೋಟಿ ಹೆಚ್ಚುವರಿ ತೆರಿಗೆ ಸಂಗ್ರಹವಾಗಿದೆ ಎಂದು ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸಭೆಯಲ್ಲಿ ಮಂಗಳವಾರ ವಿವಿಧ ಇಲಾಖೆಗಳ ಅನುದಾನ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರಿಸಿದ ಅವರು, '2021-22 ನೇ ಸಾಲಿಗೆ ₹1,19,522 ಕೋಟಿ ತೆರಿಗೆ ಸಂಗ್ರಹದ ಗುರಿ ಇತ್ತು. ಹೆಚ್ಚಿನ ತೆರಿಗೆ ಸಂಗ್ರಹಕ್ಕಾಗಿ ಹಲವು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಲಾಯಿತು. ಇದರ ಪರಿಣಾಮ ಮೋಟಾರು ವಾಹನ ತೆರಿಗೆ ಬಿಟ್ಟು ₹7,500 ಕೋಟಿ ಹೆಚ್ಚುವರಿ ತೆರಿಗೆ ಸಂಗ್ರಹವಾಗಬಹುದು ಎಂಬ ನಿರೀಕ್ಷೆ ಇತ್ತು. ನಮ್ಮ ನಿರೀಕ್ಷೆಯನ್ನೂ ಮೀರಿ ಎರಡು ಸಾವಿರ ಕೋಟಿ ಅಧಿಕ ತೆರಿಗೆ ಸಂಗ್ರಹವಾಯಿತು' ಎಂದರು.



ಬಸವರಾಜ ಬೊಮ್ಮಾಯಿ

'ತೆರಿಗೆ ಸೋರಿಕೆ ಆಗುತ್ತಿರುವ ಮೂಲಗಳನ್ನು ಪತ್ತೆ ಮಾಡಿ ಅದರ ತಡೆಗೆ ಕ್ರಮ ತೆಗೆದುಕೊಳ್ಳಲಾಯಿತು. ಅಬಕಾರಿಯಲ್ಲಿ 'ನಂ2' ದಂಧೆ ಇನ್ನೂ ನಡೆಯುತ್ತಿದ್ದು, ನಿರ್ದಿಷ್ಟವಾಗಿ ಎಲ್ಲೆಲ್ಲಿ ನಡೆಯುತ್ತಿದೆ ಎಂಬುದನ್ನು ನಾನೇ ಅಧಿಕಾರಿಗಳ ಗಮನಕ್ಕೆ ತಂದೆ. ಇದರಿಂದ ಸುಮಾರು ₹2,000 ಕೋಟಿ ಅಧಿಕ ವರಮಾನ ಸಂಗ್ರಹ ಮಾಡಲಾಯಿತು. ಮುದ್ರಾಂಕ ಶುಲ್ಕದಲ್ಲಿ ಶೇ 10 ರಷ್ಟು ರಿಯಾಯ್ತಿ ನೀಡಿದ್ದರಿಂದ ಹೆಚ್ಚುವರಿಯಾಗಿ ₹100 ಕೋಟಿ ಸಂಗ್ರಹವಾಯಿತು. ಕಬ್ಬಿಣ ಅದಿರು ಮಾರಾಟ ಮಾಡಿದ್ದರಿಂದ ₹500 ಕೋಟಿ ಸಿಕ್ಕಿತು. ಅಲ್ಲದೆ, ತೆರಿಗೆಯೇತರ ಆದಾಯ ₹4,000 ಕೋಟಿ ಹೆಚ್ಚಾಗಬಹುದು ಎಂಬ ನಿರೀಕ್ಷೆ ಇತ್ತು. ಆದರೂ ಕೂಡ ನಿರೀಕ್ಷೆ ಮೀರಿ ಅಂದರೆ ₹6,000 ಕೋಟಿ ಸಂಗ್ರಹವಾಗಿದೆ. ಬಜೆಟ್ ಗಾತ್ರ ಕಡಿಮೆ ಮಾಡಬೇಕು ಎಂದು ಅಧಿಕಾರಿಗಳು ಸಲಹೆ ನೀಡಿದ್ದರು. ಅದಕ್ಕೆ ನಾನು ಒಪ್ಪಿಗೆ ನೀಡಿರಲಿಲ್ಲ' ಎಂದರು.

ವರಮಾನ ಹೆಚ್ಚಳಕ್ಕೆ ಶ್ರಮ: ಕೇಂದ್ರದಿಂದ ಜಿಎಸ್‌ಟಿ ಪರಿಹಾರ ಬರಲಿ ಬಿಡಲಿ, ಆಂತರಿಕ ವರಮಾನ ಹೆಚ್ಚಿಸಲು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಈ ಮೂಲಕ ರಾಜ್ಯದ ವಿತ್ತೀಯ ಶಿಸ್ತು ಕಾಪಾಡಲು ಏಪ್ರಿಲ್‌ನಿಂದಲೇ ಕಠಿಣ ಪರಿಶ್ರಮ ಹಾಕುವುದಾಗಿ ಬೊಮ್ಮಾಯಿ ಹೇಳಿದರು.

ಕೋವಿಡ್ ಎರಡನೇ ಅಲೆಯ ಬಳಿಕ ರಾಜ್ಯದ ಆರ್ಥಿಕ ಚಟುವಟಿಕೆಯಲ್ಲಿ ಚೇತರಿಕೆ ಆಗಿದೆ. ಮೊದಲ ಎರಡು ಅಲೆಗಳ ಸಂದರ್ಭದಲ್ಲಿ ಲಾಕ್‌ಡೌನ್ ಪರಿಣಾಮ ಆರ್ಥಿಕ ಚಟುವಟಿಕೆ ತಳಮುಟ್ಟಿತ್ತು. ಏನೂ ಆದಾಯ ಇರಲಿಲ್ಲ. ಆ ಬಳಿಕ ಹೊಸದಾಗಿಯೇ ಎಲ್ಲ ಆರಂಭಗೊಂಡಿತು. ಮೂರನೇ ಅಲೆ ಹೆಚ್ಚಿಗೆ ಬಾಧಿಸಲಿಲ್ಲ. ಆರ್ಥಿಕ ಚಟುವಟಿಕೆ ಸುಗಮವಾಗಿ ನಡೆಯಿತು ಎಂದರು.

'ನಾನು ದೇವರನ್ನು ಪ್ರಾರ್ಥಿಸುತ್ತೇನೆ'

'ಕೋವಿಡ್‌ನಿಂದ ರಾಜ್ಯ ಆರ್ಥಿಕ ಸಂಕಷ್ಟಕ್ಕೆ ಸಿಲುಕಿತ್ತು. ನಾನು ದೇವರನ್ನು ಪ್ರಾರ್ಥಿಸುತ್ತೇನೆ. ಇನ್ನು ಮುಂದೆ ಕೋವಿಡ್ ಬರಬಾರದು ಮತ್ತು ಲಾಕ್‌ಡೌನ್ ಆಗಬಾರದು. ಇಲ್ಲವಾದರೆ ರಾಜ್ಯದ ಅಭಿವೃದ್ಧಿ ಕುಂಠಿತವಾಗುತ್ತದೆ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

'7 ನೇ ವೇತನ ಆಯೋಗದ ರಚನೆಯನ್ನು ಸ್ವಾಗತಿಸುತ್ತೇನೆ. ಆದರೆ, ಇದರಿಂದ ಸರ್ಕಾರಕ್ಕೆ ಹೊರೆ ಆಗುತ್ತದೆ. ಈ ಬಗ್ಗೆ ಎಚ್ಚರಿಕೆ ವಹಿಸಿ, ವಿತ್ತೀಯ ಶಿಸ್ತು ಕಾಪಾಡಬೇಕು. ಹಣಕಾಸು ವಿಷಯದ ಬಗ್ಗೆ ಸಾಕಷ್ಟು ಜ್ಞಾನ ಹೊಂದಿರುವ ನೀವು ಆ ಕೆಲಸ ಮಾಡುತ್ತೀರಿ ಎಂದು ಭಾವಿಸುತ್ತೇನೆ' ಎಂದೂ ಬೊಮ್ಮಾಯಿ ಅವರನ್ನು ಉದ್ದೇಶಿಸಿ ಹೇಳಿದರು.

ಬೊಮ್ಮಾಯಿ ಕೆಲವು ಸಂಘಟನೆಗಳ ಕೈಗೊಂಬೆ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮತೀಯ ದ್ವೇಷದ ಘಟನೆಗಳು ವ್ಯಾಪಕವಾಗಿ ನಡೆಯುತ್ತಿದ್ದರೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೆಲವು ಸಂಘಟನೆಗಳ ಕೈಗೊಂಬೆಯಾಗಿದ್ದಾರೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ಮುಸ್ಲಿಂ ಸಮುದಾಯದವರ ಅಂಗಡಿಗಳಲ್ಲಿ ವ್ಯಾಪಾರ ಮಾಡಬೇಡಿ ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಚೋದನಕಾರಿ ಸಂದೇಶ ಹಾಕುತ್ತಿರುವ ಕಿಡಿಗೇಡಿಗಳ ವಿರುದ್ಧ ಸರ್ಕಾರ ಕಠಿಣ ಕ್ರಮ ಜರುಗಿಸಬೇಕು. ಇಂತಹ ಸಂದೇಶಗಳನ್ನು ಯಾರು ಹಾಕುತ್ತಿದ್ದಾರೆ ಎಂಬುದನ್ನು ಪತ್ತೆಹಚ್ಚಿ, ಬಂಧಿಸಬೇಕು. ಶಾಸಕರು, ಸಚಿವರೇ ಇದ್ದರೂ ಅವರನ್ನು ಬಂಧಿಸಬೇಕು' ಎಂದು ಆಗ್ರಹಿಸಿದರು.

23 ಬಗೆಯ ವಹಿವಾಟುಗಳನ್ನು ಮುಸ್ಲಿಮರ ಜತೆ ನಡೆಸದಂತೆ ವಾಟ್ಸ್ ಆ್ಯಪ್‌ನಲ್ಲಿ ಸಂದೇಶ ಹಾಕಲಾಗಿದೆ. ಮುಸ್ಲಿಮರ ಅಂಗಡಿಗಳು, ಮುಸ್ಲಿಂ ವೈದ್ಯರ ಬಳಿಯೂ ಹೋಗದಂತೆ ಜನರ ತಲೆ ಕೆಡಿಸಲಾಗುತ್ತಿದೆ. ಇವರೆಲ್ಲರೂ ಈ ದೇಶವನ್ನು ಎಲ್ಲಿಗೆ ಕೊಂಡೊಯ್ಯುತ್ತಿದ್ದಾರೆ? ಸರ್ವ ಜನಾಂಗದ ಶಾಂತಿಯ ತೋಟವನ್ನು ಹಾಳು ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಮತ್ತು ಗೃಹ ಸಚಿವರು ಒಂದು ಸಮುದಾಯಕ್ಕೆ ಮೀಸಲಾದವರಲ್ಲ. ರಾಜ್ಯದ ಎಲ್ಲರ ರಕ್ಷಣೆ ಸರ್ಕಾರದ ಹೊಣೆ. ಒಂದು ಸಮುದಾಯವನ್ನಷ್ಟೇ ರಕ್ಷಣೆ ಮಾಡಿಕೊಂಡು ಸರ್ಕಾರ ನಡೆಸಲಾಗದು. ಇಂತಹ ಪ್ರಯತ್ನವನ್ನು ಕನ್ನಡಿಗರು ಸಹಿಸುವುದಿಲ್ಲ. ಅವರನ್ನು ಕಿತ್ತೊಗೆಯುತ್ತಾರೆ ಎಂದು ಹೇಳಿದರು.

ಕಾಂಗ್ರೆಸ್ ಕಾರಣ: 'ರಾಜ್ಯದಲ್ಲಿ ಈ ಪರಿಸ್ಥಿತಿ ಬರಲು ಕಾಂಗ್ರೆಸ್ ಪಕ್ಷದವರು ನೇರ ಕಾರಣ. ಅವರಿಂದಲೇ ಇಂತಹ ಸರ್ಕಾರ ಬಂದಿದೆ. ಕಾಂಗ್ರೆಸ್ ಮತ್ತು ಬಿಜೆಪಿಯವರು ಸೇರಿಕೊಂಡು ಈ ಸ್ಥಿತಿ ಸೃಷ್ಟಿಸಿದ್ದಾರೆ. ಈ ರಾಜ್ಯವನ್ನು ಹಾಳು ಮಾಡಬೇಡಿ ಎಂದು ಹಿಂದೂ ಸಮುದಾಯದ ಯುವಕರಲ್ಲಿ ಕೈಮುಗಿದು ಕೇಳುತ್ತೇನೆ' ಎಂದರು.

ಹುಬ್ಬಳ್ಳಿಯ ಈದ್ಗಾ ಮೈದಾನದ ಹೆಸರಿನಲ್ಲಿ ಹಲವು ಅಮಾಯಕ ಮಕ್ಕಳನ್ನು ಬಲಿ ತೆಗೆದುಕೊಳ್ಳಲಾಗಿತ್ತು. ಎಚ್.ಡಿ. ದೇವೇಗೌಡರು ಮುಖ್ಯಮಂತ್ರಿಯಾಗಿ ವಿವಾದ ಬಗೆಹರಿಸಿದರು. ಈಗ ಬಿಜೆಪಿಯವರು ಈ ರೀತಿ ಮಾಡುತ್ತಿರುವುದಕ್ಕೂ ಕಾಂಗ್ರೆಸ್ ಪಕ್ಷವೇ ಕಾರಣ ಎಂದು ಕುಮಾರಸ್ವಾಮಿ ಟೀಕಿಸಿದರು.

ಬಿಜೆಪಿಯವರು ರಾಜ್ಯವನ್ನು ಕೆಟ್ಟ ಪರಿಸ್ಥಿತಿಗೆ ತೆಗೆದುಕೊಂಡು ಹೋಗುತ್ತಿದ್ದಾರೆ. ಮುಖ್ಯಮಂತ್ರಿ ವಿರುದ್ಧ ಮಾತನಾಡಿದ ಕಾರಣಕ್ಕೆ ಒಬ್ಬ ವ್ಯಕ್ತಿಯನ್ನು ಬಂಧಿಸಲಾಗಿದೆ. ಪ್ರಚೋದನಕಾರಿಯಾಗಿ ಮಾತನಾಡುವ ವ್ಯಕ್ತಿ ಯಾರೇ ಆಗಿದ್ದರೂ ಅವರನ್ನು ಬಂಧಿಸುವ ಧೈರ್ಯವನ್ನು ಸರ್ಕಾರ ತೋರಬೇಕು ಎಂದು ಒತ್ತಾಯಿಸಿದರು.

ವಿಶ್ವ ಪಾರಂಪರಿಕ ತಾಣಗಳ ತಾತ್ಕಾಲಿಕ ಪಟ್ಟಿಗೆ ಲೇಪಾಕ್ಷಿ ದೇವಾಲಯ

ಹೈದರಾಬಾದ್: ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಲೇಪಾಕ್ಷಿಯಲ್ಲಿ ಬೃಹತ್ ನಂದಿ ವಿಗ್ರಹ ಒಳಗೊಂಡಿರುವ ಪ್ರಸಿದ್ಧ ವೀರಭದ್ರ ಸ್ವಾಮಿ ದೇವಾಲಯವು ಯುನೆಸ್ಕೊದ ವಿಶ್ವ ಪಾರಂಪರಿಕ ತಾಣಗಳು (2022) ತಾತ್ಕಾಲಿಕ ಪಟ್ಟಿಗೆ ಸೇರಿದೆ.

ಲೇಪಾಕ್ಷಿ ದೇವಾಲಯವು 16ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯಲ್ಲಿ ನಿರ್ಮಾಣಗೊಂಡಿದೆ. ವಿಜಯನಗರ ವಾಸ್ತುಶೈಲಿಯನ್ನು ಪ್ರತಿಬಿಂಬಿಸುವ ಅದ್ಭುತ ಶಿಲ್ಪಕಲೆಯನ್ನು ಈ ದೇವಾಲಯ ಒಳಗೊಂಡಿದೆ.


ಲೇಪಾಕ್ಷಿಯಲ್ಲಿ ವೀರಭದ್ರ ಸ್ವಾಮಿ ದೇವಾಲಯ

ದೇವಾಲಯದಿಂದ ಸುಮಾರು 250 ಮೀಟರ್ ದೂರದಲ್ಲಿ ಕುಳಿತ ಭಂಗಿಯಲ್ಲಿರುವ ಏಕಶಿಲಾ ನಂದಿ ವಿಗ್ರಹವು ಲೇಪಾಕ್ಷಿ ನಂದಿ ಎಂದೇ ಜನಪ್ರಿಯವಾಗಿದ್ದು, ಸುಮಾರು ಆರು ಮೀಟರ್ ಎತ್ತರವಿದೆ.

ಬೇರುಗಳ ತೂಗುಸೇತುವೆ: ಮೇಘಾಲಯದ ಸುಮಾರು 70 ಗ್ರಾಮಗಳಲ್ಲಿ ಇರುವ, ಪ್ರಕೃತಿ ಸಹಜವಾಗಿ ಮೂಡಿರುವ 'ಬೇರುಗಳ ತೂಗುಸೇತುವೆ'ಗಳು ಯುನೆಸ್ಕೊದ ವಿಶ್ವ ಪಾರಂಪರಿಕ ತಾಣಗಳು ಕುರಿತ ತಾತ್ಕಾಲಿಕ ಪಟ್ಟಿಯಲ್ಲಿ ಸ್ಥಾನ ಪಡೆದಿವೆ.

ಅಮಿತ್ ಶಾ ನೇತೃತ್ವದಲ್ಲಿ 12 ಸ್ಥಳಗಳ ಪೈಕಿ 6 ಸ್ಥಳಗಳ ಗಡಿ ವಿವಾದ ಇತ್ಯರ್ಥ

ಅಸ್ಸಾಂ– ಮೇಘಾಲಯ ಒಪ್ಪಂದ

ಪ್ರಜಾವಾಣಿ ವಾರ್ತೆ

ಗುವಾಹಟಿ: ಅಸ್ಸಾಂ ಮತ್ತು ಮೇಘಾಲಯ ರಾಜ್ಯಗಳ ನಡುವೆ ಐದು ದಶಕಗಳಿಂದ ಜೀವಂತವಾಗಿದ್ದ ಗಡಿ ವಿವಾದ ಬಗೆಹರಿಸುವ ನಿಟ್ಟಿನಲ್ಲಿ ಮಂಗಳವಾರ ಮಹತ್ವದ ಒಪ್ಪಂದ ಏರ್ಪಟ್ಟಿದೆ. ಎರಡೂ ರಾಜ್ಯಗಳ ನಡುವಿನ 12 ಸ್ಥಳಗಳಲ್ಲಿ ಇದ್ದ ಗಡಿ ವಿವಾದಗಳ ಪೈಕಿ ಆರು ಸ್ಥಳಗಳಲ್ಲಿನ ವಿವಾದವನ್ನು ಈ ಒಪ್ಪಂದದ ಮೂಲಕ ಬಗೆಹರಿಸಿದಂತಾಗಿದೆ.

ನವದೆಹಲಿಯಲ್ಲಿ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ, ಮೇಘಾಲಯ ಮುಖ್ಯಮಂತ್ರಿ ಕಾನ್ರಾಡ್ ಕೆ. ಸಂಗ್ಮಾ ಅವರು ಗೃಹ ಸಚಿವ ಅಮಿತ್ ಶಾ ಸಮ್ಮುಖದಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.

'ಇದು ಮೇಘಾಲಯ, ಅಸ್ಸಾಂ ಮತ್ತು ಈಶಾನ್ಯ ಪ್ರದೇಶದ ಜನರಿಗೆ ಐತಿಹಾಸಿಕ ದಿನ. 50 ವರ್ಷಗಳಿಂದ ಇದ್ದ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಈ ದಿನ ಪ್ರಮುಖ ಹೆಜ್ಜೆ ಇಟ್ಟಿದ್ದೇವೆ. 12 ಸ್ಥಳಗಳ ಪೈಕಿ ಆರು ಸ್ಥಳಗಳಲ್ಲಿನ ವಿವಾದವನ್ನು ಬಗೆಹರಿಸುವ ಸಂಬಂಧ ಒಪ್ಪಂದಕ್ಕೆ ನಾವು ಸಹಿ ಹಾಕಿದ್ದೇವೆ. ಭಿನ್ನಾಭಿಪ್ರಾಯಗಳಿರುವ ಇತರ ಆರು ಸ್ಥಳಗಳಿಗೆ ಸಂಬಂಧಿಸಿದಂತೆ ಪರಿಹಾರ ಹುಡುಕುವ ಕಾರ್ಯವನ್ನು ಮುಂದುವರಿಸುತ್ತೇವೆ' ಎಂದು ಸಂಗ್ಮಾ ಅವರು ಒಪ್ಪಂದಕ್ಕೆ ಸಹಿ ಹಾಕಿದ ಬಳಿಕ, ಬಿಡುಗಡೆ ಮಾಡಿರುವ ವಿಡಿಯೊ ಸಂದೇಶದಲ್ಲಿ ತಿಳಿಸಿದ್ದಾರೆ.



ಅಸ್ಸಾಂ ಮತ್ತು ಮೇಘಾಲಯ ರಾಜ್ಯಗಳ ನಡುವಿನ ಗಡಿ ವಿವಾದ ಇತ್ಯರ್ಥಗೊಳಿಸುವ ಸಂಬಂಧ ನವದೆಹಲಿಯಲ್ಲಿ ಗೃಹ ಸಚಿವ ಅಮಿತ್ ಶಾ ಅವರ ಸಮ್ಮುಖದಲ್ಲಿ ಒಪ್ಪಂದಕ್ಕೆ ಸಹಿ ಹಾಕಿದ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಮತ್ತು ಮೇಘಾಲಯ ಮುಖ್ಯಮಂತ್ರಿ ಕಾನ್ರಾಡ್ ಕೆ. ಸಂಗ್ಮಾ ಅವರು ಪರಸ್ಪರ ಕೈಕುಲುಕಿದರು. –ಪಿಟಿಐ ಚಿತ್ರ

1972ರಲ್ಲಿ ಅಸ್ಸಾಂ ಅನ್ನು ವಿಭಜಿಸಿ ಮೇಘಾಲಯ ರಾಜ್ಯ ರಚಿಸಲಾಯಿತು. ಆಗಿನಿಂದ ಎರಡೂ ರಾಜ್ಯಗಳ ನಡುವೆ 884 ಕಿ.ಮೀ ಉದ್ದದ ಅಂತರ ರಾಜ್ಯ ಗಡಿ ವಿವಾದ ಆರಂಭವಾಯಿತು. ಈ ವಿವಾದಗಳ ಕಾರಣದಿಂದ ಉಭಯ ರಾಜ್ಯಗಳಲ್ಲಿ ಹಲವು ಬಾರಿ ಉದ್ವಿಗ್ನ ಸ್ಥಿತಿ ಉಂಟಾಗಿತ್ತು.

> **ಕೇಂದ್ರ ಸರ್ಕಾರ ಮತ್ತು ಗೃಹ ಸಚಿವ ಅಮಿತ್ ಶಾ ಅವರ ನಿರಂತರ ಬೆಂಬಲ ಮತ್ತು ಪ್ರೋತ್ಸಾಹದಿಂದ ಈ ಒಪ್ಪಂದ ಸಾಧ್ಯವಾಯಿತು**
> **ಹಿಮಂತ ಬಿಸ್ವಾ ಶರ್ಮಾ**
> ಅಸ್ಸಾಂ ಮುಖ್ಯಮಂತ್ರಿ

> **ಗಡಿಯ ಉದ್ದವನ್ನು ಪರಿಗಣನೆಗೆ ತೆಗೆದುಕೊಂಡರೆ ಈ ಒಪ್ಪಂದದ ಮೂಲಕ ಶೇ 70ರಷ್ಟು ವಿವಾದಗಳನ್ನು ಪರಿಹರಿಸಿದಂತಾಗಿದೆ**
> **ಅಮಿತ್ ಶಾ**
> ಕೇಂದ್ರ ಗೃಹ ಸಚಿವ

ಅಸ್ಸಾಂ ನೆರೆಯ ಮಿಜೋರಾಂ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ ಮತ್ತು ಮೇಘಾಲಯದೊಂದಿಗೆ ಗಡಿ ವಿವಾದ ಹೊಂದಿದೆ. ಕಳೆದ ವರ್ಷದ ಜುಲೈನಲ್ಲಿ ಮಿಜೋರಾಂನ ಅಂತರ ರಾಜ್ಯ ಗಡಿಯಲ್ಲಿ ಆರು ಅಸ್ಸಾಂ ಪೊಲೀಸರನ್ನು ಮಿಜೋರಾಂ ಪೊಲೀಸರು ಗುಂಡಿಕ್ಕಿ ಕೊಂದಿದ್ದರು. ಬಳಿಕ ಗಡಿ ವಿವಾದ ಇತ್ಯರ್ಥಗೊಳಿಸುವ ಸಂಬಂಧ ಪ್ರಕ್ರಿಯೆ ಚುರುಕು ಪಡೆದಿತ್ತು.

ಎಂಜಿನಿಯರಿಂಗ್: ಇನ್ನೆರಡು ವರ್ಷ ಹೊಸ ಕಾಲೇಜು ಇಲ್ಲ

ನವದೆಹಲಿ (ಪಿಟಿಐ): ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯು (ಎಐಸಿಟಿಇ) ಕೆಲವು ವಿನಾಯಿತಿಗಳೊಂದಿಗೆ ಹೊಸ ಎಂಜಿನಿಯರಿಂಗ್ ಕಾಲೇಜುಗಳನ್ನು ಸ್ಥಾಪಿಸುವ ನಿಷೇಧವನ್ನು ಇನ್ನೂ 2 ವರ್ಷಗಳವರೆಗೆ ವಿಸ್ತರಿಸಿದೆ ಎಂದು ಎಐಸಿಟಿಇ ಅಧ್ಯಕ್ಷ ಅನಿಲ್ ಸಹಸ್ರಬುಧೆ ತಿಳಿಸಿದ್ದಾರೆ. ಹೊಸ ಕಾಲೇಜುಗಳಿಗೆ ಎರಡು ವರ್ಷ ಅನುಮೋದನೆ ನೀಡದಿರಲು ಎಐಸಿಟಿಇ 2020ರಲ್ಲಿ ನಿರ್ಧರಿಸಿತ್ತು. ಸರ್ಕಾರ ರಚಿಸಿದ ಸಮಿತಿಯ ಶಿಫಾರಸ್ಸಿನಂತೆ ಈ ಕ್ರಮ ಕೈಗೊಂಡಿದೆ.

ಸಂಕ್ಷಿಪ್ತ ಸುದ್ದಿ

ಸರಿಸ್ಕಾ ಹುಲಿ ಸಂರಕ್ಷಿತಾರಣ್ಯದಲ್ಲಿ ಕಾಳ್ಗಿಚ್ಚು

ನವದೆಹಲಿ: ರಾಜಸ್ಥಾನದ ಸರಿಸ್ಕಾ ಹುಲಿ ಸಂರಕ್ಷಿತಾರಣ್ಯದಲ್ಲಿ ಭಾರಿ ಕಾಳ್ಗಿಚ್ಚು ಸಂಭವಿಸಿದ್ದು, 10 ಚದರ ಕಿ.ಮೀ ಪ್ರದೇಶ ನಾಶಗೊಂಡಿದೆ. ಎರಡು ಹೆಲಿಕಾಪ್ಟರ್ ಮತ್ತು 200 ಜನರ ತಂಡ ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿದೆ.

ಬೆಂಕಿಯು ಭಾನುವಾರ ಸಂಜೆಯೇ ಕಾಣಿಸಿದ್ದು, ಸೋಮವಾರ ಹತೋಟಿಗೆ ಬಂದಿತ್ತು. ಆದರೆ ಕೆಲವೇ ಗಂಟೆಗಳ ಬಳಿಕ ಮತ್ತೆ ಬೆಂಕಿ ಭುಗಿಲೆದ್ದಿತು. ಮಂಗಳವಾರ ಸಂಜೆಯವರೆಗೂ ಬೆಂಕಿ ನಂದಿಸುವ ಕಾರ್ಯ ನಡೆದಿತ್ತು.

2018ರ ಹುಲಿಗಣತಿ ಪ್ರಕಾರ ಸರಿಸ್ಕಾದಲ್ಲಿ 11 ಹುಲಿಗಳು ಇವೆ. ಆದರೆ ರಾಜ್ಯ ಅರಣ್ಯ ಅಧಿಕಾರಿಗಳು ಈ ಪ್ರದೇಶದಲ್ಲಿ ಹುಲಿಗಳ ಸಂಖ್ಯೆ 27ಕ್ಕೆ ಏರಿಕೆಯಾಗಿವೆ ಎಂದು ಹೇಳಿಕೊಂಡಿದ್ದಾರೆ.

ಬಿಇಎಲ್‌ಗೆ ₹1,109 ಕೋಟಿಯ ಗುತ್ತಿಗೆ: ರಕ್ಷಣಾ ಇಲಾಖೆ

ನವದೆಹಲಿ (ಪಿಟಿಐ): ಭಾರತೀಯ ವಾಯುಪಡೆಗೆ ಎಲೆಕ್ಟ್ರಾನಿಕ್ ಯುದ್ಧ ಸಲಕರಣೆಗಳನ್ನು (ಐಇಡಬ್ಲ್ಯುಆರ್) ಅಭಿವೃದ್ಧಿಪಡಿಸಿ ಪೂರೈಸುವ ₹1,109 ಕೋಟಿ ಮೊತ್ತದ ಗುತ್ತಿಗೆಯನ್ನು ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ಗೆ (ಬಿಇಎಲ್) ರಕ್ಷಣಾ ಸಚಿವಾಲಯ ನೀಡಿದೆ.

ಭವಿಷ್ಯದ ಸಂಭಾವ್ಯ ಯುದ್ಧಗಳಲ್ಲಿ ಭಾರತದ ವಾಯುಪಡೆಗೆ ಬಲ ತುಂಬಬಲ್ಲ ಎಲೆಕ್ಟ್ರಾನಿಕ್ ಸಲಕರಣೆಗಳು ಅಗತ್ಯವಿದ್ದು, ಅವುಗಳನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಬಿಇಎಲ್ ಜೊತೆ ಒಪ್ಪಂದಕ್ಕೆ ಸಹಿ ಹಾಕಿರುವುದು ಅತಿ ಪ್ರಮುಖ ಹೆಜ್ಜೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಐಇಡಬ್ಲ್ಯುಆರ್ ಪೂರೈಕೆ ಒಪ್ಪಂದವು ಆತ್ಮನಿರ್ಭರ ಭಾರತ ಸಾಕಾರದ ನಿಟ್ಟಿನಲ್ಲಿಯೂ ಮಹತ್ವದ ಹೆಜ್ಜೆ ಎಂದು ಸಚಿವಾಲಯ ಬಣ್ಣಿಸಿದೆ.

ಕೋಮುಗಲಭೆ: 3,400 ಪ್ರಕರಣ

ನವದೆಹಲಿ (ಪಿಟಿಐ): ದೇಶದಲ್ಲಿ 2016ರಿಂದ 2020ರವರೆಗೆ ಕೋಮುಗಲಭೆಗಳಿಗೆ ಸಂಬಂಧಿಸಿದಂತೆ ಸುಮಾರು 3,400 ಪ್ರಕರಣಗಳು ದಾಖಲಾಗಿವೆ.

ಇದೇ ಅವಧಿಯಲ್ಲಿ ಗಲಭೆಗೆ ಸಂಬಂಧಿಸಿದಂತೆ 2.76 ಲಕ್ಷ ಪ್ರಕರಣಗಳು ದಾಖಲಾಗಿವೆ ಎಂದು ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಮಂಗಳವಾರ ಲೋಕಸಭೆಯಲ್ಲಿ ತಿಳಿಸಿದರು.

ರಾಷ್ಟ್ರೀಯ ಅಪರಾಧ ದಾಖಲೆಗಳ ಮಂಡಳಿ (ಎನ್‌ಸಿಆರ್‌ಬಿ) ಮಾಹಿತಿ ಆಧರಿಸಿ, ಕೋಮು ಅಥವಾ ಧಾರ್ಮಿಕ ಗಲಭೆಗೆ ಸಂಬಂಧಿಸಿದಂತೆ 2020ರಲ್ಲಿ 857, 2019ರಲ್ಲಿ 438, 2018ರಲ್ಲಿ 512, 2017ರಲ್ಲಿ 723 ಮತ್ತು 2016ರಲ್ಲಿ 869 ಪ್ರಕರಣಗಳು ದಾಖಲಾಗಿವೆ ಎಂದು ಸಚಿವರು ವಿವರಿಸಿದ್ದಾರೆ.


ಸಂಸತ್ತಿನ ಉಭಯ ಸದನಗಳಲ್ಲಿ ಮುಷ್ಕರ ಕುರಿತು ಚರ್ಚೆಗೆ ವಿಪಕ್ಷಗಳ ಆಗ್ರಹ

ಪ್ರತಿಧ್ವನಿಸಿದ ಕಾರ್ಮಿಕರ ಮುಷ್ಕರ

ನವದೆಹಲಿ: ಕೆಲವು ಕಾರ್ಮಿಕ ಸಂಘಟನೆಗಳು ಕರೆ ನೀಡಿರುವ ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಸಂಬಂಧಿಸಿದ ವಿಷಯಗಳನ್ನು ಮಂಗಳವಾರ ಸಂಸತ್ತಿನ ಉಭಯಸದನಗಳಲ್ಲಿ ಪ್ರಸ್ತಾಪಿಸಿದ ವಿರೋಧಪಕ್ಷಗಳು, ಸಂಘಟನೆಗಳ ಬೇಡಿಕೆಗಳನ್ನು ಪರಿಗಣಿಸಿ ಸೂಕ್ತ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕೆಂದು ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದವು.

12 ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಎರಡು ದಿನಗಳ ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಕರೆ ನೀಡಿರುವ ಕಾರ್ಮಿಕ ಸಂಘಟನೆಗಳ ವಿಷಯದ ಕುರಿತು ಚರ್ಚಿಸಲು, ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳ ಸದಸ್ಯರು ಸಲ್ಲಿಸಿದ ಮನವಿಯನ್ನು ಶೂನ್ಯವೇಳೆಯಲ್ಲಿ ಸಭಾಪತಿ ಎಂ. ವೆಂಕಯ್ಯನಾಯ್ಡು ಅವರು ಸ್ವೀಕರಿಸಲಿಲ್ಲ.

ಹಲವು ಸದಸ್ಯರು ಅಗತ್ಯ ವಸ್ತುಗಳ ಬೆಲೆ ಏರಿಕೆಯ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುವಂತೆ ಮನವಿ ಮಾಡಿದ್ದರು. ಆದರೆ ಸಭಾಪತಿ ಅದನ್ನು ಸ್ವೀಕರಿಸಲಿಲ್ಲ ಮತ್ತು ಹಣಕಾಸು ಮಸೂದೆಯ ಮೇಲಿನ ಚರ್ಚೆಯ ಸಮಯದಲ್ಲಿ ವಿಷಯವನ್ನು ಪ್ರಸ್ತಾಪಿಸಲು ಸಂಸದರಿಗೆ ಸೂಚಿಸಿದರು.


ನವದೆಹಲಿಯಲ್ಲಿ ಮಂಗಳವಾರ ರಾಜ್ಯಸಭೆಯಲ್ಲಿ ಕಾಂಗ್ರೆಸ್ ಸಂಸದ ಜೈರಾಮ್ ರಮೇಶ್ ಮಾತನಾಡಿದರು –ಪಿಟಿಐ ಚಿತ್ರ

ಕೆಲಕಾಲ ನಾಯ್ಡು ಅವರು ಮುಷ್ಕರಕ್ಕೆ ಸಂಬಂಧಿಸಿದ ವಿಷಯವನ್ನು ಸಂಕ್ಷಿಪ್ತವಾಗಿ ಪ್ರಸ್ತಾಪಿಸಲು ಮೂವರು ಸಂಸದರಿಗೆ ಅನುಮತಿ ನೀಡಿದರು.

ಮುಷ್ಕರವನ್ನು ಉಲ್ಲೇಖಿಸಿ ಮಾತನಾಡಿದ ಸಿಪಿಎಂನ ಸಂಸದ ಜಾನ್ ಬ್ರಿಟಾಸ್, ಜನಸಾಮಾನ್ಯರ ಸಂಕಷ್ಟಗಳನ್ನು ತಪ್ಪಿಸಲು ಸರ್ಕಾರವು ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಇದಕ್ಕೆ ದನಿಗೂಡಿಸಿದ ಸಿಪಿಐನ ಸಂಸದ ಬಿನೋಯ್ ವಿಶ್ವಂ, 'ಕಾರ್ಮಿಕ ವರ್ಗವು ಮುಷ್ಕರ ನಡೆಸುತ್ತಿರುವಾಗ ಆ ವಿಷಯವನ್ನು ಚರ್ಚಿಸುವ ಜವಾಬ್ದಾರಿ ಸದನಕ್ಕೆ ಇರಬೇಕು. ತಡವಾದರೂ ಈ ಬಗ್ಗೆ ಚರ್ಚಿಸಲು ಸಮಯಾವಕಾಶ ನೀಡಬೇಕು' ಎಂದರು.

ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ ಕಾರ್ಯನಿರ್ವಹಣೆಯ ಮೇಲಿನ ಚರ್ಚೆಯನ್ನು ಕೈಗೆತ್ತಿಕೊಳ್ಳಲು ಸೋಮವಾರ ಪಟ್ಟಿ ಮಾಡಲಾಗಿತ್ತು. ಆದರೆ ಮಂಗಳವಾರದ ಅದನ್ನು ಪಟ್ಟಿಯಿಂದ ಅದನ್ನು ಕೈಬಿಡಲಾಗಿದೆ ಎಂದು ಕಾಂಗ್ರೆಸ್ ಸಂಸದ ಜೈರಾಮ್ ರಮೇಶ್ ಗಮನಸೆಳೆದರು.

ಮುಷ್ಕರ ಬೆಂಬಲಿಸಿದ ವಿಪಕ್ಷ ಸದಸ್ಯರು

ನವದೆಹಲಿ: ಸರ್ಕಾರ ಅನುಸರಿಸುತ್ತಿರುವ ಖಾಸಗೀಕರಣ ನೀತಿಗಳ ವಿರುದ್ಧ ಕಾರ್ಮಿಕ ಸಂಘಟನೆಗಳ ಒಕ್ಕೂಟದ ದೇಶವ್ಯಾಪಿ ಮುಷ್ಕರಕ್ಕೆ ಮಂಗಳವಾರ ವಿರೋಧ ಪಕ್ಷದ ಸದಸ್ಯರು ಬೆಂಬಲ ಘೋಷಿಸಿದರು ಮತ್ತು ಲೋಕಸಭೆಯಲ್ಲಿ ಈ ವಿಷಯದ ಬಗ್ಗೆ ಚರ್ಚೆಗೆ ಒತ್ತಾಯಿಸಿದರು.

ಶೂನ್ಯವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ತೃಣಮೂಲ ಕಾಂಗ್ರೆಸ್ ಸಂಸದ ಸೌಗತ ರಾಯ್ ಅವರು, 'ಮುಷ್ಕರಕ್ಕೆ ಭಾರೀ ಪ್ರತಿಕ್ರಿಯೆ ದೊರೆತಿದ್ದು, ಇದು ಸರ್ಕಾರದ ನೀತಿಗಳ ಬಗ್ಗೆ ಜನರಿಗಿರುವ ಅಸಮಾಧಾನವನ್ನು ಪ್ರತಿಬಿಂಬಿಸುತ್ತದೆ' ಎಂದು ಹೇಳಿ ಚರ್ಚೆಗೆ ಕೋರಿದರು.

> **ಎಲ್ಲ ವಿರೋಧಪಕ್ಷಗಳು ಕಾರ್ಮಿಕ ಸಂಘಟನೆಗಳಿಗೆ ಬೆಂಬಲ ನೀಡಿವೆ. ಆದರೆ, ಪಶ್ಚಿಮ ಬಂಗಾಳ ಸರ್ಕಾರ ರಾಜ್ಯದಲ್ಲಿ ಮುಷ್ಕರ ವಿಫಲಗೊಳಿಸಲು ಯತ್ನಿಸುತ್ತಿದೆ**
> **ಅಧೀರ್ ರಂಜನ್ ಚೌಧರಿ**
> ಕಾಂಗ್ರೆಸ್ ನಾಯಕ

ಗೋವಾ: ಶೇ 44 ಶಾಸಕರ ಮೇಲೆ ಅಪರಾಧ ಪ್ರಕರಣ

ನವದೆಹಲಿ (ಪಿಟಿಐ): ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಗೋವಾ ಸಚಿವ ಸಂಪುಟದ ಶೇ 44ರಷ್ಟು ಸಚಿವರು ತಮ್ಮ ವಿರುದ್ಧ ಕ್ರಿಮಿನಲ್ ಅಪರಾಧ ಪ್ರಕರಣಗಳು ದಾಖಲಾಗಿವೆ ಎಂದು ಘೋಷಿಸಿಕೊಂಡಿದ್ದಾರೆ ಎಂದು ಎಡಿಆರ್ ವರದಿ ತಿಳಿಸಿದೆ.

ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಹಾಗೂ ಇತರ ಎಂಟು ಸಚಿವರು ಚುನಾವಣೆಗೆ ಸ್ಪರ್ಧಿಸುವಾಗ ಸಲ್ಲಿಸಿದ್ದ ಪ್ರಮಾಣಪತ್ರಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಸಚಿವರ ಪೈಕಿ ಶೇ 33ರಷ್ಟು ಜನರು ತಮ್ಮ ವಿರುದ್ಧ ಗಂಭೀರವಾದ ಕ್ರಿಮಿನಲ್ ಆರೋಪಗಳಿವೆ ಎಂದು ಪ್ರಕಟಿಸಿದ್ದಾರೆ.

ಕ್ರಿಮಿನಲ್ ಅಪರಾಧ ಪ್ರಕರಣಗಳಿಗೆ ಐದು ವರ್ಷ ಹಾಗೂ ಅದಕ್ಕೂ ಹೆಚ್ಚು ಅವಧಿಯ ಜೈಲುಶಿಕ್ಷೆ ವಿಧಿಸಲು ಕಾನೂನಿನಲ್ಲಿ ಅವಕಾಶವಿದೆ.

ಸಚಿವರ ಪೈಕಿ ಪಣಜಿ ಕ್ಷೇತ್ರದಿಂದ ಆಯ್ಕೆಯಾಗಿರುವ ಅತಾನಾಸಿಯೊ ಮೋನಸೆರಟೆ ಅವರ ಬಳಿ ಅತ್ಯಧಿಕ ಅಂದರೆ, ₹48.48 ಕೋಟಿ ಆಸ್ತಿ ಇದೆ. ಗೋವಿಂದ ಗೌಡೆ ಅವರು ಅತಿ ಕಡಿಮೆ (₹2.67 ಕೋಟಿ) ಆಸ್ತಿ ಹೊಂದಿದ್ದಾರೆ.

ಎಂಟು ಸಚಿವರು ಸಾಲಗಾರರು ಎಂದು ಘೋಷಿಸಿಕೊಂಡಿದ್ದಾರೆ. ಈ ಪೈಕಿ ನಿಲೇಶ್ ಅವರು ಅತಿಹೆಚ್ಚು (₹11.97 ಕೋಟಿ) ಸಾಲ ಮಾಡಿದ್ದಾರೆ.

ಮುಖ್ಯಾಂಶಗಳು
- ವರ್ಷಕ್ಕೆ ಮೂರು ಉಚಿತ ಅಡುಗೆ ಅನಿಲ ಸಿಲಿಂಡರ್
- ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಘೋಷಣೆ
- ಬಿಜೆಪಿ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆ

'ಕಣ್ಗಾವಲು ಶಾಸನಬದ್ಧ ಸಂಸ್ಥೆಗಷ್ಟೇ ಅಧಿಕಾರ'

ನವದೆಹಲಿ (ಪಿಟಿಐ): ದೇಶದಲ್ಲಿನ, ಶಾಸನಬದ್ಧ ಕಾನೂನು ಜಾರಿ ಸಂಸ್ಥೆಗಳಷ್ಟೇ ದೂರವಾಣಿ ಸಂಭಾಷಣೆ ಅಥವಾ ವಿದ್ಯುನ್ಮಾನ ಸ್ವರೂಪದಲ್ಲಿ ಪ್ರಸರಣವಾಗುವ ಮಾಹಿತಿ ದಾಖಲಿಸುವ ಅಧಿಕಾರವನ್ನು ಹೊಂದಿವೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಸಂಸತ್ತಿನಲ್ಲಿ ಲಿಖಿತ ಉತ್ತರದಲ್ಲಿ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಅಜಯ್ ಕುಮಾರ್ ಮಿಶ್ರಾ ಈ ಮಾಹಿತಿ ನೀಡಿದ್ದಾರೆ. ವಾಟ್ಸ್‌ಆ್ಯಪ್ ಚರ್ಚೆ ಸೇರಿ ಯಾವುದೇ ರೀತಿಯ ಡಿಜಿಟಲ್ ಮಾಹಿತಿ ಮೇಲೆ ಕಣ್ಗಾವಲು ಇಡಲು ಯಾವುದಾದರೂ ರಾಷ್ಟ್ರೀಯ, ಅಂತರ ರಾಷ್ಟ್ರೀಯ ಸಂಸ್ಥೆಗೆ ಅಧಿಕಾರ ನೀಡಲಾಗಿದೆಯೇ ಎಂದು ಪ್ರಶ್ನಿಸಲಾಗಿತ್ತು.

ಮಾಹಿತಿ ತಂತ್ರಜ್ಞಾನ ಕಾಯ್ದೆ 2000ರ ಸೆಕ್ಷನ್ 69ರ ಅನ್ವಯ ಕೇವಲ ದೇಶದ ಶಾಸನಬದ್ಧ ಕಾನೂನು ಜಾರಿ ಸಂಸ್ಥೆಗಳಿಗಷ್ಟೇ ಇಂತಹ ಅಧಿಕಾರವಿದೆ. ಮಾಹಿತಿ ತಂತ್ರಜ್ಞಾನ (ಮಾಹಿತಿ ಸುರಕ್ಷತೆ, ಅವಲೋಕನ, ನಿರ್ವಹಣಾ) ನಿಯಮಗಳು 2009'ರಲ್ಲೂ ಇದರ ಉಲ್ಲೇಖವಿದೆ ಎಂದು ಹೇಳಿದ್ದಾರೆ.

ಸಮಾನ ಮನಸ್ಕ ಒಕ್ಕೂಟ ಸ್ಥಾಪನೆ ಪ್ರಯತ್ನ

ಮಮತಾ ಅವರ ಆಹ್ವಾನದ ಕುರಿತು ಪಕ್ಷದ ಇತರ ಮುಖಂಡರೊಂದಿಗೆ ಚರ್ಚಿಸುವುದಾಗಿ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ತಿಳಿಸಿದ್ದಾರೆ

ಬಿಜೆಪಿಯೇತರ ಮುಖಂಡರಿಗೆ ಮಮತಾ ಬ್ಯಾನರ್ಜಿ ಪತ್ರ

ನವದೆಹಲಿ: ಬಿಜೆಪಿಯನ್ನು ಅಧಿಕಾರದಿಂದ ದೂರ ಇಡುವ ನಿಟ್ಟಿನಲ್ಲಿ ಸಮಾನಮನಸ್ಕ ಒಕ್ಕೂಟ ಸ್ಥಾಪನೆಯ ಪ್ರಯತ್ನವನ್ನು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮುಂದುವರಿಸಿದ್ದು, ಬಿಜೆಪಿಯೇತರ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಆಯಾ ಪಕ್ಷಗಳ ಮುಖಂಡರಿಗೆ ಪತ್ರ ಬರೆದು ಬೆಂಬಲ ಕೋರಿದ್ದಾರೆ.

ಬಿಜೆಪಿಯ ದಮನಕಾರಿ ಶಕ್ತಿಯ ವಿರುದ್ಧ ಹೋರಾಡಲು ಪ್ರಗತಿಪರ ವಿಚಾರಧಾರೆಯ ಪಕ್ಷಗಳು ಒಗ್ಗೂಡಬೇಕಿರುವುದು ಸದ್ಯದ ಅಗತ್ಯವಾಗಿದೆ ಎಂದು ಅವರು ಪತ್ರದಲ್ಲಿ ಅಭಿಪ್ರಾಯಪಟ್ಟಿದ್ದಾರೆ.



ಬಿಜೆಪಿ ವಿರೋಧಿ ಮನಸ್ಥಿತಿಯ ಎಲ್ಲರ ಅನುಕೂಲಕ್ಕೆ ತಕ್ಕ ಸ್ಥಳದಲ್ಲಿ ಸಭೆಯೊಂದನ್ನು ಆಯೋಜಿಸಲೂ ಅವರು ನಿರ್ಧರಿಸಿದ್ದು, ಸಂಸತ್‌ನ ಬಜೆಟ್ ಅಧಿವೇಶನ ಪೂರ್ಣಗೊಂಡ ಬಳಿಕವೇ ಸಭೆ ನಡೆಯುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ತಮ್ಮ ರಾಜಕೀಯ ವಿರೋಧಿಗಳನ್ನು ಹಣಿಯಲು ಜಾರಿ ನಿರ್ದೇಶನಾಲಯ (ಇಡಿ), ಸಿಬಿಐ ಮತ್ತು ಆದಾಯ ತೆರಿಗೆ ಇಲಾಖೆಗಳನ್ನು ಬಳಸಲಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿರುವ ಮಮತಾ, ಪ್ರಜಾಪ್ರಭುತ್ವದ ಮೇಲೆ ನೇರ ದಾಳಿ ನಡೆಸಲಾಗಿದೆ ಎಂದು ಪತ್ರದಲ್ಲಿ ಪ್ರತಿಪಾದಿಸಿದ್ದಾರೆ.

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಸಿಬಿಐ ಮತ್ತು ಇ.ಡಿ.ಯ ನಿರ್ದೇಶಕರ ಅಧಿಕಾರಾವಧಿ ವಿಸ್ತರಿಸುವ ಉದ್ದೇಶದಿಂದ ಸುಪ್ರೀಂ ಕೋರ್ಟ್‌ನ ಆದೇಶ ಉಲ್ಲಂಘಿಸಿ ಮಸೂದೆ ಅಂಗೀಕರಿಸಿರುವುದು ಗಮನಾರ್ಹ ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ದೇಶದ ಒಕ್ಕೂಟ ವ್ಯವಸ್ಥೆಯ ಮೇಲೂ ದಾಳಿ ಮಾಡುತ್ತಿರುವ ಬಿಜೆಪಿಯ ಯತ್ನವನ್ನು ನಾವೆಲ್ಲರೂ ವಿರೋಧಿಸಬೇಕು. ವಿರೋಧಿ ಧ್ವನಿಗಳನ್ನು ಹತ್ತಿಕ್ಕುವ ನೀತಿಗೆ ವಿರೋಧ ವ್ಯಕ್ತಪಡಿಸುವುದು ನಮ್ಮ ಸಾಂವಿಧಾನಿಕ ಜವಾಬ್ದಾರಿಯೂ ಆಗಿದೆ' ಎಂದು ಅವರು ಪತ್ರದಲ್ಲಿ ಒತ್ತಿಹೇಳಿದ್ದಾರೆ.

'ಪ್ರತಿಪಕ್ಷಗಳ ಒಂದುಗೂಡುವಿಕೆ ಕುರಿತು ಕಾಂಗ್ರೆಸ್ ಆಸಕ್ತಿ ಹೊಂದಿಲ್ಲ. ಇದರಿಂದಾಗಿ ಆ ಪಕ್ಷ ವಿಶ್ವಾಸಾರ್ಹತೆ ಕಳೆದುಕೊಳ್ಳುತ್ತಿದೆ. ಮೇಲಾಗಿ ನಾವು ಅವರನ್ನು (ಕಾಂಗ್ರೆಸ್) ಅವಲಂಬಿಸಿಯೂ ಇಲ್ಲ' ಎಂದು ಐದು ರಾಜ್ಯಗಳ ಚುನಾವಣೆಯ ಫಲಿತಾಂಶದ ಬಳಿಕ ಬಹಿರಂಗ ಹೇಳಿಕೆ ನೀಡಿದ್ದ ಮಮತಾ, ಇದೀಗ ವಿಪಕ್ಷ ನಾಯಕರಿಗೆ ಪತ್ರ ಬರೆದಿರುವುದು ಗಮನಾರ್ಹವಾಗಿದೆ.

2 ಬಾರಿ ಸಿಯುಇಟಿ

ನವದೆಹಲಿ (ಪಿಟಿಐ): 'ವಿಶ್ವವಿದ್ಯಾಲಯ ಸಾಮಾನ್ಯ ಪ್ರವೇಶ ಪರೀಕ್ಷೆಯು (ಸಿಯುಇಟಿ) ಎಲ್ಲ ಪರೀಕ್ಷಾ ಮಂಡಳಿಗಳ ಅಭ್ಯರ್ಥಿಗಳಿಗೆ ಸಮಾನ ಅವಕಾಶವನ್ನು ಒದಗಿಸಲಿದೆ' ಎಂದು ಯುಜಿಸಿ ಅಧ್ಯಕ್ಷ ಜಗದೀಶ್ ಕುಮಾರ್ ಹೇಳಿದ್ದಾರೆ.

ಪರೀಕ್ಷೆಯನ್ನು ನಡೆಸುವ ಹೊಣೆ ಹೊತ್ತಿರುವ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು (ಎನ್‌ಟಿಎ) ಮುಂದಿನ ಶೈಕ್ಷಣಿಕ ಸಾಲಿನಿಂದ ವಾರ್ಷಿಕ ಎರಡು ಬಾರಿ ಸಿಯುಇಟಿ ನಡೆಸುವುದನ್ನು ಪರಿಶೀಲಿಸುತ್ತಿದೆ ಎಂದು ತಿಳಿಸಿದರು.

ಎಲೆಕ್ಟ್ರಿಕ್ ಸ್ಕೂಟರ್‌ಗೆ ಬೆಂಕಿ: ತನಿಖೆ

ನವದೆಹಲಿ: ಎಲೆಕ್ಟ್ರಿಕ್ ಸ್ಕೂಟರ್‌ಗಳಿಗೆ ಬೆಂಕಿ ಹೊತ್ತಿಕೊಳ್ಳುವ ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ವರದಿಯಾಗುತ್ತಿದ್ದು, ಇದಕ್ಕೆ ಕಾರಣವೇನು ಎಂಬುದನ್ನು ಪತ್ತೆ ಹಚ್ಚಲು ಕೇಂದ್ರ ರಸ್ತೆ ಸಾರಿಗೆ ಸಚಿವಾಲಯವು ತನಿಖೆಗೆ ಆದೇಶಿಸಿದೆ.

ತನಿಖೆ ನಡೆಸಲು ಮತ್ತು ಪರಿಹಾರ ಕ್ರಮ ಸೂಚಿಸಲು ಸಚಿವಾಲಯ ಡಿಆರ್‌ಡಿಒ ಪ್ರಯೋಗಾಲಯಗಳ ಎಸ್‌ಎಎಂ (ಸಿಸ್ಟಂ ಅನಾಲಿಸಿಸ್ ಮತ್ತು ಮಾಡೆಲಿಂಗ್) ಕ್ಲಸ್ಟರ್ ಅಡಿ ಬರುವ ಸ್ಫೋಟಕ ಮತ್ತು ಪರಿಸರ ಸುರಕ್ಷತೆ ಕೇಂದ್ರಕ್ಕೆ (ಸಿಎಫ್‌ಇಇಎಸ್) ಪತ್ರ ಬರೆದಿದೆ.

ಎಲೆಕ್ಟ್ರಿಕ್ ವಾಹನಗಳ ಸುಧಾರಣೆಗೆ ಪರಿಹಾರ ಕ್ರಮಗಳ ಜೊತೆಗೆ ಭವಿಷ್ಯದಲ್ಲಿ ಇಂತಹ ಘಟನೆಗಳನ್ನು ತಡೆಯಲು ಮುಂಜಾಗ್ರತಾ ಕ್ರಮಗಳನ್ನು ಸೂಚಿಸುವಂತೆ ಪತ್ರದಲ್ಲಿ ತಿಳಿಸಿದೆ.

'ಬೆಂಕಿ ಹತ್ತಿಕೊಳ್ಳಲು ಹೊರಗಿನ ಪರಿಸರ ಅಥವಾ ವಾಹನಗಳ ವಿನ್ಯಾಸದಲ್ಲಿ ಲೋಪಗಳಿವೆಯೇ ಎಂಬುದನ್ನು ತಿಳಿಯಲು ಸಚಿವಾಲಯ ಮುಂದಾಗಿದೆ. ತನಿಖಾ ತಂಡಗಳು ಪುಣೆ, ಬೆಂಗಳೂರು (ಓಲಾ ಪ್ರಧಾನ ಕಚೇರಿ) ಮತ್ತು ತಮಿಳುನಾಡಿನ ವೆಲ್ಲೂರಿಗೆ ಭೇಟಿ ನೀಡಲಿವೆ' ಎಂದು ಸಚಿವಾಯಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆನ್‌ಲೈನ್ ಗೇಮ್ ನಿಷೇಧ ತೆರವು 'ಸುಪ್ರೀಂ'ಗೆ ರಾಜ್ಯದ ಮೇಲ್ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯದಲ್ಲಿ ಆನ್‌ಲೈನ್ ಗೇಮ್ ಹೆಸರಲ್ಲಿ ನಡೆಯುವ ಜೂಜಾಟ ನಿಷೇಧಿಸುವ ತನ್ನ ನಿರ್ಧಾರ ರದ್ದುಗೊಳಿಸಿ ಹೈಕೋರ್ಟ್ ನೀಡಿರುವ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರ ಮಂಗಳವಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ.

ಕಳೆದ 3 ವರ್ಷಗಳಲ್ಲಿ ಸೈಬರ್ ಅಪರಾಧಕ್ಕೆ ಸಂಬಂಧಿಸಿ 28,000 ಪ್ರಕರಣ ದಾಖಲಾಗಿವೆ.

ರಾಜ್ಯದಾದ್ಯಂತ ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಆನ್‌ಲೈನ್ ಗೇಮಿಂಗ್ ವಿರುದ್ಧ ಕಾನೂನು ರೂಪಿಸುವ ಅಗತ್ಯವಿದೆ ಎಂದು ಮೇಲ್ಮನವಿಯಲ್ಲಿ ಪ್ರತಿಪಾದಿಸಲಾಗಿದೆ.

ಆನ್‌ಲೈನ್ ಜೂಜಾಟದಿಂದಾಗಿ ರಾಜ್ಯದಲ್ಲಿ ಅನೇಕರು ಆತ್ಮಹತ್ಯೆ ಮಾಡಿಕೊಂಡಿದ್ದು, ಹಲವಾರು ಕುಟುಂಬಗಳು ಬೀದಿಪಾಲಾಗಿವೆ ಎಂದು ತಿಳಿಸಿರುವ ಸರ್ಕಾರ, ಕಾನೂನು ರೂಪಿಸಿರುವ ತನ್ನ ನಿರ್ಧಾರವನ್ನು ಸಮರ್ಥಿಸಿಕೊಂಡಿದೆ.

ಯಾವುದೇ ಕ್ರೀಡೆಯ ಅಜ್ಞಾತ ಫಲಿತಾಂಶವನ್ನು ಅವಲಂಬಿಸಿ ಬೆಟ್ಟಿಂಗ್ ಅಥವಾ ಜೂಜಾಟದ ಉದ್ದೇಶದೊಂದಿಗೆ ಹಣವನ್ನು ಹೂಡುವುದನ್ನು ಕರ್ನಾಟಕ ಪೊಲೀಸ್ (ತಿದ್ದುಪಡಿ) ಕಾಯ್ದೆ– 2021ರ ಮೂಲಕ ಅಪರಾಧ ಎಂದು ಪರಿಗಣಿಸಲಾಗಿದೆ.

ಸುಪ್ರೀಂ ಕೋರ್ಟ್‌ನಲ್ಲಿ ಉತ್ತರ ಪ್ರದೇಶ ಸರ್ಕಾರ ಹೇಳಿಕೆ

'ಮಿಶ್ರಾ ಜಾಮೀನು ಪ್ರಶ್ನಿಸಿ ಮೇಲ್ಮನವಿ ಪರಿಶೀಲನೆ'


ನವದೆಹಲಿ (ಪಿಟಿಐ): ಲಖಿಂಪುರ–ಖೇರಿ ಹಿಂಸಾಚಾರ ಪ್ರಕರಣದ ಪ್ರಮುಖ ಆರೋಪಿ ಆಶಿಶ್ ಮಿಶ್ರಾಗೆ ಜಾಮೀನು ನೀಡಿದ್ದ ಅಲಹಾಬಾದ್ ಹೈಕೋರ್ಟ್ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಸುಪ್ರೀಂ ಕೋರ್ಟ್‌ಗೆ ಉತ್ತರ ಪ್ರದೇಶ ಸರ್ಕಾರ ಮಂಗಳವಾರ ಮಾಹಿತಿ ನೀಡಿದೆ.

ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯ ಮಧ್ಯೆಯೇ ಆಶಿಶ್ ಮಿಶ್ರಾಗೆ ಅಲಹಾಬಾದ್ ಹೈಕೋರ್ಟ್ ಜಾಮೀನು ನೀಡಿತ್ತು. ಲಖಿಂಪುರ–ಖೇರಿ ಹತ್ಯೆ ಪ್ರಕರಣದ ಸಂತ್ರಸ್ತ ಕುಟುಂಬಗಳ ಸದಸ್ಯರು ಹೈಕೋರ್ಟ್‌ನ ಆದೇಶದ ವಿರುದ್ಧ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಆಶಿಶ್‌ಗೆ ಜಾಮೀನು ನೀಡುವುದನ್ನು ಉತ್ತರ ಪ್ರದೇಶ ಸರ್ಕಾರ ವಿರೋಧಿಸಲಿಲ್ಲ ಎಂದು ಅರ್ಜಿದಾರರು ಆರೋಪಿಸಿದ್ದರು.

ಈ ಆರೋಪವನ್ನು ಉತ್ತರ ಪ್ರದೇಶ ಸರ್ಕಾರವು ನಿರಾಕರಿಸಿದೆ. 'ಆರೋಪಿ ಮಿಶ್ರಾಗೆ ಜಾಮೀನು ನೀಡುವುದನ್ನು ರಾಜ್ಯ ಸರ್ಕಾರ ಸ್ಪಷ್ಟವಾಗಿ ವಿರೋಧಿಸಿದೆ. ತೀರ್ಪು ಪ್ರಶ್ನಿಸುವ ವಿಚಾರವನ್ನು ಸಂಬಂಧಪಟ್ಟ ಪ್ರಾಧಿಕಾರಗಳೊಂದಿಗೆ ಸಮಾಲೋಚನೆ ನಡೆಸಲಾಗುತ್ತಿದೆ' ಎಂದು ಕೋರ್ಟ್‌ಗೆ ಸಲ್ಲಿಸಿದ ಲಿಖಿತ ಉತ್ತರದಲ್ಲಿ ತಿಳಿಸಿದೆ.

ಪ್ರಮುಖ ಸಾಕ್ಷಿದಾರರೊಬ್ಬರ ಮೇಲೆ ಹಲ್ಲೆ ನಡೆದಿದೆ. ಆಶಿಶ್‌ಗೆ ಜಾಮೀನು ದೊರೆತ ಕಾರಣದಿಂದಲೇ ಹಲ್ಲೆ ನಡೆಸಲು ಸಾಧ್ಯವಾಗಿದೆ ಎಂದೂ ಅರ್ಜಿದಾರರು ಆರೋಪಿಸಿದ್ದರು. ಇದನ್ನೂ ಉತ್ತರ ಪ್ರದೇಶ ಸರ್ಕಾರ ನಿರಾಕರಿಸಿದೆ.

'ರೈತ ಜರ್ನೈಲ್ ಸಿಂಗ್ ಅವರ ಮಗ ದಿಲ್ಜೋತ್ ಸಿಂಗ್ ಮೇಲೆ ಮಾರ್ಚ್ 10ರಂದು ಹಲ್ಲೆಯಾಗಿತ್ತು. ಇದರಲ್ಲಿ ಆರೋಪಿ ಆಶಿಶ್ ಮಿಶ್ರಾ ಪಾತ್ರವಿಲ್ಲ. ಬದಲಿಗೆ ಹೋಳಿ ಆಚರಣೆ ವೇಳೆ ಒಂದು ಗುಂಪಿನೊಂದಿಗೆ ಆದ ಕಲಹದಲ್ಲಿ ದಿಲ್ಜೋತ್ ಸಿಂಗ್ ಮೇಲೆ ಹಲ್ಲೆ ನಡೆದಿದೆ. ಕೋರ್ಟ್ ಆದೇಶದನ್ವಯ ಲಖಿಂಪುರ– ಖೇರಿ ಪ್ರಕರಣದ ಎಲ್ಲ ಸಂತ್ರಸ್ತ ಕುಟುಂಬಗಳು ಹಾಗೂ ಸಾಕ್ಷಿಗಳಿಗೆ ನಿರಂತರ ರಕ್ಷಣೆ ನೀಡಲಾಗುತ್ತಿದೆ' ಎಂದು ಸರ್ಕಾರ ತಿಳಿಸಿದೆ.




ಮಿದುಳಿಗೆ ಮಾತು ಕೊಟ್ಟ ಚಿಪ್


ಕೊಳ್ಳೇಗಾಲ ಶರ್ಮ

ಮಾತು ಮನುಷ್ಯನ ಆಸ್ತಿ. ತನಗೆ ಅನಿಸಿದ್ದನ್ನು, ಕಂಡದ್ದನ್ನು, ತಿಳಿದಿದ್ದನ್ನು, ಕೇಳಿದ್ದನ್ನು ಸಮರ್ಥವಾಗಿ ತನ್ನವರಿಗೆ ತಿಳಿಸುವ ಸಾಮರ್ಥ್ಯ ಇರುವುದರಿಂದಲೇ ದೈಹಿಕವಾಗಿ ಅತ್ಯಂತ ದುರ್ಬಲನಾಗಿರುವ ಪ್ರಾಣಿಯಾಗಿದ್ದರೂ, ಅತ್ಯಂತ ಬಲಿಷ್ಠ ಪ್ರಾಣಿಗಳನ್ನೂ ಮೀರಿಸಿ ಮಾನವ ಬೆಳೆದು ನಿಂತಿದ್ದಾನೆ ಎನ್ನುತ್ತದೆ ವಿಜ್ಞಾನ. ಈ ಸಂವಹನ ಸಾಮರ್ಥ್ಯವನ್ನೇ ಕಳೆದುಕೊಂಡರೆ ಹೇಗಿರಬಹುದು ಊಹಿಸಿ.

ಮಾತನಾಡಲು ಆಗದವರೂ ಕೂಡ ಸಂಜ್ಞೆಗಳಿಂದ ತಿಳಿಸಲು ಪ್ರಯತ್ನಿಸುತ್ತಾರಷ್ಟೆ. ಅದುವೂ ಸಾಧ್ಯವಿಲ್ಲದ ಪರಿಸ್ಥಿತಿಯೂ ಬರಬಹುದು. ಅಪರೂಪವೆಂದರೆ ಅಪರೂಪಕ್ಕೆ ಪಾರ್ಶ್ವವಾಯುವಿಗೆ ತುತ್ತಾಗುವ ಕೆಲವು ರೋಗಿಗಳಿಗೆ ನಾಲಗೆಯನ್ನೂ ಆಡಿಸಲು ಆಗದಂತಹ ಪರಿಸ್ಥಿತಿ ಬರಬಹುದು. ಅಂತಹವರು ಕೈ-ಕಾಲು ಆಡಿಸುವುದಿರಲಿ, ಕಣ್ಣನ್ನೂ ಮಿಟುಕಿಸಲಾರರು. ಹಾಗಿರುವವರಿಗೆ ಮಾತು ಕೂಡ ಸ್ತಬ್ಧವಾಗುತ್ತದೆ. ಇಂತಹ 'ತಮ್ಮೊಳಗೇ ಬಂಧಿತ'ರಾದ ವ್ಯಕ್ತಿಗಳನ್ನೂ ಆಧುನಿಕ ಎಲೆಕ್ಟ್ರಾನಿಕ್ ಸಾಧನಗಳು ಹಾಗೂ ಮಾಹಿತಿ ತಂತ್ರಜ್ಞಾನಗಳ ನೆರವಿನಿಂದ ಮಾತನಾಡಿಸುವುದು ಸಾಧ್ಯವಂತೆ. ಹೀಗೆ ಹಲವು ವರ್ಷಗಳಿಂದ ತನ್ನ ಭಾವನೆಗಳನ್ನು ಹೇಳಿಕೊಳ್ಳಲು ಆಗದಿದ್ದ ವ್ಯಕ್ತಿಯೊಬ್ಬ ತನ್ನ ಮಗನಿಗೆ 'ನನ್ನ ಮುದ್ದಿನ ಮಗನನ್ನು ಪ್ರೀತಿಸುತ್ತೇನೆ,' ಎಂದು ಹೇಳಲು ಸಾಧ್ಯವಾಯಿತು ಎಂದು 'ನೇಚರ್ ಕಮ್ಯುನಿಕೇಶನ್ಸ್' ಪತ್ರಿಕೆ ವರದಿ ಮಾಡಿದೆ. ಸ್ವಿಟ್ಜರ್ಲೆಂಡ್‌ನ 'ವಿಸ್ ಸೆಂಟರ್ ಫಾರ್ ಬಯೋ ಅಂಡ್ ನ್ಯೂರೋ ಎಂಜಿನಿಯರಿಂಗ್' ಸಂಶೋಧನಾಲಯದ ನರವಿಜ್ಞಾನಿ ಅಯೊನಿಸ್ ಬ್ಲಾಕಸ್ ಮತ್ತು ಜರ್ಮನಿಯ 'ಎಎಲ್‌ಎಸ್ ವಾಯ್ಸ್' ಎನ್ನುವ ಕಂಪನಿಯ ವಿಜ್ಞಾನಿ ಉಜ್ವಲ್ ಚೌಧರಿ ಮತ್ತು ಸಂಗಡಿಗರು ಈ ಸಾಧನೆಯನ್ನು ಮಾಡಿದ್ದಾರೆ.



ಎಮಯೋಟ್ರೋಪಿಕ್ ಲ್ಯಾಟೆರಲ್ ಸ್ಕ್ಲೀರೋಸಿಸ್ ಅಥವಾ ಎ.ಎಲ್.ಎಸ್. ಎನ್ನುವುದು ಈ ದುರದೃಷ್ಟದ ರೋಗಕ್ಕೆ ವೈದ್ಯರು ಕೊಟ್ಟಿರುವ ಹೆಸರು. ಸ್ನಾಯುಗಳನ್ನು ನಿಯಂತ್ರಿಸುವ ಮಿದುಳಿನ ಭಾಗಕ್ಕೆ ರಕ್ತ ಹರಿಯುವುದು ನಿಂತ ಕಾರಣ ಸ್ನಾಯುಗಳನ್ನು ನಿರ್ದೇಶಿಸುವ ಶಕ್ತಿಯನ್ನು ಮಿದುಳು ಕಳೆದುಕೊಳ್ಳುತ್ತದೆ. ಇದು ಕೆಲವೇ ಸ್ನಾಯುಗಳನ್ನು ಬಾಧಿಸಬಹುದು. ಹೀಗಾದಾಗ ಆಯಾ ಸ್ನಾಯುಗಳಿರುವ ಭಾಗಗಳನ್ನು ಚಲಿಸಲಾಗದು. ಅಪರೂಪಕ್ಕೆ ಎ.ಎಲ್.ಎಸ್. ರೋಗಿಗಳಲ್ಲಿ ಆಗುವಂತೆ ಮಿದುಳಿನಲ್ಲಿ ಎಲ್ಲ ಸ್ನಾಯುಗಳನ್ನೂ ನಿಯಂತ್ರಿಸುವ ಭಾಗಕ್ಕೇ ಘಾಸಿಯಾಗಿ, ಯಾವುದೇ ಸ್ನಾಯುವನ್ನೂ ಚಲಿಸುವುದು ಅಸಾಧ್ಯವಾಗಬಹುದು. ಇಂತಹವರಿಗೆ ಗಾಲಿಕುರ್ಚಿಯೇ ಗತಿ. ಜೊತೆಗೆ ಅವರೇನು ಹೇಳುತ್ತಾರೆ ಎನ್ನುವುದೂ ತಿಳಿಯದ ಸ್ಥಿತಿಯಲ್ಲಿ ಆರೈಕೆಯೂ ಬಹಳ ಕಷ್ಟವೆನ್ನಿಸುತ್ತದೆ.



ಎ.ಎಲ್.ಎಸ್. ಬಾಧಿತರಿಗೆ ಭಾವನೆಗಳಿರುತ್ತವೆ. ಆದರೆ ಅವನ್ನು ಪ್ರಕಟಗೊಳಿಸಲು ಸಾಧ್ಯವಾಗುವುದಿಲ್ಲ ಅಷ್ಟೆ. ಅದನ್ನು ಸಾಧ್ಯಗೊಳಿಸಲು ಹಲವಾರು ಪ್ರಯತ್ನಗಳು ನಡೆಯುತ್ತಲೇ ಇವೆ. ಚೌಧರಿ ಅವರ ತಂಡವೇ ಹಲವಾರು ರೋಗಿಗಳ ಮೇಲೆ ವಿವಿಧ ಪ್ರಯೋಗಗಳನ್ನು ನಡೆಸಿದ್ದಾರೆ. ಕೆಲವು ವರ್ಷಗಳ ಹಿಂದೆ ಇಂತಹುದೇ ಒಬ್ಬ ಬಾಧಿತೆಯ ಮಿದುಳಿನಲ್ಲಿ ಉತ್ಪಾದನೆಯಾಗುವ ವಿದ್ಯುತ್ ಸಂಕೇತಗಳನ್ನು ಗುರುತಿಸಿ, ಆಕೆ 'ಸರಿ' ಎನ್ನುತ್ತಿದ್ದಾಳೆಯೋ, 'ಇಲ್ಲ/ತಪ್ಪು' ಎನ್ನುತ್ತಿದ್ದಾಳೆಯೋ ಎಂದು ತಿಳಿಯಲು ಪ್ರಯತ್ನಿಸಿದ್ದರು. ತನ್ನ ಮುಂದೆ ತೋರಿಸಿದ ವಸ್ತು ಇಲ್ಲವೇ ವಾಕ್ಯಗಳು ಸರಿಯಾಗಿದ್ದಾಗ 'ಹೌದು' ಎನ್ನಲು ಕಣ್ಣನ್ನು ಮಿಟುಕಿಸುತ್ತಿದ್ದಳು. 'ಇಲ್ಲ', ಎನ್ನಲು ಇನ್ನೊಂದು ರೀತಿಯಲ್ಲಿ ಕಣ್ಣು ಮಿಟುಕಿಸಬೇಕಿತ್ತು. ಹೀಗೆ ಸ್ವಲ್ಪ ಮಟ್ಟಿಗೆ ತಮ್ಮ ಭಾವನೆಗಳನ್ನು ಅವರು ಪ್ರಕಟಿಸಬಹುದಿತ್ತು. ಆದರೆ ಕಣ್ಣನ್ನು ಮಿಟುಕಿಸಲಾಗದವರ ಗತಿ ಏನು?

ಇದಕ್ಕಾಗಿಯೂ ಹಲವು ಪ್ರಯೋಗಗಳು ನಡೆಯುತ್ತಿದ್ದುವು. ತಲೆಯ ಮೇಲೊಂದು ಟೊಪ್ಪಿಗೆಯಂಥ ಎಲೆಕ್ಟ್ರಾನಿಕ್ ಸಾಧನವನ್ನು ಹೊದಿಸಿ, ರೋಗಿಗಳ ಎದುರಿನಲ್ಲಿ ಪರದೆಯ ಮೇಲೆ ವಿವಿಧ ಅಕ್ಷರಗಳನ್ನು ಮೂಡಿಸಲಾಗುತ್ತಿತ್ತು. ಅದಕ್ಕೆ ಪ್ರತಿಕ್ರಿಯೆಯಾಗಿ ಮಿದುಳಿನಲ್ಲಿ ಸೃಷ್ಟಿಯಾಗುವ ವಿದ್ಯುತ್ ಸಂಕೇತಗಳ ವಿನ್ಯಾಸದಲ್ಲಿ, 'ಹೌದು-ಇಲ್ಲ'ಗಳಿಗೆ ಹೊಂದುವ ವಿನ್ಯಾಸವಿದೆಯೋ ಎಂದು ಗುರುತಿಸಲು ಯೋಚಿಸಲಾಗಿತ್ತು. ಈ ಪ್ರಯತ್ನ ಶೇ.70ರಷ್ಟು ಮಾತ್ರ ಸಫಲವಾಗಿತ್ತು. ಅರ್ಥಾತ್, ನೂರರಲ್ಲಿ ಎಪ್ಪತ್ತು ಪ್ರಯತ್ನಗಳಲ್ಲಿಯಷ್ಟೆ ರೋಗಿಗಳು ಸರಿ ಎಂದದ್ದನ್ನು ವಿಜ್ಞಾನಿಗಳು ಸರಿ ಎಂದು ಗುರುತಿಸಬಹುದಿತ್ತು.

ಚೌಧರಿ ಅವರ ತಂಡ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಈ ಎ.ಎಲ್.ಎಸ್. ರೋಗಿಗಳು ಅಕ್ಷರಗಳನ್ನು ಜೋಡಿಸಿ ವಾಕ್ಯಗಳನ್ನು ತಿಳಿಸುವ ತಂತ್ರವೊಂದನ್ನು ರೂಪಿಸಿದ್ದಾರೆ. ಇದು ಎಲೆಕ್ಟ್ರಾನಿಕ್ ಸಾಧನ, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಹಾಗೂ ಕಂಪ್ಯೂಟರ್ ವಿಶ್ಲೇಷಣೆಗಳ ಫಲ. ಸತತವಾಗಿ ಮೂರು ವರ್ಷಗಳ ಪ್ರಯತ್ನದ ನಂತರ, ಕಣ್ಣನ್ನು ಮಿಟುಕಿಸುವುದೂ ಅಸಾಧ್ಯವಾದೊಬ್ಬ ಎ.ಎಲ್.ಎಸ್. ವ್ಯಕ್ತಿಯೊಬ್ಬ ಹೇಳುವ ವಾಕ್ಯಗಳನ್ನು ಗುರುತಿಸಲು ಕಲಿತಿದ್ದಾರೆ. ಇದು ಸಾಧ್ಯವಾಗಿದ್ದು ಹೀಗೆ. ರೋಗಿಯ ಮಿದುಳಿನಲ್ಲಿ ಸ್ನಾಯುಗಳನ್ನು ನಿಯಂತ್ರಿಸುವ ಭಾಗವಿದೆಯಷ್ಟೆ. ಅಲ್ಲಿ ಎಲೆಕ್ಟ್ರಾನಿಕ್ ಚಿಪ್ ಒಂದನ್ನು ಹುದುಗಿಸಿದ್ದಾರೆ. ಈ ಚಿಪ್ ಮಿದುಳಿನಲ್ಲಿ ಹುಟ್ಟುವ ವಿದ್ಯುತ್ ಸಂಕೇತಗಳು ಎಷ್ಟು ಪ್ರಬಲ ಎನ್ನುವುದನ್ನು ಗುರುತಿಸಬಲ್ಲುದು. ರೋಗಿಗೆ ಕಿವಿ ಕೇಳುವುದರಿಂದ ವಿವಿಧ ಅಕ್ಷರಗಳನ್ನು ತೋರಿಸಿ, ಅದರ ಜೊತೆಗೆ ಶಬ್ದವೊಂದನ್ನೂ ಕೇಳಿಸಲಾಗುತ್ತಿತ್ತು. ರೋಗಿಗಳು ತಮಗೆ ಇಷ್ಟವಾದ ಅಕ್ಷರವನ್ನು ಗುರುತಿಸಿದಾಗ, ಅದಕ್ಕೆ ತಕ್ಕಂತೆ ಮಿದುಳಿನ ಆ ಭಾಗದಲ್ಲಿ ವಿದ್ಯುತ್ ಸಂಕೇತ ಹೆಚ್ಚುವಂತೆ, ಅಥವಾ ತಪ್ಪು ಅಕ್ಷರ ಬಂದಾಗ ಕಡಿಮೆ ಮಾಡುವಂತೆ ತರಬೇತಿ ನೀಡಲಾಯಿತು. ರೋಗಿ ಬೆರಳನ್ನು ಅಲುಗಿಸಬಹುದಾದ್ದರಿಂದ, ಮಿದುಳಿನಲ್ಲಿ ವಿದ್ಯುತ್ ಸಂಕೇತಗಳನ್ನು ಸೃಷ್ಟಿಸಬಹುದಾಗಿತ್ತು. ಹೀಗೆ ಅಕ್ಷರಗಳನ್ನು ಗುರುತಿಸಿ, ಬೇಕಿದ್ದನ್ನು ಜೋಡಿಸುವಂತೆ ಕಲಿಸಿದ ಮೇಲೆ, ರೋಗಿ ತನ್ನ ಮನಸ್ಸಿನಲ್ಲಿದ್ದುದನ್ನು ಹೇಳಲು ಪ್ರಯತ್ನಿಸಿದ. 'ನನ್ನ ಮುದ್ದಿನ ಮಗನನ್ನು ಪ್ರೀತಿಸುತ್ತೇನೆ' ಎಂದು ಹೇಳಿದ.

ಆದರೆ ನಿತ್ಯ ನಾವು ಹೇಳುವ ಇಂತಹ ವಾಕ್ಯವನ್ನು 259 ದಿನಗಳ ಸತತ ಪ್ರಯತ್ನದ ನಂತರ ಆತ ಹೇಳಬಹುದಾಯಿತು. ಇದಕ್ಕೆ ವೆಚ್ಚವಾದ ಹಣ: ಐದು ಲಕ್ಷ ಡಾಲರುಗಳು. ಇಂತಹ ಪ್ರಯತ್ನಗಳೂ ಸಾಧ್ಯ ಎನ್ನುವುದನ್ನು ನಿರೂಪಿಸುವುದಷ್ಟೆ ಈಗ ಸಾಧ್ಯವಾಗಿದೆ. 'ಎ.ಎಲ್.ಎಸ್. ರೋಗಿಗಳಿಗೆ ಸರಾಗವಾಗಿ ಮಾತನಾಡುವಂತೆ ಮಾಡುವ ಸಾಧನ ಇನ್ನೂ ಬಹಳ ದೂರವಿದೆ. ಜೊತೆಗೆ ಈ ತಂತ್ರದಲ್ಲಿ ರೋಗಿಯ ಚರ್ಮದಡಿಯಲ್ಲಿ ತಂತಿಗಳನ್ನು ಕೂಡಿಸುವುದರಿಂದ ಸೋಂಕಾಗಬಹುದು. ಇವು ಯಾವ ತೊಂದರೆಯೂ ಇಲ್ಲದ ದಿನಗಳೂ ಬರಬಹುದು. ಆ ದಿಕ್ಕಿನಲ್ಲಿ ಇದು ಮೊದಲ ಹೆಜ್ಜೆ ಅಷ್ಟೆ,' ಎನ್ನುತ್ತಾರೆ ಚೌಧರಿ.

ಸಂಶೋಧನೆಗೆ ಸಂಪೂರ್ಣ ಸರ್ಕಾರಿ ಅನುದಾನವನ್ನೇ ನಂಬಿಕೊಂಡಿರುವ ನಮ್ಮ ದೇಶದಲ್ಲಿ ಇಂತಹ ದುಬಾರಿ ವೆಚ್ಚದ ಪ್ರಯೋಗಗಳನ್ನು ನಡೆಸುವುದೂ ಕಷ್ಟವೇ! ಇತ್ತೀಚೆಗೆ ಖಾಸಗಿ ದತ್ತಿಗಳಿಂದ ಸ್ಥಾಪನೆಯಾಗುತ್ತಿರುವ ಸಂಶೋಧನಾಲಯಗಳು ಈ ನಿಟ್ಟಿನಲ್ಲಿ ನೆರವಾಗಬಹುದೋ ಕಾದು ನೋಡಬೇಕು.

ಸ್ಯಾಮ್‌ಸಂಗ್ ಗ್ಯಾಲಕ್ಸಿ S22



ಅವಿನಾಶ್ ಬಿ.

ಐಫೋನ್‌ಗೆ ಪ್ರತಿಸ್ಪರ್ಧಿ ಎಂದೆಲ್ಲ ಚರ್ಚೆಗೊಳಗಾದ ಸ್ಯಾಮ್‌ಸಂಗ್ ಗ್ಯಾಲಕ್ಸಿ ಎಸ್‌22 ಇತ್ತೀಚೆಗೆ ಭಾರತೀಯ ಮಾರುಕಟ್ಟೆಗೆ ಬಂದಿದೆ. ಇದರ 8 ಜಿಬಿ RAM, 128GB ಸ್ಟೋರೇಜ್‌ನ ಬಿಳಿ ಬಣ್ಣದ ಬೇಸ್ ಮಾಡೆಲ್ ಅನ್ನು ಎರಡು ವಾರ ಬಳಸಿ ನೋಡಿದಾಗ ಅನುಭವಕ್ಕೆ ಬಂದ ವಿಚಾರಗಳು ಇಲ್ಲಿವೆ.

ವಿನ್ಯಾಸ

ಇದು ಸಾಮಾನ್ಯ ಸ್ಮಾರ್ಟ್‌ಫೋನ್‌ಗಳಂತೆ ಕಂಡರೂ, ಕೈಗೆತ್ತಿಕೊಂಡಾಗ ಆಗುವ ಅನುಭವವೇ ಬೇರೆ. ಸುಂದರವಾದ ಬಾಕ್ಸ್‌ನೊಳಗೆ, 6.1 ಇಂಚು ಸ್ಕ್ರೀನ್ ಇರುವ ಮಾದರಿ ಎನಿಸಬಹುದಾದ ಗಾತ್ರದ, ತುಂಬ ಹಗುರವಾದ ಈ ಫೋನ್ ಒಳ್ಳೆಯ ಪ್ರೀಮಿಯಂ ಫೋನ್ ಅನ್ನು ಹಿಡಿದುಕೊಂಡಿದ್ದೇವೆಂಬ ಭಾವನೆ ಮೂಡಿಸುತ್ತದೆ. ಸುತ್ತ ಇರುವ ಕ್ರೋಮಿಯಂ ಚೌಕಟ್ಟು, ತೀರಾ ತೆಳುವಾದ ಬೆಝೆಲ್ ಇರುವ (ಸ್ಕ್ರೀನ್ ಸುತ್ತ ಖಾಲಿ ಕಪ್ಪು ಜಾಗ) ಡಿಸ್‌ಪ್ಲೇ ಮತ್ತು ಬಿಲ್ಡ್ ಗುಣಮಟ್ಟ ಹಾಗೂ ಕ್ಯಾಮೆರಾ ಗುಣಮಟ್ಟ - ಇವೆಲ್ಲವೂ ಇದಕ್ಕೆ ಐಫೋನ್ ಪ್ರತಿಸ್ಪರ್ಧಿ ಎಂಬ ಹೆಸರು ತಂದುಕೊಟ್ಟಿರುವುದರಲ್ಲಿ ಉತ್ಪ್ರೇಕ್ಷೆಯಿಲ್ಲ.

120Hz ರಿಫ್ರೆಶ್ ರೇಟ್ ಇರುವ, 6.1 ಇಂಚು ಫುಲ್ ಹೆಚ್‌ಡಿ ಪ್ಲಸ್ ಸೂಪರ್ AMOLED ಡಿಸ್‌ಪ್ಲೇ ಆಕರ್ಷಕವಾಗಿದ್ದು, ವಿವಿಡ್ ಹಾಗೂ ನ್ಯಾಚುರಲ್ - ಹೀಗೆ ಎರಡು ಪೂರ್ವನಿರ್ಧರಿತ ಮೋಡ್‌ಗಳಿವೆ. ಬಿಸಿಲಿನಲ್ಲಿ ಸ್ಕ್ರೀನ್ ಸರಿಯಾಗಿ ಕಾಣಿಸುತ್ತದೆ.

ಕ್ವಾಲ್‌ಕಂ ಸ್ನ್ಯಾಪ್‌ಡ್ರ್ಯಾಗನ್ 8 ಚಿಪ್‌ಸೆಟ್, 8ಜಿಬಿ RAM ಇರುವುದರಿಂದ ಫ್ಲ್ಯಾಗ್‌ಶಿಪ್ ಮಾದರಿಗೆ ತಕ್ಕಂತೆ ವೇಗವಿದೆ. ಆ್ಯಪ್‌ಗಳು ವೇಗವಾಗಿ ತೆರೆದುಕೊಳ್ಳುತ್ತವೆ ಮತ್ತು ಸುಲಲಿತ, ವೇಗದ ಬ್ರೌಸಿಂಗ್ ಸಾಧ್ಯವಾಗಿದೆ. ಆದರೆ, ಕೆಲವೊಮ್ಮೆ ಈ ಫೋನ್ ಬಿಸಿ ಆಗುವುದು ಗಮನಕ್ಕೆ ಬಂತು.

3700 mAh ಸಾಮರ್ಥ್ಯದ ಬ್ಯಾಟರಿ ಇದ್ದು, ಈ ಶೇಖರಣಾ ಸಾಮರ್ಥ್ಯವು ಫ್ಲ್ಯಾಗ್‌ಶಿಪ್ ಫೋನ್‌ಗೆ ಹೇಳಿಸಿದ್ದಲ್ಲ ಎಂಬ ಅಭಿಪ್ರಾಯ ಮೂಡಿತು. ಸಾಮಾನ್ಯ ಬಳಕೆಯಲ್ಲಿ ಇಡೀ ದಿನದ ಚಾರ್ಜ್‌ಗೆ ಸಮಸ್ಯೆಯಾಗಿಲ್ಲವಾದರೂ, ಹೆಚ್ಚು ಹೊತ್ತು ಗೇಮ್ ಆಡುವುದು ಅಥವಾ ಸಾಮಾಜಿಕ ಜಾಲತಾಣಗಳ ಬ್ರೌಸಿಂಗ್‌ಗೆ ಇನ್ನಷ್ಟು ಬ್ಯಾಟರಿ ಬೇಕು ಅನಿಸಿತು. 25W ವೇಗದ ಚಾರ್ಜಿಂಗ್ ಬೆಂಬಲವಿದ್ದು, ಸುಮಾರು ಒಂದುವರೆ ಗಂಟೆಯಲ್ಲಿ ಪೂರ್ತಿ ಚಾರ್ಜ್ ಆಗುತ್ತದೆ. ಚಾರ್ಜರ್ ಪ್ರತ್ಯೇಕವಾಗಿ ಖರೀದಿಸಬೇಕಾಗುತ್ತದೆ.

ಕ್ಯಾಮೆರಾ

ಆಂಡ್ರಾಯ್ಡ್ ಫೋನ್‌ಗಳಲ್ಲಿ ಅತ್ಯುತ್ತಮ ಕ್ಯಾಮೆರಾವನ್ನು ಅಳವಡಿಸಿರುವ ಸ್ಯಾಮ್‌ಸಂಗ್‌ನ ಈ ಫೋನ್‌ನಲ್ಲಿ, 50 ಮೆಗಾಪಿಕ್ಸೆಲ್‌ನ ಪ್ರಧಾನ ಸೆನ್ಸರ್ ಇದೆ. 12 ಮೆಗಾಪಿಕ್ಸೆಲ್ ಅಲ್ಟ್ರಾ ವೈಡ್ ಕೋನದ ಲೆನ್ಸ್, 10 ಮೆಗಾಪಿಕ್ಸೆಲ್ ಟೆಲಿಫೋಟೋ ಲೆನ್ಸ್‌ನಲ್ಲಿಯೇ 3x ಝೂಮ್ ವ್ಯವಸ್ಥೆಯಿದೆ. ಇವುಗಳ ಸಂಗಮದಿಂದ ಸಮೀಪದ ಮತ್ತು ದೂರದ ವಸ್ತುಗಳ ಚಿತ್ರಗಳು ಅತ್ಯುತ್ತಮವಾಗಿ ಮೂಡಿಬರುತ್ತವೆ. ಕ್ಯಾಮೆರಾದಲ್ಲಿ ವೈವಿಧ್ಯಮಯ ಮೋಡ್‌ಗಳಿವೆ. 3x ಆಪ್ಟಿಕಲ್ ಝೂಮ್ ಮತ್ತು 30x ಡಿಜಿಟಲ್ ಝೂಮ್ ಇದೆ.

ಒಟ್ಟಾರೆ ಹೇಗಿದೆ?

ಸ್ಯಾಮ್‌ಸಂಗ್ ಗ್ಯಾಲಕ್ಸಿ ಎಸ್‌22 ಫೋನ್‌ನಲ್ಲಿ ಸುಲಲಿತವಾಗಿ ಮತ್ತು ವೇಗವಾಗಿ ಕೆಲಸ ಸಾಗುತ್ತದೆ ಎಂಬುದು ಅನುಭವಕ್ಕೆ ಬಂದ ಮಾತು. ವಿಡಿಯೊ ವೀಕ್ಷಣೆಗೆ, ಮೊಬೈಲ್ ಗೇಮ್ ಆಡುವುದಕ್ಕೆ ಯಾವುದೇ ಸಮಸ್ಯೆಯಾಗಿಲ್ಲ. ಕೈಯಲ್ಲಿ ಹಿಡಿದುಕೊಂಡರೆ ಪ್ರೀಮಿಯಂ ಫೋನ್‌ನ ಅನುಭವ, ಕ್ರೋಮ್ ಪಟ್ಟಿಗಳ ಆಕರ್ಷಣೆ, ಹಗುರ ಮತ್ತು ಅತ್ಯಂತ ವೇಗದ ಕಾರ್ಯಾಚರಣೆ, ಉತ್ತಮ ಎನಿಸಬಹುದಾದ ಕ್ಯಾಮೆರಾ ಇದೆ. ಬೆಲೆ 8ಜಿಬಿ, 128ಜಿಬಿ ಬೇಸಿಕ್ ಮಾಡೆಲ್ ₹72,999 ಹಾಗೂ 256ಜಿಬಿ ಮಾಡೆಲ್ ₹76,999 ರಿಂದ ಆರಂಭವಾಗುತ್ತದೆ.

ಕ್ಯಾನ್ಸರ್ ಪತ್ತೆಗೆ ಸಿಗಲಿದೆ ವೇಗ

ಸುಧೀರ ಎಚ್. ಎಸ್.

ಅಂಗಾಂಶಗಳ ಕ್ಷಿಪ್ರ ವಿಶ್ಲೇಷಣೆ ಮತ್ತು ಕ್ಯಾನ್ಸರ್ ಬೆಳವಣಿಗೆಗಳನ್ನು ಪತ್ತೆಹಚ್ಚಲು ನಿಯತಕಾಲಿಕವಾಗಿ ಕ್ಯಾನ್ಸರ್ ಬಯಾಪ್ಸಿ ಮಾಡುವುದು ಅನಿವಾರ್ಯವಾಗಿದೆ. ಪ್ರಸ್ತುತ ಅಂಗಾಂಶ ಬಯಾಪ್ಸಿ ನಡೆಸಿ ಅದರ ಫಲಿತಾಂಶಗಳು ಪಡೆಯಲು ಸುಮಾರು 24-72 ಗಂಟೆಗಳು ಕಾಯಬೇಕು. ಇದಲ್ಲದೆ ಅಂಗಾಂಶದ ಸ್ಯಾಂಪಲ್ ಪರೀಕ್ಷಿಸಲು ಮತ್ತು ಅದರ ಫಲಿತಾಂಶವನ್ನು ಸರಿಯಾಗಿ ವಿಶ್ಲೇಷಿಸಲು (ಕ್ಯಾನ್ಸರ್ ಕೋಶಗಳನ್ನು ಹೊಂದಿದೆಯೇ ಎಂದು ಖಚಿತಪಡಿಸಿಕೊಳ್ಳಲು) ನುರಿತ ರೋಗಶಾಸ್ತ್ರಜ್ಞರ ಅಗತ್ಯವಿರುತ್ತದೆ. ಇದರ ಜೊತೆಗೆ ಶಸ್ತ್ರಚಿಕಿತ್ಸಕರಿಗೂ ಶಸ್ತ್ರಚಿಕಿತ್ಸೆ ಮಾಡಿ ಕ್ಯಾನ್ಸರ್ ಕೋಶವಿರುವ ಗಡ್ಡೆಯನ್ನು ತೆಗೆದ ನಂತರ, ತೆಗೆದ ಗಡ್ಡೆಯ ಸುತ್ತ ಇರುವ ಅಂಗಾಂಶವನ್ನು ಪರೀಕ್ಷಿಸಲು ಒಂದು ಸೂಕ್ತವಾದ ಸಾಧನದ ಅವಶ್ಯಕತೆ ಇದೆ. ಸದ್ಯಕ್ಕೆ ಶಸ್ತ್ರಚಿಕಿತ್ಸಕರು ಶಸ್ತ್ರಚಿಕಿತ್ಸೆ ಎಷ್ಟು ಪರಿಣಾಮಕಾರಿಯಾಗಿತ್ತು ಎಂದು ತಿಳಿಯಲು ಎಂ.ಆರ್.ಐ. ಮತ್ತು ಬಯಾಪ್ಸಿ ಫಲಿತಾಂಶಕ್ಕೆ ಕಾಯಬೇಕು.

ಇದಕ್ಕಾಗಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ) ಸಂಶೋಧಕರಾದ ಪ್ರೊ. ಹಾರ್ದಿಕ್ ಜೆ. ಪಾಂಡ್ಯ (ಎಲೆಕ್ಟ್ರಾನಿಕ್ ಸಿಸ್ಟಮ್ಸ್ ಎಂಜಿನಿಯರಿಂಗ್ ವಿಭಾಗ) ಮತ್ತು ಪ್ರೊ. ಅನ್ನಪೂರ್ಣಿ ರಂಗರಾಜನ್ (ಆಣ್ವಿಕ ಪುನರುತ್ಪಾದನೆ, ಅಭಿವೃದ್ಧಿ ಮತ್ತು ಜೆನೆಟಿಕ್ಸ್ ವಿಭಾಗ) ನೇತೃತ್ವದಲ್ಲಿ ಅಸ್ಸಾಂ ವೈದ್ಯಕೀಯ ಕಾಲೇಜಿನ ಸಹಯೋಗದಲ್ಲಿ ಬಯಾಪ್ಸಿ ಸ್ಯಾಂಪಲ್‌ಗಳಲ್ಲಿ ಸ್ತನಕ್ಯಾನ್ಸರ್ ಉಂಟಾಗುವ ಅಂಗಾಂಶಗಳ ಇರುವಿಕೆಯನ್ನು ಕ್ಷಿಪ್ರವಾಗಿ ಪತ್ತೆ ಹಚ್ಚಲು ಹೊಸ ವಿಧಾನವನ್ನು ಅಭಿವೃದ್ಧಿಪಡಿಸಿದ್ದಾರೆ.

ಇದು ಮೈಕ್ರೋಚಿಪ್ ಆಧಾರಿತ ತಂತ್ರಜ್ಞಾನದಿಂದ ವಿನ್ಯಾಸಗೊಂಡಿದ್ದು, ಇದಕ್ಕೆ ರ್‍ಯಾಪಿಡ್ ಈಟಿ (RapidET) ಸಿಸ್ಟಮ್ ಎಂದು ಕರೆಯುತ್ತಾರೆ. ಇದರಿಂದ ಬಯಾಪ್ಸಿ ಸ್ಯಾಂಪಲ್‌ಗಳನ್ನು 15 ನಿಮಿಷಗಳಿಗಿಂತ ಕಡಿಮೆ ಸಮಯದಲ್ಲಿ ವಿಶ್ಲೇಷಿಸಿ ಫಲಿತಾಂಶ ಪಡೆಯಬಹುದು. ಇದನ್ನು ಅರೆ-ನುರಿತ ವ್ಯಕ್ತಿಯೂ ನಿರ್ವಹಿಸಬಹುದು. ಈ ಅಧ್ಯಯನವನ್ನು 'ಮೈಕ್ರೋಸಿಸ್ಟಮ್ಸ್ ಮತ್ತು ನ್ಯಾನೊ ಇಂಜಿನಿಯರಿಂಗ್' ಎಂಬ ನಿಯತಕಾಲಿಕ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ. ವಿನ್ಯಾಸಕ್ಕೆ ಪೇಟೆಂಟ್ ಪಡೆಯಬೇಕಿದೆ.

ಕ್ಯಾನ್ಸರ್ ಅಂಗಾಂಶ ವಿಶ್ಲೇಷಣೆಯು ಅನೇಕ ಹಂತಗಳು ಮತ್ತು ರಾಸಾಯನಿಕ ಕಾರಕಗಳನ್ನು ಒಳಗೊಂಡಿರುವ ಕೌಶಲ-ಆಧಾರಿತ ಪ್ರಕ್ರಿಯೆಯಾಗಿದೆ. ಮೊದಲನೆಯದಾಗಿ, ಅಂಗಾಂಶದ ಸ್ಯಾಂಪಲನ್ನು ಫಾರ್ಮಾಲಿನ್‌ನಲ್ಲಿ ಸಂರಕ್ಷಿಸಿ, ಪ್ಯಾರಾಫಿನ್‌ನಲ್ಲಿ ಹುದುಗಿಸಿ ನಂತರ ವಿಶ್ಲೇಷಣೆಗಾಗಿ ವಿಂಗಡಿಸಲಾಗುತ್ತದೆ (slice). ನಂತರ, ನುರಿತ ರೋಗಶಾಸ್ತ್ರಜ್ಞರು ಈಸ್ಟ್ರೊಜೆನ್ ಗ್ರಾಹಕ, ಪ್ರೊಜೆಸ್ಟರಾನ್ ಗ್ರಾಹಕ ಮತ್ತು ಮಾನವ ಎಪಿಡರ್ಮಲ್ ಗ್ರೋತ್ ಫ್ಯಾಕ್ಟರ್ ರಿಸೆಪ್ಟರ್ 2 ನಂತಹ ನಿರ್ದಿಷ್ಟ ಬಯೋಮಾರ್ಕರ್‌ಗಳ ಮಟ್ಟಗಳಿಗೆ ಸ್ಯಾಂಪಲಿನಲ್ಲಿ ಎಚ್ಚರಿಕೆಯಿಂದ ಪರಿಶೀಲಿಸುತ್ತಾರೆ. ಇದು ಅಂಗಾಂಶದಲ್ಲಿನ ಕ್ಯಾನ್ಸರ್ ಕೋಶಗಳ ಮಟ್ಟವನ್ನು ಸೂಚಿಸುತ್ತದೆ.

ಸ್ತನ ಅಂಗಾಂಶಗಳ ರಚನೆಯನ್ನು ನೋಡಲು ಸ್ಕ್ಯಾನಿಂಗ್ ಎಲೆಕ್ಟ್ರಾನ್ ಮೈಕ್ರೋಸ್ಕೋಪಿಯನ್ನು ಬಳಸಲಾಗುತ್ತದೆ. ಪ್ರಸ್ತುತ ವಿದ್ಯಮಾನದಲ್ಲಿ ತಿಳಿದಿರುವುದು ಏನೆಂದರೆ ಸರಿಯಾಗಿರುವ ಅಂಗಾಂಶದ ರಚನೆ ಮೃದುವಾಗಿದ್ದು ಕ್ಯಾನ್ಸರ್ ಅಂಗಾಂಶಗಳ ರಚನೆ ಹೆಚ್ಚು ಒರಟಾಗಿರುತ್ತದೆ ಎಂದು. ಫೈಬರ್ ಅಂಶದ ವ್ಯತ್ಯಾಸದಿಂದ ಆರೋಗ್ಯಕರ ಅಂಗಾಂಶವನ್ನು ಹೋಲಿಸಿದರೆ ಕ್ಯಾನ್ಸರ್ ಅಂಗಾಂಶದಲ್ಲಿ ಹೆಚ್ಚಿನ ವಿದ್ಯುತ್ ಪ್ರತಿರೋಧ ಗುಣಲಕ್ಷಣವು ಕಂಡುಬರುತ್ತದೆ. ಈ ಅಂಶವನ್ನು ಅರಿತ ಸಂಶೋಧಕರು ಕ್ಯಾನ್ಸರ್ ಅಂಗಾಂಶದ ವಿದ್ಯುತ್ ಗುಣಲಕ್ಷಣವನ್ನು ಅಳೆಯುವ ಮೂಲಕ ಬಯಾಪ್ಸಿ ಸ್ಯಾಂಪಲ್‌ಗಳ ವಿಶ್ಲೇಷಣೆಯ ಸಮಯವನ್ನು ಕಡಿಮೆ ಮಾಡುವ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಬಹುದೇ – ಎಂದು ಈ ಸಂಶೋಧನೆಯನ್ನು ಕೈಗೊಂಡರು.

ಸ್ತನ ಕ್ಯಾನ್ಸರ್ ಅಂಗಾಂಶಗಳ ವಿದ್ಯುತ್ ಮತ್ತು ಉಷ್ಣ ಗುಣಲಕ್ಷಣಗಳು ತಮ್ಮ ಸುತ್ತಮುತ್ತಲಿನಲ್ಲಿ ಸರಿಯಾಗಿರುವ ಅಂಗಾಂಶಗಳಿಗಿಂತ ಹೇಗೆ ಭಿನ್ನವಾಗಿವೆ; ಕೋಣೆಯ ಉಷ್ಣಾಂಶದಿಂದ ದೇಹದ ಉಷ್ಣತೆಗೆ ಅಂಗಾಂಶಗಳನ್ನು ಬಿಸಿ ಮಾಡಿದಾಗ ಈ ಗುಣಲಕ್ಷಣಗಳು ಹೇಗೆ ಬದಲಾಗುತ್ತವೆ; ಮತ್ತು ಅಂಗಾಂಶದ ಭೌತಿಕ ಗುಣಲಕ್ಷಣಗಳಲ್ಲಿನ ಅಂತಹ ಕ್ರಿಯಾತ್ಮಕ ಬದಲಾವಣೆಗಳನ್ನು ಸ್ತನ ಕ್ಯಾನ್ಸರ್ ಅನ್ನು ವೇಗವಾಗಿ ಪತ್ತೆಹಚ್ಚಲು ಮಾರ್ಕರ್ ಆಗಿ ಬಳಸಬಹುದೇ?

ಈ ಮೌಲ್ಯಗಳನ್ನು ಅಳೆಯಲು ಒಂದು ಸಾಧನವನ್ನು ವಿನ್ಯಾಸಗೊಳಿಸಲು ತಂಡವು ಬಯಸಿತು. ಇಂತಹ ಸಾಧನವು ಮತ್ತೊಂದು ನಿರ್ಣಾಯಕ ಅಂಶವನ್ನು ಅಳೆಯಬೇಕು. ಅದು ಏನೆಂದರೆ ಕ್ಯಾನ್ಸರ್-ಶಸ್ತ್ರಚಿಕಿತ್ಸೆ ನಡೆಸಿದ ಪ್ರದೇಶ ಸರಿಯಾಗಿರುವ ಅಂಗಾಂಶದಿಂದ ಎಷ್ಟು ಅಂತರದಲ್ಲಿದೆ ಎಂದು. ಏಕೆಂದರೆ ಕ್ಯಾನ್ಸರ್ ಕೋಶಗಳಿರುವ ಗಡ್ಡೆಯನ್ನು ತೆಗೆದುಹಾಕಿದ ನಂತರ ಅದರ ಸುತ್ತಮುತ್ತಲಿನ ಅಂಗಾಂಶವು ಕ್ಯಾನ್ಸರ್ ಕೋಶಗಳಿಂದ ಮುಕ್ತವಾಗಿದೆಯೇ ಎಂದು ತಿಳಿಯುವುದು ಅತ್ಯವಶ್ಯಕ.

ರ್‍ಯಾಪಿಡ್ ಈಟಿ (RapidET, ರ್‍ಯಾಪಿಡ್ ಎಲೆಕ್ಟ್ರೋ-ಥರ್ಮಲ್ ಅನಾಲಿಸಿಸ್) ವ್ಯವಸ್ಥೆಯು ಸಿಲಿಕಾನ್ ಮೈಕ್ರೋಚಿಪ್‌ಗಳೊಂದಿಗೆ ಅಳವಡಿಸಲಾದ ಎರಡು ರೋಬೋಟಿಕ್ ಕೈಗಳನ್ನು ಹೊಂದಿದೆ. ಮೈಕ್ರೋಚಿಪ್‌ಗಳನ್ನು ಸ್ಲೈಡ್-ಮತ್ತು-ಫಿಟ್ ಸಂಪರ್ಕವನ್ನು ಬಳಸಿಕೊಂಡು ಪ್ಲಾಟ್‌ಫಾರ್ಮ್‌ನಲ್ಲಿ ಸಂಯೋಜಿಸಲಾಗಿದೆ. ವಿವಿಧ ಸ್ಯಾಂಪಲ್‌ಗಳನ್ನು ತ್ವರಿತವಾಗಿ ಬದಲಿಸಿ ವಿಶ್ಲೇಷಿಸಲು ವಿನ್ಯಾಸಗೊಳಿಸಲಾಗಿದೆ. ಪ್ರತಿಯೊಂದು ಚಿಪ್ ಅಂಗಾಂಶದ ವಿದ್ಯುತ್ ಗುಣಲಕ್ಷಣವನ್ನು ಅಳೆಯಲು ಹೀಟರ್‌ಗಳು, ಥರ್ಮಿಸ್ಟರ್‌ಗಳು ಮತ್ತು ವಿದ್ಯುದ್ವಾರಗಳನ್ನು ಹೊಂದಿರುತ್ತದೆ.

ಆನ್-ಬೋರ್ಡ್ ಎಲೆಕ್ಟ್ರಾನಿಕ್ ಮಾಡ್ಯೂಲ್‌ಗಳು ಮತ್ತು ಮೆಕಾಟ್ರಾನಿಕ್ ಉಪವ್ಯವಸ್ಥೆಗಳು ಬಯಾಪ್ಸಿ ಸ್ಯಾಂಪಲ್ ಮೇಲೆ ಸಂಭಾವ್ಯ ವಿದ್ಯುತ್ ಮತ್ತು ಶಾಖವನ್ನು ಅನ್ವಯಿಸುತ್ತವೆ. ಮೈಕ್ರೊಚಿಪ್‌ಗಳು ಅಂಗಾಂಶದ ವಿದ್ಯುತ್ ಮತ್ತು ಉಷ್ಣ ಗುಣಲಕ್ಷಣಗಳನ್ನು ಮತ್ತು ಅದರ ತಾಪಮಾನ-ಅವಲಂಬಿತ ವ್ಯತ್ಯಾಸಗಳನ್ನು ಅಳೆಯುವ ಸಾಮರ್ಥ್ಯವಿರುವ ಹಲವಾರು ಸಂವೇದಕಗಳಿಂದ ಮಾಹಿತಿಯನ್ನು ಕ್ರೋಡೀಕರಿಸುತ್ತದೆ. ಉದಾಹರಣೆಗೆ, ಅಂಗಾಂಶದ ಸ್ಯಾಂಪಲ್ ಅನ್ನು ರ್‍ಯಾಪಿಡ್ ಈಟಿ ವ್ಯವಸ್ಥೆಯಲ್ಲಿ ಇರಿಸಿದಾಗ ಮತ್ತು ಶಾಖವನ್ನು ಒಂದು ಕೈಗೆ ಅನ್ವಯಿಸಿದಾಗ, ಅಂಗಾಂಶವು ಸಾಧನದ ಇನ್ನೊಂದು ಕೈಗೆ ಶಾಖವನ್ನು ಸಾಗಿಸುತ್ತದೆ. ಇದರಿಂದ ತಾಪಮಾನ, ವಿದ್ಯುತ್, ಪ್ರತಿರೋಧಕತೆ (ಮೇಲ್ಮೈ ಪ್ರತಿರೋಧ ಮತ್ತು ಒಟ್ಟಾರೆ ಪ್ರತಿರೋಧ) ಮತ್ತು ಇತರ ಸಂಬಂಧಿತ ನಿಯತಾಂಕಗಳಲ್ಲಿನ ಬದಲಾವಣೆಗಳನ್ನು ಪತ್ತೆ ಮಾಡುತ್ತದೆ. ನಂತರ ಸಾಧನವು ವಿಭಿನ್ನ ಅಳತೆಗಳಿಂದ ಮೌಲ್ಯಗಳನ್ನು ಸಂಯೋಜಿಸುವ ಮೂಲಕ ಮಾಪಿಸಿದ ಮಾಹಿತಿಯನ್ನು ಸರಳವಾಗಿ ನೀಡುತ್ತದೆ.

ರ್‍ಯಾಪಿಡ್ ಈಟಿ ವ್ಯವಸ್ಥೆಯನ್ನು ಬಳಸಿಕೊಂಡು ಕ್ಯಾನ್ಸರ್ ಅಂಗಾಂಶದ ಉಷ್ಣ ವಾಹಕತೆ ಸರಿಯಾಗಿರುವ ಅಂಗಾಂಶಕ್ಕಿಂತ ಎಷ್ಟು ಭಿನ್ನವಾಗಿದೆ ಎಂಬುದನ್ನು ನೋಡಲು ತಂಡವು ಪರೀಕ್ಷಿಸಿದೆ. ತಾಪಮಾನದೊಂದಿಗೆ ವಿದ್ಯುತ್ ಪ್ರತಿರೋಧದ ಬದಲಾವಣೆಗಳನ್ನು ಮಾಪಿಸಿ ಮತ್ತು ಉಷ್ಣ ವಾಹಕತೆಯ ಮಾಪನಗಳೊಂದಿಗೆ ಸಂಯೋಜಿಸುವುದರಿಂದ ಅಂಗಾಂಶದಲ್ಲಿ ಕ್ಯಾನ್ಸರ್ ಕೋಶಭರಿತ ಗೆಡ್ಡೆ ಇದೆಯೋ ಅಥವಾ ಸರಿಯಾಗಿರುವ ಅಂಗಾಂಶಗಳಿವೆಯೋ ಎಂದು ವರ್ಗೀಕರಿಸಲು ಇದು ಪೂರಕವಾಗಿದೆ. ಇದರಿಂದ ಪ್ರತಿ ಸ್ಯಾಂಪಲ್ ಅನ್ನು ವಿಶ್ಲೇಷಿಸಲು ತಗಲುವ ಸಮಯ 14 ± 2 ನಿಮಿಷ!



ಪಿಯುಸಿ ದಿಕ್ಸೂಚಿ

ಗಣಿತ ಶಾಸ್ತ್ರ — ಮಾದರಿ ಪ್ರಶ್ನೆಗಳು

ಕ್ಷೇತ್ರಫಲ

29) $\int_0^{\pi} \frac{x\,dx}{a^2\cos^2 x + b^2\sin^2 x}$ ನ್ನು ಕಂಡುಹಿಡಿಯಿರಿ.

ಉತ್ತರ:–

$$I=\int_0^{\pi}\frac{x\,dx}{a^2\cos^2 x+b^2\sin^2 x}=\int_0^{\pi}\frac{(\pi-x)dx}{a^2\cos^2(\pi-x)+b^2\sin^2(\pi-x)}$$

$$=\pi\int_0^{\pi}\frac{dx}{a^2\cos^2 x+b^2\sin^2 x}-\int_0^{\pi}\frac{x\,dx}{a^2\cos^2 x+b^2\sin^2 x}$$

$$=\pi\int_0^{\pi}\frac{dx}{a^2\cos^2 x+b^2\sin^2 x}-1$$

$$\therefore \quad 2I=\pi\int_0^{\pi}\frac{dx}{a^2\cos^2 x+b^2\sin^2 x}$$

ಅಥವಾ $I=\frac{\pi}{2}\int_0^{\pi}\frac{dx}{a^2\cos^2 x+b^2\sin^2 x}=\frac{\pi}{2}\cdot 2\int_0^{\pi/2}\frac{dx}{a^2\cos^2 x+b^2\sin^2 x}$

$$=\pi\left[\int_0^{\frac{\pi}{4}}\frac{dx}{a^2\cos^2 x+b^2\sin^2 x}+\int_{\frac{\pi}{4}}^{\frac{\pi}{2}}\frac{dx}{a^2\cos^2 x+b^2\sin^2 x}\right]$$

$$=\pi\left[\int_0^{\frac{\pi}{4}}\frac{\sec^2 x}{a^2+b^2\tan^2 x}dx+\int_{\frac{\pi}{4}}^{\frac{\pi}{2}}\frac{\operatorname{cosec}^2 x\,dx}{a^2\cot^2 x+b^2}\right]$$

$$=\pi\left[\int_0^{1}\frac{dt}{a^2+b^2t^2}-\int_1^{0}\frac{du}{a^2u^2+b^2}\right]$$ ($\tan x = t$ ಮತ್ತು $\cot x = u$ ಆದಾಗ)


$$I=\frac{\pi}{ab}\left[\tan^{-1}\frac{bt}{a}\Big|_0^1\right]-\frac{\pi}{ab}\left[\tan^{-1}\frac{au}{b}\Big|_1^0\right]$$

$$=\frac{\pi}{ab}\left[\tan^{-1}\frac{b}{a}+\tan^{-1}\frac{a}{b}\right]=\frac{\pi}{ab}\left(\frac{\pi}{2}\right)=\frac{\pi^2}{2ab}$$

30) $x2 + y2 = a2$ ವೃತ್ತದಿಂದ ಆವೃತವಾದ ಕ್ಷೇತ್ರಫಲವನ್ನು ಕಂಡುಹಿಡಿಯಿರಿ.

ಉತ್ತರ:– ಕೆಳಗಿನ ಚಿತ್ರದಲ್ಲಿ ತೋರಿಸಿರುವಂತೆ,

$x2 + y2 = a2$ ವೃತ್ತದಿಂದ ಆವೃತವಾಗಿರುವ ಕ್ಷೇತ್ರಫಲ = 4 (AOBA ಪ್ರದೇಶದ ಕ್ಷೇತ್ರಫಲ) = 4[ವೃತ್ತವನ್ನು ಸೂಚಿಸುವ ವಕ್ರರೇಖೆ, x–ಅಕ್ಷ, $x = 0$ ಮತ್ತು $x = a$ ಗಳಲ್ಲಿ ಎಳೆದಿರುವ ಲಂಬಗಳಿಂದಾವೃತವಾಗಿರುವ ಪ್ರದೇಶದ ಕ್ಷೇತ್ರಫಲ] [ವೃತ್ತವು x- ಮತ್ತು y-ಅಕ್ಷಗಳಿಗೆರಡಕ್ಕೂ ಸಮ್ಮಿತೀಯವಾಗಿರುವುದರಿಂದ].



$$4\int_0^a \sqrt{a^2-x^2}dx \qquad \left[\because x^2+y^2=a^2 \Rightarrow y=\pm\sqrt{a^2-x^2}\right]$$

AOBA ಪ್ರದೇಶವು ಮೊದಲ ಚತುರ್ಥಾಂಕದಲ್ಲಿರುವುದರಿಂದ, yಅನ್ನು ಧನ ಚಿಹ್ನೆಯೊಂದಿಗೆ ತೆಗೆದುಕೊಳ್ಳುತ್ತೇವೆ. ಅನುಕಲಿಸಿದಾಗ ನಮಗೆ ಇಡೀ ವೃತ್ತದ ಕ್ಷೇತ್ರಫಲ=


$$4\left[\frac{x}{2}\pm\sqrt{a^2-x^2}+\frac{a^2}{2}.\sin^{-1}\frac{x}{a}\right]_0^a$$

$$4\left[\left(\frac{a}{2}x0+\frac{a^2}{2}.\sin^{-1}1\right)-0\right]=4\left(\frac{a^2}{2}\right)\left(\frac{\pi}{2}\right)=\pi a^2$$

31) $\frac{x^2}{a^2}+\frac{y^2}{b^2}=1$ ದೀರ್ಘವೃತ್ತ, $x = 0$ ಮತ್ತು $x = ae$ ಗಳಲ್ಲಿ X–ಅಕ್ಷಕ್ಕೆ ಎಳೆದಿರುವ ಲಂಬಗಳ ನಡುವಣ ಪ್ರದೇಶದ ಕ್ಷೇತ್ರಫಲವನ್ನು ಕಂಡುಹಿಡಿಯಿರಿ. [$b^2 = a^2(1 – e2)$ ಮತ್ತು $e < 1$ ಆದಾಗ]

ಉತ್ತರ: ಬೇಕಾದ BOB'RFSB ಪ್ರದೇಶವು ದೀರ್ಘವೃತ್ತ, $x = 0$ ಮತ್ತು $x = ae$ ಸರಳ ರೇಖೆಗಳಿಂದ ಆವೃತವಾಗಿದೆ.

BOB'RFSB ಪ್ರದೇಶದ ಕ್ಷೇತ್ರಫಲ



$$= 2.\int_0^{ae} y\,dx$$

$$= 2\frac{b}{a}\int_0^{ae}\sqrt{a^2-x^2}\,dx$$

$$=\frac{2b}{a}\cdot\left[\frac{x}{2}.\sqrt{a^2-x^2}+\frac{a^2}{2}\cdot\sin^{-1}\frac{x}{a}\right]_0^{ae}$$

$$=\frac{2b}{2a}\cdot\left[ae\sqrt{a^2-a^2e^2}+a^2\cdot\sin^{-1}e\right]$$

$$=ab\left[e\sqrt{1-e^2}+\sin^{-1}e\right]$$

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಇಸ್ತಾಂಬುಲ್‌ನಲ್ಲಿ ನಡೆದ ಮಾತುಕತೆ ಮೂಡಿಸಿದ ಆಶಾದಾಯಕ ಬೆಳವಣಿಗೆ

ಕೀವ್, ಚೆರ್ನಿವ್‌ನಿಂದ ಸೇನೆ ವಾಪಸ್: ರಷ್ಯಾ


ಮಾಸ್ಕೊ/ಕೀವ್, ಇಸ್ತಾಂಬುಲ್ (ಎಪಿ, ಎಎಫ್‌ಪಿ): ಯುದ್ಧ ಕೊನೆಗೊಳಿಸುವ ಉದ್ದೇಶದಿಂದ ಮಾತುಕತೆಗಳಲ್ಲಿ ಪರಸ್ಪರ ನಂಬಿಕೆ ಹೆಚ್ಚಿಸಲು ಉಕ್ರೇನ್ ರಾಜಧಾನಿ ಕೀವ್ ಮತ್ತು ಇನ್ನೊಂದು ಪ್ರಮುಖ ನಗರ ಚೆರ್ನಿವ್ ಬಳಿ ಸೇನಾ ಕಾರ್ಯಾಚರಣೆಗಳನ್ನು ನಿಯಮಿತವಾಗಿ ಕಡಿತಗೊಳಿಸಲು ಮಾಸ್ಕೊ ನಿರ್ಧರಿಸಿದೆ ಎಂದು ರಷ್ಯಾದ ರಕ್ಷಣಾ ಉಪ ಸಚಿವ ಅಲೆಕ್ಸಾಂಡರ್ ಫೊಮಿನ್ ಹೇಳಿದ್ದಾರೆ.

ಮಂಗಳವಾರ ಟರ್ಕಿಯ ಇಸ್ತಾನ್‌ಬುಲ್‌ನಲ್ಲಿ ನಡೆದ ರಷ್ಯಾ ಮತ್ತು ಉಕ್ರೇನ್ ನಡುವಿನ ಮತ್ತೊಂದು ಸುತ್ತಿನ ಮಾತುಕತೆಯ ನಂತರ ಫೊಮಿನ್ ಈ ನಿರ್ಧಾರ ಪ್ರಕಟಿಸಿದ್ದಾರೆ.

ಒಂದು ತಿಂಗಳ ಹಿಂದೆ ಉಕ್ರೇನ್ ಮೇಲೆ ಆಕ್ರಮಣ ಆರಂಭಿಸಿದ ರಷ್ಯಾ ಇದೇ ಮೊದಲ ಬಾರಿಗೆ ತೋರಿದ ಪ್ರಮುಖ ಉದಾರತೆ ಇದು.

ಈ ಹಿಂದೆಯೇ ಕೀವ್ ಮತ್ತು ಚೆರ್ನಿವ್ ಸುತ್ತಲೂ ರಷ್ಯಾ ಸೇನೆ ಹಿಂಪಡೆಯುವಿಕೆಯನ್ನು ಗಮನಿಸಿದ್ದಾಗಿ ಉಕ್ರೇನಿನ ಮಿಲಿಟರಿ ಜನರಲ್ ಸ್ಟಾಫ್ ಹೇಳಿದೆ.

ಪುಟಿನ್ ಗುಟುರು: ಯುದ್ಧ ಕೊನೆಗಾಣಿಸಿ ಶಾಂತಿ ಸ್ಥಾಪನೆಗೆ ಮುಂದಾಗುವಂತೆ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮುಂದಿಟ್ಟಿರುವ ಪ್ರಸ್ತಾವಕ್ಕೆ, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ 'ಝೆಲೆನ್‌ಸ್ಕಿಯನ್ನು ಸದೆಬಡಿಯುವೆ' ಎಂದು ಗುಟುರು ಹಾಕಿದ್ದಾರೆ.



ರಷ್ಯಾದ ಸೇನಾ ಪಡೆಗಳು ಮಂಗಳವಾರ ನಡೆಸಿದ ದಾಳಿಯಲ್ಲಿ ಉಕ್ರೇನ್‌ನ ಮೈಕೊಲೈವ್ ನಗರದ ಪ್ರಾದೇಶಿಕ ಸರ್ಕಾರಿ ಪ್ರಧಾನ ಕಚೇರಿಯು ಧ್ವಂಸಗೊಂಡಿದೆ —ಪಿಟಿಐ ಚಿತ್ರ

ಉಕ್ರೇನ್ ಜತೆಗಿನ ಮಾತುಕತೆಯಲ್ಲಿ ರಷ್ಯಾದ ಅನಧಿಕೃತ ರಾಜತಾಂತ್ರಿಕರಾಗಿ ಕಾರ್ಯನಿರ್ವಹಿಸುತ್ತಿರುವ ರಷ್ಯಾದ ಸಿರಿವಂತ ಉದ್ಯಮಿ ರೋಮನ್ ಅಬ್ರಮೊವಿಚ್ ಅವರು ಝೆಲೆನ್‌ಸ್ಕಿ ನೀಡಿದ್ದ ಕೈಬರಹದ ಟಿಪ್ಪಣಿಯನ್ನು ಕೊಟ್ಟಾಗ ಪುಟಿನ್ ಅವರು ಉಕ್ರೇನಿಗರನ್ನು 'ಸದೆಬಡಿಯುವೆ' ಎಂದು ಹೇಳಿರುವುದಾಗಿ ವರದಿಯೊಂದು ತಿಳಿಸಿದೆ.

ಝೆಲೆನ್‌ಸ್ಕಿ ಟಿಪ್ಪಣಿ ನೋಡಿ ಕೆಂಡಾಮಂಡಲರಾದ ಪುಟಿನ್ 'ಅವನಿಗೆ (ಝೆಲೆನ್‌ಸ್ಕಿ) ಹೇಳಿ, ಅವನನ್ನು ಸದೆಬಡಿಯುವೆ' ಎಂದು ಹೇಳಿರುವುದಾಗಿ ಬ್ರಿಟನ್ ದೈನಿಕ 'ದಿ ಟೈಮ್ಸ್' ವರದಿ ಮಾಡಿದೆ. ಯುದ್ಧ ಕೊನೆಗೊಳಿಸಲು ಉಕ್ರೇನ್ ಹಾಕಿರುವ ಷರತ್ತುಗಳು ಆ ಟಿಪ್ಪಣಿಯಲ್ಲಿದ್ದವು.

ಪಶ್ಚಿಮದ ರಾಷ್ಟ್ರಗಳ ನಿರ್ಬಂಧಕ್ಕೆ ಒಳಗಾಗಿರುವ ರಷ್ಯದ ಸಿರಿವಂತ ಉದ್ಯಮಿಗಳಲ್ಲಿ ರೋಮನ್ ಅಬ್ರಮೊವಿಚ್ ಒಬ್ಬರು.

ಕಳೆದ ಫೆಬ್ರುವರಿ 24ರಂದು ರಷ್ಯಾ ಆರಂಭಿಸಿದ ಆಕ್ರಮಣ ಅಂತ್ಯಗೊಳಿಸುವ ಸಂಬಂಧದ ಮಾತುಕತೆಗೆ ನೆರವಾಗುವಂತೆ ಅಬ್ರಮೊ ವಿಚ್ ಅವರ ನೆರವನ್ನು ಉಕ್ರೇನ್ ಕೇಳಿತ್ತು.

ಇದಕ್ಕೆ ಒಪ್ಪಿಕೊಂಡಿದ್ದ ಅಬ್ರಮೊ ವಿಚ್ ಟರ್ಕಿಯ ಇಸ್ತಾಂಬುಲ್‌ನಲ್ಲಿ ಮಾತುಕತೆ ಮುಗಿಸಿ, ವಿಮಾನದಲ್ಲಿ ಇಸ್ತಾಂಬುಲ್‌ನಿಂದ ಮಾಸ್ಕೊಗೆ ಮರಳಿದರು. ನಂತರ ಪುಟಿನ್ ಅವರನ್ನು ಭೇಟಿಯಾಗಿ, ಝೆಲೆನ್‌ಸ್ಕಿ ಅವರ ಟಿಪ್ಪಣಿಯನ್ನು ಪುಟಿನ್ ಅವರಿಗೆ ಸಲ್ಲಿಸಿದರು ಎಂದು 'ದಿ ಟೈಮ್ಸ್' ಹೇಳಿದೆ.

ಕೀವ್‌ನಲ್ಲಿ ಈ ತಿಂಗಳ ಆರಂಭದಲ್ಲಿ ನಡೆದ ಶಾಂತಿ ಸಂಧಾನ ಸಭೆಯ ನಂತರ ಅಬ್ರಮೊವಿಚ್ ಮತ್ತು ಉಕ್ರೇನಿನ ಇಬ್ಬರು ಸಂಧಾನಕಾರರು ವಿಷ ಪ್ರಾಶನಕ್ಕೆ ತುತ್ತಾಗಿರುವ ಲಕ್ಷಣಗಳನ್ನು ಅನುಭವಿಸಿದ್ದಾರೆ ಎಂದು 'ದಿ ವಾಲ್ ಸ್ಟ್ರೀಟ್ ಜರ್ನಲ್' ಸೋಮವಾರ ವರದಿ ಮಾಡಿತ್ತು. ಈ ಮೂವರು ಸದ್ಯ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

'ಝೆಲೆನ್‌ಸ್ಕಿ, ಪುಟಿನ್ ಮಾತುಕತೆ ಸಾಧ್ಯತೆ'

ಟರ್ಕಿಯ ಇಸ್ತಾಂಬುಲ್‌ನಲ್ಲಿ ಮಂಗಳವಾರ ನಡೆದ ರಷ್ಯಾ– ಉಕ್ರೇನ್ ನಡುವಿನ ಸಂಧಾನ ಮಾತುಕತೆಯ ನಂತರ ಪುಟಿನ್ ಮತ್ತು ಝೆಲೆನ್‌ಸ್ಕಿ ಅವರು ನೇರ ಭೇಟಿಯಾಗುವ ಸಾಧ್ಯತೆಗಳು ಹೆಚ್ಚಿವೆ ಎಂದು ಉಕ್ರೇನ್ ಹೇಳಿದೆ.

'ಇಸ್ತಾಂಬುಲ್ ಸಭೆಯ ಫಲಿತಾಂಶಗಳು ಇಬ್ಬರು ನಾಯಕರ ನಡುವಿನ ಭೇಟಿ ಮತ್ತು ಮಾತುಕತೆಗೆ ಸಾಕಾಗಲಿವೆ' ಎಂದು ಉಕ್ರೇನ್ ಸಂಧಾನಕಾರ ಡೇವಿಡ್ ಅರಾಖಮಿಯಾ ಹೇಳಿದ್ದಾರೆ.

'ರಷ್ಯಾದೊಂದಿಗಿನ ಸಂಘರ್ಷ ಪರಿಹರಿಸಲು, ಉಭಯ ರಾಷ್ಟ್ರಗಳ ಅಧ್ಯಕ್ಷರ ನಡುವಿನ ಭೇಟಿ ಸಾಧ್ಯತೆ ಹೆಚ್ಚಿಸುವ ನಿಟ್ಟಿನಲ್ಲಿ ಈ ಮಾತುಕತೆಯಲ್ಲಿ ಸಾಕಷ್ಟು ಪ್ರಗತಿ ಸಾಧಿಸಲಾಗಿದೆ' ಎಂದು ಅವರು ಹೇಳಿದ್ದಾರೆ.

ಉಕ್ರೇನಿನ ಪ್ರತಿನಿಧಿಗಳೊಂದಿಗೆ ಶಾಂತಿ ಮಾತುಕತೆಯಲ್ಲಿ ಆದ ಅರ್ಥಪೂರ್ಣ ಪ್ರಗತಿಯನ್ನು ರಷ್ಯಾದ ಸಂಧಾನಕಾರರು ಸ್ವಾಗತಿಸಿದರು.

ಯುದ್ಧಪೀಡಿತ ಉಕ್ರೇನಿನಲ್ಲಿ ಉಂಟಾಗಿರುವ ಮಾನವೀಯ ಬಿಕ್ಕಟ್ಟು ಮತ್ತು ತಟಸ್ಥ ರಾಷ್ಟ್ರವಾಗಿ ಉಕ್ರೇನ್ ಉಳಿಯಬೇಕೆಂಬ ರಷ್ಯಾದ ಬೇಡಿಕೆ ಮತ್ತು ಇತರ ವಿಷಯಗಳನ್ನು ಕೇಂದ್ರೀಕರಿಸಿಕೊಂಡು ಇಸ್ತಾನ್‌ಬುಲ್ ಸಭೆಯಲ್ಲಿ ಚರ್ಚಿಸಲಾಯಿತು. ಈ ನಡುವೆ ಇತರ ದೇಶಗಳು ತನ್ನ ಭದ್ರತೆಯನ್ನು ಖಾತರಿಪಡಿಸುವಂತಹ ಅಂತರರಾಷ್ಟ್ರೀಯ ಒಪ್ಪಂದಕ್ಕೆ ಉಕ್ರೇನ್ ಒತ್ತಾಯಿಸಿತು.

'ಈ ಒಪ್ಪಂದ ನ್ಯಾಟೊದ ಆರ್ಟಿಕಲ್ 5 ಅನ್ನು ಹೋಲುವಂತಿರಬೇಕು. ಅದು ಮೈತ್ರಿ ಸದಸ್ಯ ರಾಷ್ಟ್ರಗಳು ಪರಸ್ಪರ ರಕ್ಷಿಸಿಕೊಳ್ಳಲು ಬದ್ಧವಾಗಿರುತ್ತದೆ' ಎಂದು ಡೇವಿಡ್ ಅರಾಖಮಿಯಾ ಸುದ್ದಿಗಾರರಿಗೆ ತಿಳಿಸಿದರು.

ಇದೇ ವೇಳೆ, ಉಭಯ ರಾಷ್ಟ್ರಗಳ ಅಧ್ಯಕ್ಷರ ನಡುವಿನ ಮಾತುಕತೆಯ ಸಾಧ್ಯತೆಯನ್ನು ತಳ್ಳಿ ಹಾಕಿದ ರಷ್ಯಾ 'ಇದು ಪ್ರತಿರೋಧಕ' ಎಂದು ಹೇಳಿದೆ.

34ನೇ ದಿನದ ಬೆಳವಣಿಗೆಗಳು

- ರಷ್ಯಾ– ಉಕ್ರೇನ್ ನ್ಯಾಯಸಮ್ಮತ ಕಾಳಜಿ ಹೊಂದಿವೆ. ಈ ದುರಂತ ಕೊನೆಗಾಣಿಸಲು ಎರಡೂ ಕಡೆಯಲ್ಲೂ ಒತ್ತಾಯವಿದೆ. ಇಡೀ ಜಗತ್ತು ನಿಮ್ಮಿಂದ ಒಳ್ಳೆಯ ಸುದ್ದಿಗಾಗಿ ಕಾಯುತ್ತಿದೆ ಎಂದು ಎರಡೂ ಕಡೆಯವರಿಗೆ ಹೇಳಿರುವೆ– ಟರ್ಕಿ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೋಗನ್ (ಉಭಯ ರಾಷ್ಟ್ರಗಳ ನಿಯೋಗಗಳನ್ನು ಸ್ವಾಗತಿಸಿ, ನಂತರ ನೀಡಿದ ಹೇಳಿಕೆ)
- ಟರ್ಕಿಯಲ್ಲಿನ ಶಾಂತಿ ಮಾತುಕತೆಗೂ ಮುನ್ನಾ ಮೈಕೊಲೈವ್ ಸರ್ಕಾರಿ ಪ್ರಧಾನ ಕಚೇರಿ ಕಟ್ಟಡದ ಮೇಲೆ ರಷ್ಯಾ ಕ್ಷಿಪಣಿ ದಾಳಿ ನಡೆಸಿದೆ. 11 ಮಂದಿ ಸಾವು, 22 ಮಂದಿಗೆ ಗಾಯ– ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಹೇಳಿಕೆ
- ಉಕ್ರೇನಿನ ದಕ್ಷಿಣ ಭಾಗದ ಕೆರ್ಸಾನ್, ಒಡೆಸಾ, ಮೈಕೊಲೈವ್ ಮತ್ತು ಮರಿಯುಪೊಲ್ ನಗರಗಳ ಮೇಲೆ ರಷ್ಯಾ ದಾಳಿ ಮುಂದುವರಿಸಿದೆ. ಉಕ್ರೇನ್‌ಗೆ ಕಪ್ಪು ಸಮುದ್ರದ ಸಂಪರ್ಕ ಕಡಿತಗೊಳಿಸಿ, ರಷ್ಯಾದಿಂದ ಕ್ರಿಮಿಯಾಕ್ಕೆ ಭೂ ಕಾರಿಡಾರ್ ಸ್ಥಾಪಿಸಲು ಪ್ರಯತ್ನಿಸುತ್ತಿದೆ– ಮೈಕೊಲೈವ್ ಗವರ್ನರ್ ವಿಟಾಲಿ ಕಿಮ್ ಆರೋಪ
- ನಿಪ್ರೊಪೆಟ್ರೊವ್‌ಸ್ಕ್ ಪ್ರದೇಶದ ನೈಕೊಪೊಲ್ ನಗರ ಸಮೀಪ ರಷ್ಯಾದ ಕ್ಷಿಪಣಿ ದಾಳಿ ಮಂಗಳವಾರ ಕೂಡ ನಡೆಯಿತು. ಈ ನಗರವು ಝುಪ್ರೊರಿಝಿಯಾದ ಅಣು ಸ್ಥಾವರಕ್ಕೆ ತುಂಬಾ ಸನಿಹದಲ್ಲಿದೆ.
- ರಷ್ಯಾದ ಆಕ್ರಮಣದಿಂದ ಮರಿಯುಪೊಲ್ ಹೊರತುಪಡಿಸಿ, ಉಕ್ರೇನಿನಲ್ಲಿ ಈವರೆಗೆ 114 ಮಕ್ಕಳು ಮೃತಪಟ್ಟಿದ್ದು, 220 ಮಕ್ಕಳು ಗಾಯಗೊಂಡಿದ್ದಾರೆ– ಉಕ್ರೇನಿನ ಪ್ರಾಸಿಕ್ಯೂಟರ್ ಜನರಲ್ ಕಚೇರಿ ಮಾಹಿತಿ.
- ಮರಿಯುಪೊಲ್ ನಗರವೊಂದರಲ್ಲೇ 210 ಮಕ್ಕಳು ಸಾವನ್ನಪ್ಪಿದ್ದಾರೆ – ನಗರದ ಮೇಯರ್ ಹೇಳಿಕೆ
- ಉಕ್ರೇನ್‌ನ ದೂರಸಂಪರ್ಕ ಕಂಪನಿ 'ಉಕ್ರ್‌ಟೆಲಿಕಾಂ' ಮೇಲೆ ಸೈಬರ್ ದಾಳಿ ನಡೆದಿದೆ. ಶೇ 70ರಷ್ಟು ಬಳಕೆದಾರರಿಗೆ ತೊಂದರೆಯಾಗಿದೆ. ಸೇವೆ ಮರುಸ್ಥಾಪನೆ ನಡೆಯುತ್ತಿದೆ– ಉಕ್ರೇನ್‌ನ ಸಂವಹನ ಮತ್ತು ಮಾಹಿತಿ ರಕ್ಷಣೆ ವಿಶೇಷ ಸೇವೆಗಳ ಅಧ್ಯಕ್ಷ ಯೂರಿ ಶಿಹೋಲ್
- 100ಕ್ಕೂ ಹೆಚ್ಚು ನೆಲ ಬಾಂಬ್‌ಗಳನ್ನು ಪತ್ತೆ ಹಚ್ಚಿ ನಿಷ್ಕ್ರಿಯಗೊಳಿಸಲಾಗಿದೆ –ಉಕ್ರೇನ್ ಗೃಹ ಸಚಿವಾಲಯ
- ಮಾನವೀಯತೆಯ ದೃಷ್ಟಿಯಿಂದ ಉಕ್ರೇನ್ ಮತ್ತು ರಷ್ಯಾ ನಡುವೆ ಕದನ ವಿರಾಮ ಘೋಷಿಸಬೇಕು– ವಿಶ್ವಸಂಸ್ಥೆ ಒತ್ತಾಯ
- ಮಂಗಳವಾರ ಒಂದೇ ದಿನದಲ್ಲಿ ರಷ್ಯಾ ಪಡೆಗಳ 8 ಯುದ್ಧ ವಿಮಾನ, 4 ಮಾನವ ರಹಿತ ಡ್ರೋನ್, 3 ಹೆಲಿಕಾಪ್ಟರ್ ಮತ್ತು ಎರಡು ಕ್ಷಿಪಣಿಗಳನ್ನು ಹೊಡೆದುರುಳಿಸಲಾಗಿದೆ ಎಂದು ಉಕ್ರೇನ್ ಸಶಸ್ತ್ರ ಪಡೆ ಹೇಳಿದೆ
- ಮೆಲಿಟೊಪೊಲ್ ಸಿಟಿ ಕೌನ್ಸಿಲ್ ಶಿಕ್ಷಣ ವಿಭಾಗದ ಮುಖ್ಯಸ್ಥರಾದ ಇರಿನಾ ಶೆರ್ಬಾಕ್ ಅವರನ್ನು ರಷ್ಯಾ ಪಡೆಗಳು ಅಪಹರಿಸಿವೆ– ಮೆಲಿಟೊಪೊಲ್ ನಗರದ ಮೇಯರ್ ಇವಾನ್ ಫೆಡೊರೊವ್ ಹೇಳಿಕೆ

ಶ್ರೀಲಂಕಾ: ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆ ಸ್ಥಗಿತ

ಕೊಲಂಬೊ (ಪಿಟಿಐ): ಶ್ರೀಲಂಕಾದಲ್ಲಿನ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ವೈದ್ಯಕೀಯ ಸೌಲಭ್ಯಗಳ ಕೊರತೆ ಉಂಟಾಗಿದ್ದು ಆಸ್ಪತ್ರೆಗಳು ಸೇವೆಯನ್ನು ಸ್ಥಗಿತಗೊಳಿಸಿವೆ. ಆಸ್ಪತ್ರೆಗಳಿಗೆ ನೆರವು ನೀಡುವಂತೆ ಇಲ್ಲಿನ ಭಾರತದ ಹೈ ಕಮಿಷನರ್‌ಗೆ ವಿದೇಶಾಂಗ ಸಚಿವ ಎಸ್.ಜೈಶಂಕರ್ ಮಂಗಳವಾರ ಸೂಚಿಸಿದ್ದಾರೆ.

ಔಷಧ ಕೊರತೆಯಿಂದಾಗಿ ಎಲ್ಲಾ ಸಾಮಾನ್ಯ ಶಸ್ತ್ರಚಿಕಿತ್ಸೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವುದಾಗಿ ಕ್ಯಾಂಡಿಯ ಕೇಂದ್ರ ಜಿಲ್ಲೆಯ ಪೆರಾಡೆನಿಯಾ ಆಸ್ಪತ್ರೆಯ ನಿರ್ದೇಶಕರು ಸೋಮವಾರ ಪ್ರಕಟಿಸಿದ್ದರು.

ದ್ವೀಪ ರಾಷ್ಟ್ರಕ್ಕೆ ಭಾರತ ಯಾವ ರೀತಿಯ ಆರೋಗ್ಯ ಸೌಲಭ್ಯದ ಕ್ರಮಗಳನ್ನು ಕೈಗೊಳ್ಳಬಹುದು ಎಂಬ ಬಗ್ಗೆ ಚರ್ಚೆ ನಡೆಸುವಂತೆ ಜೈಶಂಕರ್ ಅವರು ಕೊಲಂಬೊದಲ್ಲಿನ ಭಾರತದ ಹೈ ಕಮಿಷನರ್ ಗೋಪಾಲ್ ಬಾಗ್ಲೆ ಅವರಿಗೆ ತಿಳಿಸಿದ್ದಾರೆ.

'ಆರೋಗ್ಯ ಸೇವೆಯ ವ್ಯತ್ಯಯದ ಸುದ್ದಿ ನೋಡಿ ಬೇಸರವಾಗಿದೆ. ಅಲ್ಲಿಯ ಅಧಿಕಾರಿಗಳನ್ನು ಸಂಪರ್ಕಿಸಿ ಭಾರತದ ನೆರವು ನೀಡುವ ಬಗ್ಗೆ ಚರ್ಚೆ ನಡೆಸುವಂತೆ ಹೈ ಕಮಿಷನರ್ ಬಾಗ್ಲೆ ಅವರಿಗೆ ಸೂಚಿಸಿದ್ದೇನೆ' ಎಂದು ಜೈಶಂಕರ್ ಮಂಗಳವಾರ ಟ್ವೀಟ್ ಮಾಡಿದ್ದಾರೆ.

ಇಮ್ರಾನ್ ವಿರುದ್ಧ ಅವಿಶ್ವಾಸ ನಿರ್ಣಯ ಮತದಾನ ಏ. 3ಕ್ಕೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ವಿರುದ್ಧದ ಅವಿಶ್ವಾಸ ನಿರ್ಣಯದ ಮೇಲಿನ ಮತದಾನ ಏ. 3 ರಂದು ನಡೆಯಲಿದೆ ಎಂದು ಆಂತರಿಕ ಸಚಿವ ಶೇಖ್ ರಶೀದ್ ಮಂಗಳವಾರ ತಿಳಿಸಿದರು.


ಪ್ರಸ್ತುತ ರಾಜಕೀಯ ಪರಿಸ್ಥಿತಿ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಮಾರ್ಚ್ 31ರ ಕಲಾಪದಲ್ಲಿ ಅವಿಶ್ವಾಸ ನಿರ್ಣಯ ಬಗ್ಗೆ ಚರ್ಚೆ ನಡೆಯಲಿದೆ. ಬಳಿಕ ಏಪ್ರಿಲ್ 3ರಂದು ಮತದಾನ ನಡೆಯಲಿದೆ. ಇದರಲ್ಲಿ ಇಮ್ರಾನ್ ಜಯ ಗಳಿಸಲಿದ್ದಾರೆ ಎಂಬ ವಿಶ್ವಾಸ ಇದೆ.

ಖಾನ್ ನೇತೃತ್ವದ ಸರ್ಕಾರವನ್ನು ಮುಸ್ಲಿಂ ಲೀಗ್ ಕ್ವೈಡ್ ಸೇರಿದಂತೆ ಮಿತ್ರ ಪಕ್ಷಗಳು ಬೆಂಬಲಿಸಲಿವೆ ಎಂದರು.

ಕೋವಿಡ್: ಹೊಸ ಪ್ರಕರಣಗಳ ಸಂಖ್ಯೆ ಇಳಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ಮಂಗಳವಾರ ಕೋವಿಡ್ ಪ್ರಕರಣಗಳ ಸಂಖ್ಯೆ ಕೊಂಚ ಕಡಿಮೆಯಾಗಿದ್ದು ಹೊಸದಾಗಿ 1,259 ಮಂದಿಯಲ್ಲಿ ಕೊರೊನಾ ಸೋಂಕು ಇರುವುದು ಪತ್ತೆಯಾಗಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 15,378ಕ್ಕೆ ಇಳಿಕೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

35 ಮಂದಿ ಸಾವನ್ನಪ್ಪಿದ್ದು, ಒಟ್ಟು ಸಾವಿನ ಸಂಖ್ಯೆ 5,21,070ಕ್ಕೆ ಏರಿಕೆಯಾಗಿದೆ. ದೇಶದಲ್ಲಿ ಕೋವಿಡ್ ಚೇತರಿಕೆ ಪ್ರಮಾಣ ಶೇ 98.75ರಷ್ಟು ಇದೆ.



ಕಳೆದ 24 ಗಂಟೆಗಳಲ್ಲಿ ಒಟ್ಟು 5,77,559 ಮಂದಿಯನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ಇದುವರೆಗೆ ಭಾರತದಲ್ಲಿ ಒಟ್ಟು 78.79 ಕೋಟಿ ಪರೀಕ್ಷೆಗಳನ್ನು ನಡೆಸಲಾಗಿದೆ. ಅಲ್ಲದೆ 183.53 ಕೋಟಿ ಡೋಸ್ ಲಸಿಕೆ ನೀಡಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಶಾಂಘೈನಲ್ಲಿ ಕೋವಿಡ್ ನಿರ್ಬಂಧಗಳು ಬಿಗಿ

ಶಾಂಘೈ (ರಾಯಿಟರ್ಸ್/ಎಎಫ್‌ಪಿ): ಹೆಚ್ಚು ಜನಸಂಖ್ಯೆಯಿರುವ ಚೀನಾದ ಶಾಂಘೈ ನಗರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗಿದ್ದು ಮೊದಲ ಹಂತದ ಕೋವಿಡ್ ಲಾಕ್‌ಡೌನ್ ಕ್ರಮಗಳನ್ನು ಬಿಗಿಗೊಳಿಸಲಾಗಿದೆ. ನಿವಾಸಿಗಳಿಗೆ 4 ದಿನಗಳ ಕಾಲ ಮನೆಯ ಹೊರಗೆ ಕಾಲಿಡದಂತೆ ಸೂಚಿಸಲಾಗಿದೆ.

ಅಮೆರಿಕ: ಶೇ 54.9ರಷ್ಟು ಬಿಎ.2 ತಳಿ ಪ್ರಕರಣ

ವಾಷಿಂಗ್ಟನ್: ಓಮೈಕ್ರಾನ್‌ನ ರೂಪಾಂತರಿ ತಳಿ ಬಿಎ.2ನ ಶೇ 54.9ರಷ್ಟು ಪ್ರಕರಣಗಳು ಅಮೆರಿಕದಲ್ಲಿ ಪ್ರಸರಣಗೊಂಡಿವೆ ಎಂದು ಅಲ್ಲಿನ ರೋಗ ನಿಯಂತ್ರಣ ಮತ್ತು ತಡೆಗಟ್ಟುವಿಕೆ ಕೇಂದ್ರ ಮಂಗಳವಾರ ತಿಳಿಸಿದೆ. ಏಷ್ಯಾ, ಯುರೋಪ್‌ನ ಕೆಲವೆಡೆ ಪ್ರಕರಣಗಳು ಹೆಚ್ಚುತ್ತಿರುವುದು ಅಮೆರಿಕದಲ್ಲೂ ಇನ್ನೊಂದು ಅಲೆ ಉಂಟಾಗಬಹುದೆಂಬ ಕಳವಳಕ್ಕೆ ಕಾರಣವಾಗಿದೆ.

ಸಹನಟನ ಕೆನ್ನೆಗೆ ಹೊಡೆದಿದ್ದ ವಿಲ್ ಸ್ಮಿತ್ ಕ್ಷಮೆಯಾಚನೆ

ವಾಷಿಂಗ್ಟನ್ (ಪಿಟಿಐ) : ಪ್ರಸಕ್ತ ಸಾಲಿನ 'ಅತ್ಯುತ್ತಮ ನಟ' ಆಸ್ಕರ್ ಪ್ರಶಸ್ತಿ ವಿಜೇತ ವಿಲ್ ಸ್ಮಿತ್ ಅವರು, ಹಾಸ್ಯನಟ ಕ್ರಿಸ್ ರಾಕ್ ಅವರಲ್ಲಿ ಕ್ಷಮೆ ಕೇಳಿದ್ದಾರೆ. ಸ್ಮಿತ್ ಅವರು ಪ್ರಶಸ್ತಿ ಪ್ರದಾನ ಸಮಾರಂಭದ ವೇಳೆ ರಾಕ್ ಕೆನ್ನೆಗೆ ಬಾರಿಸಿದ್ದರು.

ಈ ಬಗ್ಗೆ ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಬರೆದುಕೊಂಡಿರುವ ಅವರು, 'ಕ್ರಿಸ್, ನಾನು ನಿಮ್ಮಲ್ಲಿ ಸಾರ್ವಜನಿಕವಾಗಿ ಕ್ಷಮೆ ಕೇಳಲು ಬಯಸುತ್ತಿದ್ದೇನೆ. ನನಗೆ ಮುಜುಗರವಾಗಿದೆ. ಅಕಾಡೆಮಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿನ ನನ್ನ ವರ್ತನೆಯು ಒಪ್ಪುವಂತಹದಲ್ಲ ಮತ್ತು ಕ್ಷಮೆಗೂ ಅರ್ಹವಲ್ಲ. ನನ್ನ ವಿಚಾರದಲ್ಲಿ ಹಾಸ್ಯ ಮಾಡಿದ್ದರೆ, ಕೆಲಸದ ಒಂದು ಭಾಗವಾಗಿರುತ್ತಿತ್ತು. ಆದರೆ, ಜೇಡ (ಜೇಡ ಪಿಂಕೆಟ್, ಸ್ಮಿತ್ ಅವರ ಪತ್ನಿ) ಅವರ ಆರೋಗ್ಯ ಸ್ಥಿತಿ ಬಗ್ಗೆ ತಮಾಷೆ ಮಾಡಿದ್ದು ಅತಿ ಎನಿಸಿತು. ತಡೆದುಕೊಳ್ಳಲಾಗದೆ, ಭಾವುಕವಾಗಿ ಪ್ರತಿಕ್ರಿಯಿಸಿಬಿಟ್ಟೆ' ಎಂದೂ ವಿವರಿಸಿದ್ದಾರೆ. ಅಲ್ಲದೇ, ಅಕಾಡೆಮಿಗೂ ಸ್ಮಿತ್ ಕ್ಷಮೆಯಾಚಿಸಿದ್ದಾರೆ.


ತೈಲ ಬೆಲೆ ಹೆಚ್ಚಳ ಮುಂದುವರಿಕೆ

ನವದೆಹಲಿ (ಪಿಟಿಐ): ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಮಂಗಳ ವಾರ ಹೆಚ್ಚಿಸಲಾಗಿದೆ. ಲೀಟರ್ ಪೆಟ್ರೋಲ್ ದರ 80 ಪೈಸೆಯಷ್ಟು, ಡೀಸೆಲ್ ದರವನ್ನು 70 ಪೈಸೆ ಏರಿಸಲಾಗಿದೆ.

ಬೆಂಗಳೂರಿನಲ್ಲಿ ಪೆಟ್ರೋಲ್ ದರವು ₹ 105.60ಕ್ಕೆ, ಡೀಸೆಲ್ ದರವು 89.68ಕ್ಕೆ ತಲುಪಿದೆ. ಸ್ಥಳೀಯ ಮಾರಾಟ ತೆರಿಗೆಗಳು ಮತ್ತು ಸಾಗಣೆ ವೆಚ್ಚದಲ್ಲಿನ ವ್ಯತ್ಯಾಸದ ಕಾರಣದಿಂದಾಗಿ ರಾಜ್ಯದಿಂದ ರಾಜ್ಯಕ್ಕೆ ಹಾಗೂ ಪ್ರದೇಶದಿಂದ ಪ್ರದೇಶಕ್ಕೆ ಪೆಟ್ರೋಲ್, ಡೀಸೆಲ್ ಬೆಲೆಯಲ್ಲಿ ಏಕರೂಪತೆ ಇರುವುದಿಲ್ಲ.

ಐದು ರಾಜ್ಯಗಳ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ತೈಲದರದಲ್ಲಿ ಸ್ಥಿರತೆ ಕಾಯ್ದುಕೊಂಡಿದ್ದ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಮಾರ್ಚ್ 22ರಿಂದ ದರ ಪರಿಷ್ಕರಣೆಯನ್ನು ಆರಂಭಿಸಿವೆ. ಅದಾದ ನಂತರದಲ್ಲಿ ಬೆಂಗಳೂರಿನಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 5.02ರಷ್ಟು, ಡೀಸೆಲ್ ದರ ₹ 4.67ರಷ್ಟು ಹೆಚ್ಚಳ ಆಗಿದೆ. ಮಾರ್ಚ್ 22ರ ನಂತರ ತೈಲ ದರವನ್ನು 7 ಬಾರಿ ಹೆಚ್ಚಿಸಿದಂತಾಗಿದೆ. ಚುನಾವಣೆ ಸಮಯದಲ್ಲಿ ದರ ಪರಿಷ್ಕರಣೆ ಮಾಡದೆ ಇದ್ದ ಕಾರಣ, ಸರ್ಕಾರಿಸ್ವಾಮ್ಯದ ತೈಲಮಾರಾಟ ಕಂಪ ನಿಗಳು ಒಟ್ಟು ₹ 19,000 ಕೋಟಿ ನಷ್ಟ ಅನುಭವಿಸಿವೆ ಎಂದು ಮೂಡಿಸ್ ಇನ್ವೆಸ್ಟರ್ಸ್ ಸರ್ವಿಸಸ್ ಅಂದಾಜು ಮಾಡಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17222
ಇಂದಿನ ಅಂತ್ಯ	17325
▲	103
ದಿನದ ಗರಿಷ್ಠ	17343

ವಿನಿಮಯ ದರ

$ ಡಾಲರ್	75.73
£ ಪೌಂಡ್	99.45
€ ಯುರೊ	83.92
¥ ಯೆನ್ (100ಕ್ಕೆ)	61.81

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹410
12 ಮೊಟ್ಟೆಗೆ	₹56
ಮೈಸೂರು	
100 ಮೊಟ್ಟೆಗೆ	₹412

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1610 (1590)
ಸೋಯಾ (ರಿಫೈನ್ಡ್)	₹1575 (1487)
ಸೂರ್ಯಕಾಂತಿ (ರಿಫೈನ್ಡ್)	₹1725 (1750)
ಪಾಮೋಲಿನ್	₹1450 (1460)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹18000-20000
2ನೇ ದರ್ಜೆ	₹10000-16000

ಕೊಬ್ಬರಿ ಧಾರಣೆ

ಪುತ್ತೂರು (ಇತರೆ	₹4500-10000
ತುರುವೇಕೆರೆ	₹16450-16450

ಇನ್ನೂ ಐದು ವರ್ಷ ಹೊರಬೇಕಿದೆ ತೈಲ ಬಾಂಡ್ ಹೊರೆ: ನಿರ್ಮಲಾ ಹೇಳಿಕೆ

137 ದಿನಗಳ ಬೆಲೆ ಸ್ಥಿರತೆಗೆ ಸಮರ್ಥನೆ

ನವದೆಹಲಿ (ಪಿಟಿಐ): ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು 137 ದಿನಗಳವರೆಗೆ ಪರಿಷ್ಕರಿಸದೆ ಇದ್ದ ಕ್ರಮವನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸಮರ್ಥಿಸಿಕೊಂಡಿದ್ದಾರೆ. ಪೂರೈಕೆ ವ್ಯವಸ್ಥೆಯಲ್ಲಿ ಅಡಚಣೆ ಹಾಗೂ ಕಚ್ಚಾ ತೈಲ ಬೆಲೆ ಏರಿಕೆ ಆಗಿರುವುದು 'ಎರಡು ವಾರಗಳ' ಬೆಳವಣಿಗೆ ಎಂದು ಅವರು ಹೇಳಿದ್ದಾರೆ.

ರಷ್ಯಾ ದೇಶವು ಫೆ.24ರಂದು ಉಕ್ರೇನ್ ಮೇಲೆ ಆಕ್ರಮಣ ಆರಂಭಿಸಿತು. ಇದಕ್ಕೂ ಕೆಲವು ದಿನಗಳ ಮೊದಲು ಕಚ್ಚಾ ತೈಲ ಬೆಲೆ ಏರಿಕೆ ಆರಂಭವಾಯಿತು. ಭಾರತ ಖರೀದಿಸುವ ಕಚ್ಚಾ ತೈಲದ ಬೆಲೆಯು ಫೆ.24ರಂದು ಬ್ಯಾರೆಲ್‌ಗೆ 100.71 ಡಾಲರ್ ಇತ್ತು. ಇದು 2021ರ ನವೆಂಬರ್‌ನಲ್ಲಿ 82 ಡಾಲರ್ ಆಗಿತ್ತು.

ಮಾರ್ಚ್ 9ರಂದು ಕಚ್ಚಾ ತೈಲ ಬೆಲೆಯು 128 ಡಾಲರ್ ಆಗಿತ್ತು. ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಮಾರ್ಚ್ 22ರಿಂದ ದರ ಪರಿಷ್ಕರಣೆಯನ್ನು ಮತ್ತೆ ಆರಂಭಿಸಿವೆ. ರಾಜ್ಯಸಭೆಯಲ್ಲಿ ಮಂಗಳವಾರ ನಡೆದ ಬಜೆಟ್ ಮೇಲಿನ ಚರ್ಚೆಗೆ ಉತ್ತರಿಸಿದ ನಿರ್ಮಲಾ, 'ಕಚ್ಚಾ ತೈಲ ಪೂರೈಕೆಯಲ್ಲಿ ವ್ಯತ್ಯಯ ಹಾಗೂ ಬೆಲೆ ಏರಿಕೆಯು ಎರಡು ವಾರಗಳಿಂದ ಆಗುತ್ತಿದೆ' ಎಂದು ಹೇಳಿದರು.

ನಿರ್ಮಲಾ ಸೀತಾರಾಮನ್

ಮಾರ್ಚ್ 22ರ ನಂತರದ 8 ದಿನಗಳಲ್ಲಿ ಆಗಿರುವ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯು ದಾಖಲೆಯ ಮಟ್ಟದ್ದು. 'ಕಚ್ಚಾತೈಲ ಬೆಲೆ ಏರಿಕೆಗೆ ಪ್ರತಿಯಾಗಿ ಕೇಂದ್ರವು ಹಲವು ಕ್ರಮಗಳನ್ನು ಕೈಗೊಳ್ಳುತ್ತಿದೆ' ಎಂದರು.

ಯುಪಿಎ ಸರ್ಕಾರದ ಅವಧಿಯಲ್ಲಿ ತೈಲ ಬಾಂಡ್ ಹೊರಡಿಸಿದ್ದ ಕ್ರಮವನ್ನು ಟೀಕಿಸಿದರು. 'ಒಂದು ದಶಕಕ್ಕೂ ಹಿಂದೆ ತೈಲೋತ್ಪನ್ನಗಳ ಗ್ರಾಹಕರಿಗೆ ನೀಡಿದ್ದ ಸಬ್ಸಿಡಿಗೆ ಇಂದಿನ ತೆರಿಗೆ ಪಾವತಿದಾರರು ಬೆಲೆ ತೆರುತ್ತಿದ್ದಾರೆ. ಇನ್ನೂ ಐದು ವರ್ಷಗಳವರೆಗೆ ಅವರು ಬೆಲೆ ತೆರುವುದು ಮುಂದುವರಿಯಲಿದೆ. ಏಕೆಂದರೆ, ಬಾಂಡ್‌ಗಳ ನಗದೀಕರಣವು 2026ರ ವರೆಗೆ ಚಾಲ್ತಿಯಲ್ಲಿ ಇರಲಿದೆ' ಎಂದರು. ನಗದೀಕರಣ ಆಗಲಿರುವ ಮೊತ್ತವು ₹ 2 ಲಕ್ಷ ಕೋಟಿ ಎಂದು ತಿಳಿಸಿದರು.

ತೈಲ ಬಾಂಡ್‌ಗಳನ್ನು ಮೊದಲಿಗೆ ಹೊರಡಿಸಿದ್ದು ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರ ಎಂದು ವಿರೋಧ ಪಕ್ಷಗಳು ಮಾಡಿದ ಆರೋಪಕ್ಕೆ ಪ್ರತಿಯಾಗಿ ನಿರ್ಮಲಾ ಅವರು, 'ವಾಜಪೇಯಿ ನೇತೃತ್ವದ ಸರ್ಕಾರವು ₹ 9 ಸಾವಿರ ಕೋಟಿ ಮೌಲ್ಯದ ಬಾಂಡ್ ವಿತರಿಸಿತ್ತು. ಆದರೆ ಯುಪಿಎ ಸರ್ಕಾರವು ₹ 2 ಲಕ್ಷ ಕೋಟಿ ಮೌಲ್ಯದ ಬಾಂಡ್ ವಿತರಣೆ ಮಾಡಿದೆ' ಎಂದು ಉತ್ತರಿಸಿದರು.

ವಾಜಪೇಯಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಒಂದು ಬಾರಿ ಮಾತ್ರ ಬಾಂಡ್ ನೀಡಲಾಯಿತು. ಯುಪಿಎ ಅವಧಿಯಲ್ಲಿ ನಿರಂತರವಾಗಿ ಬಾಂಡ್ ನೀಡಲಾಯಿತು ಎಂದು ನಿರ್ಮಲಾ ದೂರಿದರು. 'ಕಚ್ಚಾ ತೈಲ ಬೆಲೆ ದುಬಾರಿ ಆಗಿದ್ದಾಗ, ಅದಕ್ಕೆ ಹಣಕಾಸಿನ ನೆರವು ಒದಗಿಸಲು ಪ್ರಾಮಾಣಿಕ ಮಾರ್ಗ ಇದೆ. ನೆರವು ಒದಗಿಸುವ ಹೊಣೆಯನ್ನು ಇನ್ನೊಬ್ಬರ ಮೇಲೆ ಹೊರಿಸುವ, ಇನ್ನೊಂದು ಸರ್ಕಾರ ಅದಕ್ಕಾಗಿ ಹಣ ಪಾವತಿಸಬೇಕಾದ ಸಂದರ್ಭ ಸೃಷ್ಟಿಸುವ ಕೆಲಸವನ್ನು ನಾವು ಮಾಡಿಲ್ಲ' ಎಂದು ಅವರು ಹೇಳಿದರು.

'ಎಫ್‌ಡಿಐ ಪ್ರಮಾಣ ಏರಿಕೆ'

ನವದೆಹಲಿ (ಪಿಟಿಐ): ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ವಿದೇಶಿ ನೇರ ಹೂಡಿಕೆ ಪ್ರಮಾಣವು ಯುಪಿಎ ಆಡಳಿತ ಅವಧಿಯಲ್ಲಿ (10 ವರ್ಷ) ಬಂದ ಎಫ್‌ಡಿಐ ಪ್ರಮಾಣಕ್ಕಿಂತ ಶೇಕಡ 65ರಷ್ಟು ಜಾಸ್ತಿ ಎಂದು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

ಸ್ಯಾಮ್‌ಸಂಗ್: ಐದು ಸ್ಮಾರ್ಟ್‌ಫೋನ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಯಾಮ್‌ಸಂಗ್ ಕಂಪನಿಯು ದೇಶದ ಮಾರುಕಟ್ಟೆಗೆ ಎ ಸರಣಿಯಲ್ಲಿ ಗ್ಯಾಲಕ್ಸಿ ಎ13, ಎ23, ಎ33, ಎ53, ಎ73 ಎಂಬ ಐದು ಹೊಸ ಸ್ಮಾರ್ಟ್ ಫೋನ್‌ಗಳನ್ನು ಬಿಡುಗಡೆ ಮಾಡಿದೆ.

ಗ್ಯಾಲಕ್ಸಿ ಎ73 5ಜಿ ಫೋನ್‌ನಲ್ಲಿ ಫ್ಲಾಗ್‌ಶಿಪ್ ಮಟ್ಟದ 108ಎಂಪಿ ಕ್ಯಾಮರಾ ಆಪ್ಟಿಕಲ್ ಇಮೇಜ್ ಸ್ಟೆಬಿಲೈಸೇಷನ್ (ಒಐಎಸ್), ನೀರು ಮತ್ತು ಧೂಳಿನಿಂದ ರಕ್ಷಣೆಗೆ ಐಪಿ67 ರೇಟಿಂಗ್, ಸ್ನ್ಯಾಪ್ ಡ್ರ್ಯಾಗನ್ 778ಜಿ 5ಜಿ ಪ್ರೊಸೆಸರ್ ಮತ್ತು ಸೂಪರ್ ಅಮೋಎಲ್‌ಇಡಿ +ಪರದೆಯು 120 ಹರ್ಟ್ಸ್ ರಿಫ್ರೆಶ್ ರೇಟ್ ಹೊಂದಿದೆ. ಆರ್‌ಎಎಂ ಅನ್ನು 16 ಜಿಬಿವರೆಗೆ ವಿಸ್ತರಿಸಲು ಅವಕಾಶ ಇದೆ. 8ಜಿಬಿ + 128ಜಿಬಿ ಮತ್ತು 8ಜಿಬಿ + 256ಜಿಬಿಯನ್ನು 1 ಟಿಬಿವರೆಗೆ ವಿಸ್ತರಿಸಬಲ್ಲ ಸ್ಟೋರೇಜ್‌ನೊಂದಿಗೆ ಲಭ್ಯವಿದೆ.



ಗ್ಯಾಲಕ್ಸಿ ಎ73 5ಜಿ ಈ ವರ್ಗದ ಅತ್ಯುತ್ತಮ 108ಎಂಪಿ ಒಐಎಸ್ ಕ್ಯಾಮರಾ, ಆಬ್ಜೆಕ್ಟ್ ಎರೇಸರ್ ಮತ್ತು ಎಐ ಫೋಟೊ ರಿ-ಮಾಸ್ಟರ್ ತರಹದ ವೈಶಿಷ್ಟ್ಯಗಳು, ಫ್ಲೂಯಿಡ್ 120 ಹರ್ಟ್ಸ್ ಸೂಪರ್ ಅಮೋಎಲ್‌ಇಡಿ + ಪರದೆ ಹೊಂದಿದೆ. ಆ್ಯಂಡ್ರಾಯ್ಡ್ 12 ಒಎಸ್ ಇದ್ದು, 4 ವರ್ಷಗಳವರೆಗೆ ಸಾಫ್ಟ್‌ವೇರ್ ಅಪ್ಡೇಟ್ ಮತ್ತು 5 ವರ್ಷಗಳ ಸೆಕ್ಯುರಿಟಿ ಅಪ್ಡೇಟ್ ಸಿಗಲಿದೆ ಎಂದು ಸ್ಯಾಮ್‌ಸಂಗ್ ಇಂಡಿಯಾದ ಹಿರಿಯ ನಿರ್ದೇಶಕ ಆದಿತ್ಯ ಬಬ್ಬರ್ ಅವರು ಕಾರ್ಯಕ್ರಮದಲ್ಲಿ ಮಾಹಿತಿ ನೀಡಿದರು.

ಎ73 ಫೋನ್ ಅನ್ನು ಕಂಪನಿಯ ಜಾಲತಾಣದಲ್ಲಿ ಮತ್ತು ರಿಟೇಲ್ ಮಳಿಗೆಗಳಲ್ಲಿ ಶೀಘ್ರವೇ ಬುಕ್ ಮಾಡಲು ಅವಕಾಶ ನೀಡುವುದಾಗಿ ಕಂಪನಿ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	490

ಅಡಿಕೆ

ಬಂಟ್ವಾಳ

ಕೋಕ	12500-25000
ಹೊಸತು	27500-45000

ಪುತ್ತೂರು

ಕೋಕ	11000-26000
ಹೊಸತು	27500-45000

ಚನ್ನಗಿರಿ

ರಾಶಿ	44069-47319

ಚಿತ್ರದುರ್ಗ

ಆಪಿ	46619-47029
ಬೆಟ್ಟೆ	36649-37099
ಕೆಂಪುಗೋಟು	30509-30910
ರಾಶಿ	46139-46569

ಮಂಗಳೂರು

ಕೋಕ	24000-48040

ಪುತ್ತೂರು

ಕೋಕ	11000-26000
ಹೊಸತು	27500-45000

ಶಿವಮೊಗ್ಗ ಎಪಿಎಂಸಿ

ರಾಶಿ	43009-46000
ಸರಕು	72500-72500
ಗೊರಬಲು	17109-33399

ಸಿದ್ದಾಪುರ

ಬಿಳಿಗೋಟು	24689-32229
ಕೋಕ	21911-31299
ಚಾಲಿ	46089-46089
ಹೊಸಚಾಲಿ	36899-40548
ಕೆಂಪುಗೋಟು	29699-31889
ರಾಶಿ	43509-47299
ತಟ್ಟಿಬೆಟ್ಟೆ	37489-46899

ಶಿರಸಿ

ಬೆಟ್ಟೆ	24099-45618
ಬಿಳಿಗೋಟು	12119-38611
ಚಾಲಿ	29799-40608
ರಾಶಿ	39229-48018

ತುಮಕೂರು

ರಾಶಿ	45100-46950

ಯಲ್ಲಾಪುರ

ಆಪಿ	54100-56000
ಬಿಳಿಗೋಟು	26899-32699
ಚಾಲಿ	36531-40660
ಕೋಕ	18690-30666
ಕೆಂಪುಗೋಟು	30399-35969
ರಾಶಿ	47669-53799
ತಟ್ಟಿಬೆಟ್ಟೆ	38509-45890

ರೇಷ್ಮೆ ಗೂಡು ಮಾರುಕಟ್ಟೆ

ರಾಮನಗರ ರೇಷ್ಮೆ ಧಾರಣೆ

ಮಿಶ್ರತಳಿ	210-525
ದ್ವಿತಳಿ	222-899

ಎನ್.ಆರ್.ಪುರ ರಬ್ಬರ್ ಧಾರಣೆ

ಆರ್‌ಎಸ್‌ಎಸ್4	170.50
ಆರ್‌ಎಸ್‌ಎಸ್5	165
ಗುಡ್ ಲಾಟ್	161

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15600	15400	15200	214.55 ಸೆಂಟ್ಸ್
ಎಸಿ	8120	7900	8000	
ಆರ್‌ಪಿ	8900	8900	9000	
ಆರ್‌ಸಿ	4160	3950	4000	2140ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

29-3-2022

ಜಾವಾ 70/80(ಹೊಸ)	10650-10700
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	10600-10650
ದಪ್ಪ ಗುಜರಾತ್(ಹೊಸ)	9600-9650

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620 (1600)
ಒಂದು ವಾರದ ಡೆಲಿವರಿ	1615 (1595)
ಸೋಯಾ ಕಚ್ಚಾ	1457 (1455)
ಪಾಮ್ ವಾರದ ಡೆಲಿವರಿ	1448(1458)
ಸೂರ್ಯಕಾಂತಿ ಎಣ್ಣೆ ಕಚ್ಚಾ	1700

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
51,000 (51,500)
ಬೆಳ್ಳಿ ಕೆ.ಜಿ 66,900 (67,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ರಮೇಶ್, ಹೊಸನಗರ

- **ಪ್ರಶ್ನೆ: ಈಚಿನ ದಿನಗಳಲ್ಲಿ ಕೆಲವು ಮೊಬೈಲ್ ಆ್ಯಪ್‌ಗಳಲ್ಲಿ 'ಬೈ ನೌ ಪೇ ಲೇಟರ್' ಎಂಬ ಕೊಡುಗೆಗಳು ಬರುತ್ತಿವೆ. ಇವು ಎಷ್ಟರಮಟ್ಟಿಗೆ ಪ್ರಯೋಜನಕಾರಿ? ಇವುಗಳಿಗೂ ಕ್ರೆಡಿಟ್ ಕಾರ್ಡ್ ಇಎಂಐ ಸೌಲಭ್ಯಕ್ಕೂ ವ್ಯತ್ಯಾಸವೇನು?**

ಉತ್ತರ: 'ಬೈ ನೌ ಪೇ ಲೇಟರ್'ನಂತಹ ಸಾಲ ಸೌಲಭ್ಯಗಳು ಇತ್ತೀಚೆಗೆ ಹಲವೆಡೆ ದೊರೆಯುತ್ತಿವೆ. ಇವು ಕ್ರೆಡಿಟ್ ಕಾರ್ಡ್‌ಗಳಂತೆ ಕಂಡರೂ ತುಸು ಭಿನ್ನ. ಕೆಡಿಟ್ ಕಾರ್ಡ್ ಕಂಪನಿಗಳು ಎಲ್ಲ ವರ್ಗಗಳ ಜನರಿಗೆ ಸುಲಭದಲ್ಲಿ ಕಾರ್ಡ್ ವಿತರಿಸುವುದಿಲ್ಲ. ಒಂದಿಷ್ಟು ದಾಖಲೆಗಳನ್ನು ಪರಿಶೀಲಿಸಿ, ವ್ಯಕ್ತಿಯ ಆದಾಯ, ಪಾವತಿ ಸಾಮರ್ಥ್ಯ ಆಧರಿಸಿ ನೀಡಲಾಗುತ್ತದೆ. ಆದರೆ 'ಬೈ ನೌ ಪೇ ಲೇಟರ್' ವ್ಯವಸ್ಥೆಯ ಅಡಿ ಒಪ್ಪಂದ ಮಾಡಿಕೊಳ್ಳುವ ಕಂಪನಿಗಳು ಆರ್ಥಿಕ ನೆರವು ನೀಡುವ ಕಂಪನಿಗಳಿಂದ ಗ್ರಾಹಕರ ಪರವಾಗಿ ಕೂಡಲೇ ಹಣ ಪಡೆಯುತ್ತವೆ. ಇದರ ಅಡಿ ಗ್ರಾಹಕರಿಗೆ 15ರಿಂದ 45 ದಿನಗಳ ಅವಧಿಯೊಳಗೆ ಬಡ್ಡಿ ಹಾಗೂ ಶುಲ್ಕರಹಿತವಾಗಿ ಸಾಲ ಮರು ಪಾವತಿಸುವ ಅವಕಾಶವನ್ನು ಹೆಚ್ಚಿನ ಕಂಪನಿಗಳು ಕಲ್ಪಿಸಿಕೊಡುತ್ತವೆ. ಇದು ಇಂದಿನ ಫಿನ್‌ಟೆಕ್ ಕಂಪನಿಗಳ ಹೊಸ ವ್ಯವಹಾರ ಮಾದರಿ.

ಕ್ರೆಡಿಟ್ ಕಾರ್ಡ್ ವಿತರಿಸುವ ಸಂಸ್ಥೆಗಳು ಖಾತೆ ತೆರೆಯುವಾಗ ಶುಲ್ಕ ವಿಧಿಸುವ ಮತ್ತು ವಾರ್ಷಿಕ ಶುಲ್ಕ ಪಡೆಯುವ ಅವಕಾಶ ಹೊಂದಿವೆ. ಕ್ರೆಡಿಟ್ ಮಿತಿಯನ್ನು ಸಂಸ್ಥೆಯು ವ್ಯಕ್ತಿಯ ಆದಾಯ, ಸಾಲ ಚರಿತ್ರೆ ನೋಡಿ ನಿರ್ಧರಿಸುತ್ತದೆ. ಕ್ರೆಡಿಟ್ ಕಾರ್ಡ್ ಮೂಲಕ ಪಾವತಿಯು ಎಲ್ಲೆಡೆ ಮಾನ್ಯವಾಗುತ್ತದೆ. ಕ್ರೆಡಿಟ್ ಕಾರ್ಡ್ ಬಳಕೆದಾರರಿಗೆ ಕ್ಯಾಶ್‌ಬ್ಯಾಕ್, ರಿಯಾಯಿತಿಗಳು, ಖರೀದಿಗೆ ಅನುಗುಣವಾಗಿ ಅಂಕಗಳನ್ನು ಕೊಡಲಾಗುತ್ತದೆ. ಕ್ರೆಡಿಟ್ ಕಾರ್ಡ್ ಇಎಂಐ ಕನಿಷ್ಠ ಮೊತ್ತವನ್ನಷ್ಟೇ ಪಾವತಿಸುವ ಅವಕಾಶ ಕೊಡುತ್ತದೆ.

ಬೈ ನೌ ಪೇ ಲೇಟರ್ ವ್ಯವಸ್ಥೆಯಡಿ ಯಾವುದೇ ಶುಲ್ಕ ಇರುವುದಿಲ್ಲ. ಇಲ್ಲಿ ಕೆವೈಸಿ ಪ್ರಕ್ರಿಯೆ ಮೊಬೈಲ್ ಒಟಿಪಿ ಕೇಂದ್ರಿತ ಆಗಿರುವುದರಿಂದ ಒಟ್ಟು ಸಾಲದ ಮೊತ್ತವು ₹ 60 ಸಾವಿರದೊಳಗೆ ಇರಬೇಕೆಂಬುದು ಆರ್‌ಬಿಐ ನಿರ್ದೇಶನ. ಸಾಲ ಕೊಡುವ ಸಂಸ್ಥೆಗಳು ಒಂದಿಷ್ಟು ಲಾಭಾಂಶವನ್ನು 'ಬೈ ನೌ ಪೇ ಲೇಟರ್' ಉತ್ಪನ್ನವನ್ನು ಗ್ರಾಹಕರಿಗೆ ವಿತರಣೆ ಮಾಡುವ ಸಂಸ್ಥೆಗಳಿಂದಲೂ, ಅವಧಿ ಮೀರಿದ ಪಾವತಿಗೆ ಬಡ್ಡಿಯನ್ನು ಗ್ರಾಹಕರಿಂದಲೂ ಪಡೆದು ಲಾಭ ಮಾಡುತ್ತವೆ. 3 ತಿಂಗಳಿಂದ 12 ತಿಂಗಳವರೆಗೆ ಇಎಂಐ ಮೂಲಕ ಪಾವತಿಸುವ ಆಯ್ಕೆಯನ್ನು ಸಾಲಗಾರರಿಗೆ ನೀಡಲಾಗುತ್ತದೆ. ಮರುಪಾವತಿಯಲ್ಲಿ ವಿಳಂಬವಾದರೆ ಬಾಕಿ ಮೊತ್ತದ ಮೇಲೆ ಹೆಚ್ಚಿನ ಶುಲ್ಕ ವಿಧಿಸಬಹುದು, ವಿಳಂಬ ಪಾವತಿ ವಿವರವನ್ನು ಕ್ರೆಡಿಟ್ ಬ್ಯೂರೋಗೆ ವರದಿ ಮಾಡಲಾಗುತ್ತದೆ. ಇದು ಖರೀದಿದಾರನ ಕ್ರೆಡಿಟ್ ರೇಟಿಂಗ್ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು. ಮುಂದಿನ ಸಾಲಗಳ ಮೊತ್ತ ಮೊಟಕುಗೊಳ್ಳಬಹುದು.

ಬೈ ನೌ ಪೇ ಲೇಟರ್ ಸೌಲಭ್ಯವು ಕ್ರೆಡಿಟ್ ಕಾರ್ಡ್ ಇಲ್ಲದವರಿಗೆ ಉತ್ತಮವಾದರೂ, ಇಂತಹ ಸಾಲ ಸೌಲಭ್ಯ ಪಡೆಯುವ ಮೊದಲು ಆಯಾ ಸಂಸ್ಥೆಯ ನಿಯಮಗಳನ್ನು ಸರಿಯಾಗಿ ಪರಿಶೀಲಿಸಿ ಪಡೆಯುವುದು ಸೂಕ್ತ. ಸಾಲ ಪಡೆಯುವವರು ಕ್ರೆಡಿಟ್ ಮಿತಿಯನ್ನು ಜವಾಬ್ದಾರಿಯುತವಾಗಿ ಬಳಸಿದರೆ ಮತ್ತು ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡುವುದನ್ನು ಮುಂದುವರಿಸಿದರೆ ಭವಿಷ್ಯದ ಖರೀದಿಗಳಿಗೆ ಇದು ಉತ್ತಮ.

ಹೆಸರು ಬೇಡ, ಬೆಳಗಾವಿ

- **ಪ್ರಶ್ನೆ: ನನ್ನ ಪಿ.ಎಫ್. ಖಾತೆಯಲ್ಲಿ ₹ 10 ಲಕ್ಷ ಇದೆ. ಈಗ ಪಿ.ಎಫ್. ಬಡ್ಡಿ ದರ ತಗ್ಗಿಸಲಾಗಿದೆ. ಕೆಲವರು ಹೇಳುತ್ತಿದ್ದಾರೆ, ಪಿ.ಎಫ್. ಹಣವನ್ನು ಎನ್‌ಪಿಎಸ್‌ಗೆ ವರ್ಗಾವಣೆ ಮಾಡಿಕೊಳ್ಳಿ ಎಂದು. ಹೀಗೆ ಮಾಡಲು ಅವಕಾಶ ಇದೆಯೇ? ಎನ್‌ಪಿಎಸ್‌ನಲ್ಲಿ ಪಿಎಫ್‌ಗಿಂತ ಹೆಚ್ಚಿನ ಲಾಭ ಇದೆ ಎಂದು ಹೇಳಲಾಗುತ್ತಿದೆ. ಯಾವುದು ಸೂಕ್ತ? ನನಗೆ ನಿವೃತ್ತಿ ನಂತರ ಪಿಂಚಣಿ ಸೌಲಭ್ಯ ಇಲ್ಲ. ದಯವಿಟ್ಟು ಮಾರ್ಗದರ್ಶನ ಮಾಡಿ.**

ಉತ್ತರ: ಪಿ.ಎಫ್. ಮೊತ್ತವನ್ನು ಎನ್‌ಪಿಎಸ್ (ರಾಷ್ಟ್ರೀಯ ಪಿಂಚಣಿ ಯೋಜನೆ) ಖಾತೆಗೆ ನೇರ ವರ್ಗಾಯಿಸುವ ಅವಕಾಶ ಇದೆ. ಇದಕ್ಕೆ ನಿಮ್ಮ ಉದ್ಯೋಗದಾತರಿಗೆ ನೀವು ವರ್ಗಾವಣೆ ಫಾರ್ಮ್ ಸಲ್ಲಿಸಬೇಕು. ನಿಮ್ಮ ಕೋರಿಕೆಯ ಮೇರೆಗೆ ನಿಗದಿತ ಮೊತ್ತವನ್ನು ನೇರವಾಗಿ ಎನ್‌ಪಿಎಸ್ ಖಾತೆಗೆ ಜಮಾ ಮಾಡಲಾಗುತ್ತದೆ.

ಇದಕ್ಕೆ 'ಎನ್‌ಪಿಎಸ್ - ಟೈರ್ 1' ಖಾತೆಯನ್ನು ತೆರೆಯಬೇಕಾಗುತ್ತದೆ. ಇದು ಸಾರ್ವಜನಿಕ ಮತ್ತು ಖಾಸಗಿ ವಲಯದ ಉದ್ಯೋಗಿಗಳ ಪಿಂಚಣಿ ಅಗತ್ಯಗಳನ್ನು ಪೂರೈಸುವ ಖಾತೆ. ಪೂರ್ವ ಮಾಹಿತಿಯಂತೆ ಈ ಖಾತೆಯಲ್ಲಿ ಜಮಾ ಮಾಡಲಾಗುವ ಮೊತ್ತಕ್ಕೆ 5 ವರ್ಷಕ್ಕಿಂತ ಹೆಚ್ಚಿನ ಅವಧಿಯಲ್ಲಿ ಇಪಿಎಫ್ ಬಡ್ಡಿಗಿಂತ ಸರಾಸರಿ ಎರಡು-ಮೂರು ಶೇಕಡಾದಷ್ಟು ಹೆಚ್ಚುವರಿ ಆದಾಯ ಸಿಕ್ಕಿದೆ.

ಇಪಿಎಫ್‌ನಿಂದ ಎನ್‌ಪಿಎಸ್‌ಗೆ ವರ್ಗಾವಣೆಗೊಂಡ ಹಣವನ್ನು ತೆರಿಗೆಗೆ ಪರಿಗಣಿಸಲಾಗುವುದಿಲ್ಲ. ಎನ್‌ಪಿಎಸ್‌ಗೆ ವರ್ಗಾಯಿಸಲಾದ ಮೊತ್ತಕ್ಕೆ ನೀವು ಈ ಹಿಂದೆಯೇ ರಿಯಾಯಿತಿ ಪಡೆದಿರುವುದರಿಂದ ಹೆಚ್ಚುವರಿ ತೆರಿಗೆ ರಿಯಾಯಿತಿಯನ್ನು ಪಡೆಯಲು ಸಾಧ್ಯವಿಲ್ಲ. ಆದರೆ ಈ ವಿಭಾಗದ ಅಡಿಯಲ್ಲಿ, ನೀವು ಹೊಸದಾಗಿ ಹೂಡಿಕೆ ಮಾಡಿದಾಗ ತೆರಿಗೆ ವಿನಾಯಿತಿಯನ್ನು ಪಡೆಯಬಹುದು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಮೀರಟ್‌ನ ಆರ್ಚರಿಪಟು ನೀರಜ್ ಯಶೋಗಾಥೆ

ತರಕಾರಿ ಮಾರಾಟದಿಂದ ಏಷ್ಯನ್ ಗೇಮ್ಸ್‌ವರೆಗೆ

ಕೋಲ್ಕತ್ತ (ಪಿಟಿಐ): ಕಡುಕಷ್ಟದಲ್ಲೂ ಜೀವನದ ದೊಡ್ಡ ಕನಸನ್ನು ನನಸು ಮಾಡಿಕೊಂಡ ಆರ್ಚರಿಪಟುವೊಬ್ಬರ ಕಥೆಯಿದು. ಎರಡು ವರ್ಷಗಳ ಹಿಂದೆ ಕೋವಿಡ್ ಬಿಕ್ಕಟ್ಟು ಸೃಷ್ಟಿಸಿದಾಗ ಕಾಡಿದ ಆರ್ಥಿಕ ಸಂಕಷ್ಟವನ್ನು ನಿವಾರಿಸಲು ಬಿದಿಬದಿ ತರಕಾರಿ ಮಾರಾಟ ಮಾಡಿ ಬದುಕು ಸಾಗಿಸಿದ ಉತ್ತರ ಪ್ರದೇಶದ ನೀರಜ್ ಚೌಹಾಣ್ ಅವರೇ ಆ ಆರ್ಚರಿ ಕ್ರೀಡಾಪಟು. ಇದೀಗ ಅವರು ಏಷ್ಯನ್ ಕ್ರೀಡಾಕೂಟದಲ್ಲಿ ಭಾಗವಹಿಸುವ ಭಾರತ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ.

ಬೀದಿಗಳಲ್ಲಿ ಸಹೋದರರೊಂದಿಗೆ ತರಕಾರಿ ವ್ಯಾಪಾರ ಮಾಡಿದ ಮೀರಟ್‌ನ ನೀರಜ್ ಅವರು ಆರ್ಚರಿ ಕ್ರೀಡೆ ಕೈಬಿಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಆದರೆ ಛಲ ಕಳೆದುಕೊಳ್ಳದ ವ್ಯಕ್ತಿತ್ವ ಅವರನ್ನು ಯಶಸ್ಸು ಸಾಧಿಸುವಂತೆ ಮಾಡಿದೆ.

‘ತರಕಾರಿ ಮಾರುತ್ತ ಮಾರುತ್ತ ಆರ್ಚರಿಯಿಂದ ಬಹದೂರ ಸಾಗಿದ್ದೆ. ಆದರೆ ಕ್ರೀಡೆಗೆ ಮರಳಲು ಕೇಂದ್ರ ಕ್ರೀಡಾ ಸಚಿವಾಲಯ ನನ್ನ ನೆರವಿಗೆ ಧಾವಿಸಿತು‘ ಎಂದು ನೀರಜ್ ನೆನಪಿಸಿಕೊಳ್ಳುತ್ತಾರೆ.

ತಂದೆ ಅಕ್ಷಯ್ ಲಾಲ್ ಚೌಹಾಣ್ 30 ವರ್ಷಗಳಿಂದ ಬಾಣಸಿಗನಾಗಿ ಕಾರ್ಯನಿರ್ವಹಿಸಿದ್ದ ಕೈಲಾಶ್ ಪ್ರಕಾಶ್ ಕ್ರೀಡಾಂಗಣದ ಸಮೀಪದಲ್ಲೇ ನೀರಜ್ ತಮ್ಮ ಬಾಲ್ಯ ಕಳೆದರು. ಲಗೋರಿ ಆಡುತ್ತಿದ್ದ ಬಾಲಕನಿಗೆ ಆರ್ಚರಿಯತ್ತ ಆಸಕ್ತಿ ಮೊಳೆಯಿತು.



ನೀರಜ್ ಚೌಹಾಣ್

ಅಕಾಡೆಮಿಯೊಂದಕ್ಕೆ ಸೇರಿಕೊಂಡ ನೀರಜ್ 2013ರಲ್ಲಿ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಕೆಲವು ಸ್ಪರ್ಧೆಗಳಲ್ಲಿ ಪದಕಗಳನ್ನು ತಮ್ಮದಾಗಿಸಿಕೊಂಡರು. 2020ರಲ್ಲಿ ಕೋವಿಡ್ ಅವರ ಪ್ರಗತಿಗೆ ಅಡ್ಡಿಯಾಯಿತು. ಇಬ್ಬರು ಸಹೋದರರೊಂದಿಗೆ (ಅದರಲ್ಲಿ ಒಬ್ಬರು ರಾಷ್ಟ್ರಮಟ್ಟದ ಬಾಕ್ಸರ್) ತರಕಾರಿ ಮಾರಾಟ ಆರಂಭಿಸಿದರು. ಸುಮಾರು ಎರಡು ವರ್ಷಗಳ ಕಾಲ ಅವರು ಈ ಕೆಲಸ ನಿರ್ವಹಿಸಿದರು.

‘ನಾವು ಅಸಹಾಯಕರಾಗಿದ್ದೆವು. ತಂದೆಯ ಸಂಬಳ ತಿಂಗಳಿಗೆ ₹ 7 ಸಾವಿರದಿಂದ 8 ಸಾವಿರ ಸಿಗುತ್ತಿತ್ತು. ಲಾಕ್‌ಡೌನ್ ನಂತರ ಎಲ್ಲವೂ ನಿಂತುಹೋಯಿತು. ಅನ್ನ ಸಂಪಾದಿಸುವ ಉದ್ದೇಶಕ್ಕೆ ಆರ್ಚರಿ, ಬಾಕ್ಸಿಂಗ್ ಕೈಬಿಟ್ಟಿದ್ದೆವು‘ ಎಂದು ಪರದಾಟದ ದಿನಗಳನ್ನು ನೀರಜ್ ಅವರು ಸ್ಮರಿಸಿಕೊಳ್ಳುತ್ತಾರೆ.

ನೀರಜ್ ಅವರ ಸ್ಥಿತಿಯ ಕರಿತು ಭಾರತ ಆರ್ಚರಿ ಸಂಸ್ಥೆಯ ಅಧ್ಯಕ್ಷ ಅರ್ಜುನ್ ಮುಂಡಾ, ಅಂದಿನ ಕ್ರೀಡಾ ಸಚಿವ ಕಿರಣ್ ರಿಜಿಜು ಅವರ ಗಮನಕ್ಕೆ ತಂದರು. ಕ್ರೀಡಾ ಇಲಾಖೆಯು ನೀರಜ್ ಮತ್ತು ಅವರ ಸಹೋದರ ಸುನಿಲ್‌ಗೆ ₹ 5 ಲಕ್ಷ ಧನಸಹಾಯ ಮಾಡಿತು.

ಬಳಿಕ ಭಾರತ ಕ್ರೀಡಾ ಪ್ರಾಧಿಕಾರ ಸೇರಿಕೊಂಡ ನೀರಜ್ ಅವರು ಕೋಚ್ ಜೀತೇಂದ್ರ ಚೌಹಾಣ್ ಮಾರ್ಗದರ್ಶನದಲ್ಲಿ ಪಳಗಿದರು.

ಏಷ್ಯನ್ ಗೇಮ್ಸ್‌ಗಾಗಿ ನಡೆದ ಟ್ರಯಲ್ಸ್‌ನಲ್ಲಿ ಟೋಕಿಯೊ ಒಲಿಂಪಿಯನ್ ಅತನು ದಾಸ್ ಮತ್ತು ಪ್ರವೀಣ್ ಜಾಧವ್ ಅವರನ್ನು ಹಿಂದಿಕ್ಕಿ ಸ್ಥಾನ ಗಳಿಸಿದ್ದು ಗಮನಾರ್ಹ. ಏಷ್ಯನ್ ಕ್ರೀಡಾಕೂಟಗಳು ಚೀನಾದಲ್ಲಿ ಸೆಪ್ಟೆಂಬರ್‌ನಲ್ಲಿ ನಿಗದಿಯಾಗಿವೆ. ಇಲ್ಲಿ ಉತ್ತಮ ಸಾಮರ್ಥ್ಯ ತೋರಿ ವಿಶ್ವಕಪ್ ಟೂರ್ನಿಗೂ ಆಯ್ಕೆಯಾಗುವ ಗುರಿ ನೀರಜ್ ಅವರದು.

ಶೇನ್ ವಾರ್ನ್‌ಗೆ ಅಂತಿಮ ನಮನ ಇಂದು

ಬ್ರಿಸ್ಬೆನ್ (ಎಪಿ): ಆಸ್ಟ್ರೇಲಿಯಾದ ದಿಗ್ಗಜ ಕ್ರಿಕೆಟಿಗ ಶೇನ್ ವಾರ್ನ್ ಅವರ ಅಂತಿಮ ಸಂಸ್ಕಾರ ಬುಧವಾರ ನಡೆಯಲಿದೆ.

ವಾರ್ನ್ ಅಚ್ಚುಮೆಚ್ಚಿನ ತಾಣವಾಗಿದ್ದ ಮೆಲ್ಬರ್ನ್ ಕ್ರೀಡಾಂಗಣದಲ್ಲಿ ನಡೆಯಲಿರುವ ಅಂತಿಮ ಕಾರ್ಯಕ್ರಮದಲ್ಲಿ 50 ಸಾವಿರಕ್ಕೂ ಹೆಚ್ಚು ಅಭಿಮಾನಿಗಳು ಸೇರಲಿದ್ದಾರೆ. ಇದೇ ಕ್ರೀಡಾಂಗಣದಲ್ಲಿ ವಾರ್ನ್ ಅವರು 2006ರಲ್ಲಿ ಟೆಸ್ಟ್ ಕ್ರಿಕೆಟ್‌ನಲ್ಲಿ 700ನೇ ವಿಕೆಟ್ ಗಳಿಸಿದ್ದರು.

ವಾರ್ನ್ ಮಾರ್ಚ್ 4ರಂದು ಥಾಯ್ಲೆಂಡ್‌ನಲ್ಲಿ ನಿಧನರಾಗಿದ್ದರು. 52 ವರ್ಷದ ವಾರ್ನ್‌ಗೆ ಹೃದಯಾಘಾತವಾಗಿದೆ ಎಂದು ವರದಿಯಾಗಿತ್ತು.

ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದ ಎರಡನೇ ಬೌಲರ್ ಅವರಾಗಿದ್ದಾರೆ. ಲೆಗ್‌ಸ್ಪಿನ್‌ನಲ್ಲಿ ಅವರಿಗೆ ಅವರೇ ಸರಿಸಾಟಿಯಾಗಿದ್ದರು.

1993ರಲ್ಲಿ ಇಂಗ್ಲೆಂಡ್ ಎದುರಿನ ಟೆಸ್ಟ್‌ನಲ್ಲಿ ಅವರು ಮೈಕ್ ಗ್ಯಾಟಿಂಗ್ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದ್ದು ‘ಶತಮಾನದ ಎಸೆತ’ ಎಂದೇ ದಾಖಲಾಗಿದೆ.

ಮಾರ್ಚ್ 20ರಂದು ವಾರ್ನ್ ಅಂಗವಾಗಿ ನಡೆದಿದ್ದ ಕೌಟುಂಬಿಕ ನಮನದಲ್ಲಿ ಕೋಲ್ಡ್‌ಪ್ಲೇ ಗಾಯಕ ಕ್ರಿಸ್ ಮಾರ್ಟಿನ್ ಅವರು ತಾವೇ ಬರೆದ ಹಾಡು ಹಾಡಿ, ವಾರ್ನ್‌ಗೆ ಗೌರವ ಸಲ್ಲಿಸಿದ್ದರು.

ಎಂಸಿಜಿಯಲ್ಲಿ ನಡೆಯಲಿರುವ ಸಾರ್ವಜನಿಕ ಕಾರ್ಯಕ್ರಮದಲ್ಲಿ ಎಲ್ಟನ್ ಜಾನ್, ರಾಬಿ ವಿಲಿಯಮ್ಸ್ ಮತ್ತು ಶೀರನ್ ಅವರು ಗೌರವಾಂಜಲಿ ಸಲ್ಲಿಸುವರು.

ಟೆನಿಸ್: ಕ್ವಾರ್ಟರ್‌ಗೆ ನವೊಮಿ

ಮಿಯಾಮಿ (ಎಎಫ್‌ಪಿ): ಜಪಾನ್‌ನ ನವೊಮಿ ಒಸಾಕ ಹಾಗೂ ಪೋಲೆಂಡ್ ಇಗಾ ಸ್ವಿಟೆಕ್ ಅವರು ಮಿಯಾಮಿ ಓಪನ್ ಟೆನಿಸ್ ಟೂರ್ನಿಯ ಕ್ವಾರ್ಟರ್‌ಫೈನಲ್ ತಲುಪಿದ್ದಾರೆ.



ಒಸಾಕ

ಮಹಿಳಾ ಸಿಂಗಲ್ಸ್ ವಿಭಾಗದ ಪ್ರೀ-ಕ್ವಾರ್ಟರ್‌ಫೈನಲ್‌ನಲ್ಲಿ ನವೊಮಿ 6-3, 6,4ರಿಂದ ಅಲಿಸನ್ ರಿಸ್ಕೆ ಅವರನ್ನು ಸೋಲಿಸಿದರು.ಮತ್ತೊಂದು ಪಂದ್ಯದಲ್ಲಿ ಇಗಾ ಸ್ವಿಟೆಕ್ 6-3, 6-1ರಿಂದ ಅಮೆರಿಕದ ಕೊಕೊ ಗಫ್ ಅವರನ್ನು ಮಣಿಸಿದರು.

ಪುರುಷರ ವಿಭಾಗದಲ್ಲಿ ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ 6-4, 6-4ರಿಂದ ತನಾಸಿ ಕೊಕ್ಕಿನಾಕಿಸ್ ಅವರನ್ನು ಸೋಲಿಸಿ ಎಂಟರಘಟ್ಟ ತಲುಪಿದರು.



ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಸೋಮವಾರ ರಾಷ್ಟ್ರಪತಿ ಭವನದಲ್ಲಿ ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಜಾವೆಲಿನ್ ಆಟಗಾರ ನೀರಜ್ ಚೋಪ್ರಾ ಅವರಿಗೆ ಪದ್ಮಶ್ರೀ ಪುರಸ್ಕಾರ ಪ್ರದಾನ ಮಾಡಿದರು– ಪಿಟಿಐ ಚಿತ್ರ

ಡಬ್ಲ್ಯುಟಿಟಿ ಸ್ಟಾರ್ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿ

ಸೆಮಿಗೆ ಅರ್ಚನಾ–ಮಣಿಕಾ

ದೋಹಾ (ಪಿಟಿಐ): ಭಾರತದ ಮಣಿಕಾ ಬಾತ್ರಾ ಮತ್ತು ಅರ್ಚನಾ ಕಾಮತ್ ಅವರು ಡಬ್ಲ್ಯುಟಿಟಿ ಸ್ಟಾರ್ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಮಹಿಳಾ ಡಬಲ್ಸ್ ವಿಭಾಗದ ಎಂಟರಘಟ್ಟದ ಹಣಾಹಣಿಯಲ್ಲಿ ಮಂಗಳವಾರ ಭಾರತದ ಜೋಡಿ 13-11, 8-11, 11-5, 13-11ರಿಂದ ಹಾಂಗ್‌ಕಾಂಗ್‌ನ ಸೂ ವೈ ಯಾಮ್ ಮಿನ್ನಿ ಮತ್ತು ಲೀ ಹೊಂಗ್ ಅವರನ್ನು ಮಣಿಸಿದರು.

ಜಿದ್ದಾಜಿದ್ದಿನ ಮೊದಲ ಗೇಮ್‌ಅನ್ನು ಕೈವಶ ಮಾಡಿಕೊಂಡ ಕರ್ನಾಟಕ ಅರ್ಚನಾ– ಮಣಿಕಾ, ಎರಡನೇ ಗೇಮ್‌ನಲ್ಲಿ ಆರಂಭದಲ್ಲಿ ಮುನ್ನಡೆ ಸಾಧಿಸಿದರೂ ಬಳಿಕ ಕೈಚೆಲ್ಲಿದರು. ಮೂರನೇ ಗೇಮ್ ಸುಲಭವಾಗಿ ಭಾರತದ ಆಟಗಾರ್ತಿಯರ ಪಾಲಾಯಿತು. ನಾಲ್ಕನೇ ಗೇಮ್‌ನಲ್ಲಿ ಪೈಪೋಟಿ ಕಂಡುಬಂದರೂ ಒತ್ತಡ ಮೀರುವಲ್ಲಿ ಆರನೇ ಕ್ರಮಾಂಕದ ಜೋಡಿ ಯಶಸ್ವಿಯಾದರು.

ನಾಲ್ಕರ ಘಟ್ಟದಲ್ಲಿ ಮಣಿಕಾ ಮತ್ತು ಅರ್ಚನಾ ಅವರಿಗೆ ತೈಪೆಯ ಲಿ ಯು ಜುನ್ ಮತ್ತು ಚೆಂಗ್ ಐ ಚಿಂಗ್ ಸವಾಲು ಎದುರಾಗಿದೆ.

ಮಿಶ್ರ ಡಬಲ್ಸ್‌ನಲ್ಲಿ ಜಿ.ಸತ್ಯನ್ ಜೊತೆಗೂಡಿದ ಮಣಿಕಾ ಮೊದಲ ಸುತ್ತಿನಲ್ಲಿ 7-11, 11-9, 7-11, 5-11ರಿಂದ ಸ್ಪೇನ್‌ನ ಮರಿಯೊ ಕ್ಷಿಯೊ ಮತ್ತು ಅಲ್ವಾರೊ ರೊಬ್ಲೆಸ್ ಎದುರು ಸೋತರು.



ಅರ್ಚನಾ ಕಾಮತ್ ಮತ್ತು ಮಣಿಕಾ ಬಾತ್ರಾ– ಟ್ವಿಟರ್ ಚಿತ್ರ

ಇದಕ್ಕೂ ಮೊದಲು ಶರತ್ ಕಮಲ್ ಮತ್ತು ಮಾನವ್ ವಿಕಾಸ್ ಥಕ್ಕರ್ ಪುರುಷರ ಡಬಲ್ಸ್ ಪಂದ್ಯದಲ್ಲಿ ಸ್ಪೇನ್‌ನ ರೊಬ್ಲೆಸ್ ಮತ್ತು ರೂಮೇನಿಯಾದ ಒವಿದು ಲೊನೆಸ್ಕು ಅವರಿಗೆ ಮಣಿದಿದ್ದರು.

ಸಿಂಗಲ್ಸ್ ವಿಭಾಗದಲ್ಲಿ ಸತ್ಯನ್ ಅವರು 8-11, 3-11, 11-6, 11-7, 11-6ರಿಂದ ಸ್ವೀಡನ್‌ನ ಮತಿಯಾಸ್ ಫಾಲ್ಕ್ ಎದುರು ಗೆದ್ದು ಪ್ರೀಕ್ವಾರ್ಟರ್‌ಫೈನಲ್ ಪ್ರವೇಶಿಸಿದರೆ, ಮಹಿಳಾ ಸಿಂಗಲ್ಸ್‌ನ ಎರಡನೇ ಸುತ್ತಿನಲ್ಲಿ ಮಣಿಕಾ 7-11, 11-6, 11-7, 11-9ರಿಂದ ಜರ್ಮನಿಯ ಕ್ಸಿಯೊನಾ ಶಾನ್ ಅವರ ಎದುರು ಜಯಿಸಿದರು.

ರ್‍ಯಾಂಕಿಂಗ್: ಪ್ರಣಯ್‌ಗೆ ಬಡ್ತಿ

ನವದೆಹಲಿ (ಪಿಟಿಐ): ಸ್ವಿಸ್ ಓಪನ್ ಟೂರ್ನಿಯಲ್ಲಿ ರನ್ನರ್ ಅಪ್ ಆಗಿರುವ ಭಾರತದ ಬ್ಯಾಡ್ಮಿಂಟನ್ ಆಟಗಾರ ಎಚ್‌.ಎಸ್. ಪ್ರಣಯ್ ಮಂಗಳವಾರ ಬಿಡುಗಡೆಯಾದ ಬಿಡಬ್ಲ್ಯುಎಫ್ ವಿಶ್ವ ರ್‍ಯಾಂಕಿಂಗ್‌ನಲ್ಲಿ ಮೂರು ಸ್ಥಾನಗಳ ಬಡ್ತಿ ಪಡೆದು 23ನೇ ಸ್ಥಾನಕ್ಕೆ ತಲುಪಿದ್ದಾರೆ.

ಐದು ವರ್ಷಗಳ ಬಳಿಕ ಪ್ರಮುಖ ಟೂರ್ನಿಯೊಂದರ ಫೈನಲ್ ತಲುಪಿದ್ದ ಪ್ರಣಯ್ ಅವರು ಇಂಡೊನೇಷ್ಯಾದ ಜೊನಾಥನ್ ಕ್ರಿಸ್ಟಿ ಎದುರು ಎಡವಿದ್ದರು. ಸದ್ಯ ಅವರ ಬಳಿ 52,875 ರ್‍ಯಾಂಕಿಂಗ್ ಪಾಯಿಂಟ್‌ಗಳಿವೆ. ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದ ಅವರಿಗೆ ಕಳೆದ ಮೂರು ವರ್ಷಗಳಿಂದ ಹೆಚ್ಚಿನ ಸಾಮರ್ಥ್ಯ ತೋರಲು ಸಾಧ್ಯವಾಗಿರಲಿಲ್ಲ.

ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಪಿ.ವಿ. ಸಿಂಧು ಅವರು ಸ್ವಿಸ್ ಓಪನ್‌ನಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದರು. ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಅವರು ಏಳನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ಇನ್ನುಳಿದ ಭಾರತೀಯರ ಪೈಕಿ ಲಕ್ಷ್ಯ ಸೇನ್ ಒಂಬತ್ತನೇ ಸ್ಥಾನದಲ್ಲಿದ್ದಾರೆ. ಈ ತಿಂಗಳ ಆರಂಭದಲ್ಲಿ ನಡೆದ ಜರ್ಮನ್ ಓಪನ್ ಮತ್ತು ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ಗಳಲ್ಲಿ ಅವರು ಪ್ರಶಸ್ತಿ ಸುತ್ತಿಗೆ ತಲುಪಿದ್ದರು. ಡಬಲ್ಸ್‌ನಲ್ಲಿ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಜೋಡಿಯು ಏಳನೇ ಸ್ಥಾನದಲ್ಲಿದೆ. ಕಿದಂಬಿ ಶ್ರೀಕಾಂತ್ 12ನೇ ಮತ್ತು ಬಿ. ಸಾಯಿ ಪ್ರಣೀತ್ 19ನೇ ಸ್ಥಾನದಲ್ಲಿದ್ದಾರೆ. ಲಂಡನ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಸೈನಾ ನೆಹ್ವಾಲ್ ಮಹಿಳೆಯರ ವಿಭಾಗದಲ್ಲಿ 23ನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಮಹಿಳಾ ಡಬಲ್ಸ್‌ನಲ್ಲಿ ಅಶ್ವಿನಿ ಪೊನ್ನಪ್ಪ– ಸಿಕ್ಕಿ ರೆಡ್ಡಿ 20ನೇ ಸ್ಥಾನದಲ್ಲಿದ್ದಾರೆ.

ಪುರುಷ, ಮಹಿಳಾ ಟೂರ್ನಿಗಳಿಗೆ ಸಮಾನ ಪುರಸ್ಕಾರ

ನಗದು ಪ್ರಶಸ್ತಿ ತಾರತಮ್ಯ ನಿವಾರಿಸಲು ಐಸಿಸಿ ಚಿಂತನೆ

ವೆಲ್ಲಿಂಗ್ಟನ್ (ಪಿಟಿಐ): ಪುರುಷ ಮತ್ತು ಮಹಿಳೆಯರ ಕ್ರಿಕೆಟ್ ಚಾಂಪಿಯನ್‌ಷಿಪ್‌ಗಳಲ್ಲಿ ನಗದು ಪ್ರಶಸ್ತಿಯನ್ನು ಸಮನಾಗಿ ನೀಡುವ ಕುರಿತು ಚಿಂತನೆಗಳು ನಡೆಯುತ್ತಿವೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜೆಫ್ ಅಲಾರ್ಡಿಸ್ ಹೇಳಿದ್ದಾರೆ.

ಶೀಘ್ರದಲ್ಲಿಯೇ ಬಿಡುಗಡೆಯಾಗಲಿರುವ ಮುಂದಿನ ಕ್ರಿಕೆಟ್ ಆವರ್ತದಲ್ಲಿ ನಗದು ಪ್ರಶಸ್ತಿ ಮೊತ್ತದಲ್ಲಿ ಪುರುಷ ಮತ್ತು ಮಹಿಳೆಯರ ತಂಡಗಳಿಗೆ ಸಮಪ್ರಮಾಣದಲ್ಲಿ ನೀಡಲು ಅಪೆಕ್ಸ್ ಕೌನ್ಸಿಲ್ ಯೋಜಿಸಿದೆ ಎಂದೂ ಜೆಫ್ ತಿಳಿಸಿದ್ದಾರೆ.

2024 ರಿಂದ 2031ರವರೆಗಿನ ಎಂಟು ವರ್ಷಗಳ ಆವರ್ತ ವೇಳಾಪಟ್ಟಿಯನ್ನು ಮುಂದಿನ ವರ್ಷದಲ್ಲಿ ಪ್ರಕಟವಾಗಲಿದೆ.

‘ಐಸಿಸಿಯ ಆರ್ಥಿಕ ಆಯವ್ಯಯವನ್ನು ಎಂಟು ವರ್ಷಗಳ ಅವಧಿಗೆ ಸಿದ್ಧಪಡಿಸಲಾಗುತ್ತದೆ. ಮುಂದಿನ ಅವಧಿಯಲ್ಲಿ ಪುರುಷ ಮತ್ತು ಮಹಿಳಾ ಚಾಂಪಿಯನ್‌ಷಿಪ್‌ಗಳಲ್ಲಿರುವ ನಗದು ಪ್ರಶಸ್ತಿ ವ್ಯತ್ಯಾಸವನ್ನು ಒಂದೇ ರೀತಿಯಲ್ಲಿ ಜಾರಿಗೊಳಿಸುವುದು ಐಸಿಸಿಯ ಗುರಿಯಾಗಿದೆ‘ ಎಂದು ಜೆಫ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಪಾಕಿಸ್ತಾನ ತಂಡದ ನಾಯಕಿ ಬಿಸ್ಮಾ ಮೆಹರೂಫ್ –ಎಎಫ್‌ಪಿ ಚಿತ್ರ

ಮಹಿಳೆಯರ ಏಕದಿನ ವಿಶ್ವಕಪ್ ಟೂರ್ನಿಯ ಮೊದಲ ಸೆಮಿಫೈನಲ್ ಪಂದ್ಯವು ಬುಧವಾರ ಬೆಳಗಿನ ಜಾವ (ಭಾರತೀಯ ಕಾಲಮಾನ) ನಡೆಯಲಿದೆ. ಆಸ್ಟ್ರೇಲಿಯಾ ಮತ್ತು ವೆಸ್ಟ್ ಇಂಡೀಸ್ ಮುಖಾಮುಖಿಯಾಗಲಿವೆ.

ಕಣದಲ್ಲಿ ಎಂಟು ಅಮ್ಮಂದಿರು

ಈ ಬಾರಿಯ ವಿಶ್ವಕಪ್ ಟೂರ್ನಿಯಲ್ಲಿ ಎಂಟು ಮಂದಿ ಅಮ್ಮಂದಿರು ಗಮನ ಸೆಳೆದಿದ್ದಾರೆ.

ಪಾಕಿಸ್ತಾನ ತಂಡದ ನಾಯಕಿ ಬಿಸ್ಮಾ ಮರೂಫ್, ನ್ಯೂಜಿಲೆಂಡ್‌ನ ಅಮಿ ಸೆಟರ್ಥ್‌ವೇಟ್, ಲೀ ತಹುವು, ಆಸ್ಟ್ರೇಲಿಯಾದ ಮೆಗನ್ ಶೂಟ್, ರಚೆಲ್ ಹೇಯ್ನ್ಸ್, ದಕ್ಷಿಣ ಆಫ್ರಿಕಾದ ಲಿಜಿಲ್ ಲೀ, ಮಸಾಬತ್ ಕ್ಲಾಸ್ ಹಾಗೂ ವೆಸ್ಟ್ ಇಂಡೀಸ್‌ನ ಅಫ್ಸೈ ಫ್ಲೆಚರ್ ಆಡಿದ್ದಾರೆ.

‘ಇದೊಂದು ಗಮನಾರ್ಹ ಬೆಳವಣಿಗೆ. ಮಹಿಳೆಯರು ತಮ್ಮ ಕೌಟುಂಬಿಕ ಜೀವನದೊಂದಿಗೆ ಕ್ರಿಕೆಟ್‌ನಲ್ಲಿಯೂ ಮಿಂಚುತ್ತಿರುವುದು ಪ್ರೇರಣಾದಾಯಿಯಾಗಿದೆ. ಅವರಿಗಾಗಿ ವಿಶೇಷ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಗಮನ ಹರಿಸುತ್ತೇವೆ’ ಎಂದು ಜೆಫ್ ಹೇಳಿದ್ದಾರೆ.

ವೈಶಾಖಗೆ 5 ವಿಕೆಟ್

ಜೈಪುರ: ಐದು ವಿಕೆಟ್ ಗೊಂಚಲು ಗಳಿಸಿದ ವೈಶಾಖ ವಿಜಯಕುಮಾರ್ ಅಮೋಘ ಬೌಲಿಂಗ್ ನೆರವಿನಿಂದ ಕರ್ನಾಟಕ ತಂಡವು ಇಲ್ಲಿ ಮಂಗಳವಾರ ಆರಂಭವಾದ ಸಿ.ಕೆ. ನಾಯ್ಡು ಟೂರ್ನಿಯ ಪಂದ್ಯದಲ್ಲಿ ಹರಿಯಾಣ ಎದುರು ಮೊದಲ ಇನಿಂಗ್ಸ್ ಮುನ್ನಡೆ ಗಳಿಸಿತು.

ಸಂಕ್ಷಿಪ್ತ ಸ್ಕೋರ್: ಹರಿಯಾಣ: 30.4 ಓವರ್‌ಗಳಲ್ಲಿ 73 (ವೈಶಾಖ ವಿಜಯಕುಮಾರ್ 19ಕ್ಕೆ5, ರೋಹಿತ್ ಕುಮಾರ್ 2ಕ್ಕೆ 3), ಕರ್ನಾಟಕ 57 ಓವರ್‌ಗಳಲ್ಲಿ 3ಕ್ಕೆ174 (ನಿಕಿನ ಜೋಸ್ 34, ಶಿವಕುಮಾರ್ 42, ಕಿಶನ್ ಬೆದರೆ ಔಟಾಗದೆ 48, ಕೆ.ವಿ. ಅನೀಶ್ ಔಟಾಗದೆ 41)

ಭಾರತ– ಇಂಗ್ಲೆಂಡ್ ಮಹಿಳಾ ಹಾಕಿ ಪಂದ್ಯಗಳು ಮುಂದಕ್ಕೆ

ನವದೆಹಲಿ (ಪಿಟಿಐ): ಇಂಗ್ಲೆಂಡ್ ತಂಡದ ಸದಸ್ಯರಲ್ಲಿ ಕೋವಿಡ್ ಸೋಂಕು ಪತ್ತೆಯಾದ ಹಿನ್ನೆಲೆಯಲ್ಲಿ ಭಾರತದ ಎದುರು ನಿಗದಿಯಾಗಿದ್ದ ಎಫ್‌ಐಎಚ್ ಮಹಿಳಾ ಪ್ರೊ ಲೀಗ್ ಹಾಕಿ ಪಂದ್ಯಗಳನ್ನು ಮುಂದೂಡಲಾಗಿದೆ.

ಭುವನೇಶ್ವರದ ಕಳಿಂಗ ಕ್ರೀಡಾಂಗಣದಲ್ಲಿ ಏಪ್ರಿಲ್ ಎರಡು ಮತ್ತು ಮೂರರಂದು ಈ ಪಂದ್ಯಗಳು ನಡೆಯಬೇಕಿತ್ತು.

ಈ ಕುರಿತು ಟ್ವೀಟ್ ಮಾಡಿರುವ ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್) ‘ಇಂಗ್ಲೆಂಡ್ ತಂಡದ ಹೆಚ್ಚಿನ ಸದಸ್ಯರಲ್ಲಿ ಕೋವಿಡ್ ಪತ್ತೆಯಾಗಿದೆ ಮತ್ತು ಗಾಯದ ಸಮಸ್ಯೆ ಕಾಡಿದೆ. ಹೀಗಾಗಿ ಪಂದ್ಯಗಳನ್ನು ಮುಂದೂಡಲಾಗಿದೆ. ಹಾಕಿ ಇಂಡಿಯಾ, ಇಂಗ್ಲೆಂಡ್ ಹಾಕಿ ಮಂಡಳಿಗಳೊಂದಿಗೆ ಚರ್ಚಿಸಿ ಮುಂದಿನ ಮಾಹಿತಿ ನೀಡಲಾಗುವುದು‘ ಎಂದು ಹೇಳಿದೆ.

ಭಾರತ ಮಹಿಳಾ ತಂಡವು ಪ್ರೊ ಲೀಗ್ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ. ಮೂರು ಪಂದ್ಯಗಳಲ್ಲಿ ಗೆಲುವು, ಎರಡರಲ್ಲಿ ಡ್ರಾ ಮತ್ತು ಒಂದರಲ್ಲಿ ಸೋಲನುಭವಿಸಿದೆ.

ಭಾರತ ಮತ್ತು ಇಂಗ್ಲೆಂಡ್ ಪುರುಷರ ತಂಡಗಳ ನಡುವಣ ಪಂದ್ಯಗಳು ನಿಗದಿಯಂತೆ ಈ ವಾರಾಂತ್ಯದಲ್ಲಿ ನಡೆಯಲಿವೆ.



ಸಂಜು, ದೇವದತ್ತ ಅಬ್ಬರ; ಯಜುವೇಂದ್ರ ಚಾಹಲ್, ಪ್ರಸಿದ್ಧ ಕೃಷ್ಣ ಮೋಡಿ

ರಾಜಸ್ಥಾನ ರಾಯಲ್ಸ್ ಶುಭಾರಂಭ

ಪುಣೆ: ಸಂಜು ಸ್ಯಾಮ್ಸನ್ ನಾಯಕತ್ವದ ರಾಜಸ್ಥಾನ ರಾಯಲ್ಸ್ ತಂಡದ ಬ್ಯಾಟಿಂಗ್ ಶಕ್ತಿಯ ಮುಂದೆ ಸನ್ ರೈಸರ್ಸ್ ಹೈದರಾಬಾದ್ ಶರಣಾಯಿತು.

ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಮೊದಲ ಪಂದ್ಯದಲ್ಲಿ ರಾಜಸ್ಥಾನ ತಂಡವು 61 ರನ್‌ಗಳಿಂದ ಜಯಿಸಿತು.

ಟಾಸ್ ಗೆದ್ದ ಹೈದರಾಬಾದ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ ನಾಯಕ ಕೇನ್ ವಿಲಿಯಮ್ಸನ್ ಅವರ ಲೆಕ್ಕಾಚಾರ ಕೈಗೂಡಲಿಲ್ಲ. ರಾಜಸ್ಥಾನ ತಂಡದ ಸಂಜು ಸ್ಯಾಮ್ಸನ್ (55;27ಎ), ಕನ್ನಡಿಗ ದೇವದತ್ತ ಪಡಿಕ್ಕಲ್ (41; 29ಎ) ಮತ್ತು ಶಿಮ್ರೊನ್ ಹೆಟ್ಮೆಯರ್ (32; 13ಎ) ಬ್ಯಾಟಿಂಗ್‌ನಲ್ಲಿ ಅಬ್ಬರಿಸಿದರು. ಇದರಿಂದಾಗಿ ರಾಜಸ್ಥಾನ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 210 ರನ್ ಗಳಿಸಿತು. ಅದಕ್ಕುತ್ತರವಾಗಿ ಹೈದರಾಬಾದ್ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 149 ರನ್ ಗಳಿಸಿತು.

ಬ್ಯಾಟಿಂಗ್ ಪಡೆಯು ದೊಡ್ಡ ಮೊತ್ತ ಗಳಿಸಿದ್ದು, ರಾಜಸ್ಥಾನ ತಂಡದ ಬೌಲರ್‌ಗಳ ಆತ್ಮವಿಶ್ವಾಸ ಇಮ್ಮಡಿಸುವಂತೆ ಮಾಡಿತ್ತು. ಅದರಿಂದಾಗಿಯೇ ಎದುರಾಳಿ ತಂಡಕ್ಕೆ ಆರಂಭದಿಂದಲೇ ಪೆಟ್ಟು ನೀಡಿದರು. ಮಧ್ಯಮವೇಗಿ ಪ್ರಸಿದ್ಧ ಕೃಷ್ಣ ಮತ್ತು ಸ್ಪಿನ್ನರ್ ಯಜುವೇಂದ್ರ ಚಾಹಲ್ ಬೌಲಿಂಗ್‌ನಲ್ಲಿ ಅಗ್ರಕ್ರಮಾಂಕದ ಬ್ಯಾಟಿಂಗ್ ಪಡೆ ಕುಸಿಯಿತು. ತಂಡದ ಮೊತ್ತ 37 ರನ್‌ಗಳಾಗುವಷ್ಟರಲ್ಲಿ ಐದು ವಿಕೆಟ್‌ಗಳು ಪತನವಾದವು. ಅನುಭವಿ ಕೇನ್ ವಿಲಿಯಮ್ಸನ್, ಅಭಿಷೇಕ್ ವರ್ಮಾ ಒಂದಂಕಿ ಗಳಿಸಿದರೆ, ರಾಹುಲ್ ತ್ರಿಪಾಠಿ ಮತ್ತು ನಿಕೊಲಸ್ ಪೂರನ್ ಖಾತೆಯನ್ನೇ ತೆರೆಯಲಿಲ್ಲ.

ಮರ್ಕರಂ, ವಾಷಿಂಗ್ಟನ್ ಹೋರಾಟ: ರಾಯಲ್ಸ್ ಬೌಲರ್‌ಗಳ ಆರ್ಭಟದ ನಡುವೆಯೂ ಏಡನ್ ಮರ್ಕರಂ (ಔಟಾಗದೆ 57) ಮತ್ತು ವಾಷಿಂಗ್ಟನ್ ಸುಂದರ್ (40; 14ಎ) ಹೋರಾಟ ನಡೆಸಿದರು. ಆದರೆ ತಂಡವನ್ನು ಗೆಲುವಿನ ದಡ ಸೇರಿಸಲು ಅವರಿಗೆ ಸಾಧ್ಯವಾಗಲಿಲ್ಲ. ರಾಯಲ್ಸ್ ಬೌಲರ್ ಚಾಹಲ್ ಮೂರು ವಿಕೆಟ್ ಗಳಿಸಿದರು.

ಬಟ್ಲರ್ ಉತ್ತಮ ಆರಂಭ: ರಾಜಸ್ಥಾನ್ ತಂಡಕ್ಕೆ ಜೋಸ್ ಬಟ್ಲರ್ (35; 28ಎ) ಮತ್ತು ಯಶಸ್ವಿ ಜೈಸ್ವಾಲ್ ಜೋಡಿಯು ಉತ್ತಮ ಆರಂಭ ನೀಡಿತು. ಇವರಿಬ್ಬರ ಆರ್ಭಟದಿಂದಾಗಿ ಮೊದಲ ಆರು ಓವರ್‌ಗಳಲ್ಲಿಯೇ 58 ರನ್‌ಗಳು ಸೇರಿದವು. ಏಳನೇ ಓವರ್‌ನಲ್ಲಿ ರೊಮೆರಿಯೊ ಶೆಫರ್ಡ್ ಬೌಲಿಂಗ್‌ನಲ್ಲಿ ಜೈಸ್ವಾಲ್ ಮತ್ತು ಒಂಬತ್ತನೇ ಓವರ್‌ನಲ್ಲಿ ಬಟ್ಲರ್ ಔಟಾದರು.

ಅವರಿಬ್ಬರೂ ಹಾಕಿದ ಅಡಿಪಾಯದ ಮೇಲೆ ಉಳಿದ ಬ್ಯಾಟರ್‌ಗಳು ರನ್‌ಗಳ ಗೋಪುರ ನಿರ್ಮಿಸಿದರು. ಸಂಜು ಮತ್ತು ದೇವದತ್ತ ಮೂರನೇ ವಿಕೆಟ್ ಜೊತೆಯಾಟದಲ್ಲಿ 73 ರನ್ ಸೇರಿಸಿದರು. ಸಂಜು ಬ್ಯಾಟ್‌ನಿಂದ ಐದು ಸಿಕ್ಸರ್‌ಗಳು ಸಿಡಿದವು. 203.70ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು.

ಹೋದ ವರ್ಷ ಆರ್‌ಸಿಬಿಯಲ್ಲಿ ಆರಂಭಿಕ ಬ್ಯಾಟರ್ ಆಗಿದ್ದ ದೇವದತ್ತ ಈ ಬಾರಿ ರಾಜಸ್ಥಾನ ತಂಡದಲ್ಲಿ ಮಧ್ಯಮ ಕ್ರಮಾಂಕಕ್ಕೆ ಬಲ ತುಂಬಿದರು. 15ನೇ ಓವರ್‌ನಲ್ಲಿ ಉಮ್ರನ್ ಮಲಿಕ್ ಎಸೆತದಲ್ಲಿ ಕ್ಲೀನ್ ಬೌಲ್ಡ್ ಆದರು.

ಎರಡು ಓವರ್‌ಗಳ ನಂತರ ಭುವನೇಶ್ವರ್ ಕುಮಾರ್ ಎಸೆತದಲ್ಲಿ ಅಬ್ದುಲ್ ಸಮದ್‌ಗೆ ಕ್ಯಾಚಿತ್ತ ಸಂಜು ಡಗ್‌ಔಟ್ ಸೇರಿದರು.

ಆರೆಂಜ್ ಕ್ಯಾಪ್ (ಹೆಚ್ಚು ರನ್‌ಗಳಿಸಿದವರು)

ಆಟಗಾರ	ತಂಡ	ರನ್
ಫಫ್ ಡುಪ್ಲೆಸಿ	ಬೆಂಗಳೂರು	88
ಇಶಾನ್ ಕಿಶನ್	ಮುಂಬೈ	81
ಮರ್ಕರಂ	ಹೈದರಾಬಾದ್	57

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್‌ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಕುಲದೀಪ್	ಡೆಲ್ಲಿ	3
ಡ್ವೇನ್ ಬ್ರಾವೊ	ಚೆನ್ನೈ	3
ಚಾಹಲ್	ರಾಜಸ್ಥಾನ	3

ಸ್ಕೋರ್ ಕಾರ್ಡ್

ರಾಜಸ್ಥಾನ ರಾಯಲ್ಸ್ 6ಕ್ಕೆ 210 (20 ಓವರ್)

ಬಟ್ಲರ್ ಸಿ ಪೂರನ್ ಬಿ ಮಲಿಕ್ 35 (28ಎ,4X3, 6X3), ಜೈಸ್ವಾಲ್ ಸಿ ಮರ್ಕರಂ ಬಿ ಶೇಫರ್ಡ್ 20 (16ಎ, 4X2, 6X1), ಸಂಜು ಸಿ ಸಮದ್ ಬಿ ಭುವನೇಶ್ವರ್ 55 (27ಎ, 4X3, 6X5), ಪಡಿಕ್ಕಲ್ ಬಿ ಮಲಿಕ್ 41 (29ಎ, 4X4, 6X2), ಹೆಟ್ಮೆಯರ್ ಬಿ ನಟರಾಜನ್ 32 (13ಎ, 4X2, 6X3), ರಿಯಾನ್ ಸಿ ಪೂರನ್ ಬಿ ನಟರಾಜನ್ 12 (9ಎ, 4X2), ಕೌಲ್ಟರ್ ನೈಲ್ ಔಟಾಗದೆ 1 (2ಎ)

ಇತರೆ 14 (ಲೆಗ್‌ಬೈ 4, ವೈಡ್ 6, ನೋಬಾಲ್ 4)

ವಿಕೆಟ್ ಪತನ: 1–58 (ಯಶಸ್ವಿ ಜೈಸ್ವಾಲ್; 6.1), 2–75 (ಜೋಸ್ ಬಟ್ಲರ್; 8.1), 3–148 (ಪಡಿಕ್ಕಲ್; 14.6), 4–163 (ಸಂಜು ಸ್ಯಾಮ್ಸನ್; 16.1), 5–207 (ಹೆಟ್ಮೆಯರ್; 19.2), 6–210 (ರಿಯಾನ್ ಪರಾಗ್; 19.6)

ಬೌಲಿಂಗ್: ಭುವನೇಶ್ವರ್ ಕುಮಾರ್ 4–0–29–1, ರೊಮೆರಿಯೊ ಶೇಫರ್ಡ್ 4–0–33–1, ಉಮ್ರನ್ ಮಲಿಕ್ 4–0–39–2, ವಾಷಿಂಗ್ಟನ್ ಸುಂದರ್ 3–0–47–0, ಟಿ. ನಟರಾಜನ್ 4–0–43–2, ಅಭಿಷೇಕ್ ಶರ್ಮಾ 1–0–15–0.

ಸನ್‌ರೈಸರ್ಸ್ ಹೈದರಾಬಾದ್ 7ಕ್ಕೆ 149 (20 ಓವರ್)

ವಿಲಿಯಮ್ಸನ್ ಸಿ ದೇವದತ್ತ ಬಿ ಪ್ರಸಿದ್ಧ 2 (7ಎ), ಅಭಿಷೇಕ್ ಸಿ ಹೆಟ್ಮೆಯರ್ ಬಿ ಚಾಹಲ್ 9 (19ಎ, 4X1), ರಾಹುಲ್ ತ್ರಿಪಾಠಿ ಸಿ ಸ್ಯಾಮ್ಸನ್ ಬಿ ಪ್ರಸಿದ್ಧ 0 (3ಎ), ಪೂರನ್ ಎಲ್‌ಬಿಡಬ್ಲ್ಯು ಬೌಲ್ಟ್ 0 (9ಎ), ಮರ್ಕರಂ ಔಟಾಗದೆ 57 (41ಎ, 4X5, 6X2), ಅಬ್ದುಲ್ ಸಿ ಪರಾಗ್ ಬಿ ಚಾಹಲ್ 4 (6ಎ), ರೊಮೇರಿಯೊ ಬಿ ಚಾಹಲ್ 24 (18ಎ, 6X2), ವಾಷಿಂಗ್ಟನ್ ಸುಂದರ್ ಸಿ ಹೆಟ್ಮೆಯರ್ ಬಿ ಬೌಲ್ಟ್ 40 (14ಎ, 4X5, 6X2), ಭುವನೇಶ್ವರ್ ಔಟಾಗದೆ 3 (4ಎ)

ಇತರೆ (ಲೆಗ್‌ಬೈ 5, ನೋಬಾಲ್ 1, ವೈಡ್ 4) 10

ವಿಕೆಟ್ ಪತನ: 1-3 (ಕೇನ್ ವಿಲಿಯಮ್ಸನ್, 1.4), 2-7 (ರಾಹುಲ್ ತ್ರಿಪಾಠಿ, 3.1), 3-9 (ನಿಕೋಲಸ್ ಪೂರನ್, 4.5), 4-29 (ಅಭಿಷೇಕ್ ಶರ್ಮಾ, 8.2), 5-37 (ಅಬ್ದುಲ್ ಸಮದ್, 10.2), 6-78 (ರೋಮೆರಿಯೊ ಶೆಫರ್ಡ್, 15.4), 7-133 (ವಾಷಿಂಗ್ಟನ್ ಸುಂದರ್, 18.5)

ಬೌಲಿಂಗ್: ಟ್ರೆಂಟ್ ಬೌಲ್ಟ್ 4–1–23–2, ಪ್ರಸಿದ್ಧ ಕೃಷ್ಣ 4–1–16–2, ನೇಥನ್ ಕೌಲ್ಟರ್‌ನೈಲ್ 3–0–48–0, ರವಿಚಂದ್ರನ್ ಅಶ್ವಿನ್ 4–0–21–0, ಯಜುವೇಂದ್ರ ಚಾಹಲ್ 4–0–22–3, ರಿಯಾನ್ ಪರಾಗ್ 1–0–14–0

ಫಲಿತಾಂಶ: ರಾಜಸ್ಥಾನ ರಾಯಲ್ಸ್‌ಗೆ 61 ರನ್‌ಗಳ ಗೆಲುವು



ವಿಲಿಯಮ್ಸನ್ ವಿಕೆಟ್ ಪಡೆದ ರಾಜಸ್ಥಾನದ ಚಾಹಲ್ ಅವರನ್ನು ಸಹ ಆಟಗಾರರು ಅಭಿನಂದಿಸಿದರು– ಪಿಟಿಐ ಚಿತ್ರ

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ರಾಜಸ್ಥಾನ	1	1	0	0	0	2
ಡೆಲ್ಲಿ	1	1	0	0	0	2
ಪಂಜಾಬ್	1	1	0	0	0	2
ಕೋಲ್ಕತ್ತ	1	1	0	0	0	2
ಗುಜರಾತ್	1	1	0	0	0	2
ಲಖನೌ	1	0	1	0	0	0
ಚೆನ್ನೈ	1	0	1	0	0	0
ಬೆಂಗಳೂರು	1	0	1	0	0	0
ಮುಂಬೈ ಇಂಡಿಯನ್ಸ್	1	0	1	0	0	0
ಹೈದರಾಬಾದ್	1	0	1	0	0	0

* ಮಂಗಳವಾರದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಬೆಂಗಳೂರು ಬಳಗಕ್ಕೆ ಗೆಲುವಿನ ತವಕ

ಆರ್‌ಸಿಬಿ ಬೌಲರ್‌ಗಳ ಮೇಲೆ ಕಣ್ಣು; ಆತ್ಮವಿಶ್ವಾಸದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್

ನವೀ ಮುಂಬೈ (ಪಿಟಿಐ): ಮೊದಲ ಪಂದ್ಯದಲ್ಲಿ ಕಳಪೆ ಬೌಲಿಂಗ್‌ನಿಂದಾಗಿ ಸೋತ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಬುಧವಾರ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಕಣಕ್ಕಿಳಿಯಲಿದೆ.


ಟೂರ್ನಿಯ ಉದ್ಘಾಟನೆ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಮಣಿಸಿ ಶುಭಾರಂಭ ಮಾಡಿರುವ ಶ್ರೇಯಸ್ ಅಯ್ಯರ್ ನಾಯಕತ್ವದ ಕೋಲ್ಕತ್ತ ಭರ್ತಿ ಆತ್ಮವಿಶ್ವಾಸದಲ್ಲಿದೆ. ಆದರೆ, ಪಂಜಾಬ್ ಕಿಂಗ್ಸ್ ತಂಡಕ್ಕೆ 206 ರನ್‌ಗಳ ಕಠಿಣ ಗುರಿ ನೀಡುವಲ್ಲಿ ಯಶಸ್ವಿಯಾಗಿದ್ದ ಫಫ್ ಡುಪ್ಲೆಸಿ ನಾಯಕತ್ವದ ಬೆಂಗಳೂರು ತಂಡವು ಸೋಲನುಭವಿಸಿತ್ತು.

ಮೊದಲ ಪಂದ್ಯದಲ್ಲಿ ಇನಿಂಗ್ಸ್ ಆರಂಭಿಸಿದ್ದ ಫಫ್ ಭರ್ಜರಿ 88 ರನ್‌ಗಳನ್ನು ಗಳಿಸಿದ್ದರು. ವಿರಾಟ್ ಕೊಹ್ಲಿ ಮತ್ತು ದಿನೇಶ್ ಕಾರ್ತಿಕ್ ಕೂಡ ಮಹತ್ವದ ಕಾಣಿಕೆ ಕೊಟ್ಟಿದ್ದರು. ಫಫ್ ಜೊತೆಗೆ ಇನಿಂಗ್ಸ್ ಆರಂಭಿಸಿದ್ದ ಅನುಜ್ ರಾವತ್ ಕೂಡ ಭರವಸೆ ಮೂಡಿಸಿರುವ ಆಟಗಾರ. ಬ್ಯಾಟಿಂಗ್‌ನಲ್ಲಿ ಈ ನಾಲ್ವರೇ ಈಗ ಪ್ರಮುಖ ಶಕ್ತಿಯಾಗಿದ್ದಾರೆ.

ಆದರೆ, ಹೋದ ಆವೃತ್ತಿಯಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದ್ದ ಹರ್ಷಲ್ ಪಟೇಲ್, ಮೊಹಮ್ಮದ್ ಸಿರಾಜ್ ತಮ್ಮ ಲಯಕ್ಕೆ ಮರಳಿದರೆ ಮಾತ್ರ ತಂಡದ ಗೆಲುವು ಸಾಧ್ಯವಾಗಬಹುದು. ಹೋದ ಪಂದ್ಯದಲ್ಲಿ ಸಿರಾಜ್ 59 ರನ್‌ಗಳನ್ನು ಬಿಟ್ಟುಕೊಟ್ಟಿದ್ದರು. ಶ್ರೀಲಂಕಾ ಸ್ಪಿನ್ನರ್ ವಣಿಂದು ಹಸರಂಗಾ ಕೂಡ ಬೌಲಿಂಗ್‌ನಲ್ಲಿ ಮಿಂಚಿದರೆ ಮಾತ್ರ ಕೋಲ್ಕತ್ತದ ಬಲಿಷ್ಠ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕಲು ಸಾಧ್ಯ.

ಅನುಭವಿ ಅಜಿಂಕ್ಯ ರಹಾನೆ ಆರಂಭಿಕ ಬ್ಯಾಟರ್ ಆಗಿ ಲಯ ಕಂಡುಕೊಂಡಿದ್ದಾರೆ. ವೆಂಟಕೇಶ್ ಅಯ್ಯರ್, ಶ್ರೇಯಸ್, ಆಲ್‌ರೌಂಡರ್ ಆ್ಯಂಡ್ರೆ ರಸೆಲ್ ಕೂಡ ಪಂದ್ಯದ ಜಯವನ್ನು ತಮ್ಮತ್ತ ಸೆಳೆಯಬಲ್ಲ ಬ್ಯಾಟರ್‌ಗಳು. ಬೌಲಿಂಗ್‌ನಲ್ಲಿ ಉಮೇಶ್ ಯಾದವ್ ಮೊದಲ ಪಂದ್ಯದಲ್ಲಿ ತಮ್ಮ ಪ್ರತಾಪ ತೋರಿಸಿದ್ದಾರೆ. ಆದ್ದರಿಂದ ಆರ್‌ಸಿಬಿ ಬಳಗಕ್ಕೂ ಸವಾಲೊಡ್ಡಲು ಸಿದ್ಧರಾಗಿದ್ದಾರೆ. ಮುಸ್ಸಂಜೆಯ ವಾತಾವರಣದಲ್ಲಿ ತೇವಾಂಶ ಜಾಸ್ತಿ ಇರುವುದರಿಂದ ಟಾಸ್ ಗೆದ್ದವರು ತೆಗೆದುಕೊಳ್ಳುವ ನಿರ್ಧಾರವೂ ಪ್ರಮುಖವಾಗಲಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್




ವಿರಾಟ್ ಕೊಹ್ಲಿ ಮತ್ತು ಫಫ್ ಡು ಪ್ಲೆಸಿ –ಪಿಟಿಐ ಚಿತ್ರ

2021ರಲ್ಲಿ ಮುಖಾಮುಖಿ ಫಲಿತಾಂಶ

- ಬೆಂಗಳೂರು ತಂಡಕ್ಕೆ 38 ರನ್‌ಗಳ ಗೆಲುವು (ಗುಂಪು ಹಂತ)
- ಕೋಲ್ಕತ್ತಕ್ಕೆ 9 ವಿಕೆಟ್‌ಗಳ ಜಯ (ಗುಂಪು ಹಂತ)
- ಕೋಲ್ಕತ್ತಕ್ಕೆ 4 ವಿಕೆಟ್‌ಗಳ ಗೆಲುವು (ಎಲಿಮಿನೇಟರ್)

ಪಂದ್ಯ 29 | ಬೆಂಗಳೂರು ಜಯ 13 | ಕೋಲ್ಕತ್ತ ಜಯ 16

ಗರಿಷ್ಠ ಮೊತ್ತ		ಕನಿಷ್ಠ ಮೊತ್ತ
213	ಬೆಂಗಳೂರು	49
222	ಕೋಲ್ಕತ್ತ	84



ಶ್ರೇಯಸ್ ಅಯ್ಯರ್

₹ 50 ಸಾವಿರ ಕೋಟಿ ಮೇಲೆ ಬಿಸಿಸಿಐ ಕಣ್ಣು

ಮುಂಬೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ 2023 ರಿಂದ 2027ರ ಆವೃತ್ತಿಗಳ ಪ್ರಸಾರ ಹಕ್ಕುಗಳ ಮಾರಾಟದಿಂದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೆ ₹ 50 ಸಾವಿರ ಕೋಟಿ ಆದಾಯ ಹರಿದುಬರುವ ನಿರೀಕ್ಷೆ ಇದೆ.

ಪ್ರಸಾರ ಹಕ್ಕು ನೀಡಲು ಇದೇ ಮೊದಲ ಬಾರಿಗೆ ಬಿಸಿಸಿಐ ಇ ಹರಾಜು ಪ್ರಕ್ರಿಯೆ ನಡೆ ಸಲಿದೆ. ಜೂನ್ 12ರಿಂದ ಈ ಪ್ರಕ್ರಿಯೆ ಆರಂಭಗೊಳ್ಳಲಿದೆ. ‘ಎರಡು ಹೊಸ ತಂಡಗಳು, ಹೆಚ್ಚು ಪಂದ್ಯಗಳು, ಪ್ರೇಕ್ಷಕರ ಸಂಖ್ಯೆಯಲ್ಲಿ ಹೆಚ್ಚಳ ಮತ್ತು ಪಂದ್ಯ ನಡೆಯುವ ಸ್ಥಳಗಳ ಆಕರ್ಷಣೆ ಹೆಚ್ಚಲಿದೆ. ಟಾಟಾ ಐಪಿಎಲ್ ಟೂರ್ನಿಯನ್ನು ಮತ್ತೊಂದು ಹಂತದ ಎತ್ತರಕ್ಕೇರಿಸುವ ಗುರಿ ನಮ್ಮದು’ ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಟ್ವೀಟ್ ಮಾಡಿದ್ದಾರೆ.

‘ಆದಾಯ ಹೆಚ್ಚಳ ಮಾತ್ರ ನಮ್ಮ ಉದ್ದೇಶವಲ್ಲ. ಗುಣಮಟ್ಟ ಮತ್ತು ಮೌಲ್ಯಗಳ ಹೆಚ್ಚಳಕ್ಕೂ ಆದ್ಯತೆ ನೀಡುತ್ತೇವೆ’ ಎಂದು ಶಾ ತಿಳಿಸಿದ್ದಾರೆ

ಈ ಬಾರಿಯ ಬಿಡ್‌ನಲ್ಲಿ ಝೀ–ಸೋನಿ ಮತ್ತು ರಿಲಯನ್ಸ್ ವೈಕಾಮ್ 18 ಸಂಸ್ಥೆಗಳು ಪೈಪೋಟಿಗಿಳಿಯುವ ನಿರೀಕ್ಷೆ ಇದೆ. ಡಿಜಿಟಲ್ ಸ್ಟ್ರೀಮಿಂಗ್‌ಗಾಗಿ ಅಮೆಜಾನ್ ಪ್ರೈಮ್, ಮೆಟಾ ಮತ್ತು ಯೂಟ್ಯೂಬ್‌ಗಳೂ ಬಿಡ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಇದೆ. ಟೆಂಡರ್ ಆಹ್ವಾನದಲ್ಲಿ (ಐಟಿಟಿ) ಬಿಡ್‌ಗೆ ಸಂಬಂಧಿಸಿದ ಎಲ್ಲ ಮಾಹಿತಿಗಳನ್ನೂ ಉಲ್ಲೇಖಿಸಲಾಗಿದೆ. ಬಿಡ್ ಸಲ್ಲಿಸಬಯಸುವವರು ₹ 25 ಲಕ್ಷ ಶುಲ್ಕವನ್ನು ಪಾವತಿಸಿ ಐಟಿಟಿ ಪಡೆಯಬಹುದಾಗಿದೆ. ಮೇ 10ರವರೆಗೆ ಐಟಿಟಿ ಲಭ್ಯವಾಗಲಿವೆ.